ಭಾನುವಾರ, ಮಾರ್ಚ್ 10, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮದುವೆ ಸಂಭ್ರಮ
ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ಶನಿವಾರ ನಡೆದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಸೆಲ್ಫಿ ತೆಗೆದುಕೊಂಡ ದಂಪತಿ





ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳ ಹಾಗೂ ಪ್ರಗತಿಯ ಪಕ್ಷಿನೋಟ

ವಿಶ್ವಬ್ಯಾಂಕ್ ಕರ್ನಾಟಕವನ್ನು "ಮಾರ್ಗದರ್ಶಕ ರಾಜ್ಯ" ಎಂದು ಗುರುತಿಸಿದೆ

ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ "ಜಲಾನಯನ ಅಭಿವೃದ್ಧಿ ಉತ್ಕೃಷ್ಟತಾ ಕೇಂದ್ರ" ಸ್ಥಾಪನೆ

"ರೈತಸಿರಿ" ರೈತರ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್




ಮಾನ್ಯ ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ ಅವರು ಮಂಡ್ಯದಲ್ಲಿ ನಡೆದ ಸಿರಿಧಾನ್ಯ ಮೇಳದಲ್ಲಿ ಭಾಗವಹಿಸಿರುವುದು


ಜಲಾನಯನ ಯೋಜನೆಗಳ ಅನುಷ್ಠಾನದಲ್ಲಿ "ರಾಷ್ಟ್ರದಲ್ಲಿಯೇ ಮಾದರಿ ರಾಜ್ಯ"

100 ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ "ತಲಾ ರೂ.20.00 ಲಕ್ಷ ವರೆಗಿನ ಸಾಲಕ್ಕೆ ಶೇ.4 ರ ಬಡ್ಡಿ" ಸಹಾಯಧನ

ಮಣ್ಣಿನ ಗುಣ ಲಕ್ಷಣ, ಪೋಷಕಾಂಶ ಮತ್ತು ಸೂಕ್ತ ಬೆಳೆಯ ಮಾಹಿತಿ ಹೊಂದಿರುವ "LRI ಕಾರ್ಡ್‌ಗಳ" ವಿತರಣೆ

ಪ್ರಸಕ್ತ ಸಾಲಿನ ಸಾಧನೆಗಳು









PMKSY-WDC 2.0, REWARD ಮತ್ತು ಇತರೆ ಯೋಜನೆಗಳಡಿ 4763 ನೀರು ಸಂಗ್ರಹಣ ವಿನ್ಯಾಸಗಳನ್ನು ರೈತರು ಮತ್ತು ಸಮುದಾಯ ಭೂಮಿಯಲ್ಲಿ ವೈಜ್ಞಾನಿಕ ಅನುಷ್ಠಾನ ಹಾಗೂ ಮಣ್ಣು, ನೀರು ಮತ್ತು ತೇವಾಂಶ ಸಂರಕ್ಷಣೆ.

MGNREGA ಮೂಲಕ ಬರಪೀಡಿತ ಪ್ರದೇಶದ ರೈತ ಕುಟುಂಬಗಳಿಗೆ 82.58 ಲಕ್ಷ ಮಾನವ ದಿನಗಳ ಸೃಜನೆ. 269.09 ಕೋಟಿ ಕೂಲಿ ಹಣವನ್ನು ನೇರವಾಗಿ ರೈತರ ಖಾತೆಗೆ ನೇರ ವರ್ಗಾವಣೆ. 44584 ಹೆಕ್ಟೇರ್ ಬದು ಮತ್ತು 4901 ರಚನೆಗಳ ಮೂಲಕ 4789 ಕೋಟಿ ಲೀಟರ್ ನೀರು ಸಂಗ್ರಹಣ ಸಾಮರ್ಥ್ಯ ರಚನೆ.

ಜಲಾನಯನ ಪ್ರದೇಶದಲ್ಲಿ ಹಸಿರು ಹೊದಿಕೆಯ ಮೂಲಕ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು 4470 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ. ಪರಿಸರ ಸಮತೋಲನ ಮತ್ತು ಜೀವ ವೈವಿಧ್ಯತೆಯನ್ನು ರಕ್ಷಿಸಲು 227 ಕಿರು ಅರಣ್ಯ ಅಭಿವೃದ್ಧಿ.

ಬರಪೀಡಿತ ಜಲಾನಯನ ಪ್ರದೇಶಗಳ ಜಾನುವಾರು ಆರೋಗ್ಯ ರಕ್ಷಣೆಗೆ 185 "ಜಾನುವಾರು ಆರೋಗ್ಯ ಶಿಬಿರ" ಗಳ ಆಯೋಜನೆ. 36783 ಜಾನುವಾರುಗಳಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧಿ ವಿತರಣೆ.

ವಿಶ್ವ ಬ್ಯಾಂಕ್ ನೆರವಿನ REWARD ಯೋಜನೆಯಡಿ 4.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ **ಭೂ ಸಂಪನ್ಮೂಲ ಸಮೀಕ್ಷೆ** (LRI). ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಮಣ್ಣಿನ ಗುಣ ಲಕ್ಷಣ, ಪೋಷಕಾಂಶ ಮತ್ತು ಸೂಕ್ತ ಬೆಳೆಯ ಮಾಹಿತಿ ಹೊಂದಿರುವ LRI ಕಾರ್ಡ್‌ಗಳನ್ನು 79000 ರೈತರಿಗೆ ವಿತರಣೆ.

ಬೆಂಗಳೂರಿನ GKVK ಆವರಣದಲ್ಲಿ ರಾಷ್ಟ್ರ ಮಟ್ಟದ "ಜಲಾನಯನ ನಿರ್ವಹಣೆ ಉತ್ಕೃಷ್ಟತಾ ಕೇಂದ್ರ" ಸ್ಥಾಪನೆ. ವಿವಿಧ ರಾಜ್ಯಗಳ 352 ಅಧಿಕಾರಿಗಳಿಗೆ ವೈಜ್ಞಾನಿಕ ಜಲಾನಯನ ಅಭಿವೃದ್ಧಿ ಕುರಿತು ತರಬೇತಿ.

ಜಲಾನಯನ ಅಭಿವೃದ್ಧಿ ಇಲಾಖೆಯ ಉತ್ತಮ ಕಾರ್ಯವೈಖರಿಗೆ ಕರ್ನಾಟಕ ರಾಜ್ಯವನ್ನು "Light House State" ಆಗಿ ವಿಶ್ವ ಬ್ಯಾಂಕ್ ಗುರುತಿಸಿ ಇತರೆ ರಾಜ್ಯಗಳಿಗೆ ಜಲಾನಯನ ಅಭಿವೃದ್ಧಿಯಲ್ಲಿ ಮಾದರಿ ರಾಜ್ಯವೆಂಬ ಹೆಗ್ಗಳಿಕೆ.

ಆಸ್ತಿ ರಹಿತ ಕೂಲಿ ಕಾರ್ಮಿಕರಿಗೆ "3044 ಸ್ವಸಹಾಯ ಸಂಘ"ಗಳನ್ನು ರಚಿಸುವ ಮೂಲಕ ಆದಾಯ ಉತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ. 46.07 ಕೋಟಿ ನೆರವು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ (NRLM) ಇಲಾಖೆಯ ಜೊತೆಗೂಡಿ ರೂ. 20.00 ಕೋಟಿ ಮೊತ್ತದ ವಿವಿಧ ಜೀವನೋಪಾಯ ಚಟುವಟಿಕೆಗಳನ್ನು ಜಲಾನಯನ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿನ "ರೈತ ಉತ್ಪಾದಕ ಸಂಸ್ಥೆಗಳ" ಉತ್ಪನ್ನಗಳನ್ನು "ನಂದಿನಿ" ಮಾದರಿಯಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮಾಡಲು "ಕರ್ನಾಟಕ ರಾಜ್ಯ FPO ಸಹಕಾರ ಸಂಘ" ಸ್ಥಾಪನೆ ಮಾಡಲಾಗಿದೆ.









ಬಿ.ವೈ. ಶ್ರೀನಿವಾಸ್
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ

ಗಿರೀಶ್ ಹೆಚ್ .ಸಿ. ಭಾ.ಅ.ಸೇ
ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ

ವಿ. ಅನ್ಬುಕುಮಾರ್ ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕೃಷಿ ಇಲಾಖೆ

ಹೆಚ್ಚಿನ ಮಾಹಿತಿಗಾಗಿ "**ರೈತ ಸಂಪರ್ಕ ಕೇಂದ್ರ**"ಗಳನ್ನು ಸಂಪರ್ಕಿಸಬಹುದಾಗಿದೆ

ಜಲಾನಯನ ಅಭಿವೃದ್ಧಿ ಇಲಾಖೆ, 7ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-560 009



ಲೋಕಸಭೆ–ವಿಧಾನಸಭೆ ಚುನಾವಣೆಗೆ ಮೈತ್ರಿ ● ಆಂಧ್ರ ಸೀಟು ಹಂಚಿಕೆ ಘೋಷಣೆಯಷ್ಟೇ ಬಾಕಿ ● ಜನಸೇನಾ ಪಕ್ಷ ಸಹಭಾಗಿ

ಎನ್‌ಡಿಎ ತೆಕ್ಕೆಗೆ ಮತ್ತೆ ತೆಲುಗುದೇಶಂ


ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಆಂಧ್ರ ಪ್ರದೇಶದಲ್ಲಿ ಮುಂಬರುವ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಸಂಬಂಧ ಬಿಜೆಪಿ, ತೆಲುಗುದೇಶಂ ಪಕ್ಷ (ಟಿಡಿಪಿ) ಮತ್ತು ಜನಸೇನಾ ಪಕ್ಷಗಳು ಮೈತ್ರಿ ಕುರಿತು ಶನಿವಾರ ಒಪ್ಪಂದ ಮಾಡಿಕೊಂಡಿವೆ.

ಕೇಂದ್ರ ಸರ್ಕಾರವು ಆಂಧ್ರ ಪ್ರದೇಶಕ್ಕೆ ಹೆಚ್ಚಿನ ಕೊಡುಗೆಗಳನ್ನು ನೀಡಿಲ್ಲ ಎಂದು ಆರೋಪಿಸಿ 2018ರಲ್ಲಿ ಎನ್‌ಡಿಎ ತೊರೆದಿದ್ದ ಟಿಡಿಪಿ, ಆರು ವರ್ಷಗಳ ಬಳಿಕ ಮತ್ತೆ ಎನ್‌ಡಿಎ ತೆಕ್ಕೆಗೆ ಮರಳಿದೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು, ಮತ್ತು ಜನಸೇನಾ ಪಕ್ಷದ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ದೆಹಲಿಯಲ್ಲಿ ಎರಡು ದಿನಗಳ ಕಾಲ ನಡೆಸಿದ ಸುದೀರ್ಘ ಚರ್ಚೆಯ ಬಳಿಕ ಲೋಕಸಭಾ, ವಿಧಾನಸಭಾ ಕ್ಷೇತ್ರಗಳ ಸೀಟು ಹಂಚಿಕೆಯನ್ನು ಅಂತಿಮಗೊಳಿಸಲಾಗಿದೆ. ಈ ಕುರಿತು ಔಪಚಾರಿಕ ಘೋಷಣೆಯಷ್ಟೇ ಬಾಕಿಯಿದೆ ಎಂದು ಮೂಲಗಳು ತಿಳಿಸಿವೆ.

'ಆಂಧ್ರ ಪ್ರದೇಶದ ಜನರ ಪ್ರಗತಿಗಾಗಿ ಬಿಜೆಪಿ, ಟಿಡಿಪಿ, ಜನಸೇನಾ ಪಕ್ಷಗಳು ಮೈತ್ರಿ ಮಾಡಿಕೊಂಡಿದ್ದು, ಸೀಟು ಹಂಚಿಕೆ ಕುರಿತು ಒಂದೆರಡು ದಿನಗಳಲ್ಲಿ ತಿಳಿಸಲಾಗುವುದು' ಎಂದು ಮೂರು ಪಕ್ಷಗಳ ಮುಖ್ಯಸ್ಥರು ಜಂಟಿ ಹೇಳಿಕೆಯಲ್ಲಿ ಬಿಡುಗಡೆ ಮಾಡಿದ್ದಾರೆ. 'ಆಂಧ್ರದ ಜನರ ನಿರೀಕ್ಷೆಗೆ ತಕ್ಕಂತೆ ಈ ಮೈತ್ರಿ ಮಾಡಿಕೊಳ್ಳಲಾಗಿದ್ದು, ಜನರ ಪೂರ್ಣ ಬೆಂಬಲ ದೊರೆಯುತ್ತದೆ ಎಂದು ನಿರೀಕ್ಷಿಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ.



> **ವೈಎಸ್‌ಆರ್ ಕಾಂಗ್ರೆಸ್ ರಾಜ್ಯವನ್ನು ಅಧೋಗತಿಗೆ ತೆಗೆದುಕೊಂಡು ಹೋಗಿದ್ದರಿಂದ ಆಂಧ್ರಪ್ರದೇಶದ ಹಿತಾಸಕ್ತಿಗಾಗಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದೇವೆ**
> **ಎನ್. ಚಂದ್ರಬಾಬು ನಾಯ್ಡು,** ಟಿಡಿಪಿ ಮುಖ್ಯಸ್ಥ

ಮುಖ್ಯಾಂಶಗಳು
- **ಲೋಕಸಭಾ ಕ್ಷೇತ್ರ:** ಬಿಜೆಪಿಗೆ 6, ಜನಸೇನಾಗೆ 2, ಟಿಡಿಪಿಗೆ 17 ಸ್ಥಾನ ಸಾಧ್ಯತೆ
- **ವಿಧಾನಸಭಾ ಕ್ಷೇತ್ರ:** ಬಿಜೆಪಿ 6, ಜನಸೇನಾಗೆ 24, ಟಿಡಿಪಿಗೆ 145 ಸ್ಥಾನ ಸಾಧ್ಯತೆ
- **ಇದೇ 17 ಅಥವಾ 18ರಂದು ಆಂಧ್ರಪ್ರದೇಶಕ್ಕೆ ಮೋದಿ**

ಸೀಟು ಹಂಚಿಕೆ: ಆಂಧ್ರಪ್ರದೇಶದಲ್ಲಿ ಒಟ್ಟು 25 ಲೋಕಸಭಾ ಕ್ಷೇತ್ರ ಮತ್ತು 175 ವಿಧಾನಸಭಾ ಕ್ಷೇತ್ರಗಳಿದ್ದು, ಏಕಕಾಲದಲ್ಲಿ ಚುನಾವಣೆ ನಡೆಯಲಿವೆ. ಬಿಜೆಪಿ ಆರು ಲೋಕಸಭಾ ಮತ್ತು ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಒಪ್ಪಿದೆ. ಜನಸೇನಾ ಪಕ್ಷಕ್ಕೆ ಆರಂಭದಲ್ಲಿ ಮೂರು ಲೋಕಸಭಾ ಸ್ಥಾನಗಳಲ್ಲಿ ಸ್ಪರ್ಧಿಸುವಂತೆ ಹೇಳಲಾಗಿತ್ತು, ಆದರೆ ಅದೀಗ ಎರಡು ಲೋಕಸಭಾ ಕ್ಷೇತ್ರಗಳು ಮತ್ತು 24 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಉಳಿದ 17 ಲೋಕಸಭಾ ಕ್ಷೇತ್ರಗಳು ಮತ್ತು 145 ವಿಧಾನಸಭಾ ಕ್ಷೇತ್ರಗಳಲ್ಲಿ ಟಿಡಿಪಿ ಸ್ಪರ್ಧೆ ಮಾಡಲಿದೆ ಎಂದು ಮೂಲಗಳು ಹೇಳಿವೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಜನಸೇನಾ ಪಕ್ಷವು ಟಿಡಿಪಿ ಜತೆಗೆ ಚುನಾವಣಾ ಒಪ್ಪಂದದ ಘೋಷಣೆ ಮಾಡಿತ್ತು. ಅದಕ್ಕೂ ಮೊದಲಿನಿಂದ (2014) ಅದು ಬಿಜೆಪಿಯ ಮಿತ್ರ ಪಕ್ಷವಾಗಿದೆ. 370 ಲೋಕಸಭಾ ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿರುವ ಬಿಜೆಪಿಯು ಆಂಧ್ರದಲ್ಲಿ 10 ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಬಯಸಿತ್ತು. ಆದರೆ ಅದು ಅಂತಿಮವಾಗಿ ಆರು ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ.

ಲೋಕಸಭಾ ಚುನಾವಣಾ ಅಖಾಡಕ್ಕೆ ಪವನ್ ಕಲ್ಯಾಣ್?


ಪವನ್ ಕಲ್ಯಾಣ್

ವಿಧಾನಸಭೆಗೆ ಸ್ಪರ್ಧಿಸಲು ಬಯಸಿದ್ದ ಪವನ್ ಕಲ್ಯಾಣ್ ಅವರನ್ನು ಬಿಜೆಪಿಯ ಸಲಹೆಯ ಮೇರೆಗೆ ಕಾಕಿನಾಡ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ನಿರ್ಧರಿಸಲಾಯಿತು. ಅವರಿಗೆ ಕೇಂದ್ರ ಸಂಪುಟದಲ್ಲಿ ಸಚಿವ ಸ್ಥಾನದ ಭರವಸೆಯನ್ನೂ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಟಿಡಿಪಿ ಮತ್ತು ಜನಸೇನಾ ಪಕ್ಷಗಳು ಈಗಾಗಲೇ 99 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿವೆ.

ಬಿಜೆಪಿ ಸ್ಪರ್ಧಿಸುವ ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೈತ್ರಿ ಪಕ್ಷಗಳು ಒಮ್ಮತಕ್ಕೆ ಬಂದಿದ್ದು, ವಿಧಾನಸಭಾ ಕ್ಷೇತ್ರಗಳ ಕುರಿತು ರಾಜ್ಯದ ಬಿಜೆಪಿ ನಾಯಕರು ಟಿಡಿಪಿ ಮತ್ತು ಜನಸೇನಾ ಪಕ್ಷದ ನಾಯಕರ ಜತೆ ಮಾತುಕತೆ ನಡೆಸಲಿದ್ದಾರೆ. ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ದಗ್ಗುಬಾಟಿ ಪುರಂದೇಶ್ವರಿ, ಮಾಜಿ ಮುಖ್ಯಮಂತ್ರಿ ಎನ್. ಕಿರಣ್ ಕುಮಾರ್ ರೆಡ್ಡಿ, ಕೇಂದ್ರದ ಮಾಜಿ ಸಚಿವ ವೈ.ಎಸ್. ಚೌಧರಿ, ರಾಜ್ಯಸಭೆಯ ಮಾಜಿ ಸದಸ್ಯ ಸಿ.ಎಂ.ರಮೇಶ್ ಬಿಜೆಪಿಯಿಂದ ಲೋಕಸಭೆಗೆ ಸ್ಪರ್ಧಿಸಲಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ.

'ಮೈತ್ರಿ ಕುರಿತು ಎಲ್ಲ ಪ್ರಕ್ರಿಯೆ ಮುಗಿದಿದೆ. ಮುಂದಿನ ವಾರ ನಡೆಯಲಿರುವ ಎನ್‌ಡಿಎ ಸಭೆಯಲ್ಲಿ ನಾವು ಪಾಲ್ಗೊಳ್ಳುವ ಸಾಧ್ಯತೆ ಇದೆ' ಎಂದು ಟಿಡಿಪಿ ಹಿರಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ. ಅಮಿತ್ ಶಾ ಅವರೊಂದಿಗಿನ ಸಭೆಯ ಬಳಿಕ ನಾಯ್ಡು ಅವರು ತಮ್ಮ ಪಕ್ಷದ ನಾಯಕರೊಂದಿಗೆ ಟೆಲಿಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸಿ, 'ಇದೇ 17 ಅಥವಾ 18ರಂದು ಚಿಲಕಲೂರಿಪೇಟೆ ಸುತ್ತಮುತ್ತ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವರು. ಅಲ್ಲಿ ಅವರು ಆಂಧ್ರ ಪ್ರದೇಶಕ್ಕೆ ಕೆಲವು ಪ್ರಮುಖ ಘೋಷಣೆಗಳನ್ನು ಮಾಡುವರು' ಎಂದರು.

ಮೋದಿಯನ್ನು ಹೊಗಳಿದ ನಾಯ್ಡು

ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ದೇಶದಲ್ಲಿ ಹಲವಾರು ಒಳ್ಳೆಯ ಕೆಲಸಗಳು ನಡೆಯುತ್ತಿವೆ ಎಂದು ಹೊಗಳಿದ ಚಂದ್ರಬಾಬು ನಾಯ್ಡು ಅವರು, ವೈಎಸ್‌ಆರ್ ಕಾಂಗ್ರೆಸ್ ಆಳ್ವಿಕೆಯಲ್ಲಿ ಆಂಧ್ರ ಪ್ರದೇಶ ಹಿಂದುಳಿದಿದೆ ಎಂದು ಟೀಕಿಸಿದರು.

ಮೋದಿ ಅವರಿಗೆ ಆರ್ಥಿಕತೆ ವೃದ್ಧಿ ಮೊದಲ ಆದ್ಯತೆ ಆಗಿದ್ದರೆ, ವೈಎಸ್‌ಆರ್ ಕಾಂಗ್ರೆಸ್‌ಗೆ ಆರ್ಥಿಕತೆ ನಾಶವೇ ಪ್ರಮುಖ ಆದ್ಯತೆ ಆಗಿದೆ ಎಂದರು. ಕೇಂದ್ರ ಮತ್ತು ಆಂಧ್ರ ಪ್ರದೇಶದಲ್ಲಿ ಒಂದೇ ಮೈತ್ರಿಕೂಟ ಅಧಿಕಾರದಲ್ಲಿದ್ದರೆ ರಾಜ್ಯಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ನಾಯ್ಡು ಪ್ರತಿಪಾದಿಸಿದರು.

'ಬಿಎಸ್‌ಪಿ ಏಕಾಂಗಿ ಸ್ಪರ್ಧೆ'


ಮಾಯಾವತಿ

ಲಖನೌ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಉತ್ತರಪ್ರದೇಶದಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಪಕ್ಷದ ಮುಖ್ಯಸ್ಥೆ ಮಾಯಾವತಿ ಶನಿವಾರ ಹೇಳಿದರು.

ಬಿಎಸ್‌ಪಿಯು ವಿರೋಧಪಕ್ಷಗಳ ಒಕ್ಕೂಟವಾದ 'ಇಂಡಿಯಾ'ಕ್ಕೆ ಸೇರ್ಪಡೆಗೊಳ್ಳಲಿದೆ ಎಂಬ ವದಂತಿಗಳನ್ನು ಅವರು ಅಲ್ಲಗಳೆದರು. ಮೈತ್ರಿಕೂಟಕ್ಕೆ ಸೇರ್ಪಡೆ ಕುರಿತ ವಂದಂತಿಗಳನ್ನು ಪ್ರಸಾರ ಮಾಡುವುದರಿಂದ ಮಾಧ್ಯಮಗಳು ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುವ ಅಪಾಯವಿದೆ ಎಂದು ಅವರು ಎಕ್ಸ್ ಮಾಧ್ಯಮದಲ್ಲಿ ತಿಳಿಸಿದರು.

ಬಿಎಸ್‌ಪಿಯು ಮೈತ್ರಿಕೂಟಕ್ಕೆ ಸೇರ್ಪಡೆಗೊಳ್ಳಲಿದೆ ಅಥವಾ ತೃತೀಯರಂಗ ರಚಿಸಲಿದೆ ಎಂಬುದು ಸುಳ್ಳು ಸುದ್ದಿ. ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸುವುದಕ್ಕೆ ಪೂರ್ಣ ತಯಾರಿ ನಡೆಸಿದೆ ಎಂದು ಅವರು ವಿವರಿಸಿದರು. ಪ್ರತಿಸ್ಪರ್ಧಿ ಪಕ್ಷಗಳು ಜನರನ್ನು ದಾರಿ ತಪ್ಪಿಸಲು ವದಂತಿಗಳನ್ನು ಹಬ್ಬಿಸುತ್ತಿವೆ ಎಂದು ಅವರು ಆರೋಪಿಸಿದರು.

2019ರ ಲೋಕಸಭಾ ಚುನಾವಣೆಯಲ್ಲಿ ಬಿಎಸ್‌ಪಿಯು ಸಮಾಜವಾದಿ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿತ್ತು.

ಬಿಜೆಪಿ, ಬಿಜೆಡಿ ಸೀಟು ಹಂಚಿಕೆ ಇನ್ನೂ ಅತಂತ್ರ

ಭುವನೇಶ್ವರ (ಪಿಟಿಐ): ಒಡಿಶಾದಲ್ಲಿ ಬಿಜೆಪಿ ಮತ್ತು ಬಿಜೆಡಿ ನಡುವಿನ ಸೀಟು ಹಂಚಿಕೆ ಮಾತುಕತೆಯು ಯಾವುದೇ ತೀರ್ಮಾನಕ್ಕೆ ಬರುವಲ್ಲಿ ವಿಫಲವಾಗಿದ್ದು, ಅಲ್ಲಿ ಬಿಜೆಪಿಯು ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಎಲ್ಲ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಸಾಧ್ಯತೆ ಇದೆ.

ಒಡಿಶಾದಲ್ಲಿ 147 ವಿಧಾನಸಭಾ ಕ್ಷೇತ್ರಗಳು, 21 ಲೋಕಸಭಾ ಕ್ಷೇತ್ರಗಳು ಇವೆ. ಬಿಜೆಪಿ ಮತ್ತು ಬಿಜೆಡಿ ನಡುವೆ ದೆಹಲಿಯಲ್ಲಿ ಸೀಟು ಹಂಚಿಕೆ ಮಾತುಕತೆ ನಡೆದಿತ್ತು.

'ಮೈತ್ರಿ ಬಗ್ಗೆ ಮಾತುಕತೆ ಆಗಿಲ್ಲ. ನಾವು (ಬಿಜೆಪಿ) ಏಕಾಂಗಿಯಾಗಿ ಚುನಾವಣೆ ಎದುರಿಸುತ್ತೇವೆ' ಎಂದು ಒಡಿಶಾ ಬಿಜೆಪಿ ಘಟಕದ ಅಧ್ಯಕ್ಷ ಮನಮೋಹನ್ ಸಾಮಲ್ ಅವರು ದೆಹಲಿಯಿಂದ ವಾಪಸ್ಸಾದ ನಂತರ ತಿಳಿಸಿದ್ದಾರೆ. ಒಡಿಶಾದಲ್ಲಿ ಬಿಜೆಪಿಯು ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಬಿಜೆಪಿ ನಾಯಕರ ಜೊತೆ ಮೈತ್ರಿ ಬಗ್ಗೆ ಮಾತುಕತೆ ನಡೆಸಲು ಚಾರ್ಟರ್ಡ್ ವಿಮಾನದಲ್ಲಿ ದೆಹಲಿಗೆ ದೌಡಾಯಿಸಿದ್ದ ಬಿಜೆಡಿ ನಾಯಕರಾದ ವಿ.ಕೆ. ಪಾಂಡಿಯನ್ ಮತ್ತು ಪ್ರಣಬ್ ಪ್ರಕಾಶ್ ದಾಸ್ ಅವರು ಕೂಡ ಭುವನೇಶ್ವರಕ್ಕೆ ವಾಪಸ್ಸಾಗಿದ್ದಾರೆ. ಸಭೆಯ ತೀರ್ಮಾನದ ಬಗ್ಗೆ ಅವರು ಮೌನತಾಳಿದ್ದಾರೆ.

ಬಿಜೆಪಿ ಮತ್ತು ಬಿಜೆಡಿ ನಡುವಿನ ಮೈತ್ರಿ ಮಾತುಕತೆಗೆ ಸೀಟು ಹಂಚಿಕೆಯು ಅಡ್ಡಿಯಾಗಿ ಪರಿಣಮಿಸಿದೆ ಎಂದು ಮೂಲಗಳು ಹೇಳಿವೆ. ಚುನಾವಣೆಗೂ ಮೊದಲು ಮೈತ್ರಿ ಮಾಡಿಕೊಳ್ಳಲು ಎರಡೂ ಪಕ್ಷಗಳು ಒಪ್ಪಿದ್ದವು. ಆದರೆ ಸೀಟು ಹಂಚಿಕೆಯ ವಿಚಾರವಾಗಿ ಒಮ್ಮತ ಮೂಡಿಲ್ಲ. 100ಕ್ಕೂ ಹೆಚ್ಚಿನ ವಿಧಾನಸಭಾ ಕ್ಷೇತ್ರಗಳನ್ನು ತನಗೆ ಬಿಟ್ಟುಕೊಡಬೇಕು ಎಂದು ಬಿಜೆಡಿ ಕೇಳಿತು. ಇದು ಬಿಜೆಪಿಗೆ ಒಪ್ಪಿಗೆಯಾಗಲಿಲ್ಲ ಎಂದು ಬಿಜೆಪಿ ಮೂಲಗಳು ಹೇಳಿವೆ.

ಹಾಲಿ ವಿಧಾನಸಭೆಯಲ್ಲಿ ಬಿಜೆಡಿ 114 ಸದಸ್ಯರನ್ನು ಹೊಂದಿದೆ. 'ಬಿಜೆಡಿಯು ವಿಧಾನಸಭೆಯ ಒಟ್ಟು ಸಂಖ್ಯಾಬಲದ ಶೇಕಡ 75ರಷ್ಟು ಸ್ಥಾನಗಳನ್ನು ಕೇಳುತ್ತಿದೆ. ಇದನ್ನು ಒಪ್ಪಿಕೊಳ್ಳಲು ನಮ್ಮಿಂದ ಆಗದು' ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದರು. ಬಿಜೆಪಿಯು ಒಡಿಶಾದ 21 ಲೋಕಸಭಾ ಕ್ಷೇತ್ರಗಳ ಪೈಕಿ 14 ಕ್ಷೇತ್ರಗಳನ್ನು ತನಗೆ ಬಿಟ್ಟುಕೊಡಬೇಕು ಎಂದು ಕೇಳಿತು. ಇದನ್ನು ಬಿಜೆಡಿ ಒಪ್ಪಲಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಡಿ 12 ಸ್ಥಾನಗಳಲ್ಲಿ, ಬಿಜೆಪಿ ಎಂಟು ಸ್ಥಾನಗಳಲ್ಲಿ ಗೆಲುವು ಕಂಡಿದ್ದವು.

ಚುನಾವಣಾ ವೇಳಾಪಟ್ಟಿ ಪ್ರಕಟಿಸದಂತೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣಾ ಬಾಂಡ್ ಕುರಿತ ವಿವರಗಳನ್ನು ಎಸ್‌ಬಿಐ ಹಂಚಿಕೊಳ್ಳುವವರೆಗೂ ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಿಸದಂತೆ 79 ಮಾಜಿ ಅಧಿಕಾರಿಗಳು ಚುನಾವಣಾ ಆಯೋಗಕ್ಕೆ ಶನಿವಾರ ಪತ್ರ ಬರೆದು ಒತ್ತಾಯಿಸಿದ್ದಾರೆ.

ಈ ಕುರಿತ ವಿವರಗಳನ್ನು ಸಲ್ಲಿಸುವುದಕ್ಕೆ ಜೂನ್ 30ರವರೆಗೂ ಸಮಯ ನೀಡಬೇಕು ಎಂದು ಎಸ್‌ಬಿಐ ಸುಪ್ರೀಂ ಕೋರ್ಟ್ ಅನ್ನು ಕೋರಿರುವುದು, ಕೆಲ ಶಂಕಾಸ್ಪದ ವ್ಯವಹಾರಗಳನ್ನು ಮರೆ ಮಾಚಲು ಮತ್ತು ಕೇಂದ್ರ ಸರ್ಕಾರವನ್ನು ಟೀಕೆಗಳಿಂದ ರಕ್ಷಿಸಲು ಪ್ರಯತ್ನಿಸಿದಂತಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

'ಕಾನ್‌ಸ್ಟಿಟ್ಯೂಷನಲ್ ಕಂಡಕ್ಟ್ ಗ್ರೂಪ್' ಹೆಸರಿನಲ್ಲಿ 79 ಮಾಜಿ ಅಧಿಕಾರಿಗಳು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಮತ್ತು ಚುನಾವಣಾ ಆಯುಕ್ತ ಅರುಣ್ ಗೋಯಲ್ ಅವರಿಗೆ ಬರೆದಿರುವ ಬಹಿರಂಗ ಪತ್ರದಲ್ಲಿ, 'ಎಸ್‌ಬಿಐ ಅಗತ್ಯ ಮಾಹಿತಿ ಒದಗಿಸುವವರೆಗೂ 2024ರ ಸಾರ್ವತ್ರಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸುವುದಿಲ್ಲ ಎಂಬುದನ್ನು ಆಯೋಗ ಸ್ಪಷ್ಟಪಡಿಸಬೇಕು' ಎಂದು ಕೋರಿದ್ದಾರೆ.

'ಆಯೋಗ ನಿಷ್ಕ್ರಿಯವಾದರೆ, ಭಾರತೀಯ ಮತದಾರರ ಮಾಹಿತಿ ಹಕ್ಕನ್ನು ಗೌರವಿಸುವ ಮತ್ತು ಮುಕ್ತ, ನ್ಯಾಯ ಸಮ್ಮತ ಚುನಾವಣೆ ನಡೆಯಬೇಕು ಎಂಬ ಸಂವಿಧಾನದ ಆಶಯಕ್ಕೆ ಧಕ್ಕೆಯಾಗುತ್ತದೆ. ಅಲ್ಲದೆ ಪ್ರಜಾಪ್ರಭುತ್ವ ಸತ್ತಂತಾಗುತ್ತದೆ' ಎಂದು ಮಾಜಿ ಅಧಿಕಾರಿಗಳು ಅವರು ಪತ್ರದಲ್ಲಿ ತಿಳಿಸಿದ್ದಾರೆ. ಶಿವಶಂಕರ್ ಮೆನನ್, ಜಿ.ಕೆ.ಪಿಳ್ಳೈ, ಮೀರನ್ ಸಿ. ಬೋರ್ವಾಂಕರ್, ವಜಾಹತ್ ಹಬೀಬುಲ್ಲಾ, ಕೆ.ಪಿ.ಫಾಬಿಯನ್, ಕೆ.ಸುಜಾತಾ ರಾವ್ ಇತರರು ಪತ್ರಕ್ಕೆ ಸಹಿ ಹಾಕಿದ್ದಾರೆ. ನ್ಯಾಯಾಲಯ ಕೇಳಿದ ಮಾಹಿತಿಯನ್ನು 10 ನಿಮಿಷಗಳಲ್ಲಿ ನೀಡಬಹುದು ಎಂದು ಮಾಜಿ ಹಣಕಾಸು ಕಾರ್ಯದರ್ಶಿ ಸುಭಾಷ್‌ಚಂದ್ರ ಗಾರ್ಗ್ ಅವರ ಹೇಳಿಕೆಯನ್ನೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ತಮಿಳುನಾಡು: ಕಾಂಗ್ರೆಸ್‌ಗೆ 9 ಸ್ಥಾನ ಬಿಟ್ಟುಕೊಟ್ಟ ಡಿಎಂಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷವು ಮೈತ್ರಿ ಪಕ್ಷ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಒಂಬತ್ತು ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಒಂದು ಸ್ಥಾನ ಸೇರಿದಂತೆ 10 ಲೋಕಸಭಾ ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ.

ಡಿಎಂಕೆ ಅಧ್ಯಕ್ಷ ಹಾಗೂ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ತಮಿಳುನಾಡಿನ ಕಾಂಗ್ರೆಸ್ ಘಟಕದ ಅಧ್ಯಕ್ಷ ಸೆಲ್ವಪೆರುಂಥಗೈ ಅವರು ಸೀಟು ಹಂಚಿಕೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ವೇಳೆ ಎಐಸಿಸಿ ಮುಖಂಡರಾದ ಕೆ.ಸಿ. ವೇಣುಗೋಪಾಲ್ ಮತ್ತು ಅಜಯ್ ಕುಮಾರ್ ಹಾಜರಿದ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ವೇಣುಗೋಪಾಲ್, ಡಿಎಂಕೆ ನೇತೃತ್ವದ ಮೈತ್ರಿಕೂಟ ರಾಜ್ಯದ ಎಲ್ಲ 40 ಲೋಕಸಭಾ ಕ್ಷೇತ್ರಗಳಲ್ಲಿ ಜಯಗಳಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.



ಭಾನುವಾರ, ಮಾರ್ಚ್ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 70 | ಪುಟ 22

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಎಲ್ಲಿಂದಲೋ ಬಂದ ಮೆಣಸಿನಕಾಯಿ ತಳಿಯೊಂದು ಬಯಲುನಾಡಿನ ಊರಿಗೆ ತನ್ನದೇ ಬ್ರ್ಯಾಂಡ್ ಐಡೆಂಟಿಟಿ ತಂದುಕೊಟ್ಟ ಕತೆ 'ಬ್ಯಾಡಗಿ ಮೆಣಸಿನಕಾಯಿ'



ಕಳಂಕ ಹೊತ್ತ ಮಂಗನೇ ಇಲ್ಲಿ ಸಂತ್ರಸ್ತ ! • ಹೊಸ ಲಸಿಕೆ ಅಭಿವೃದ್ಧಿಯಾಗಿಲ್ಲ

ಮಲೆನಾಡ ಬೆಚ್ಚಿಬೀಳಿಸಿದೆ ಕೆಎಫ್‌ಡಿ

• ವೆಂಕಟೇಶ ಜಿ.ಎಚ್

ಒಳನೋಟ

ಶಿವಮೊಗ್ಗ: ಕಾಡಿನ ಏರು ಹಾದಿಯಲ್ಲಿ ಏದುಸಿರು ಬಿಡುತ್ತಿದ್ದ ಕಾರಿಗೆ ಎದುರಿನ ಜನವಸತಿ ಕಡೆಯಿಂದ ಬರುತ್ತಿದ್ದ ಇಬ್ಬರು ಕೈ ಅಡ್ಡಹಾಕಿದರು. ಎಲ್ಲಿಂದ ಬಂದಿದ್ದೀರಿ, ಮುಂದೆ ಎಲ್ಲಿಗೆ? ಎಂಬ ಪ್ರಶ್ನೆ ಅವರ ಮುಖಭಾವದಲ್ಲಿತ್ತು. ಪರಿಚಯ ಹೇಳಿಕೊಳ್ಳುತ್ತಿದ್ದಂತೆಯೇ ಅಸಹನೆ, ಆತಂಕ ಅವರ ಮುಖದಲ್ಲಿ ಒಡಮೂಡಿತು.

'ನೀವು ಬಂದು ನಮ್ಮೂರು, ನಮ್ಮವರ ಹೆಸರು ಪೇಪರ್‌ನಲ್ಲಿ ಬರೀತಿರಿ. ಮಂಗನ ಕಾಯಿಲೆ ಬಂದಿದೆ ಎಂದರೆ, ಯಾರೂ ನಮ್ಮನ್ನು ತೋಟದ ಕೆಲಸಕ್ಕೆ ಕರೆಯೊಲ್ಲ. ನಮ್ಮೂರಿಗೆ ಯಾರೂ ಬರಲ್ಲ. ಹೆಣ್ಣು ಕೊಟ್ಟು, ತಗೊಳಲ್ಲ. ತೋಟಕ್ಕೆ ದರಗು (ಸೊಪ್ಪು) ತರಲು ಫಾರೆಸ್ಟ್‌ನವರು ಕಾಡಿಗೆ ಬಿಡುತ್ತಿಲ್ಲ. ಪೇಪರ್‌ನಲ್ಲಿ ನಮ್ಮಳ್ಳಿ ಹೆಸರು ಹಾಕಿ, ಹಾಳು ಮಾಡೋದು ಬ್ಯಾಡ. ನೀವು ಇಲ್ಲಿಂದ ಹೊರಡಿ' ಎಂದು ಕಾರಿಗೆ ಅಡ್ಡನಿಂತರು.

ಸಾಗರ–ಸಿದ್ದಾಪುರ ಗಡಿ ಭಾಗದ ಆ ಕುಗ್ರಾಮದಲ್ಲಿ ಇದೇ ಮೊದಲ ಬಾರಿಗೆ ಮಂಗನ ಕಾಯಿಲೆ ಕಾಣಿಸಿಕೊಂಡಿದೆ. ವ್ಯಕ್ತಿಯೊಬ್ಬರು ಸತ್ತಿದ್ದಾರೆ. ಆ ಬಗ್ಗೆ ಮಾಹಿತಿ ಪಡೆಯಲು ಹೋಗುವಾಗ ನಡೆದ ಘಟನೆಯಿದು.

ಕಾಯಿಲೆ ಕಾರಣಕ್ಕೆ ಗ್ರಾಮಕ್ಕೆ ಆರೋಗ್ಯಾಧಿಕಾರಿಗಳು ನಿರಂತರವಾಗಿ ಭೇಟಿ ಕೊಡುತ್ತಿದ್ದಾರೆ. ಹಿಂದೆಯೇ ಮಾಧ್ಯಮದವರೂ ಹೋಗುತ್ತಿದ್ದಾರೆ. ಅದೆಲ್ಲವೂ ವರದಿ ಆಗುತ್ತಿದೆ. ಇದು ಊರಿನವರ ಚಿಂತೆ ಹೆಚ್ಚಿಸಿದೆ. ಊರಲ್ಲಿ ಜೀಪು, ಕಾರಿನ ಸದ್ದು ಕೇಳಿದರೆ ಅವರಲ್ಲಿ ಅಸಹನೆ ಮೈಗೂಡುತ್ತದೆ. ಹೀಗಾಗಿ ಎದುರಿಗೆ ಸಿಕ್ಕ ಊರವರಿಂದಲೇ ಮಾಹಿತಿ ಪಡೆದು ಕಾರು ಹಿಂದಕ್ಕೆ ತಿರುಗಿಸಿದೆವು.



ಕೆಎಫ್‌ಡಿ ಹರಡುವ ಉಣುಗು (ಉಣ್ಣೆ)

ಮಂಗನ ಕಾಯಿಲೆ (ಕೆಎಫ್‌ಡಿ) ರಷ್ಯನ್ ಎನ್‌ಸೆಫಲೈಟಿಸ್ ಹೆಸರಿನ ವೈರಸ್ ಜನ್ಯ ಕಾಯಿಲೆ. ಸೈಬೀರಿಯಾ ಭಾಗದಿಂದ ಇಲ್ಲಿಗೆ ವಲಸೆ ಬಂದ ಪಕ್ಷಿಯ ಮೈಯಲ್ಲಿ ಈ ವೈರಸ್ ಹೊತ್ತ ಉಣ್ಣೆ ಈ ಭಾಗಕ್ಕೆ ಬಂದಿರಬಹುದು ಎಂದು ಅರ್ಥೈಸಿಕೊಳ್ಳಲಾಗಿದೆ ಎನ್ನುತ್ತಾರೆ ಕೆಎಫ್‌ಡಿ ಬಗ್ಗೆ ದಶಕಗಳಿಂದ ಸಂಶೋಧನೆಯಲ್ಲಿ ನಿರತ ವಿಜ್ಞಾನಿ ಶಿವಮೊಗ್ಗದ ಡಾ.ದರ್ಶನ್ ನಾರಾಯಣ.

4ನೇ ಪುಟ ನೋಡಿ



ಮಲೆನಾಡಿನಲ್ಲಿ ಕಾಡಿಗೆ ಮೇಯಲು ಹೋಗುವ ದನಗಳ ದೇಹ ಸೇರುವ ಮೂಲಕವೂ ಕೆಎಫ್‌ಡಿ ವಾಹಕ ಉಣುಗು ಮನುಷ್ಯರ ಸಂಪರ್ಕಕ್ಕೆ ಬರುತ್ತವೆ.

ಲಸಿಕೆ ಉತ್ಪಾದನೆ; ಡಬ್ಲ್ಯುಎಚ್‌ಒ ಮಾರ್ಗಸೂಚಿ ಅಡ್ಡಿ?

'ಕೆಎಫ್‌ಡಿ ಬಾಧಿತರಿಗೆ ಈ ಹಿಂದೆ ಕೊಡುತ್ತಿದ್ದ ಲಸಿಕೆಯಲ್ಲಿ ಪ್ರತಿರೋಧಕ ಶಕ್ತಿ ಕಂಡುಬಾರದ ಕಾರಣ 2022ರ ಜನವರಿಯಿಂದ ಅದರ ಉತ್ಪಾದನೆ ಸಂಪೂರ್ಣ ನಿಲ್ಲಿಸಲಾಗಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಹೊಸದಾಗಿ ಸಂಶೋಧನೆ ಹಾಗೂ ಉತ್ಪಾದನೆಗೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮೂರು ಬಾರಿ ಜಾಹೀರಾತು ಕೊಟ್ಟರೂ ಯಾರೂ ಮುಂದೆ ಬಂದಿಲ್ಲ.

'ಲಸಿಕೆ ಬೇಕಿರುವುದು ಐದು ಲಕ್ಷ ಡೋಸ್. ಖಾಸಗಿಯವರು ಅಷ್ಟು ಸಂಖ್ಯೆಯನ್ನು ಬರೀ ಟ್ರಯಲ್ ರನ್‌ನಲ್ಲಿ (ಪ್ರಯೋಗಾರ್ಥ ಪರೀಕ್ಷೆ) ಸಿದ್ಧಪಡಿಸಿ ಚೆಲ್ಲುತ್ತಾರೆ. ವಿಶ್ವ ಆರೋಗ್ಯ ಸಂಸ್ಥೆ ಮಾರ್ಗಸೂಚಿ ಅನ್ವಯ ಕೆಎಫ್‌ಡಿ ಅಪರೂಪದ ಕಾಯಿಲೆ. ಅದರ ಔಷಧಿಯನ್ನು ವಾಣಿಜ್ಯ ಉದ್ದೇಶಕ್ಕೆ ಬಳಸದೇ ಉಚಿತವಾಗಿ ಕೊಡಬೇಕಿದೆ. ಹೀಗಾಗಿ ಲಸಿಕೆ ಉತ್ಪಾದನೆಗೆ ಯಾರೂ ಮುಂದೆ ಬರುತ್ತಿಲ್ಲ. ಖರ್ಚು–ವೆಚ್ಚ ಸಂಪೂರ್ಣ ಸರ್ಕಾರ ಭರಿಸಿದರೆ ಯಾರಾದರೂ ಮುಂದೆ ಬರಬಹುದು' ಎಂದು ಹೇಳುತ್ತಾರೆ.

ಬಿಜೆಪಿಯ ಪಟ್ಟಿ ಇನ್ನಷ್ಟು ವಿಳಂಬ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚಿಸಲು ಭಾನುವಾರ ಸಂಜೆ ಕರೆದಿದ್ದ ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿ ಸಭೆಯನ್ನು (ಸಿಇಸಿ) ಶನಿವಾರ ರಾತ್ರಿ ದಿಢೀರ್ ಆಗಿ ಮುಂದೂಡಲಾಗಿದೆ.

ಈ ಸಭೆಯಲ್ಲಿ ಕರ್ನಾಟಕದ 15ಕ್ಕೂ ಹೆಚ್ಚು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸುವ ಬಗ್ಗೆ ಚರ್ಚೆಯಾಗಬೇಕಿತ್ತು.

ಶಿವಮೊಗ್ಗದಲ್ಲಿ ಶನಿವಾರ ತಡರಾತ್ರಿ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಸಭೆ ರದ್ದಾಗಿರುವುದನ್ನು ಖಚಿತಪಡಿಸಿದ್ದಾರೆ. ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸಭೆ ಕಳೆದ ಗುರುವಾರ ನಡೆದಿತ್ತು. 195 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ರಾಜ್ಯದ 28 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಂಬಂಧ ರಾಜ್ಯದ ಹಿರಿಯ ನಾಯಕರ ಜತೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮಾಲೋಚನೆ ನಡೆಸಿದ್ದರು. ಮಾರ್ಚ್ 8ಕ್ಕೆ ಸಿಇಸಿ ನಿಗದಿಯಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳ ಪ್ರವಾಸದಲ್ಲಿದ್ದ ಕಾರಣ ಸಭೆಯನ್ನು ಮುಂದೂಡಲಾಗಿತ್ತು. ಇದೀಗ, ಭಾನುವಾರಕ್ಕೆ ನಿಗದಿಯಾಗಿದ್ದ ಸಭೆ ಮತ್ತೆ ಮುಂದೆ ಹೋಗಿದೆ.

ಸಭೆಯಲ್ಲಿ ಪಾಲ್ಗೊಳ್ಳಲು ಬಿ.ವೈ. ವಿಜಯೇಂದ್ರ ದೆಹಲಿಗೆ ತೆರಳಿದ್ದರು.

'ಮೀಸಲಾತಿ: ಶೇ 50ರ ಮಿತಿ ತೆಗೆಯುತ್ತೇವೆ'

ನವದೆಹಲಿ: 'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಜಾತಿ ಗಣತಿ ಮತ್ತು ಆರ್ಥಿಕ ಸ್ಥಿತಿಗತಿ ಆಧರಿಸಿ ಮೀಸಲಾತಿ ಮೇಲಿನ ಶೇ 50ರಷ್ಟು ಮಿತಿಯನ್ನು ತೆಗೆದುಹಾಕುತ್ತೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ. 5

ಚುನಾವಣಾ ಆಯುಕ್ತ ರಾಜೀನಾಮೆ

ಲೋಕಸಭೆ ಚುನಾವಣೆ ಘೋಷಣೆ ಹಂತದಲ್ಲಿ ಅಧಿಕಾರ ತ್ಯಜಿಸಿದ ಗೋಯಲ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಲೋಕಸಭಾ ಚುನಾವಣೆಯ ಘೋಷಣೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿರುವ ಹೊತ್ತಿನಲ್ಲಿ ಚುನಾವಣಾ ಆಯುಕ್ತ ಸ್ಥಾನಕ್ಕೆ ಅರುಣ್ ಗೋಯಲ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ. ಚುನಾವಣಾ ಆಯೋಗದಲ್ಲಿ 'ಚುನಾವಣಾ ಆಯುಕ್ತ' ಹುದ್ದೆಯು ಎರಡನೆಯ ಅತ್ಯುನ್ನತ ಸ್ಥಾನ.

ಅವರು 2027ರ ಡಿಸೆಂಬರ್‌ವರೆಗೆ ಅಧಿಕಾರ ಅವಧಿಯನ್ನು ಹೊಂದಿದ್ದರು. ಅಲ್ಲದೆ, ಹಾಲಿ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್ ಕುಮಾರ್ ಅವರು ಮುಂದಿನ ವರ್ಷದ ಫೆಬ್ರುವರಿಯಲ್ಲಿ ನಿವೃತ್ತರಾದ ನಂತರ ಗೋಯಲ್ ಅವರೇ ಸಿಇಸಿ ಸ್ಥಾನಕ್ಕೆ ಬರುವವರಿದ್ದರು. ಗೋಯಲ್ ಅವರ ರಾಜೀನಾಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಅಂಗೀಕರಿಸಿದ್ದಾರೆ ಎಂದು ಕೇಂದ್ರ ಕಾನೂನು ಸಚಿವಾಲಯದ ಅಧಿಸೂಚನೆಯಲ್ಲಿ ಹೇಳಲಾಗಿದೆ.



ಗೋಯಲ್ ಅವರು ರಾಜೀನಾಮೆ ನೀಡಿರುವುದಕ್ಕೆ ಕಾರಣ ಏನು ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ. ಅವರು 1985ನೇ ಬ್ಯಾಚ್‌ನ, ಪಂಜಾಬ್ ಕೇಡರ್‌ನ ಐಎಎಸ್ ಅಧಿಕಾರಿ. ಅವರು 2022ರ ನವೆಂಬರ್‌ನಲ್ಲಿ ಚುನಾವಣಾ ಆಯುಕ್ತರಾಗಿ ನೇಮಕ ಆಗಿದ್ದರು. ಚುನಾವಣಾ ಆಯೋಗದ ಸಮಿತಿಯಲ್ಲಿ ಮೂವರು ಸದಸ್ಯರು ಇರಬೇಕು. ಆದರೆ ಅನೂಪ್ ಪಾಂಡೆ ಅವರ ನಿವೃತ್ತಿ ಹಾಗೂ ಗೋಯಲ್ ಅವರ ರಾಜೀನಾಮೆಯ ಪರಿಣಾಮವಾಗಿ ಈಗ ರಾಜೀವ್ ಕುಮಾರ್ ಮಾತ್ರ ಇದ್ದಾರೆ.

'ಗೋಯಲ್ ಅವರು ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ನೀಡಬಾರದು ಎಂದು ಸರ್ಕಾರವು ಒತ್ತಾಯಿಸಿದರೂ ಒಪ್ಪಲಿಲ್ಲ. ಆದರೆ ಅವರ ರಾಜೀನಾಮೆಗೆ ಆರೋಗ್ಯ ಸಮಸ್ಯೆ ಕಾರಣ ಅಲ್ಲ. ಅವರ ಆರೋಗ್ಯ ಚೆನ್ನಾಗಿಯೇ ಇದೆ' ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ. ಹೊಸ ಚುನಾವಣಾ ಆಯುಕ್ತರ ನೇಮಕಕ್ಕೆ ಸರ್ಕಾರವು ಪ್ರಕ್ರಿಯೆ ಶುರು ಮಾಡಲಿದೆ ಎಂದು ಕೂಡ ಎನ್‌ಡಿಟಿವಿ ವರದಿ ಹೇಳಿದೆ.

'ಚುನಾವಣಾ ಆಯೋಗದ ಸಮಿತಿಯಲ್ಲಿ ಈಗ ಮುಖ್ಯ ಚುನಾವಣಾ ಆಯುಕ್ತರು ಮಾತ್ರ ಇದ್ದಾರೆ. ಮೋದಿ ನೇತೃತ್ವದ ಸರ್ಕಾರವು ಚುನಾವಣಾ ಆಯುಕ್ತರ ನೇಮಕಕ್ಕೆ ಹೊಸ ಕಾನೂನು ತಂದಿದೆ. ಅದರ ಪ್ರಕಾರ ಚುನಾವಣಾ ಆಯುಕ್ತರನ್ನು ಪ್ರಧಾನಿ ಮೋದಿ ಹಾಗೂ ಅವರ ಆಯ್ಕೆಯ ಒಬ್ಬರು ಸಚಿವರ ಮತ ಆಧರಿಸಿ ನೇಮಕ ಮಾಡಬಹುದು. ಹೀಗಾಗಿ, 2024ರ ಲೋಕಸಭಾ ಚುನಾವಣೆಗೂ ಮೊದಲು ಮೋದಿ ಅವರು ಮೂವರು ಚುನಾವಣಾ ಆಯುಕ್ತರ ಪೈಕಿ ಇಬ್ಬರನ್ನು ನೇಮಕ ಮಾಡಲಿದ್ದಾರೆ. ಇದು ಬಹಳ ಕಳವಳಕಾರಿ' ಎಂದು ತೃಣಮೂಲ ಕಾಂಗ್ರೆಸ್ ಮುಖಂಡ, ಸಂಸದ ಸಾಕೇತ್ ಗೋಖಲೆ 'ಎಕ್ಸ್' ವೇದಿಕೆಯಲ್ಲಿ ಬರೆದಿದ್ದಾರೆ.

ಭಾರತದ ಮುಡಿಗೆ ಸರಣಿ ಕಿರೀಟ

ಧರ್ಮಶಾಲಾ: 'ಬಾಝ್‌ಬಾಲ್' ತಂತ್ರಗಾರಿಕೆಯೊಂದಿಗೆ ಟೆಸ್ಟ್ ಕ್ರಿಕೆಟ್ ಚಹರೆಯನ್ನೇ ಬದಲಿಸುವ ಅತಿಯಾದ ವಿಶ್ವಾಸದೊಂದಿಗೆ ಭಾರತಕ್ಕೆ ಬಂದಿಳಿದಿದ್ದ ಇಂಗ್ಲೆಂಡ್ ತಂಡದ ಠೇಂಕಾರಕ್ಕೆ ರೋಹಿತ್ ಶರ್ಮಾ ಬಳಗವು ಕಡಿವಾಣ ಹಾಕಿದೆ. ಐದು ಪಂದ್ಯಗಳ ಸರಣಿಯನ್ನು ಆತಿಥೇಯ ತಂಡವು 4–1ರಿಂದ ಜಯಿಸಿದೆ.

ಕೊನೆಯ ಟೆಸ್ಟ್ ಫಲಿತಾಂಶ ಇನಿಂಗ್ಸ್ ಮತ್ತು 64 ರನ್‌ಗಳ ಜಯ




ಆರ್. ಅಶ್ವಿನ್

128ಕ್ಕೆ9 ತಮ್ಮ ವೃತ್ತಿಜೀವನದ 100ನೇ ಟೆಸ್ಟ್ ಆಡಿದ ಆರ್. ಅಶ್ವಿನ್ (ಮೊದಲ ಇನಿಂಗ್ಸ್ 4 ಹಾಗೂ ಎರಡನೇ ಇನಿಂಗ್ಸ್ 5 ವಿಕೆಟ್) ಸಾಧನೆ ಮಾಡಿದರು.

36 ಟೆಸ್ಟ್ ಕ್ರಿಕೆಟ್‌ನಲ್ಲಿ ಆರ್. ಅಶ್ವಿನ್ ಗಳಿಸಿದ ಐದು ವಿಕೆಟ್‌ಗಳ ಗೊಂಚಲುಗಳು. ಅವರು ಅನಿಲ್ ಕುಂಬ್ಳೆ ದಾಖಲೆ (35) ಮುರಿದರು.

ಮಾಹಿತಿ: ಐಸಿಸಿ ಹಾಗೂ ಕ್ರಿಕೆಟ್ ವೆಬ್‌ಸೈಟ್
ಚಿತ್ರಗಳು: ಪಿಟಿಐ



700 ಇಂಗ್ಲೆಂಡ್ ತಂಡದ ಜೇಮ್ಸ್ ಆ್ಯಂಡರ್ಸನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಮೂರನೇ ಬೌಲರ್ ಆದರು.

102 ಅತಿ ಹೆಚ್ಚು ಸಿಕ್ಸರ್‌ಗಳು ದಾಖಲಾದ ಟೆಸ್ಟ್ ಪಂದ್ಯ ಇದು. ಇಂಗ್ಲೆಂಡ್–ಆಸ್ಟ್ರೇಲಿಯಾ ನಡುವಣ (74 ಸಿಕ್ಸರ್) ಸರಣಿಯದ್ದು ಇದುವರೆಗಿನ ದಾಖಲೆಯಾಗಿತ್ತು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು






ಉತ್ತರ ಪತ್ರಿಕೆ ಕಳವು; ಪರಿಶೀಲನೆಗೆ ಸಮಿತಿ

ಬೆಂಗಳೂರು: ವಿವಿಧ ಕೋರ್ಸ್‌ಗಳಿಗೆ ಸೇರಿದ 97 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಕಳವಾಗಿರುವ ಕುರಿತು ಪರಿಶೀಲಿಸಲು ಬೆಂಗಳೂರು ವಿಶ್ವವಿದ್ಯಾಲಯ ಸಮಿತಿ ರಚಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ 2013ರಿಂದ 2023ರ ಅವಧಿಯಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ನಿಗೂಢವಾಗಿ ನಾಪತ್ತೆಯಾಗಿದ್ದವು. ಹಾಗಾಗಿ, 97 ವಿದ್ಯಾರ್ಥಿಗಳಿಗೆ ಫಲಿತಾಂಶ ಹಾಗೂ ಪದವಿ ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗರಲಿಲ್ಲ.

ಫಲಿತಾಂಶ ಹಾಗೂ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿಗಳು ಅಲೆದಾಡುತ್ತಿರುವ ವಿಷಯ ಈಚೆಗೆ ನಡೆದ ಸಿಂಡಿಕೇಟ್ ಸಭೆಯಲ್ಲೂ ಚರ್ಚೆಯಾಗಿತ್ತು. ಸಮಸ್ಯೆ ಬಗೆಹರಿಸಿ, ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ದೊರಕಿಸಲು ಸಮಿತಿ ರಚಿಸುವಂತೆ ಸಿಂಡಿಕೇಟ್ ಸಲಹೆ ನೀಡಿತ್ತು.





FARNAZ

ದೇಗುಲದಲ್ಲೇ ಜಗಳ: ಬೆನ್ನಟ್ಟಿ ಚಾಕುವಿನಿಂದ ಇರಿದ ಆರೋಪಿಗಳು

ನೃತ್ಯದ ವೇಳೆ ಮೈ ತಾಗಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ



ಯೋಗೇಶ್

ಬೆಂಗಳೂರು: ನಗರದಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ರೌಡಿ ಸೇರಿ ಇಬ್ಬರನ್ನು ಶುಕ್ರವಾರ ಕೊಲೆ ಮಾಡಲಾಗಿದೆ.

ಫ್ಲವರ್ ಗಾರ್ಡನ್‌ನ ರೌಡಿ ಶಿವ ಅಲಿಯಾಸ್ ಶರತ್ (35) ಹಾಗೂ ಶ್ರೀನಗರದ ಯೋಗೇಶ್ (23) ಕೊಲೆ ಯಾದವರು.

ಕಾಟನ್‌ಪೇಟೆ ಹಾಗೂ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ನೃತ್ಯ ಮಾಡುವ ಸಂದರ್ಭದಲ್ಲಿ ಮೈ ತಾಗಿದ್ದಕ್ಕೆ ಶುರುವಾದ ಗಲಾಟೆ, ಯೋಗೇಶ್ ಅವರ ಕೊಲೆಯಲ್ಲಿ ಅಂತ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ಬೈಕ್ ರಿಪೇರಿ ಹಾಗೂ ತೊಳೆಯುವ ಕೆಲಸ ಮಾಡುತ್ತಿದ್ದ ಯೋಗೇಶ್, ಗಿರಿನಗರ ಬಳಿಯ ದೇವಸ್ಥಾನವೊಂದರಲ್ಲಿ ಶಿವರಾತ್ರಿ ಪೂಜೆಗೆ ಶುಕ್ರವಾರ ಹೋಗಿದ್ದರು. ಸ್ಥಳೀಯ ಯುವಕರು ನೃತ್ಯ ಮಾಡುತ್ತಿದ್ದರು. ಯೋಗೇಶ್ ಸಹ ನೃತ್ಯ ಮಾಡಲಾರಂಭಿಸಿದ್ದರು. ಇದೇ ಸಂದರ್ಭದಲ್ಲಿ ಆರೋಪಿಯೊಬ್ಬನಿಗೆ ಯೋಗೇಶ್ ಅವರ ಮೈ ತಾಗಿತ್ತು' ಎಂದು ತಿಳಿಸಿದರು.

'ಮೈ ತಾಗಿದ್ದ ಕಾರಣಕ್ಕೆ ಜಗಳ ಶುರುವಾಗಿತ್ತು. ಯೋಗೇಶ್ ಹಾಗೂ ಆರೋಪಿಗಳು ಪರಸ್ಪರ ಕೈ ಕೈ ಮಿಲಾಯಿಸಿದ್ದರು. ಸ್ಥಳೀಯರು ಜಗಳ ಬಿಡಿಸಿ ಎಲ್ಲರನ್ನೂ ಸ್ಥಳದಿಂದ ಕಳುಹಿಸಿದ್ದರು' ಎಂದರು.

'ಯೋಗೇಶ್ ಬೈಕ್‌ನಲ್ಲಿ ತಮ್ಮ ಮನೆಯತ್ತ ಹೊರಟಿದ್ದರು. ಈ ಸಂದರ್ಭದಲ್ಲಿ ಹಿಂಬಾಲಿಸಿದ್ದ ಆರೋಪಿಗಳು, ಮಾರ್ಗಮಧ್ಯೆ ಯೋಗೇಶ್ ಬೈಕ್ ಅಡ್ಡ-ಗಟ್ಟಿದ್ದರು. ಚಾಕುವಿನಿಂದ ಇರಿದು ಯೋಗೇಶ್ ಅವರನ್ನು ಕೊಂದಿದ್ದಾರೆ' ಎಂದು ಹೇಳಿದರು.

'ನೃತ್ಯ ಮಾಡುವಾಗ ನಡೆದ ಗಲಾಟೆಯಿಂದ ಕೊಲೆ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡು, ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ವೈಷಮ್ಯದಿಂದ ಕೊಲೆ

'ರೌಡಿ ಶಿವ ಹಾಗೂ ಎದುರಾಳಿ ತಂಡದವರ ನಡುವೆ ವೈಷಮ್ಯ ಇತ್ತು. ಸ್ಥಳೀಯ ವ್ಯಾಪಾರಿಗಳನ್ನು ಶಿವ ಬೆದರಿಸುತ್ತಿದ್ದನೆಂದು ಗೊತ್ತಾಗಿತ್ತು. ಈ ಕಾರಣಕ್ಕೆ ಎದುರಾಳಿ ತಂಡದವರು ಶಿವನನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಂದಿದ್ದಾರೆ' ಎಂದು ಪೊಲೀಸರು ಹೇಳಿದರು.

'ರೌಡಿ ಶಿವ ಶುಕ್ರವಾರ ತಡರಾತ್ರಿ ಆಂಜನಪ್ಪ ಗಾರ್ಡನ್‌ಗೆ ಹೋಗಿದ್ದ. ಇದೇ ಸಂದರ್ಭದಲ್ಲಿ ದಾಳಿ ಮಾಡಿದ್ದ ದುಷ್ಕರ್ಮಿಗಳ ತಂಡ, ಶಿವನನ್ನು ಕೊಲೆ ಮಾಡಿ ಪರಾರಿಯಾಗಿದೆ. ಕೊಲೆ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಸ್ಥಳೀಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಗುತ್ತಿದೆ' ಎಂದರು.


ಕಸದ ಗಲಾಟೆ: ನಟನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಜಾಗದಲ್ಲಿ ಕಸ ಎಸೆದ ವಿಚಾರ ಸಂಬಂಧ ಗಲಾಟೆ ನಡೆದು ಕಿರುತೆರೆ ನಟ ಚರಿತ್ ಬಾಳಪ್ಪ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಬಗ್ಗೆ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಡಿ ಗ್ರೂಪ್ ಬಡಾವಣೆಯಲ್ಲಿ ವಾಸವಿರುವ ಚರಿತ್ ಬಾಳಪ್ಪ ಅವರು ಫೆ. 23ರಂದು ನಡೆದಿರುವ ಘಟನೆ ಸಂಬಂಧ ತಡವಾಗಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಚರಿತ್, ಮನೆಯ ಕಸವನ್ನು ಖಾಲಿ ಜಾಗದಲ್ಲಿ ಎಸೆದಿದ್ದರು. ಅದನ್ನು ನೋಡಿದ್ದ ಸ್ಥಳೀಯರೊಬ್ಬರು, 'ಇಲ್ಲಿ ಕಸ ಏಕೆ ಎಸೆಯುತ್ತಿದ್ದೀರಾ? ಇದು ಸರಿಯಲ್ಲ, ಬಿಬಿಎಂಪಿ ವಾಹನಕ್ಕೆ ಕಸ ಹಾಕಬೇಕು' ಎಂದಿದ್ದರು. ಬಳಿಕ, ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು. ಇದೇ ಸಂದರ್ಭದಲ್ಲಿ ಚರಿತ್ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರೆಂಬುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.



ಚರಿತ್ ಬಾಳಪ್ಪ

'ಹಲ್ಲೆ ಬಳಿಕ ಪ್ರಾಥಮಿಕ ಚಿಕಿತ್ಸೆ ಪಡೆದಿದ್ದ ಚರಿತ್, ಚಿತ್ರೀಕರಣಕ್ಕೆಂದು ಹೈದರಾಬಾದ್‌ಗೆ ಹೋಗಿದ್ದರು. ಅದನ್ನು ಮುಗಿಸಿಕೊಂಡು ಬಂದು ದೂರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ನಟನ ವಿರುದ್ಧ ಆರೋಪ: 'ನಟ ಚರಿತ್ ತಮ್ಮ ಮನೆಯ ಕಸವನ್ನು ಖಾಲಿ ಜಾಗದಲ್ಲಿ ಎಸೆಯುತ್ತಾರೆ. ಈ ವರ್ತನೆಯನ್ನು ವಿರೋಧಿಸಿ ಸ್ಥಳೀಯರು ಹಲವು ಬಾರಿ ತಾಕೀತು ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ಇದೇ ವಿಚಾರಕ್ಕೆ ಇದೀಗ ಅವರ ಮೇಲೆ ಹಲ್ಲೆ ಆಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚರಿತ್ ಅವರು 'ಲವ್ ಲವಿಕೆ' ಹಾಗೂ 'ಮುದ್ದುಲಕ್ಷ್ಮಿ' ಧಾರವಾಹಿಯಲ್ಲಿ ನಟಿಸುತ್ತಿದ್ದಾರೆ.

ಬೀದರ್: 1,596 ಕೆ.ಜಿ ಗಾಂಜಾ ಜಪ್ತಿ

ಬೆಂಗಳೂರು: ಆಂಧ್ರಪ್ರದೇಶದಿಂದ ರಾಜ್ಯಕ್ಕೆ ಸಾಗಿಸುತ್ತಿದ್ದ 1,596 ಕೆ.ಜಿ ಗಾಂಜಾವನ್ನು ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಬೀದರ್‌ನಲ್ಲಿ ಸ್ಥಳೀಯ ಪೊಲೀಸರ ಸಹಾಯದಿಂದ ವಿಶೇಷ ಕಾರ್ಯಾಚರಣೆ ನಡೆಸಿರುವ ಎನ್‌ಸಿಬಿ ಅಧಿಕಾರಿಗಳು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಲಾಗುತ್ತಿದೆ. ಗಾಂಜಾ ಸಾಗಣೆಯ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಇದನ್ನು ಆಧರಿಸಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಸೆರೆ ಹಿಡಿಯಲಾಗಿದೆ' ಎಂದು ಎನ್‌ಸಿಬಿ ಬೆಂಗಳೂರು ವಲಯ ನಿರ್ದೇಶಕ ಎಸ್.ಕೆ. ಮಿಶ್ರಾ ಅವರು ತಿಳಿಸಿದರು.

'ಗಾಂಜಾವನ್ನು ಚೀಲಗಳಲ್ಲಿ ತುಂಬಿ ವಾಹನದಲ್ಲಿ ಕೊಂಡೊಯ್ಯಲಾಗುತ್ತಿತ್ತು. ಗಾಂಜಾ ಜಪ್ತಿ ಮಾಡಲಾಗಿದೆ. ಗಾಂಜಾ ಸಾಗಣೆಯಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗೆ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BSK 1ST Stage 40x60 E/F, 30x45 W/F. BSK 2nd Stage 40x60 N/E Commercial. 9243132082/ 9742816994.

SALE 30X40 4th BLOCK, 40x60 7th BLOCK, 50x80 '60' FEET ROAD 4th BLOCK. MANOJ 9731410616

Basavanagudi

SALE 40X60 Near Doddaganapathi Temple, Basavanagudi, Dondusa Layout, Mount Joy Road, Sunkenahalli, Bangalore-04. 8197547389/ 9945514587

Devanahalli

DEVANAHALLI to Doddaballapur on STRR road 45 and 180 acres land for sale- call: 9739875631

Kumaraswamy Layout

KUMARASWAMY LAYOUT prime location 25X30 BDA plot east facing for sale 13000/sft. Bharadwaj estates 8050330184

BDA N/F 40x60 Site Sale #543 69th Cross 1st Stage Kumarswamy Layout Near Vasavi Hospital & Bus Stand: 9845344754/ 9844009086

Kanakapura Road

"SALE 40X60-WEST BDA_katha site @.Shankara Residency Kanakapura Road, 11000/-P.Sft &.20x30 west JP.Nagar 6th-Phase. 9845183995"

30X40, 40X60 East BBMP Akaths Kendriya Layout Opposit Shona, 1.5 Km from Talagettapur Metro: 9341238065

Nagarabhavi

MALLATHAHALLI NGEF Layout 30X40 SITE SALE, South Face, BDA Khatha, Opposite BDA Park. RAJU: 9986869996.

"SALE 50X80 30x40, 40x60 site Commercial NGEF Layout Mallathahalli, Good locations, Genuine Buyers. 7760388034/ 9242135834"

"NAGARABHAVI BDA Complex 30x50, 40x60 West 40 feet Road Immediate Registration Govt./ Full white. 9448432633"

30X40 SITE For Sale in MPM Layout Nagarbhavi Near Deepa Complex Ph: 9844776757

25X40 EF Site for Sale BBMP A Katha Near Manasa Gangotri School Mudalapalya 9448050938/ 9035304455

Nelamangala

INDUSTRIAL SITES for Sale @ Heggadadevanapura, Huskur main road, near BIEC, 10 minutes drive from Peenya. 2500 to 7000sft, With all approvals & facilities. Contact 8095014526

Rajarajeshwari Nagar

40X60,SITE NORTH BEML3rd Stage, Rajarajeshwarinagar Full Cheque Payment Contact :9448508410 ,9844216344 Brokers Excuse

Ramanagar

RESIDENTIAL CONVERTED and Approved Site For Sale Near Ramanagar 10000 Sqft Developed Area 1650/- P.Sqft Clear Title. Owner-9900115519

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Vishweshwariah Layout

30X40 1ST Block Vishveshwaraiah Layout North & 40x60 Site 5th Block & 25x40 Corner 2nd Near East Commercial. 30x40 North 2nd 7000 Sqft: 9964700500

30X65 SITE Sale at Sir.M.Vishweshwaraiah layout 3rd block 60' road Semi commercial near Vidyanikethan School :9448955833

30*40 NF 30 feet road BDA opposite to park Vishweshwaraiah Layout Rs 9000/- Negotiable. GOVINDRAJU: 9916826976

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

DIRECT OWNER #1628, North Facing 30x40 BDA Site Sale Vishveswaraiah Layout 2nd Block, ₹.7500/- 9886634578

VISHWESHWARAIAH LAYOUT 6th Block BDA 40x60 East Facing Near KLE Law College Good Location: 9980860138

"VISVESWARAIAH 1ST Block 30x40 site 40ft Road,South facing, Good Location, for sale. 9886294610, Brokers Excuse"

Vidyaranyapura

RESIDENTIAL OPEN site 1080 sqft west facing BBMP A-Khata Singapura Paradise Vidyaranyapura Bangalore for sale @ Rs. 7200 per sqft, Negotiable. Brokers excuse. Owner Narendra 9480253992

Mysore

SITES FOR SALE
MUDA APPROVED
Sites for Immediate SALE Near INFOSYS, Mysore.
1.Measuring 40'X60' East Facing,
2.Measuring 30'X40' South Facing.Genuine Buyers, Contact -
(BROKERS EXCUSE)
98451 90577

MYSORE VIJAYANAGAR 4TH Stage,2nd Phase 50x80, MUDA Site WestFacing For Sale, Contact:9060066332

House

Banashankari

HOUSE SALE (G + 3) 2BHK Per Floor @ Banashankari 5th Stage BDA 30x40 South Plot Beside Poornapragna Layout, Rs 3 Crores RENUKA 9632444445/ 9632356565 Shivakumar 9845875555

RK LAYOUT BSK 2ND STAGE 30×40 W/F 3BHK HOUSE NEAR PETROL bunk SALE 2.25 CR 9448684258

Bannerghatta Road

BANNERGHATTA ROAD, Meenakshi Layout Residential 40x60 'A'Katha Ground Floor 2 BHK, 1st`&.2nd Floor 3 BHK -3,50,00,000/- -9739995042.

Chamarajpet

CHAMARAJPET ANANTHARAMAIAH Compound 11 Rooms Building, 4,000 Sqft. (4 Floors). Site 1425 Sqft. Contact: 9341260793.

HRBR Layout

HRBR LAYOUT, Kalyannagar 1st Block, 20x30 Ground First floor BDA house for sale. 9844088501, 9353266624

J P Nagar

J.P.NAGAR 2ND Phase behind Central Mall 40x60 BDA old house suitable Residential/ semi-commercial 6,00,00,000/- -9739995042

J.P.NAGAR 8TH, KBL Layout 30x40, 2 BHK 3 House, Lift, Interiors Ready occupation 2,90,00,000/- -9845144365

Magadi Road

KAMAKSHIPALYA 15X50 Sft New Building 8 Houses + 1 Shop Getting 50,600/- E/F A Khata Rs.1.2Cr: 9845288310

Mysore

HOUSE OF 23 squares for Sale 1200 sqft Site E/F, Rs.1.2Cr. Vijayanagar 4th stage near SVEI School, Mysore Genuine Buyers Contact: 8762059656.

Nagarabhavi

"BRAND-NEW 4BHK Triplex House GF 1.shop, 2car parking, fully furnished,all amenities,Sale, RHCS Layout Annapoorneshwari-Nagar, N/E.Corner, Both'Side 40'Feet-Road. 9845463951"

Vasanth Nagar

HOUSE FOR sale in Vasanth Nagar near MCC contact Kushal 8105838503 or Thejus 8105569606.

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.75 Crores. Party going out of station, Immediate Registration, Contact: 9845765559/ 9845043282

Sunkadakatte

30X60 HOUSE for sale at Sanjivini Nagara Hegganahalli cross rental income 25000 Phone: 9845771021, 9448955833

Tumkur Road

RAVI KIRLOSKAR Layout.,Tumkur Road 40x40`West Facing 3`BHK independent House For Sale, adjacent`to Prestige`Jindal and Metro-Station. -9986075122/ 8618922501

Flat

Bannerghatta Road

DUPLEX FLAT FOR SALE 2350 SFT SEMI FURNISHED 7TH FLOOR NORTH FACING BANNERGHATTA ROAD BILEKHALLI, AAHIKA APARTMENT BANGALORE: 8867773333

Mysore Road

AVAILABLE LEASE 3BHK APARTMENT FLAT MYSORE ROAD OCCUPENCY 31ST MARCH 2024 RUPEES. 25 LAKHS: 9738223432

Mysore

FOR SALE POSH 2 BHK, 1270 SFT FURNISHED APARTMENT WITH ATTACHED GAZEBO, 2 CAR PARKING IN PRIME YADAVGIRI, MYSORE OWNER: 9845578081

Agricultural Land

Kanakpura

10 ACRES Kannakpura only 35lakhs, 112 Acres Chamarajnagar only 13lakhs Contact only Buyers: 6364436973

Tumkur

"SIRA AGRICULTURAL Land 15acre,corner Tar-Road 15minutes drive-from Sira Town fully fenced with borewell Rs.24,00,000/- P.acre. "Sri.Ganesh Estate" 9845286505"

Mysore

"AGRICULTURAL LAND Green zone 9acres can-be divided in to 5& 4 acre.price Rs.85,00,000/-P.acre "Sri.Ganesh Estate"- 9845286505"

Mysore Road

12 ACRE AGRICULTURAL LAND, 2000 ARECA NUT AND 400 COCONUT FOR SALE. PIRIYAPATNA TALUK. CONTACT: 8971585440

PROPERTY CORNER ಕ್ಲಾಸಿಫೈಡ್ಸ್

GODOWN FOR RENT

SPACIOUS GODOWN ON MAIN ROAD AVAILABLE FOR RENT AT CHAMARAJPET, MYSORE ROAD, BLR–18

MEASURING 10,815 SQ.FT & OPEN AREA OF 3,450, SQ.FT. STONE BUILDING WITH SHEET ROOFING CORNER PLOT

Mail: arunyas13@gmail.com
Ph: +91 9108012898

FOR SALE
MULTI STORIED COMMERCIAL BUILDING
Situated on Tumkur Road, BANGALORE
FETCHING VERY-GOOD RENTAL INCOME
Parties who can invest Rs. 70 Crores, may contact owner: 9880737490

FOR SALE: PRIME PROPERTY IN DEFENCE COLONY
Prime 8000 Sqft. Land for Sale in Defence Colony, Indiranagar, Bangalore. Excellent Visibility, Corner Plot Facing 80 Feet Road, Opposite Shell Petrol Bunk. Ideal for Developers/ Offices. Full Cheque Payment.
Call: 9448314766, 9886419080

PRM/KA/RERA/1250/304/PR/150224/006622
DS-MAX SKYSAMURAI
LUXURIOUS 2 & 3-BHK APARTMENTS



ON SOUKYA ROAD, **WHITEFIELD**
Just 15 mins. From HopeFarm Metro Station
2-BHK HOMES STARTS @ JUST
₹ 38.84 L*
BMRDA APPROVED | G + 14 FLOORS
*T & C Apply



8880 003 003
www.dsmaxproperties.com

Commercial Land

Mysore Road

BANGALORE MYSORE_HIGHWAY Commercial 13000 Square FOR IMMEDIATELY SETTLEMENT Price 2500/- only Contact Buyers 6364436973

Out-Station

FOR SALE Reputed Pharma at TAMILNADU on 4.5 Acres Land 75000 Sft RCC Building. Rs. 80 Cr. Call: 96633-59139/ 9343728200

Commerical

Out-Station

AT YADGIR two commercial sites 12000 and 6500 sft for sale. It is on Kalburgi highway near RTO, within Municipal limits. Contact 9880042441

Vijayanagar

500 SQFT Commercial office Space For Sale, Opposite to Vijayanagar Metro Station Contact: 9945569909 7676900174

Farm House/ Land/ Resorts

Kanakapura Road

SALE KANAKAPURA Town near City Bus-Stop 2 Acres,(33 Guntas Conversion +1.25 Acres Farm House) Ravikumar: 9945928994.

Industrial & Factory

Hosur Road

DC CONVERTED Industrial Land 28 Guntas @ Chandapura-Anekal Road for Sale. Brokers Excuse. 9847001593.

Tumkur Road

9.5 ACRES Industrial Land. Sale/ Rent, Built to suit between Nelamangala-Dabaspet. NAIK: 9141326819, 9972636255

Residential/ Commercial

Singsandra

FOR SALE 55x50 to 2750sqft site @ near Manipal County Signal, Singasandra Metro Station,Hosur rd, Rs.8,500/- persqft. Bangalore-560068. Contact: 9731456798

Villas/Bunglows

General

CHANDAPURA BMRDA approved 3/4 bedroom VILLA ready to occupy and 2-3 bedroom FLAT. Contact-9916763727

3 BHK LUXURY FLATS FOR SALE
DREAMVILLE HOME

PROJECT BY PROMAX PROPERTIES
ISO 9001:2015 CERTIFIED TRADE MARK REGISTERED



Few Flats are Available
Ready to Move
Amenities
GYM · Waling Track · Club House
Library · Kids Play area · Party Hall
SBI · ICICI Bank · AXIS BANK · HDFC BANK
BBMP APPROVED
RERA APPROVED PRM/KA/ RERA/1251/446/PR/220622/005013
63645 88805 / 9901834205
promaxdreamvillehome.com
No .37 1st Cross, Patelmunishamappa Layout Ward No 25, Kothanur Hennur Main Road, Bangaluru .77

REAL ESTATE BUYING

Agricultural Land

Outskirts

2 TO 5 acres Agricultural land required, maximum 100 km from Bangalore, with good soil and water. LandCG@gmail.com

House

Jayanagar

WANTED HOUSE, FLAT FOR OWN USE JAYANAGAR ORJP NAGAR OR PADMANABNAGAR, NORTH FACING.7892576763.

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

WANTED 20X30 or 30x40 Site Anjanapura BDA Layout any Block & any Facing Contact: 9980978986

Kanakapura Road

WANTED SITE: 40x60, 30x40 Narayananagar, BCMC Layout, Anjanapura BDA, Banashankari 6th.Stage, Gubblala, Agents Excuse. 6363726250.

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BDA-SITES WANTED Vishweshwaraiah Layout, Banashankari 6th Stage, 30x40, 40x60, 50x80 Immediate Settlement Contact: 98455-55666

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUILDING SOLUTIONS Waterproofing Roof, Sump, Bathroom, Skylight,Swimming pool, Heat resistant coating, House painting. 9448572697

MORE Classifieds Ads on Subsequent Pages



‘ರಾಹ್ ಸೂಪರ್–30’ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ಮ್ಯಾಂಗೋ ಗಾರ್ಡನ್ ಲೇಔಟ್‌ನಲ್ಲಿರುವ ರಾಹ್ ಅಕಾಡೆಮಿಯ ‘ರಾಹ್ ಸೂಪರ್‌-30’ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರಕ್ಕೆ ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಶನಿವಾರ ಚಾಲನೆ ನೀಡಿದರು.

‘ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ), ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಣ್ಣುಮಕ್ಕಳಿಗೆ ತರಬೇತಿ ನೀಡುವ ಉದ್ದೇಶದಿಂದ ರಾಹ್ ಅಕಾಡೆಮಿ ಕೇಂದ್ರ ಸ್ಥಾಪಿಸಿರುವುದು ಶ್ಲಾಘನೀಯ. ಆಸಕ್ತ ಅಭ್ಯರ್ಥಿಗಳು ಇದರ ಉಪಯೋಗ ಪಡೆದುಕೊಳ್ಳಬೇಕು’ ಎಂದರು.

‘ಯುಪಿಎಸ್‌ಸಿ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉನ್ನತ ಹುದ್ದೆಗೇರಲು ಬಯಸುವ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ 30 ಪ್ರತಿಭಾನ್ವಿತ ಯುವತಿಯರಿಗೆ ರಾಹ್ ಅಕಾಡೆಮಿ ಕೇಂದ್ರದಲ್ಲಿ ಉಚಿತ ಊಟ ವಸತಿ ಸಹಿತ ತರಬೇತಿ ನೀಡಲಾಗುವುದು’ ಎಂದು ಅಕಾಡೆಮಿ ಟ್ರಸ್ಟ್ ಹುಸೇನ್ ತಿಳಿಸಿದರು. ಮೌಲಾನ್ ಮಸೂದ್ ಇಮ್ರಾನ್ ರಶಾದಿ, ಕರ್ನಾಟಕ ಶೈಕ್ಷಣಿಕ ವಿಭಾಗೀಯ ಆಯೋಗದ ಕಾರ್ಯದರ್ಶಿ ಫಾದರ್ ಫ್ರಾನ್ಸಿಸ್ ಅಲ್ಮೆಡಾ, ಅಕಾಡೆಮಿ ಅಧ್ಯಕ್ಷೆ ರೆಹಾನಾ ಶಮೀಮ್, ಇನ್‌ಸೈಟ್ ಅಕಾಡೆಮಿ ಪ್ರಾಂಶುಲರಾದ ಮೇ ರುತ್ ಡಿ‘ಸೋಜಾ ಭಾಗವಹಿಸಿದ್ದರು.




ಅನಿಲ ಸೋರಿಕೆ: ಗ್ಯಾರೇಜ್‌ಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವೇಶ್ವರನಗರದ ಕೆಎಚ್‌ಬಿ ಕಾಲೊನಿಯ ಗ್ಯಾರೇಜ್‌ವೊಂದರಲ್ಲಿ ಶನಿವಾರ ಸಂಜೆ ಬೆಂಕಿ ಅವಘಡ ಸಂಭವಿಸಿದ್ದು, ಗ್ಯಾರೇಜ್ ಮಾಲೀಕ ಸೇರಿ ನಾಲ್ವರು ಗಾಯಗೊಂಡಿದ್ದಾರೆ.

‘ಗ್ಯಾರೇಜ್‌ನಲ್ಲಿ ಬಳಸುತ್ತಿದ್ದ ಗ್ಯಾಸ್ ವೆಲ್ಡಿಂಗ್ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿ, ಬೆಂಕಿ ಹೊತ್ತಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಗಾಯಗೊಂಡಿರುವ ಮಾಲೀಕ ಜಾರ್ಜ್, ಕೆಲಸಗಾರ ಶಿವು ಸೇರಿ ನಾಲ್ವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.



ಬೆಂಕಿ ಅವಘಡ ಸಂಭವಿಸಿದ್ದ ಗ್ಯಾರೇಜ್‌ನಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು

‘ಬೆಂಕಿ ಅವಘಡದಿಂದ ಅಕ್ಕ-ಪಕ್ಕದಲ್ಲಿರುವ ಮನೆಗಳಿಗೆ ಹಾನಿ ಆಗಿದೆ. ನಿರ್ಮಾಣ ಹಂತದ ಕಟ್ಟಡಕ್ಕೂ ಧಕ್ಕೆ ಆಗಿದೆ. ಕಾರು ಹಾಗೂ ದ್ವಿಚಕ್ರ ವಾಹನ ಸಂಪೂರ್ಣ ಸುಟ್ಟಿವೆ. ಗ್ಯಾರೇಜ್‌ನಲ್ಲಿ ಅನಧಿಕೃತವಾಗಿ ವೆಲ್ಡಿಂಗ್ ಮಾಡಲಾಗುತ್ತಿತ್ತು. ಅವಘಡ ಸಂಬಂಧ ಮಾಗಡಿ ರಸ್ತೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ಸ್ಫೋಟದಿಂದ ಶಬ್ದ: ‘ಸಂಜೆ 6 ಗಂಟೆ ಸುಮಾರಿಗೆ ಗ್ಯಾರೇಜ್‌ನಲ್ಲಿ ಗ್ಯಾಸ್ ವೆಲ್ಡಿಂಗ್ ಮಾಡಲಾಗುತ್ತಿತ್ತು. ಇದೇ ಸಂದರ್ಭದಲ್ಲಿ ಅನಿಲ ಸೋರಿಕೆಯಾಗಿ ಹೊಗೆ ಬರಲಾರಂಭಿಸಿತ್ತು. ಕೆಲ ಕ್ಷಣಗಳಲ್ಲಿ ಸ್ಫೋಟ ಸಂಭವಿಸಿ, ದೊಡ್ಡ ಶಬ್ದ ಬಂದಿತ್ತು. ನಂತರ, ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿಯಲಾರಂಭಿಸಿತ್ತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ಗ್ಯಾರೇಜ್‌ನಲ್ಲಿದ್ದ ಮಾಲೀಕ ಹಾಗೂ ಕೆಲಸಗಾರ ಗಾಯಗೊಂಡಿದ್ದರು. ರಸ್ತೆಯಲ್ಲಿ ಹೊರಟಿದ್ದ ಇಬ್ಬರು ಪಾದಚಾರಿಗಳಿಗೂ ಗಾಯವಾಗಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ನಾಲ್ವರನ್ನು ಆಸ್ಪತ್ರೆಗೆ ಕರೆದೊಯ್ದರು’ ಎಂದರು.



ಜೆಕ್ ಗಣರಾಜ್ಯದ ಕ್ರಿಸ್ಟಿನಾ ಪಿಸ್ಕೋವಾ ಅವರು ಈ ಸಾಲಿನ ವಿಶ್ವಸುಂದರಿ ಪಟ್ಟ ಮುಡಿಗೇರಿಸಿಕೊಂಡರು. ಮುಂಬೈನ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ 71ನೇ ವಿಶ್ವಸುಂದರಿ ಸ್ಪರ್ಧೆಯ ಅಂತಿಮ ಸುತ್ತು ಶನಿವಾರ ರಾತ್ರಿ ನಡೆಯಿತು –ಎಎಫ್‌ಪಿ ಚಿತ್ರ

ಬೆಂಗಳೂರಿನ 9 ವಿಧಾನಸಭೆ ಕ್ಷೇತ್ರಗಳಿಗೆ ಮುಖ್ಯಮಂತ್ರಿ ವಿಶೇಷ ಅನುದಾನ

‘ಕೈ’ ಶಾಸಕರಿಗೆ ₹225 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಶಾಸಕರಿರುವ ನಗರದ ಒಂಬತ್ತು ವಿಧಾನಸಭೆ ಕ್ಷೇತ್ರಗಳಿಗೆ ಮುಖ್ಯಮಂತ್ರಿಯವರ ವಿಶೇಷ ಅನುದಾನದಲ್ಲಿ ₹225 ಕೋಟಿ ವೆಚ್ಚದ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ.

ಹೆಬ್ಬಾಳ, ಗೋವಿಂದರಾಜನಗರ, ವಿಜಯನಗರ, ಪುಲಕೇಶಿನಗರ, ಬಿಟಿಎಂ ಲೇಔಟ್, ಚಾಮರಾಜಪೇಟೆ, ಸರ್ವಜ್ಞನಗರ, ಗಾಂಧಿನಗರ ಮತ್ತು ಶಿವಾಜಿನಗರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಲಾ ₹25 ಕೋಟಿಯನ್ನು ವಿಶೇಷ ಅನುದಾನವಾಗಿ ಬಿಡುಗಡೆ ಮಾಡಿದ್ದಾರೆ.

ರಸ್ತೆ, ಚರಂಡಿ, ಪಾದಚಾರಿ ಮಾರ್ಗ ಅಭಿವೃದ್ಧಿ, ಡಾಂಬರೀಕರಣ, ಕಾಂಕ್ರೀಟ್ ರಸ್ತೆ ಕಾಮಗಾರಿಗಳು ಅತಿ ಹೆಚ್ಚಾಗಿದ್ದು, ಈಜು ಕೊಳ ನಿರ್ಮಾಣ, ಬಸ್ ನಿಲ್ದಾಣಗಳಲ್ಲಿ ನೀರು ಪೂರೈಕೆ ಕೇಂದ್ರ, ಮಳೆನೀರು ಸಂಗ್ರಹ, ಗ್ರಂಥಾಲಯ ನಿರ್ಮಾಣ, ಉದ್ಯಾನ ಅಭಿವೃದ್ಧಿ, ಕೊಳವೆ ಬಾವಿ ಕೊರೆಯುವುದು, ವಾಣಿಜ್ಯ ಕಟ್ಟಡ ನಿರ್ಮಾಣ ಕಾಮಗಾರಿಗಳು ಇವೆ. ₹5 ಕೋಟಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ ಇ–ಟೆಂಡರ್ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು. ಅನುಮೋದಿಸಲಾಗಿರುವ ಕ್ರಿಯಾ ಯೋಜನೆಯಲ್ಲಿ ಅನಿವಾರ್ಯವಾಗಿ ಬದಲಾವಣೆ ಇದ್ದರೆ ಬಿಬಿಎಂಪಿ ಮುಖ್ಯ ಆಯುಕ್ತರ ಶಿಫಾರಸ್ಸಿನ ಮೇರೆಗೆ ಇಲಾಖೆ ಸಚಿವರ ಅನುಮೋದನೆ ಪಡೆಯಬೇಕು. ತಾಂತ್ರಿಕ ಅನುಮೋದನೆ ಪಡೆದು, ಟೆಂಡರ್ ಕರೆದು ಟೆಂಡರ್ ಅನುಮೋದನೆ, ಆಡಳಿತಾತ್ಮಕ ಅನುಮೋದನೆಗೆ ಒಂದೇ ಬಾರಿಗೆ ಪ್ರಸ್ತಾವ ಸಲ್ಲಿಸಬೇಕು. ಅಂದಾಜಿನಲ್ಲಿರುವ ಕಾಮಗಾರಿಗಳನ್ನು ಕೈಬಿಡದಂತೆ ನೋಡಿಕೊಂಡು, ಅನುಮೋದಿಸಿದ ಅನುದಾನದ ಮಿತಿಯಲ್ಲೇ ಟೆಂಡರ್ ಪ್ರೀಮಿಯಂ ಕೂಡ ಇರುವಂತೆ ನೋಡಿಕೊಳ್ಳಬೇಕು ಎಂದು ಷರತ್ತು ವಿಧಿಸಲಾಗಿದೆ.

ಸಂಘದ ಹರ್ಷ: ಮುಖ್ಯಮಂತ್ರಿಯವರ ವಿಶೇಷ ಅನುದಾನದಲ್ಲಿ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯ ಕಾಮಗಾರಿಗಳ ಪ್ಯಾಕೇಜ್ ಅನ್ನು ₹5ಕೋಟಿ ಮಿತಿಗೆ ಇಳಿಸಿರುವುದನ್ನು ಬಿಬಿಎಂಪಿ ಗುತ್ತಿಗೆದಾರರ ಸಂಘ ಸ್ವಾಗತಿಸಿದೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಣ್ಣ ಗುತ್ತಿಗೆದಾರರ ಮನವಿಗೆ ಸ್ಪಂದಿಸಿ ಪ್ಯಾಕೇಜ್ ಮೊತ್ತವನ್ನು ₹5 ಕೋಟಿಗೆ ಇಳಿಸಿ, ಸಣ್ಣ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಂತಾಗಿದೆ’ ಎಂದು ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ಹೇಳಿದರು.

‘ನಗರ ಬೆಳೆದಂತೆ ವ್ಯಾಜ್ಯಗಳು ಹೆಚ್ಚುತ್ತಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರವು ಬೆಳೆದಂತೆ ಅಪಾರ್ಟ್‌ಮೆಂಟ್ ವ್ಯಾಜ್ಯಗಳೂ ಹೆಚ್ಚಾಗುತ್ತಿವೆ. ಅಪಾರ್ಟ್‌ಮೆಂಟ್ ಖರೀದಿಸುವ ಮೊದಲೇ ಕಾನೂನು ತಿಳಿದುಕೊಂಡರೆ ಸಮಸ್ಯೆ ಕಡಿಮೆಯಾಗಲಿದೆ ಎಂದು ಕರ್ನಾಟಕ ವಕೀಲರ ಸಂಘದ ನಿಯೋಜಿತ ಹಿರಿಯ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ನಡೆದ ‘ನಾವು ತಿಳಿಯಬೇಕಾದ ಅಪಾರ್ಟ್‌ಮೆಂಟ್ ಕಾನೂನು’ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಖರೀದಿ ಮಾಡಿದ ಬಳಿಕ ತಲೆಕೆಡಿಸಿಕೊಳ್ಳುವ ಮೊದಲು ಎಲ್ಲ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಬೇಕು. ಆಗ ತೊಂದರೆಗೆ ಸಿಲುಕಿದ ಮೇಲೆ ವಕೀಲರನ್ನು ಹುಡುಕುವುದು ತಪ್ಪಲಿದೆ’ ಎಂದು ಮಾಹಿತಿ ನೀಡಿದರು. ವಕೀಲರಾದ ಬೀನಾ ಪಿಳ್ಳೈ ಮಾತನಾಡಿ, ‘ಆಸ್ತಿ ಹೊಂದುವುದು ಎಲ್ಲರ ಹಕ್ಕು. ವಸತಿ ಮಾರಾಟ ಮತ್ತು ಖರೀದಿ ಮಾಡುವಾಗ ಜಾಗರೂಕರಾಗಿರಬೇಕು. ಕರ್ನಾಟಕ ಸೊಸೈಟಿ ಕಾಯ್ದೆ, ಕರ್ನಾಟಕ ಕೋಆಪರೇಟಿವ್ ಕಾಯ್ದೆ ಮತ್ತು ಕರ್ನಾಟಕ ಅಪಾರ್ಟ್‌ಮೆಂಟ್ ಓನರ್‌ಶಿಪ್ ಕಾಯ್ದೆಗಳನ್ನು ತಿಳಿದಿರಬೇಕು. ಅಪಾರ್ಟ್‌ಮೆಂಟ್‌ನಲ್ಲಿ ನೆಮ್ಮದಿಯಾಗಿ ಇರಲು ಏನೆಲ್ಲ ಸೌಲಭ್ಯ ಒದಗಿಸಬೇಕು ಎಂಬ ಮೂಲ ಅಂಶಗಳ ಕಡೆಗೂ ಗಮನ ನೀಡಬೇಕು’ ಎಂದು ಹೇಳಿದರು.

ನಿವೃತ್ತ ಲೋಕಾಯುಕ್ತ ನ್ಯಾ. ಎನ್. ಸಂತೋಷ್ ಹೆಗ್ಡೆ, ಕೇರಳದ ನಿವೃತ್ತ ನ್ಯಾಯಾಧೀಶ ಕೆ. ರಾಮಚಂದ್ರನ್, ಎಂಆರ್‌ಪಿಎಲ್ ಮುಖ್ಯ ಸಲಹೆಗಾರ ಅಲ್ ರಫೀಕ್ ಮೊಯ್ದೀನ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ನಗರದಲ್ಲಿ ಶನಿವಾರ ನಡೆದ ‘ನಾವು ತಿಳಿಯಬೇಕಾದ ಅಪಾರ್ಟ್‌ಮೆಂಟ್ ಕಾನೂನು’ ಸಂವಾದ ಕಾರ್ಯಕ್ರಮದಲ್ಲಿ ವಕೀಲೆ ಬೀನಾ ಪಿಳ್ಳೈ, ಕೇರಳದ ನಿವೃತ್ತ ನ್ಯಾಯಾಧೀಶ ಕೆ. ರಾಮಚಂದ್ರನ್, ನಿವೃತ್ತ ಲೋಕಾಯುಕ್ತ ನ್ಯಾ.ಎನ್.ಸಂತೋಷ್ ಹೆಗ್ಡೆ, ಕರ್ನಾಟಕ ವಕೀಲರ ಸಂಘದ ನಿಯೋಜಿತ ಹಿರಿಯ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಉಪಸ್ಥಿತರಿದ್ದರು. —ಪ್ರಜಾವಾಣಿ ಚಿತ್ರ

‘ಅಸಂಘಟಿತ ಮಹಿಳೆಯರಿಗೆ ತಾರತಮ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಸಂಘಟಿತ ವಲಯಗಳಲ್ಲಿ ಮಹಿಳೆಯರಿಗೆ ಇಂದಿಗೂ ವೇತನ ತಾರತಮ್ಯವಿದೆ’ ಪತ್ರಕರ್ತೆ ಸುಶೀಲಾ ಸುಬ್ರಹ್ಮಣ್ಯ ಅಭಿಪ್ರಾಯಪಟ್ಟರು.

ನಗರದಲ್ಲಿರುವ ಆಕಾಶವಾಣಿ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ‘ಮಹಿಳಾ ಒಳಗೊಳ್ಳುವಿಕೆ ಹಾಗೂ ಪ್ರಭಾವ’ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಚಾರ ಮಂಡಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ‘ತಾಯಿ, ಕುಟುಂಬದ ಒಳ್ಳೆಯ ನಿರ್ವಹಣೆಗಾರ್ತಿ ಹಾಗೂ ಆಡಳಿತಗಾರ್ತಿ ಎಂಬುದನ್ನು ಸಮಾಜ ಒಪ್ಪಿಕೊಂಡಿದೆ. ಆದರೆ, ಸಾರ್ವಜನಿಕ ಕ್ಷೇತ್ರದಲ್ಲಿ ಮಾತ್ರ ಇದು ಸಾಧ್ಯವಾಗಿಲ್ಲ’ ಎಂದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ನಿಲಯದ ಮುಖ್ಯಸ್ಥರಾದ ನೇಹಾ ಸ್ವಾಮಿ, ನಿರ್ಮಲಾ ಎಲಿಗಾರ್ ಹಾಜರಿದ್ದರು. ಕಾರ್ಯಕ್ರಮ ನಿರ್ವಾಹಕರಾದ ನೂತನ ಎಸ್. ಕದಂ ಅವರು ಮಾತನಾಡಿದರು.



ನಗರದ ಆಕಾಶವಾಣಿ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಚಾರ ಸಂಕಿರಣದಲ್ಲಿ ನೂತನ ಎಸ್. ಕದಂ ಮಾತನಾಡಿದರು.

ವಿಧಾನಸೌಧಕ್ಕೆ ಪ್ರತ್ಯೇಕ ಶ್ವಾನದಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಸ್ಫೋಟಕಗಳ ಪತ್ತೆಯೂ ಸೇರಿದಂತೆ ದುಷ್ಕೃತ್ಯಗಳನ್ನು ತಡೆಯುವುದಕ್ಕಾಗಿ ಪ್ರತ್ಯೇಕ ಶ್ವಾನದಳ ರಚಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ನಿರ್ಧರಿಸಿದ್ದಾರೆ.

ರಾಮೇಶ್ವರ ಕೆಫೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದ ಪ್ರಕರಣದ ಬಳಿಕ ಸ್ಪೀಕರ್ ಈ ನಿರ್ಧಾರಕ್ಕೆ ಬಂದಿದ್ದಾರೆ. ಆರ್‌ಡಿಎಕ್ಸ್ ಸೇರಿದಂತೆ ಯಾವುದೇ ಬಗೆಯ ಸ್ಫೋಟಕವನ್ನು ಪತ್ತೆ ಮಾಡುವ ತರಬೇತಿ ಪಡೆದಿರುವ ಶ್ವಾನಗಳನ್ನು ಬಳಸಿಕೊಳ್ಳುವ ಪ್ರಸ್ತಾವವಿದೆ.

ಶ್ವಾನಗಳನ್ನು ಬಳಸಿಕೊಂಡು ಸ್ಫೋಟಕ ಪತ್ತೆಮಾಡುವ ಪ್ರಾತ್ಯಕ್ಷಿಕೆಯನ್ನು ವಿಧಾನಸೌಧದ ಆವರಣದಲ್ಲಿ ಈಚೆಗೆ ನಡೆಸಲಾಯಿತು. ‘ಡಾಗ್‌ಗುರು’ ಕಂಪನಿಯ ಅಮೃತ್ ಶ್ರೀಧರ್ ಹಿರಣ್ಯ ತಮ್ಮ ಶ್ವಾನವನ್ನು ಬಳಸಿಕೊಂಡು ಪ್ರಾತ್ಯಕ್ಷಿಕೆ ನೀಡಿದರು. ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಉಪಸ್ಥಿತರಿದ್ದರು.

ಎ.ಸಿ, ವೈರಸ್ ನಿಯಂತ್ರಣ ಸೇರಿ ಹಲವು ವ್ಯವಸ್ಥೆ • ಬಿಇಎಂಎಲ್‌ಗೆ ಭೇಟಿ ನೀಡಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್

6 ತಿಂಗಳಲ್ಲಿ ವಂದೇ ಭಾರತ್ ಸ್ಲೀಪರ್ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸದ್ಯ ಸುಖಾಸೀನ ಹೊಂದಿರುವ ವಂದೇ ಭಾರತ್ ಮಾತ್ರ ಕಾರ್ಯಾಚರಣೆಯಲ್ಲಿವೆ. ಇನ್ನು ಆರು ತಿಂಗಳಲ್ಲಿ ಸ್ಲೀಪರ್ ಸೌಲಭ್ಯವಿರುವ ರೈಲುಗಳು ಸಿದ್ಧಗೊಳ್ಳಲಿವೆ’ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ನಗರದ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‌ಗೆ (ಬೆಮೆಲ್) ಅವರು ಶನಿವಾರ ಭೇಟಿ ನೀಡಿ ನಿರ್ಮಾಣವಾಗುತ್ತಿರುವ ವಂದೇ ಭಾರತ್ ಸ್ಲೀಪರ್ ರೈಲಿನ ಬೋಗಿಯನ್ನು ವೀಕ್ಷಿಸಿ ಮಾತನಾಡಿದರು.

ವಂದೇ ಭಾರತ್ (ಚೇರ್‌ಕಾರ್), ನಮೋ ಭಾರತ್ (ರ‍್ಯಾಪಿಡ್ ರೈಲ್ ಟ್ರಾನ್ಸಿಟ್ ಸಿಸ್ಟಂ) ಹಾಗೂ ಅಮೃತ್ ಭಾರತ್ (ಪುಶ್‌ಪುಲ್ ಟೆಕ್ನಾಲಜಿ) ರೈಲುಗಳ ಯಶಸ್ಸಿನ ಬಳಿಕ ವಂದೇ ಭಾರತ್ ಸ್ಲೀಪರ್ ರೈಲು ಸಿದ್ಧಗೊಳ್ಳು-ತ್ತಿದೆ. ಸಂಪೂರ್ಣ ಹೊಸ ವಿನ್ಯಾಸದಲ್ಲಿ ನಿರ್ಮಾಣಗೊಳ್ಳುತ್ತಿದೆ. ನಿರ್ಮಾಣ ಪೂರ್ಣಗೊಂಡ ಬಳಿಕ ನಾಲ್ಕರಿಂದ ಆರು ತಿಂಗಳ ಕಾಲ ವಿವಿಧ ರೀತಿಯ ಪರೀಕ್ಷೆಗಳನ್ನು ಮಾಡಲಾಗುವುದು. ಅಗತ್ಯ ಇರುವಲ್ಲಿ ವಿನ್ಯಾಸ ಬದಲಾವಣೆ ಮಾಡಲಾಗುವುದು ಎಂದು ವಿವರಿಸಿದರು.

ಬೆಮೆಲ್ 10 ರೈಲುಗಳನ್ನು (160 ಬೋಗಿ) ನಿರ್ಮಿಸಲಿದೆ. ಈಗಿನ ವಂದೇ ಭಾರತ್‌ಗಿಂತಲೂ ವಿಶೇಷ ಸೌಲಭ್ಯಗಳನ್ನು ಸ್ಲೀಪರ್ ರೈಲು ಹೊಂದಿರಲಿದೆ. ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ಆಸನಗಳ ಎತ್ತರ ವಿನ್ಯಾಸ ಮಾಡಲಾಗಿದೆ. ಹವಾನಿಯಂತ್ರಣ ವ್ಯವಸ್ಥೆ, ವೈರಸ್ ನಿಯಂತ್ರಣ ತಂತ್ರಜ್ಞಾನ ಇರಲಿದೆ. ತೀರಾ ಕಡಿಮೆ ಅಲುಗಾಟ ಹಾಗೂ ಕಂಪನ ವ್ಯವಸ್ಥೆ ಇರುವುದರಿಂದ ಜನ ಆರಾಮವಾಗಿ ನಿದ್ರಿಸಿ ಪ್ರಯಾಣಿಸಬಹುದು ಎಂದು ಮಾಹಿತಿ ನೀಡಿದರು.

ಅಗ್ನಿ ಅವಘಡ ನಿಯಂತ್ರಣ ಸೇರಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಒಳಬಾಗಿಲುಗಳಿಗೆ ಸೆನ್ಸಾರ್ ಅಳವಡಿಕೆ, ವಾಸನೆ ಮುಕ್ತ ಶೌಚಾಲಯ, ಚಾಲನಾ ವಿಭಾಗದಲ್ಲಿ ಶೌಚಾಲಯ ಇರಲಿದೆ. ಮೊದಲ ದರ್ಜೆ ಎಸಿ ಕಾರ್‌ನಲ್ಲಿ ಬಿಸಿನೀರಿನ ಶವರ್, ಯುಎಸ್‌ಬಿ ಚಾರ್ಜಿಂಗ್, ದೃಶ್ಯ ಮಾಹಿತಿ ಸೌಲಭ್ಯ ಇರಲಿದೆ ಎಂದು ಅವರು ವಿವರಿಸಿದರು.

ಕೆಲ ಬದಲಾವಣೆ ಜೊತೆಗೆ ಇನ್ನೂ 100 ಅಮೃತ್ ಭಾರತ್ ರೈಲು ನಿರ್ಮಾಣಕ್ಕೆ ಸೂಚನೆ ನೀಡಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

ಬೆಮೆಲ್ ವ್ಯವಸ್ಥಾಪಕ ನಿರ್ದೇಶಕ ಶಂತನು ರಾಯ್ ಉಪಸ್ಥಿತರಿದ್ದರು.



ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಬೆಂಗಳೂರಿನ ಬೆಮೆಲ್ ಫ್ಯಾಕ್ಟರಿಯ ರೈಲು ಬೋಗಿ ನಿರ್ಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿ ಜೊತೆ ಮಾತನಾಡಿದರು —ಪ್ರಜಾವಾಣಿ ಚಿತ್ರ

ಅಂಕಿ ಅಂಶಗಳು

16 ಬೋಗಿ ಹೊಂದಿರುವ ರೈಲು

67 ಒಂದು ಬೋಗಿಯಲ್ಲಿ ಪ್ರಯಾಣಿಸುವವರ ಸಂಖ್ಯೆ

823 ಒಂದು ರೈಲಿನಲ್ಲಿ ಪ್ರಯಾಣಿಸಬಹುದಾದ ಒಟ್ಟು ಪ್ರಯಾಣಿಕರ ಸಂಖ್ಯೆ

ಕಡಿಮೆ ವೆಚ್ಚದಲ್ಲಿ ನಿರ್ಮಾಣ

‘ಜಗತ್ತಿನಲ್ಲಿಯೇ ಅತಿ ಕಡಿಮೆ ವೆಚ್ಚದಲ್ಲಿ ಈ ರೈಲು ನಿರ್ಮಾಣಗೊಳ್ಳುತ್ತಿದೆ. ನಮ್ಮದೇ ಮೆಟ್ರೊ ರೈಲಿನ ಒಂದು ಬೋಗಿಯ ವೆಚ್ಚ ₹ 9 ಕೋಟಿಯಿಂದ ₹ 10 ಕೋಟಿ ಇದ್ದರೆ, ವಂದೇ ಭಾರತ್ ಸ್ಲೀಪರ್ ಬೋಗಿ ₹ 8 ಕೋಟಿಯಿಂದ ₹ 9 ಕೋಟಿಯೊಳಗೆ ನಿರ್ಮಾಣಗೊಳ್ಳುತ್ತಿದೆ. ಹೊರದೇಶಗಳ ಬದಲು ನಮ್ಮಲ್ಲೇ ನಿರ್ಮಾಣಗೊಳ್ಳುತ್ತಿರುವುದರಿಂದ ವೆಚ್ಚ ಕಡಿಮೆಯಾಗಿದೆ’ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

‘ಭಾರತದ ವೀಸಾಗಾಗಿ ಕಾಯುವ ಕಾಲ ಬರಲಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಅಮೆರಿಕದ ವೀಸಾ ಪಡೆಯುವುದು ಭಾರತೀಯರಿಗೆ ಕಷ್ಟವಾಗಿದೆ. ಭವಿಷ್ಯದಲ್ಲಿ ಭಾರತದ ವೀಸಾಗಾಗಿ ಅಮೆರಿಕನ್ನರು ಕಾಯುವ ಪರಿಸ್ಥಿತಿ ನಿರ್ಮಾಣವಾಗಲಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ಎಥಿರಿಯಲ್ ಮಷಿನ್ಸ್ ಕಾರ್ಖಾನೆಯ ನೂತನ ಘಟಕವನ್ನು ನಗರದಲ್ಲಿ ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ‘ಪ್ರತಿಯೊಬ್ಬರಿಗೂ ಅಮೆರಿಕಕ್ಕೆ ಹೋಗಬೇಕೆಂಬ ಬಯಕೆ ಇರುತ್ತದೆ. ಆದರೆ, ಅಮೆರಿಕದ ವೀಸಾ ಸಿಗುವುದು ಸುಲಭದ ವಿಷಯವಲ್ಲ. ಭವಿಷ್ಯದಲ್ಲಿ ಅಲ್ಲಿಯ ಜನರು ಭಾರತೀಯ ವೀಸಾಗಾಗಿ ಕಾಯುವ ಕಾಲ ಬರುತ್ತದೆ. ಸಂಶೋಧನೆ ಕ್ಷೇತ್ರದಲ್ಲಿ ನಮ್ಮ ಯುವಕರು ಸಾಧನೆ ಮಾಡುತ್ತಿದ್ದಾರೆ’ ಎಂದರು.

‘ಬಹಳ ಜನರು ಸಾಕಷ್ಟು ಕನಸು, ಕಲ್ಪನೆಗಳನ್ನು ಹೊಂದಿರುತ್ತಾರೆ. ಆದರೆ, ಎಲ್ಲರೂ ಅದನ್ನು ಸಾಧಿಸಲು ಆಗುವುದಿಲ್ಲ. ನಾನು ಟಾಟಾ ಮೋಟರ್ಸ್ ಕಂಪನಿಯಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದೇನೆ. ಆ ಕಂಪನಿ ಅವರು ಮರ್ಸಿಡೀಸ್ ಬೆಂಜ್ ಕಾರ್ ಜತೆಗಿನ ಒಪ್ಪಂದ ಮುಗಿದ ತಕ್ಷಣ ತಮ್ಮದೇ ಸ್ವಂತ ಬಿಡಿ ಭಾಗಗಳನ್ನು ಬಳಸಿ, ಕಾರು ಉತ್ಪಾದನೆ ಮಾಡಲು ಆರಂಭಿಸಿದರು. ಎಥಿರಿಯಲ್ ಸಂಸ್ಥೆ ಕೂಡ ಟಾಟಾ ಮೋಟರ್ಸ್ ರೀತಿ ಬೆಳೆಯಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ, ವಾಣಿಜ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಎಥಿರಿಯಲ್ ಮಷಿನ್ಸ್ ಕಾರ್ಖಾನೆ ಮುಖ್ಯಸ್ಥ ಕೌಶಿಕ್ ಮುದ್ದಾ ಪಾಲ್ಗೊಂಡಿದ್ದರು.

ಮುಂಬೈ ರೇಸ್

ರಾಸ್ಪುಟಿನ್ ಗೆಲ್ಲುವ ನಿರೀಕ್ಷೆ

ಆರ್.ಎನ್.ಕಂಗಾ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಸ್ಪುಟಿನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4 ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೈಟಿ ವಿಂಗ್ಸ್ 4, ಕಾಯಿನ್ ಎಂಪ್ರೆಸ್ 1, ಜರಾಫಟ್ 5
2ನೇ ರೇಸ್: ರಾಸ್ಪುಟಿನ್ 2, ಗೋಲ್ಡನ್ ನೀಲ್ 1
3ನೇ ರೇಸ್: ಮೈಟಿ ಸ್ಪ್ಯಾರೊ 6, ನೈಟ್ ಕ್ರುಸಾಡರ್ 5, ಕ್ವಿಕರ್ 7
4ನೇ ರೇಸ್: ಜೈಂಟ್ ಕಿಂಗ್ 4, ಬಿಗ್ ರೆಡ್ 3, ಈಟನ್ ಸ್ಕ್ವೇರ್ 5
5ನೇ ರೇಸ್: ಶಂಬಾಲ 3, ಸಬ್‌ಸ್ಟಾನ್ಸಿಯಲ್ 10, ಟ್ರಿಲಿಯನೇರ್ 5
6ನೇ ರೇಸ್: ಡೆಕ್ಸಾ 1, ಐರಿಶ್ ಗೋಲ್ಡ್ 3, ಚಾರ್ಲಿ 4
7ನೇ ರೇಸ್: ಫೆನಾಮ್ 1, ಲಿಯಾಮ್ 2, ವಾಟ್ಸ್‌ಇನ್‌ಎನೇಮ್ 5
8ನೇ ರೇಸ್: ಅಜ್ರಿನಾಝ್ 4, ವಿಂಟರ್ ಅಜೆಂಡ 1, ಫ್ಲಾಶಿಂಗ್ ಫೇಮಸ್ 8

ಉತ್ತಮ ಬೆಟ್: ಶಂಬಾಲ


ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6.7	6,7,8



ರಥೋತ್ಸವ

ಮಹಾಶಿವರಾತ್ರಿ ಪ್ರಯುಕ್ತ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಾಲಯದ ಮಲ್ಲಿಕಾರ್ಜುನ ಸ್ವಾಮಿಯ ಬ್ರಹ್ಮ ರಥೋತ್ಸವ ಶನಿವಾರ ನಡೆಯಿತು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಮಾಜಿ ಶಾಸಕ ವಾಸು ನಿಧನ



ಮೈಸೂರು: ಇಲ್ಲಿನ ಕಾಂಗ್ರೆಸ್ ಮುಖಂಡ, ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವಾಸು (72) ಅನಾರೋಗ್ಯದಿಂದ ಶನಿವಾರ ನಿಧನರಾದರು.

ಶುಕ್ರವಾರ ತಡರಾತ್ರಿ ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದರಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಹುಅಂಗಾಂಗ ವೈಫಲ್ಯದಿಂದ ಶನಿವಾರ ಮುಂಜಾನೆ ಮೃತಪಟ್ಟರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ಪುತ್ರರಾದ ಕವೀಶ್ ಗೌಡ, ಹವೀಶ್ ಗೌಡ, ರಿತೇಶ್ ಗೌಡ ಇದ್ದಾರೆ.

ಜಯಲಕ್ಷ್ಮೀಪುರಂನಲ್ಲಿರುವ ಅವರ ನಿವಾಸದಲ್ಲಿ ಭಾನುವಾರ ಮಧ್ಯಾಹ್ನದ-ವರೆಗೆ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬಳಿಕ ಬನ್ನೂರು ರಸ್ತೆಯ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

1983ರಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಮೈಸೂರು ಮಹಾನಗರಪಾಲಿಕೆ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ್ದ ಅವರು, ಮೇಯರ್ ಆಗಿದ್ದರು. 2013ರ ಚುನಾವಣೆಯಲ್ಲಿ ವಿಧಾನಸಭೆ ಪ್ರವೇಶಿಸಿದ್ದರು.

ನಗರದಲ್ಲಿ ಇಂದು

ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್‌ನ ‘ಶತಮಾನೋತ್ಸವ’ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಿ. ರಮೇಶ್, ಅತಿಥಿಗಳು: ಕೆ.ಎನ್. ರಾಜಣ್ಣ, ಎಚ್.ಕೆ. ಪಾಟೀಲ, ಡಿ.ವಿ. ಸದಾನಂದಗೌಡ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸೋನಾಲಿ ಸೇನ್ ಗುಪ್ತ, ಕೆ. ರಾಜೇಂದ್ರ, ಆಯೋಜನೆ: ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್, ಸ್ಥಳ: ತ್ರಿಪುರವಾಸಿನಿ ಸಭಾಂಗಣ, ಅರಮನೆ ಮೈದಾನ, ಮೇಖ್ರಿ ವೃತ್ತ, ಬೆಳಿಗ್ಗೆ 10

ಉಚಿತ ವೈದ್ಯಕೀಯ ತಪಾಸಣೆ, ಔಷಧಿ ವಿತರಣೆ, ರಕ್ತದಾನ ಶಿಬಿರ: ಉದ್ಘಾಟನೆ: ದಿನೇಶ್ ಗುಂಡೂರಾವ್, ಎಸ್.ಆರ್. ವಿಶ್ವನಾಥ್, ಕೆ. ಗೋಪಾಲಯ್ಯ, ದರ್ಶನ್, ಆಯೋಜನೆ: ಸಾತ್ವಿಕ್ ಗೋಕಲಂ, ಸ್ಥಳ: ನಂ. 49, ಎಸ್‌ಎಫ್‌ಎಸ್ 208, ಕೆಎಚ್‌ಬಿ ಕಾಲೊನಿ, ಯಲಹಂಕ ನ್ಯೂಟೌನ್, ಬೆಳಿಗ್ಗೆ 10

ಹಳೇ ಬಾಟ್ಲಿ ಹೊಸ ವೈನು, ಹಲೋ ಕತೆಗಾರ್ತಿ: ದಯಾ ಗಂಗನಘಟ್ಟ, ಅಪರ್ಣ ಎಚ್.ಎಸ್., ಉಪಸ್ಥಿತಿ: ಜಿ.ಎನ್. ಮೋಹನ್, ಆಯೋಜನೆ: ಇತಿಹಾಸ ಫೌಂಡೇಷನ್, ಸ್ಥಳ: ಸಿವಗಂಗ ರಂಗಮಂದಿರ, ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, ಕೆಂಗೇರಿ ಉಪನಗರ, ಬೆಳಿಗ್ಗೆ 10.30

ವಿಶ್ವ ಮಹಿಳಾ ದಿನಾಚರಣೆ, ಸಾಮಾಜಿಕ ಚಿಂತನೆ ಮತ್ತು ಅಭಿವೃದ್ಧಿಯಲ್ಲಿ ಮಹಿಳೆಯ ಜವಾಬ್ದಾರಿ, ಡಾ.ಎಸ್.ಜಿ. ಸುಶೀಲಮ್ಮ–ಸ್ತ್ರೀ ಜಾಗೃತಿ ಪ್ರತಿಕೆ ರಾಜ್ಯ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಶಿವರಾಜ ವಿ ಪಾಟೀಲ, ಪುಸ್ತಕ ಬಿಡುಗಡೆ: ಬಿ.ಎಲ್. ಸುಜಾತ ರಾಥೋಡ್, ಅಧ್ಯಕ್ಷತೆ: ಎಸ್.

‘ಲಂಕೇಶ್–90’ ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಕೆ. ಮರುಳಸಿದ್ದಪ್ಪ, ಪುಸ್ತಕ ಬಿಡುಗಡೆ: ಎಸ್.ಜಿ. ಸಿದ್ದರಾಮಯ್ಯ, ಅತಿಥಿಗಳು: ಇಂದಿರಾ ಲಂಕೇಶ್, ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಪ್ರಾಸ್ತಾವಿಕ ನುಡಿ: ಎಂ.ಎಸ್. ಆಶಾದೇವಿ, ‘ಲಂಕೇಶರ ಸಾಹಿತ್ಯ ಚಿಂತನೆ’–ಕಥಾಪ್ರಪಂಚ: ಸುಭಾಷ್ ರಾಜಮಾನೆ, ಕಾದಂಬರಿಗಳ ಅನನ್ಯತೆ: ಸುರೇಶ ನಾಗಲಮಡಿಕೆ, ಕಾವ್ಯಾನುಸಂಧಾನ: ದಯಾ ಗಂಗನಘಟ್ಟ, ‘ಲಂಕೇಶ್–ಕರ್ನಾಟಕದ ಸಾಂಸ್ಕೃತಿಕ ವಿದ್ಯಮಾನ’: ಅಗ್ರಹಾರ ಕೃಷ್ಣಮೂರ್ತಿ, ‘ಲಂಕೇಶ ಪತ್ರಿಕೆ–ಸಮುದಾಯದ ಪ್ರತಿನಿಧಿ’: ಸಿ.ಎಸ್. ದ್ವಾರಕಾನಾಥ್, ಎನ್.ಆರ್. ವಿಶುಕುಮಾರ್, ನಾಟಕಗಳು: ಕೆ.ವೈ. ನಾರಾಯಣಸ್ವಾಮಿ, ಸಿನಿಮಾ: ಚ.ಹ. ರಘುನಾಥ್, ಆಯೋಜನೆ: ಭಾಗವತರು, ಸ್ಥಳ: ನಯನ ಸಭಾಂಗಣ ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10



ಮರುಳಸಿದ್ದಪ್ಪ

ಜಿ. ಸುಶೀಲಮ್ಮ, ಪ್ರಶಸ್ತಿ ಪುರಸ್ಕಾರ: ಪ್ರಮೀಳಾ ನಾಯ್ಡು, ಸುರೇಶ್ ಜಿ. ಶಾಸ್ತ್ರಿ, ಪ್ರಶಸ್ತಿ ಪುರಸ್ಕೃತರು: ಲಲಿತಾ ಶೇಷಾದ್ರಿ, ಎ.ಎಲ್. ಸೀತಾದೇವಿ, ಆಯೋಜನೆ: ಸ್ತ್ರೀ ಜಾಗೃತಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣ, ಚಾಮರಾಜಪೇಟೆ, ಬೆಳಿಗ್ಗೆ 10.30

ಮಹಿಳಾ ದಿನಾಚರಣೆ, ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ, ಅತಿಥಿ: ಶಾಂತಲಾ ಪಾಟೀಲ್, ಉಪಸ್ಥಿತಿ: ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಕೊಪ್ಪದಂ ಅನ್ನಪೂರ್ಣ ಸುಬ್ರಹ್ಮಣ್ಯಂ, ಶೈಲಾ ಶ್ರೀನಿವಾಸ್, ತ್ಯಾಗರಾಜ್ ವರ್ತೂರ್ ನಾ., ರಾಧಾ ತನಯ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಸಾಮೂಹಿಕ ಸತ್ಯನಾರಾಯಣ ಪೂಜಾ, ಮಹಿಳಾ ದಿನಾಚರಣೆ–2024: ಉದ್ಘಾಟನೆ: ಲಕ್ಷ್ಮಿ ಹೆಬ್ಬಾಳ್ಕರ್, ಅಧ್ಯಕ್ಷತೆ: ಭಾಗ್ಯಲಕ್ಷ್ಮಿ ಮುರಳಿ, ಅತಿಥಿಗಳು: ಉಮಾಶ್ರೀ, ಉದ್ಮ ರವೀಂದ್ರ, ಅಮಿತಾ ಆನಂದ್, ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ದೇವಕಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ದೃಶ್ಯ ನಾಟಕೋತ್ಸವ: ಅತಿಥಿಗಳು: ವಿಜಯಾ, ಅಶೋಕ ಛಲವಾದಿ, ಬೇಲೂರು ರಘುನಂದನ್, ‘ಬಿ.ವಿ. ಕಾರಂತ ಪ್ರಶಸ್ತಿ ಪುರಸ್ಕೃತರಿಗೆ ರಂಗ ಗೌರವ’: ಸಿ. ಬಸವಲಿಂಗಯ್ಯ, ಬಿ.ವಿ. ರಾಜಾರಾಮ್, ‘ದೃಶ್ಯ ಯುವರಂಗ ಪುರಸ್ಕಾರ’: ನಟರಾಜ್ ತಿಪಟೂರು, ಗಣೇಶ್ ಮಂದಾರ್ತಿ, ಶಂಕರ್ ಗಣೇಶ್, ‘ಪೋಲೀ ಕಿಟ್ಟೀ’ ನಾಟಕ ಪ್ರದರ್ಶನ: ರಚನೆ: ಟಿ.ಪಿ. ಕೈಲಾಸಂ, ‘ಟ್ವೆಲ್ತ್ ನೈಟ್’ ನಾಟಕ ಪ್ರದರ್ಶನ: ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ ರಂಗತಂಡ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30ರಿಂದ

ಮಂಡಲಪೂಜೆ: ಗೋ–ಪೂಜೆ, ಅನ್ನದಾಸೋಹ, ಸ್ಥಳ: ವಿನಾಯಕನಗರ–ವಿಕಾಸನಗರ, ಮಧ್ಯಾಹ್ನ 3.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಆಧ್ಯಾ ಎಸ್.ಕೆ., ಅತಿಥಿಗಳು: ಎಸ್. ಶಂಕರ್, ಬಿ.ಎಸ್. ಸುನಂದ ದೇವಿ, ಸುಮಾ ಕೃಷ್ಣಮೂರ್ತಿ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5.30

ಸ್ವರ ಲಹರಿ: ಗಾಯನ: ಮನೋಹರ ಪಟವರ್ಧನ್, ತಬಲಾ: ಶಶಿಭೂಷಣ ಗುರ್ಜರ, ಹಾರ್ಮೋನಿಯ: ಮಧುಸೂದನ ಭಟ್ಟ, ಸರೋದ್: ಅಭಿಷೇಕ್ ಲಹಿರಿ, ತಬಲಾ: ರಾಜೇಂದ್ರ ನಾಕೋಡ, ಆಯೋಜನೆ: ಸಪ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಸಾಂಸ್ಕೃತಿಕ ಸೌರಭ: ಬೇಲೂರು ರಾಮಮೂರ್ತಿ, ಅಶ್ವತ್ಥನಾರಾಯಣ, ಎಸ್. ರಾಜಗೋಪಾಲಚಾರಿ, ನಂಜುಂಡಿ, ಏಣಗಿ ಪ್ರಭಾಕರ್, ಶಿಲ್ಪೆ ಲೋಕೇಶ್, ಎನ್. ಗೋಪಾಲಕೃಷ್ಣ, ಉಪಸ್ಥಿತಿ: ಬಿ.ಕೆ. ಪಾರ್ಥಸಾರಥಿ, ಜಿ.ಪಿ. ರಾಮಣ್ಣ, ಆಯೋಜನೆ: ಪರಂಪರಾ, ಸ್ಥಳ: ರಾಜರಾಜೇಶ್ವರಿ ಪ್ರಾರ್ಥನಾ ಮಂದಿರ, ರಾಜರಾಜೇಶ್ವರಿ ದೇವಸ್ಥಾನದ ಆವರಣ, ಬಿಟಿಎಂ ಲೇಔಟ್, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

ಮಲೆನಾಡ ಬೆಚ್ಚಿಬೀಳಿಸಿದೆ ಕೆಎಫ್‌ಡಿ

ಒಂದನೇ ಪುಟದಿಂದ..

ಕಾಡಿನಲ್ಲಿ ಉಣುಗು (ಉಣ್ಣೆ) ಕಡಿದಾಗ ಮನುಷ್ಯನ ದೇಹ ಸೇರುವ ಈ ವೈರಸ್ ಕಾಯಿಲೆ ತರುತ್ತದೆ. ವೈದ್ಯಕೀಯ ಪರಿಭಾಷೆಯಲ್ಲಿ ಇದು ಕ್ಯಾಸನೂರು ಕಾಡಿನ ಕಾಯಿಲೆ (ಕೆಎಫ್‌ಡಿ–1957ರಲ್ಲಿ ಸೊರಬ ತಾಲ್ಲೂಕಿನ ಕ್ಯಾಸನೂರಿನಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು). ಆದರೆ ಆಡು ಭಾಷೆಯಲ್ಲಿ ಮಂಗನ ಕಾಯಿಲೆ.

ಮಂಗನಿಗೂ–ಕಾಯಿಲೆಗೂ ಸಂಬಂಧವಿಲ್ಲ..

‘ವಾಸ್ತವವಾಗಿ ಮಂಗನಿಗೂ ಈ ಕಾಯಿಲೆಗೂ ಸಂಬಂಧವಿಲ್ಲ. ಉಣುಗು ಕಡಿತದಿಂದಲೇ ವೈರಸ್ ಮನುಷ್ಯನ ರೀತಿಯಲ್ಲೇ ಮಂಗನ ದೇಹಕ್ಕೂ ಸೇರುತ್ತದೆ. ಆದರೆ, ಮಂಗನ ಹೆಸರೇ ಬಾಧಿತರಲ್ಲಿ ಸಾಮಾಜಿಕ ಕಳಂಕದ ಭಾವ ಮೂಡಿಸಿದೆ. ಬಹುತೇಕ ಸಂದರ್ಭಗಳಲ್ಲಿ ಮನುಷ್ಯರು ಚಿಕಿತ್ಸೆ ಪಡೆದು ಬದುಕಿದರೆ ಮಂಗಗಳು ಸಾಯುತ್ತವೆ. ಕಾಡಿನಲ್ಲಿ ಮಂಗಗಳ ಕಳೇಬರ ದೊರೆತರೆ ಅಲ್ಲಿ ಕೆಎಫ್‌ಡಿಯ ಸುಳಿವು ಹುಡುಕಬಹುದು. ತಾವು ಸತ್ತರೂ ಮನುಷ್ಯನಿಗೆ ಮಂಗಗಳು ಸಹಾಯ ಮಾಡುತ್ತವೆ’ ಎಂದು ದರ್ಶನ್ ಹೇಳುತ್ತಾರೆ.

‘ಕಾಯಿಲೆ ಬಾಧಿತರು ಆರೋಗ್ಯದಲ್ಲಿ ದಿಢೀರನೆ ಏರುಪೇರಾಗಿ ಸಾವಿಗೆ ತುತ್ತಾಗಬಹುದು. ಮೊದಲ ಹಂತದಲ್ಲಿ 3ರಿಂದ 7 ದಿನ ಜ್ವರ, ಕತ್ತಿನ ಹಿಂಭಾಗದಲ್ಲಿ ನೋವು, ತಲೆನೋವು ಕಾಣಿಸಿಕೊಳ್ಳುತ್ತದೆ. ಎಲ್ಲರಿಗೂ ರೋಗಲಕ್ಷಣ ಆಧರಿಸಿ ಔಷಧಿ ಕೊಡಲಾಗುತ್ತದೆ. ರೋಗಿ ಗುಣಮುಖರಾದರೂ ವಾರದ ಅಂತರದಲ್ಲಿಯೇ ಎರಡನೇ ಹಂತದ ಲಕ್ಷಣಗಳು ಬಾಧಿಸುತ್ತವೆ. ಸಾವಿಗೀಡಾದ ಬಹುತೇಕರು ಎರಡನೇ ಹಂತದಲ್ಲಿ ರೋಗ ಲಕ್ಷಣ ಕಾಣಿಸಿಕೊಂಡವರು‘ ಎಂದು ಹೇಳಿದರು.

ಉಣುಗು (ಉಣ್ಣೆ) ತನ್ನ ಜೀವಿತಾವಧಿಯಲ್ಲಿ ತಾನಾಗಿಯೇ ನಡೆದು ಹೋದರೆ 100 ಮೀಟರ್ ಮಾತ್ರ ಕ್ರಮಿಸಬಹುದು. ಆದರೆ ಅದು ಇಲಿ, ಹೆಗ್ಗಣ, ಬೆಕ್ಕು, ನಾಯಿ, ಕಾಡಿಗೆ ಮೇಯಲು ಹೋಗುವ ದನ–ಕರುಗಳ ಮೂಲಕ ಮನುಷ್ಯರ ಸಂಪರ್ಕಕ್ಕೆ ಬರುತ್ತದೆ. ಕಾಡಿಗೆ ಸೊಪ್ಪು ತರಲು, ದನ ಮೇಯಿಸಲು ಹೋದವರಿಗೆ ಉಣುಗು ಕಡಿದರೂ ರೋಗ ಬಾಧಿಸುತ್ತದೆ.

ನಿರ್ದಿಷ್ಟ ಔಷಧಿ ಇಲ್ಲ..: ಕೆಎಫ್‌ಡಿಗೆ ನಿರ್ದಿಷ್ಟ ಔಷಧಿ ಇಲ್ಲ. ರೋಗದ ಲಕ್ಷಣ ಆಧರಿಸಿ ಚಿಕಿತ್ಸೆ ನೀಡಲಾಗುತ್ತಿದೆ. 1983–84ರ ಎರಡು ವರ್ಷಗಳ ಅವಧಿಯಲ್ಲಿ ಕಾಯಿಲೆಯಿಂದ ಮಲೆನಾಡಿನಲ್ಲಿ 281 ಮಂದಿ ಸಾವಿಗೀಡಾಗಿದ್ದರು. 1986ರಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 1,300 ಪ್ರಕರಣ ದೃಢಪಟ್ಟವು. ಆಗ ಲಸಿಕೆ ಸಂಶೋಧನೆಯತ್ತ ಸರ್ಕಾರ ಗಂಭೀರ ಪ್ರಯತ್ನ ಆರಂಭಿಸಿತ್ತು. 2ನೇ ಮಹಾಯುದ್ಧದ ವೇಳೆ ಕಂಡುಹಿಡಿದ ಪ್ರತಿಕಾಯದ ತಾಂತ್ರಿಕತೆ ಆಧರಿಸಿ 1992ರಲ್ಲಿ ಮಹಾರಾಷ್ಟ್ರದ ವಿಜ್ಞಾನಿ ಡಾ.ದಂಡಾವತೆ ಲಸಿಕೆ ಅಭಿವೃದ್ಧಿಪಡಿಸಿದ್ದರು. ಆದರೆ ಅದೀಗ ವೈರಸ್‌ನ ರೂಪಾಂತರದಿಂದ (ಮ್ಯುಟೇಶನ್) ತನ್ನ ಪರಿಣಾಮ ಕಳೆದುಕೊಂಡಿದೆ. ಕಾಡಂಚಿನ ಜನರ ನೆಮ್ಮದಿ ಕಸಿದುಕೊಂಡಿದೆ.

ಬೇಸಿಗೆಯ ಬಿಸಿಲು ಹೆಚ್ಚುತ್ತಿದ್ದಂತೆಯೇ ಮಂಗನ ಕಾಯಿಲೆ ವ್ಯಾಪಕಗೊಳ್ಳುತ್ತಿದೆ. ಕಳೆದ ಮೂರು ತಿಂಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ 160 ಕೆಎಫ್‌ಡಿ ಪ್ರಕರಣ ದೃಢಪಟ್ಟಿವೆ. 9 ಮಂದಿ ಸತ್ತಿದ್ದಾರೆ. ಕೆಎಫ್‌ಡಿಗೆ ಶೇ 50ರಿಂದ 60ರಷ್ಟು ಕಾಡಂಚಿನ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರೇ ತುತ್ತಾಗುತ್ತಿದ್ದಾರೆ. ಇವರಲ್ಲಿ ಅತಿಯಾಗಿ ಮದ್ಯಪಾನ–ತಂಬಾಕು ಸೇವನೆ ಚಟ, ಪೌಷ್ಟಿಕಾಂಶದ ಕೊರತೆ ಇದ್ದವರಲ್ಲಿ ರೋಗ ನಿರೋಧಕ ಶಕ್ತಿ ಕುಂಠಿತವಾಗಿ ಸಾವಿಗೀಡಾಗುತ್ತಿದ್ದಾರೆ. ‘ಮಹಿಳೆಯರ ಸಾವಿನ ಪ್ರಮಾಣ ಹೆಚ್ಚಿದೆ. ಮುಟ್ಟಿನ ದಿನಗಳಲ್ಲಿ ಕಾಯಿಲೆ ಬಾಧಿಸಿದರೆ ಅತಿಹೆಚ್ಚು ರಕ್ತಸ್ರಾವ ಆಗುತ್ತದೆ. ಋತುಚಕ್ರದ ಸ್ರಾವ ನಿಲ್ಲಿಸುವುದು ಕಷ್ಟ. ಕೊನೆಗೆ ರಕ್ತಹೀನತೆಗೆ (ಅನೀಮಿಕ್) ತುತ್ತಾಗಿ ಸಾವಿಗೀಡಾಗುತ್ತಾರೆ. ಹೆಣ್ಣುಮಕ್ಕಳು ಮುಟ್ಟಿನ ದಿನಗಳಲ್ಲಿ ಜ್ವರ ಬಂದರೆ ಕಡೆಗಣಿಸಬಾರದು. ಕೈ ಮೀರಿದ ಮೇಲೆ ಏನೂ ಮಾಡಲಾಗದು‘ ಎಂದು ಡಾ.ದರ್ಶನ್ ನಾರಾಯಣ ಕೋರುತ್ತಾರೆ.



ಸಿದ್ದಾಪುರ ಬಳಿಯ ಕಾಡಿನಲ್ಲಿ ಸತ್ತು ಬಿದ್ದ ಮಂಗನ ಕಳೇಬರ



ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಕೊರ್ಲಕೈ ಬಳಿ ಮಂಗನ ಕಾಯಿಲೆ ಜಾಗೃತಿ ಆರೋಗ್ಯ ಇಲಾಖೆಯಿಂದ ಎಚ್ಚರಿಕೆ ಬ್ಯಾನರ್!



ಮಂಗನ ಕಾಯಿಲೆ ತಡೆಗೆ ನೀಡುತ್ತಿದ್ದ ಲಸಿಕೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಹೀಗಾಗಿ, ಲಸಿಕೆ ವಿತರಣೆ ಸ್ಥಗಿತಗೊಳಿಸಲಾಗಿದೆ. ಸರ್ಕಾರ ಮತ್ತು ಖಾಸಗಿ ಸಹಯೋಗದೊಂದಿಗೆ ಹೊಸ ಲಸಿಕೆ ಸಂಶೋಧನೆ ನಡೆಸಲಾಗುತ್ತಿದೆ.

ದಿನೇಶ್ ಗುಂಡೂರಾವ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ



ಕೆಎಫ್‌ಡಿ ವೈರಸ್ ಯಾವುದೇ ಕಾರಣಕ್ಕೂ ಮನುಷ್ಯರಿಂದ ಮನುಷ್ಯರಿಗೆ, ಮಂಗನಿಂದ ಮನುಷ್ಯರಿಗೆ ನೇರವಾಗಿ ಹರಡುವುದಿಲ್ಲ. ಹೊಸದಾಗಿ ಕಾಯಿಲೆ ಕಂಡುಬಂದ ಸ್ಥಳಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕಿದೆ.

ಡಾ. ದರ್ಶನ್ ನಾರಾಯಣ,
ಕೆಎಫ್‌ಡಿ ಸಂಶೋಧನಾ ವಿಜ್ಞಾನಿ



ಕೆಎಫ್‌ಡಿ ನಿಯಂತ್ರಣದ ಸಲುವಾಗಿ ಮಂಗಗಳು ಹೆಚ್ಚಿರುವ ಬೆಟ್ಟ ಪ್ರದೇಶಗಳಿಗೆ ಹೋಗದಂತೆ ನಿರ್ಬಂಧ ವಿಧಿಸಲಾಗುತ್ತಿದೆಯೇ ವಿನಃ ರೈತರಿಗೆ ವಿನಾಕಾರಣ ತೊಂದರೆಕೊಡುವ ಉದ್ದೇಶವಲ್ಲ

ಡಾ. ಬಿ.ವಿ.ನೀರಜ್
ಜಿಲ್ಲಾ ಆರೋಗ್ಯಾಧಿಕಾರಿ, ಉತ್ತರ ಕನ್ನಡ

ಕೆಎಫ್‌ಡಿ ಬಗ್ಗೆ ಮಾಹಿತಿ

- ಭಾರತದಲ್ಲಿ 150ಕ್ಕೂ ಹೆಚ್ಚು ಬೇರೆ ಬೇರೆ ಪ್ರಕಾರದ ಉಣುಗು ಕಾಣಸಿಕ್ಕಿವೆ. ಅದರಲ್ಲಿ ಅಂದಾಜು 32 ಮಾತ್ರ ಪಶ್ಚಿಮಘಟ್ಟ ಶ್ರೇಣಿಯಲ್ಲಿ ಕಂಡು ಬರುತ್ತವೆ. 15ರಿಂದ 16 ಮಾತ್ರ ವೈರಸ್ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿವೆ.
- ಕೆಎಫ್‌ಡಿ ಪತ್ತೆಯಾಗಿ 68 ವರ್ಷಗಳಾದರೂ ಸಂಶೋಧನೆಗೆ ನಿರ್ದಿಷ್ಟ ಸಂಸ್ಥೆ ಇಲ್ಲ. 2019ರಲ್ಲಿ ರಾಜ್ಯ ಸರ್ಕಾರ ಸಂಶೋಧನೆ ಉದ್ದೇಶಕ್ಕೆ ಬಜೆಟ್‌ನಲ್ಲಿ ₹15 ಕೋಟಿ ಮೀಸಲಿಟ್ಟು ಅದರಲ್ಲಿ ₹5 ಕೋಟಿ ಬಿಡುಗಡೆ ಮಾಡಿದರೂ ಅದು ಬಳಕೆಯಾಗದೇ ವಾಪಸ್ ಹೋಗಿದೆ.
- ಉಣುಗಿಗೆ ನೀರು ಮೊದಲ ಶತ್ರು. ಮಳೆ ಬಂದರೆ ಸಹಜವಾಗಿಯೇ ಅದು ನಿಯಂತ್ರಣಕ್ಕೆ ಬರುತ್ತದೆ. ಈ ವರ್ಷ ಮಳೆ ಕಡಿಮೆ ಆಗಿರುವುದರಿಂದ ರೋಗ ಬಾಧೆ ಹೆಚ್ಚಾಗಿದೆ.
- ಕೆಎಫ್‌ಡಿ ಮರಣ ಪ್ರಮಾಣ ರಾಜ್ಯದಲ್ಲಿ ಈ ವರ್ಷ ಶೇ 4 ದಾಟಿದೆ.

ಕ್ಯಾಸನೂರಿನಲ್ಲಿ ಮತ್ತೆ ಕಾಣಿಸಿಲ್ಲ!

1957ರಿಂದ 2020ರವರೆಗೆ ಕೆಎಫ್‌ಡಿಗೆ ತುತ್ತಾಗಿ ರಾಜ್ಯದಲ್ಲಿ 575 ಜನ ಸಾವಿಗೀಡಾಗಿದ್ದಾರೆ. 12 ಜಿಲ್ಲೆಗಳಲ್ಲಿ ಕಾಯಿಲೆ ಕಾಣಿಸಿಕೊಂಡಿದೆ. ಕ್ಯಾಸನೂರಿನಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡರೂ ಮತ್ತೆ ಅಲ್ಲಿ ಕಂಡುಬಂದಿಲ್ಲ. ಮಹಾರಾಷ್ಟ್ರದ ಸಿಂಧುದುರ್ಗ, ಕೇರಳದ ಮಲಪ್ಪುರಂ, ತಮಿಳುನಾಡಿನ ನೀಲಗಿರಿ ಹಾಗೂ ಈರೋಡ್ ಭಾಗದಲ್ಲೂ ಕೆಎಫ್‌ಡಿ ಕಾಣಿಸಿಕೊಂಡಿದೆ.

ಕಾಡಿನ ಮೂಲನಿವಾಸಿಗಳಿಗೆ ಅಷ್ಟಾಗಿ ಬಾಧಿಸಿಲ್ಲ

ಹಸಲರು, ಸೋಲಿಗರು, ಹಾಲಕ್ಕಿ, ಸಿದ್ದಿಗಳು, ಕಾಡು–ಜೇನು ಕುರುಬರು ಹೀಗೆ ಕಾಡಿಗೆ ಹೊಂದಿಕೊಂಡು ಬೆಳೆದ ಜನರು ಕೆಎಫ್‌ಡಿಗೆ ತುತ್ತಾಗುವುದು ಕಡಿಮೆ. ಕಾಯಿಲೆ ಬಂದರೂ ಅಷ್ಟೊಂದು ತೀವ್ರಗತಿಯಲ್ಲಿ ಬಾಧಿಸುವುದಿಲ್ಲ. ಕಾಡನ್ನೇ ಮನೆಯಂತೆ ಅವರು ನೋಡುತ್ತಾರೆ. ಕಾಡಿನಲ್ಲಿ ಬದಲಾವಣೆಗಳು ಕಂಡುಬಂದರೆ ಅದಕ್ಕೆ ರೋಗ ಬಂದಿದೆ, ಕಾಡಿಗೆ ಹುಷಾರು ಇಲ್ಲ ಎಂದೆಲ್ಲ ಎನ್ನುತ್ತಾರೆ. ಯಾವ ಉಣುಗು ಕಚ್ಚಿದರೆ ರೋಗ ಬರುತ್ತದೆ ಎಂಬ ಜ್ಞಾನವೂ ಅವರಿಗೆ ಇರುತ್ತದೆ. ಈ ಬಗ್ಗೆಯೂ ಹೆಚ್ಚಿನ ಸಂಶೋಧನೆಗಳು ಆಗಬೇಕಿದೆ ಎಂದು ದರ್ಶನ್ ಹೇಳುತ್ತಾರೆ.

ಉಣುಗಿಗೆ ಯಾವುದೇ ಗಡಿ ಇಲ್ಲ. ಚಿಕ್ಕಮಗಳೂರು, ಸಕಲೇಶಪುರ, ತೀರ್ಥಹಳ್ಳಿ ಭಾಗಕ್ಕೆ ಟ್ರಕ್ಕಿಂಗ್ ಬರುವವರಲ್ಲಿ ಪ್ರವಾಸೋದ್ಯಮ ಇಲಾಖೆ ಕೆಎಫ್‌ಡಿ ಬಗ್ಗೆ ಜಾಗೃತಿ ಮೂಡಿಸಲಿ. ಇಲ್ಲವಾದರೆ ಟ್ರಕರ್ಸ್‌ಗೂ ರೋಗ ಹರಡುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸುವರು.

ಇನ್ನೂ ರೋದಿಸುತ್ತಿದೆ ಅರಳಗೋಡು..

ಕೆಎಫ್‌ಡಿಯಿಂದ ಸಾಗರ ತಾಲ್ಲೂಕಿನ ಅರಳಗೋಡಿನಲ್ಲಿ 2019ರ ಮಾರ್ಚ್‌ನಲ್ಲಿ 23 ಜನರು ಸಾವಿಗೀಡಾಗಿದ್ದರು. ಕಾಯಿಲೆಗೆ ಬಲಿಯಾದ ಕೃಷ್ಣಾ–ಸೀತಾ ದಂಪತಿಯ ಇಬ್ಬರು ಮಕ್ಕಳು, ಹೆಂಡತಿ–ಮಗನ ಕಳೆದುಕೊಂಡ ವಯೋವೃದ್ಧ ಜೆಟ್ಟಪ್ಪ, ತಿಮ್ಮನಾಯ್ಕನ ಕುಟುಂಬದ ಮೂವರು ಹೆಣ್ಣುಮಕ್ಕಳು, ದಲಿತ ಸಮುದಾಯದ ಚಂದ್ರಪ್ಪ ಅವರ ಇಬ್ಬರು ಹೆಣ್ಣುಮಕ್ಕಳು ಈಗ ಅನಾಥರಾಗಿದ್ದಾರೆ. ಇಂತಹ ಹತ್ತಾರು ಸಂಗತಿ ಊರಿನಲ್ಲಿ ಅಡ್ಡಾಡಿದರೆ ಕಾಣಸಿಗುತ್ತವೆ. ಎಲ್ಲರದ್ದೂ ಕಣ್ಣೀರ ಕಥನವೇ!

‘ಅರಣ್ಯವಾಸಿಗಳಾದ ನಾವು ಇಲ್ಲಿ ಬದುಕಿದ್ದು ತಪ್ಪಾ. ಕಾಯಿಲೆ ಬಂದು 67 ವರ್ಷ ಆಗಿದೆ. ಅದಕ್ಕೊಂದು ಸರಿಯಾದ ಲಸಿಕೆ ಕೊಡದೇ ಕಾಡಿನಂಚಿನ ಜನರ ಜೀವದ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆ. ಆಗ ಸತ್ತವರ ಕುಟುಂಬಕ್ಕೆ ಘೋಷಣೆ ಮಾಡಿದ್ದು ₹ 5 ಲಕ್ಷ. ಕೊಟ್ಟಿದ್ದು ಮಾತ್ರ ₹ 2 ಲಕ್ಷ. ಇದೆಲ್ಲ ಯಾವ ಪುರುಷಾರ್ಥಕ್ಕೆ?’ ಎಂದು ಅರಳಗೋಡಿನ ಆಟೊ ಚಾಲಕ ಶಿವರಾಜ್ ಆಕ್ರೋಶ ವ್ಯಕ್ತಪಡಿಸುತ್ತಾರೆ. ಕೆಎಫ್‌ಡಿಯಿಂದ ಸಾವಿಗೀಡಾದವರ ಅವಲಂಬಿತರಿಗೆ ತಲಾ ₹10 ಲಕ್ಷವಾದರೂ ಪರಿಹಾರ ನಿಗದಿಪಡಿಸುವ ಅಗತ್ಯವಿದೆ ಎಂದು ಶಿವಮೊಗ್ಗದ ಕೆಎಫ್‌ಡಿ ಜನಜಾಗೃತಿ ಒಕ್ಕೂಟದ ಸಂಚಾಲಕ ಕೆ.ಪಿ. ಶ್ರೀಪಾಲ್ ಒತ್ತಾಯಿಸುತ್ತಾರೆ.

ಮಂಗ ಸತ್ತರೆ ಅರಣ್ಯ ಇಲಾಖೆಗೆ ಹೇಳುವೆ..

‘ನಾ ಆಗಿನ್ನೂ ಹರೆಯದವ. ನಮ್ಮೂರಿನ ಕಾಡಂಚಿನಲ್ಲಿ ಸತ್ತು ಬಿದ್ದಿದ್ದ ಮಂಗನ ಕಳೇಬರ ಕೈಯಲ್ಲಿ ಎತ್ತಿಕೊಂಡು ಬಂದು ವಿಧಿವತ್ತಾಗಿ ಅಂತ್ಯಕ್ರಿಯೆ ಮಾಡಿದ್ದೆ. ಅದರ ಮೈಮೇಲಿದ್ದ ಉಣುಗು (ಉಣ್ಣೆ) ನನಗೆ ಕಚ್ಚಿ ಕಾಯಿಲೆ ಬಂದು ಹಾಸಿಗೆ ಹಿಡಿದು ಬದುಕುತ್ತೇನೋ, ಇಲ್ಲವೋ ಎಂಬಂತಾಗಿತ್ತು. ಈಗ ಮಂಗ ಸತ್ತರೆ ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡುತ್ತೇನೆ‘ ಎಂದು ತೀರ್ಥಹಳ್ಳಿ ತಾಲ್ಲೂಕಿನ ಕೂಡ್ಲು ಬಳಿ ಮಾತಿಗೆ ಸಿಕ್ಕ ಹಿರಿಯರಾದ ರತ್ನಾಕರ ಹೇಳಿದರು.

‘ಶಿರಸಿ ಬಳಿಯ ಗ್ರಾಮವೊಂದರಲ್ಲಿ ಎರಡು ದಿನಗಳ ಹಿಂದೆ ಅಂತಹದ್ದೇ ಘಟನೆ ನಡೆದಿದೆ. ಯುವಕರ ಗುಂಪು ಸತ್ತ ಮಂಗನ ಅಂತ್ಯಕ್ರಿಯೆ ನಡೆಸಿದೆ. ಎಲ್ಲರನ್ನೂ ಪರೀಕ್ಷೆಗೆ ಕರೆದೊಯ್ದಿದ್ದಾರೆ’ ಎಂದು ಅಲ್ಲಿಯೇ ಇದ್ದ ಆರೋಗ್ಯ ಇಲಾಖೆ ಸಿಬ್ಬಂದಿ ಮಾಹಿತಿ ನೀಡಿದರು.

‘ತೀರ್ಥಹಳ್ಳಿ ಸಮೀಪದ ಹಳ್ಳಿಯೊಂದರಲ್ಲಿ ಕೆಎಫ್‌ಡಿ ಬಾಧಿತರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆತರಲು ಗೋಗರೆಯಬೇಕಾಯಿತು. ವಾರಗಟ್ಟಲೇ ಆಸ್ಪತ್ರೆಯಲ್ಲಿದ್ದರೆ ಇಲ್ಲಿ ತೋಟ, ನೀರಿನ ಮೋಟರ್, ದನಗಳನ್ನ ನೋಡಿಕೊಳ್ಳುವವರು ಯಾರು? ನಾವು ಬರೊಲ್ಲ ಎಂದು ಕುಳಿತಿದ್ದರು. ದಮ್ಮಯ್ಯ ಹಾಕಿ ಕರೆತಂದೆವು’ ಎಂದು ಅವರು ತಮ್ಮ ಕಷ್ಟ ತೋಡಿಕೊಂಡರು.

ಮರ ಕಡಿದು ಕಾಯಿಲೆ ಬಂತೇ?: ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ನುಗ್ಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎರಡು ಹಳ್ಳಿಗಳ ಜನರಲ್ಲಿ ಅರಣ್ಯ ಇಲಾಖೆ ಜಾಗದಲ್ಲಿದ್ದ ಮರಗಳನ್ನು ಕಡಿದಿದ್ದೇ ರೋಗ ಹರಡಲು ಕಾರಣ ಎನ್ನುವ ಅನುಮಾನವಿದೆ. ಆ ಗ್ರಾಮಗಳಲ್ಲಿ ಅರಣ್ಯ ಇಲಾಖೆ ಜಾಗದಲ್ಲಿನ ಅಕೇಶಿಯಾ ಮರಗಳನ್ನು ಕಡಿದು ಸಾಗಿಸುವ ಕೆಲಸ ನಡೆಯುತ್ತಿದೆ. ಮರದ ಎಲೆಗಳಲ್ಲಿದ್ದ ಉಣ್ಣೆಗಳು ಕೆಲಸ ಮಾಡುತ್ತಿದ್ದವರಿಗೆ ಕಚ್ಚಿ ಕಾಯಿಲೆ ಹರಡಿದೆ ಎಂಬುದು ಆರೋಗ್ಯ ಇಲಾಖೆ ಅಧಿಕಾರಿಗಳ ಅಭಿಪ್ರಾಯ.

ಮಲೆನಾಡಿನಲ್ಲಿ ಯಾರಾದರೂ ಸತ್ತರೆ ದುಃಖ ಹಂಚಿಕೊಳ್ಳುವ ವಿಚಾರದಲ್ಲಿ ಆ ಮನೆಯವರ ತೋಟಕ್ಕೆ ಊರಿನವರು ಹೋಗಿ ಕೆಲಸ ಮಾಡುವುದು ವಾಡಿಕೆ. ಹೀಗೆ ಸಿದ್ದಾಪುರ ತಾಲ್ಲೂಕಿನ ಮತ್ತೊಂದು ಗ್ರಾಮದಲ್ಲಿ ಹೀಗೆ ತೋಟದಲ್ಲಿ ಕೆಲಸ ಮಾಡಿದ್ದ 10ಕ್ಕೂ ಹೆಚ್ಚು ಜನರಿಗೆ ಮಂಗನಕಾಯಿಲೆ ಬಾಧಿಸಿದೆ.

ಈ ಗ್ರಾಮಗಳಲ್ಲದೇ ಸಿದ್ದಾಪುರ, ಶಿರಸಿ, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಅರಮನೆಕೊಪ್ಪ, ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಭಾಗದ ಹಲವು ಗ್ರಾಮಗಳಲ್ಲಿ ಮಂಗನಕಾಯಿಲೆ ಮೊದಲ ಬಾರಿಗೆ ಕಾಣಿಸಿಕೊಂಡಿದೆ. ಸ್ಥಳೀಯರಲ್ಲಿ ಆತಂಕ ಮನೆಮಾಡಿದೆ.

ಚಿಂತೆಗೆ ದೂಡಿದ ‘ಬಿಗು ಕ್ರಮ’: ಮಲೆನಾಡಿನ ಭಾಗದ ರೈತರು, ಅದರಲ್ಲೂ ವಿಶೇಷವಾಗಿ ಅಡಿಕೆ ಬೆಳೆಗಾರರು ಡಿಸೆಂಬರ್ ಬಳಿಕ ತೋಟಕ್ಕೆ ಸೊಪ್ಪು ಹಾಸುತ್ತಾರೆ. ಇದಕ್ಕಾಗಿಯೇ ಸಮೀಪದ ಬೆಟ್ಟದಿಂದ ಸೊಪ್ಪು ಕಲೆಹಾಕಿ ತರುತ್ತಾರೆ. ಮಾರ್ಚ್ ಅಂತ್ಯದವರೆಗೂ ಈ ಕೆಲಸ ನಡೆಯುತ್ತಲೇ ಇರುತ್ತದೆ. ಆದರೆ ಮಂಗನ ಕಾಯಿಲೆ ಹರಡಿರುವ ಗ್ರಾಮಗಳಲ್ಲಿ ಆರೋಗ್ಯ ಇಲಾಖೆ ಬೆಟ್ಟ ಪ್ರದೇಶಕ್ಕೆ ಪ್ರವೇಶ ನಿಷೇಧಿಸಿ ‘ಬಿಗಿ ಕ್ರಮ’ ಅನುಸರಿಸಿದೆ. ಇದು ರೈತರನ್ನು ಚಿಂತೆಗೆ ದೂಡಿದೆ.

‘ಪ್ರತಿ ಬಾರಿ ಬೇಸಿಗೆ ಆರಂಭದಲ್ಲೇ ನಮಗೆ ಸೊಪ್ಪಿನ ಬೆಟ್ಟಕ್ಕೆ ಹೋಗಲು ಬಿಡದೆ ಅಡ್ಡಿಪಡಿಸಲಾಗುತ್ತಿತ್ತು. ಈ ವರ್ಷ ಮಂಗನ ಕಾಯಿಲೆ ನಿಯಂತ್ರಣ ಇದಕ್ಕೆ ನೆಪವಾಗುತ್ತಿದೆ’ ಎಂದು ಸಿದ್ದಾಪುರ ತಾಲ್ಲೂಕಿನ ಗ್ರಾಮವೊಂದರ ನಿವಾಸಿ ಗಣಪತಿ ಮಡಿವಾಳ ದೂರುತ್ತಾರೆ.

ಕೆಎಫ್‌ಡಿ ಚಿಕಿತ್ಸೆಗೆ ಔಷಧಿ, ಲಸಿಕೆ ಇಲ್ಲ. ಹೀಗಾಗಿ ಅದು ಬಾರದಂತೆ ಮುನ್ನೆಚ್ಚರಿಕೆಗೆ ಆರೋಗ್ಯ ಇಲಾಖೆ ಒತ್ತು ನೀಡುತ್ತಿದೆ. ಅದಕ್ಕೆ ಮಲೆನಾಡಿನಲ್ಲಿ ಅರಣ್ಯ ಹಾಗೂ ಪಶು ಸಂಗೋಪನಾ ಇಲಾಖೆ ಕೂಡ ಕೈ ಜೋಡಿಸಿವೆ. ಉಣುಗುಗಳ ನಿಯಂತ್ರಿಸಲು ರಾಸುಗಳಿಗೆ ‘ಡೊರಾಮೆಕ್ಟಿನ್’ ಲಸಿಕೆ ಹಾಕಲಾಗುತ್ತಿದೆ. ಕಾಡಂಚಿನಲ್ಲಿ ಸತ್ತ ಮಂಗಗಳ ಕಳೇಬರ ಹುಡುಕಿ ಸುಡುವ ಜೊತೆಗೆ ಅರಣ್ಯ ರಸ್ತೆಗಳ ಆಸುಪಾಸಿನಲ್ಲಿ ಫೈರ್‌ಲೈನ್ ಮಾಡಿ ಉಣುಗು ವ್ಯಾಪಿಸದಂತೆ ತಡೆಯಲಾಗುತ್ತಿದೆ. ವನವಾಸಿಗಳಿಗೆ ಆರೋಗ್ಯ ಇಲಾಖೆಯ ಜಾಗೃತಿ ಕಾರ್ಯಕ್ರಮ ತಲುಪಿಸುವಲ್ಲೂ ಈ ಸಮನ್ವಯದ ಹಾದಿ ತೆರೆದುಕೊಂಡಿದೆ. ಆದರೆ ಕಾಯಿಲೆಗೆ ಶಾಶ್ವತ ಮದ್ದು ಕಂಡು ಹಿಡಿಯುವುದು ಯಾವಾಗ ಎಂಬ ಪ್ರಶ್ನೆ ಸಂತ್ರಸ್ತರದ್ದು. ಬೆಕ್ಕಿಗೆ ಗಂಟೆ ಕಟ್ಟುವ ಸವಾಲು ಸರ್ಕಾರದ ಮುಂದಿದೆ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಗಣಪತಿ ಹೆಗಡೆ, ವಿಜಯಕುಮಾರ್ ಎಸ್.ಕೆ., ಬಾಲಚಂದ್ರ ಎಚ್.

‘ಈಗಿರುವ ಲಸಿಕೆಯನ್ನೇ ಸರ್ಕಾರ ನೀಡಲಿ’

ಚಿಕ್ಕಮಗಳೂರು ಶಿವಮೊಗ್ಗ ಹಾಗೂ ಉತ್ತರ ಕನ್ನಡದಲ್ಲಿ ಇದೀಗ ಎಲ್ಲೆಡೆ ಮಂಗನ ಕಾಯಿಲೆ ತೀವ್ರವಾಗಿ ಹರಡುತ್ತಿದ್ದು, ಅನೇಕ ಸಾವುಗಳು ಸಂಭವಿಸಿದೆ. ಬೇಸಿಗೆ ಇನ್ನೂ ದೀರ್ಘವಾಗಿದ್ದು, ಈ ರೋಗದ ಸಮಸ್ಯೆ ಮತ್ತಷ್ಟು ಗಂಭೀರವಾಗುವ ಲಕ್ಷಣ ಕಂಡುಬರುತ್ತದೆ. ಹೀಗಾಗಿ ಸರ್ಕಾರ ಇದನ್ನು ಒಂದು ಆರೋಗ್ಯ ತುರ್ತು ಪರಿಸ್ಥಿತಿ ಎಂದು ಪರಿಗಣಿಸಿ, ಸೂಕ್ತ ಚಿಕಿತ್ಸೆ ಹಾಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಈ ರೋಗಪೀಡಿತ ಪ್ರದೇಶಗಳಲ್ಲಿ 2 ರಿಂದ3 ಸುತ್ತು ಲಸಿಕೆ ನೀಡಬೇಕಿತ್ತು. ಆದರೆ ಈ ಕಾರ್ಯವನ್ನು ಸರ್ಕಾರ ಮಾಡಲೇ ಇಲ್ಲ. ಇದರ ಬದಲಾಗಿ , ಹೊಸ ಲಸಿಕೆಯ ಸಂಶೋಧನೆ ಮತ್ತು ಅಭಿವೃದ್ಧಿಗೆ ಸರ್ಕಾರ ಪ್ರಯತ್ನಿಸುತ್ತಿದೆ ಎಂಬ ಮಾಹಿತಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ!

ಆದರೆ ಹೊಸ ಲಸಿಕೆಯ ಅಭಿವೃದ್ಧಿಯಾಗಿ ಜನರ ಬಳಿಗೆ ತಲುಪುವವರೆಗೆ ಇನ್ನೂ ಒಂದೆರಡು ವರ್ಷಗಳಾಗಬಹುದು. ಅಲ್ಲಿಯವರೆಗಾದರೂ ಈಗ ಲಭ್ಯ ಇರುವ ಲಸಿಕೆಯನ್ನೇ ಪೂರೈಸುವುದು ಸರ್ಕಾರದ ಕರ್ತವ್ಯವಾಗಬೇಕು. ಇದನ್ನು ನಿಲ್ಲಿಸಿರುವುದು ತುಂಬಾ ಖಂಡನೀಯ. ಹೀಗಾಗಿ, ಸರ್ಕಾರ ಈ ಕುರಿತು ತಕ್ಷಣದಲ್ಲಿ ಕಾರ್ಯ ಪ್ರವರ್ತವಾಗಬೇಕು.

ಅನಂತ ಅಶೀಸರ, ಅಧ್ಯಕ್ಷರು ಹಾಗೂ ಸಂಸ್ಥೆಯ ಸರ್ವ ಸದಸ್ಯರು, ವೃಕ್ಷ ಲಕ್ಷ ಆಂದೋಲನ- ಕರ್ನಾಟಕ

ಪರೀಕ್ಷೆಯಲ್ಲಿ ಲೋಪ; ತನಿಖೆಗೆ ಆದೇಶ

ಶಿವಮೊಗ್ಗದಲ್ಲಿ ಕೆಎಫ್‌ಡಿ ಪರೀಕ್ಷೆ ವೇಳೆ ಆರೋಗ್ಯ ಇಲಾಖೆ ಕೊಟ್ಟ ತಪ್ಪು ಮಾಹಿತಿ ಹೊಸನಗರ ತಾಲ್ಲೂಕಿನ ಯುವತಿಯ ಸಾವಿಗೆ ಕಾರಣವಾಗಿದೆ ಎಂಬ ಅರೋಪ ಕೇಳಿಬಂದಿದೆ.

‘ಪ್ರಯೋಗದ ವೇಳೆ ನೆಗೆಟಿವ್ ಎಂದು ವರದಿ ಕೊಟ್ಟಿದ್ದು, ನಂತರ ಸತತ 4 ಬಾರಿ ಪರೀಕ್ಷೆ ನಡೆಸಿದಾಗ 3 ಬಾರಿ ಪಾಸಿಟಿವ್ ಬಂದಿದೆ. ಅಷ್ಟು ಹೊತ್ತಿಗೆ ಎರಡು ದಿನ ಕಳೆದಿದ್ದು, ಯುವತಿಗೆ ಕೆಎಫ್‌ಡಿ ಚಿಕಿತ್ಸೆ ನೀಡಿಕೆ ವಿಳಂಬವಾಗಿ ಆಕೆ ಸಾವಿಗೀಡಾಗಿದ್ದಾಳೆ’ ಎಂದು ಜನಜಾಗೃತಿ ಒಕ್ಕೂಟ ಸಲ್ಲಿಸಿದ ದೂರು ಆಧರಿಸಿ ಆರೋಗ್ಯ ಇಲಾಖೆ ಆಯುಕ್ತ ಡಿ.ರಣದೀಪ್ ತನಿಖೆಗೆ ಆದೇಶಿಸಿದ್ದಾರೆ.

‘ರಾಮ ಇದ್ದಿದ್ದರೆ ಅವನನ್ನೂ ಬಿಜೆಪಿಯವರು ಬೆದರಿಸುತ್ತಿದ್ದರು’



ನವದೆಹಲಿ (ಪಿಟಿಐ): ಶ್ರೀ ರಾಮ ಏನಾದರೂ ಈಗ ಇದ್ದಿದ್ದರೆ ಬಿಜೆಪಿಯವರು ಜಾರಿ ನಿರ್ದೇಶನಾಲಯ(ಇ.ಡಿ) ಮತ್ತು ಸಿಬಿಐ ಅನ್ನು ಅವನ ಮನೆಗೆ ಕಳುಹಿಸಿ, ಹಣೆಗೆ ಬಂದೂಕು ಇಟ್ಟು, ನೀನು ಬಿಜೆಪಿಗೆ ಸೇರುತ್ತಿಯಾ ಇಲ್ಲ ಜೈಲಿಗೆ ಹೋಗುತ್ತೀಯಾ ಎಂಬುದಾಗಿ ಪ್ರಶ್ನಿಸುತ್ತಿದ್ದರು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಬಜೆಟ್ ಕುರಿತು ವಿಧಾನಸಭೆಯಲ್ಲಿ ಮಾತನಾಡಿದ ಕೇಜ್ರಿವಾಲ್, ‘ಬಜೆಟ್ ಉತ್ತಮವಾಗಿದ್ದು, ಎಎಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟವು ದೆಹಲಿಯ ಏಳು ಕ್ಷೇತ್ರಗಳಲ್ಲಿಯೂ ಗೆಲುವು ಸಾಧಿಸಲಿದೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ’ ಎಂದರು.


‘ದೆಹಲಿಯ ಎಎಪಿ ಸರ್ಕಾರವು ವಿಕಾಸ ಅಥವಾ ಅಭಿವೃದ್ಧಿಯ ಮಾದರಿಯನ್ನು ಅನುಸರಿಸುತ್ತಿದೆ. ಆದರೆ ಬಿಜೆಪಿಯು ವಿರೋಧ ಪಕ್ಷಗಳ ಮೇಲೆ ದಾಳಿ ನಡೆಸುವ ಮತ್ತು ಸರ್ಕಾರಗಳನ್ನು ಉರುಳಿಸುವ ಮೂಲಕ ವಿನಾಶದ ಮಾದರಿಯನ್ನು ಅನುಸರಿಸುತ್ತಿದೆ’ ಎಂದು ಟೀಕಿಸಿದರು.

ತಮ್ಮ ವಿರುದ್ಧ 8 ಸಮನ್ಸ್ ಜಾರಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನನ್ನನ್ನು ಬಂಧಿಸಿ ಜೈಲಿಗೆ ಕಳುಹಿಸುವ ಮೂಲಕ ಸರ್ಕಾರವನ್ನು ಉರುಳಿಸುವ ಯೋಜನೆಯನ್ನು ಬಿಜೆಪಿ ಮಾಡಿದೆ. ನಾನು ದೇಶದ ಪ್ರಮುಖ ಭಯೋತ್ಪಾದಕನಾಗಿದ್ದರೆ ನನಗೆ ಇಷ್ಟು ಸಮನ್ಸ್‌ಗಳನ್ನು ನೀಡುತ್ತಿದ್ದರೇ’ ಎಂದು ಪ್ರಶ್ನಿಸಿದರು.

’ಬಿಜೆಪಿಯು ವಿರೋಧ ಪಕ್ಷಗಳನ್ನು ದಮನಿಸಲು ಪ್ರಯತ್ನಿಸುತ್ತಿದೆ. ಇದರೊಂದಿಗೆ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತಿದೆ’ ಎಂದು ಆರೋಪಿಸಿದರು.

ಇಂದು ಬಿಜೆಪಿ ಪಟ್ಟಿ ಬಿಡುಗಡೆ ಸಾಧ್ಯತೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: ‘ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಕಣಕ್ಕಿಳಿಯಲಿರುವ ಪಕ್ಷದ ಅಭ್ಯರ್ಥಿಗಳ ಪಟ್ಟಿ ಭಾನುವಾರ ಅಂತಿಮಗೊಳ್ಳುವ ಸಾಧ್ಯತೆ ಇದೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

‘ಭಾನುವಾರ ಸಂಜೆ ಚುನಾವಣಾ ಸಮಿತಿಯ ಸಭೆ ಇದೆ. ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ದೆಹಲಿಗೆ ಹೋಗುತ್ತಿದ್ದೇನೆ. ಈಗಾಗಲೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಒಂದು ಸುತ್ತಿನ ಸಭೆ ಆಗಿದೆ. ಭಾನುವಾರ ಬಹುತೇಕ ಅಂತಿಮ ಪಟ್ಟಿ ಸಿದ್ಧವಾಗಲಿದೆ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಜೆಡಿಎಸ್‌ಗೆ ಕ್ಷೇತ್ರ ಹಂಚಿಕೆಯ ವಿಚಾರವಾಗಿ ಪ್ರತಿಕ್ರಿಯಿಸಿ, ‘ಯಾರು ಯಾರಿಗೆ ಯಾವ ಕ್ಷೇತ್ರ ಕೊಡುತ್ತಾರೋ ಗೊತ್ತಿಲ್ಲ. ಕ್ಷೇತ್ರ ಹಂಚಿಕೆ ಬಗ್ಗೆ ಅಂತಿಮ ಚರ್ಚೆ ನಡೆಯುತ್ತಿದೆ. ಈ ಬಗ್ಗೆಯೂ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಹಾಲಿ ಸಂಸದರ ಪೈಕಿ ಕೆಲವರಿಗೆ ಟಿಕೆಟ್ ನೀಡಬಾರದು ಎಂಬುದರ ಕುರಿತು ಚರ್ಚೆ ನಡೆದಿಲ್ಲ’ ಎಂದರು.

15 ಕ್ಷೇತ್ರಗಳಿಗೆ ಬಿಜೆಪಿ ಪಟ್ಟಿ ಇಂದು ಅಖೈರು?

ಒಂದನೇ ಪುಟದಿಂದ

ರಾಜ್ಯ ಘಟಕವು ಪ್ರತಿ ಲೋಕಸಭಾ ಕ್ಷೇತ್ರಕ್ಕೆ 2ರಿಂದ 3 ಹೆಸರುಗಳನ್ನು ಶಿಫಾರಸು ಮಾಡಿದೆ. ಪಕ್ಷದ ವರಿಷ್ಠರು ಮೂರು ಸಮೀಕ್ಷೆಗಳನ್ನು ನಡೆಸಿ ತಳಮಟ್ಟದ ‘ವಾಸ್ತವ’ ಮಾಹಿತಿಗಳನ್ನು ತರಿಸಿಕೊಂಡಿದ್ದಾರೆ. ವಯಸ್ಸಿನ ಕಾರಣಕ್ಕೆ ಕೆಲವು ಸಂಸದರಿಗೆ ಟಿಕೆಟ್ ಕೈ ತಪ್ಪುವ ಸಾಧ್ಯತೆ ಇದೆ. ಕೆಲವು ಸಂಸದರ ಕಾರ್ಯಕ್ಷಮತೆ ಬಗ್ಗೆ ವರಿಷ್ಠರಿಗೆ ತೃಪ್ತಿ ಇಲ್ಲ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಹೊಸ ಮುಖಗಳನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕಲಬುರಗಿ– ಬೆಂಗಳೂರು ರೈಲಿಗೆ ಚಾಲನೆ

ಕಲಬುರಗಿ: ಕಲಬುರಗಿಯಿಂದ ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಸಮೀಪದ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ಗೆ ಸಂಚರಿಸುವ ವಾರದ ವಿಶೇಷ ರೈಲಿಗೆ ಸಂಸದ ಡಾ. ಉಮೇಶ ಜಾಧವ ನಗರದ ರೈಲು ನಿಲ್ದಾಣದಲ್ಲಿ ಶನಿವಾರ ಸಂಜೆ ಹಸಿರು ನಿಶಾನೆ ತೋರಿದರು.

ಕಲಬುರಗಿ–ಬೆಂಗಳೂರು ವಾರದ ವಿಶೇಷ ರೈಲು ಏಪ್ರಿಲ್ 5ರವರೆಗೆ ವಾರದಲ್ಲಿ ಒಂದು ದಿನ ಸಂಚರಿಸಲಿದೆ. ಆ ಬಳಿಕ ವಾರದಲ್ಲಿ ಮೂರು ದಿನ ಓಡಲಿದೆ. ಪ್ರತಿ ಶುಕ್ರವಾರ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ನಿಂದ ರಾತ್ರಿ 11ಕ್ಕೆ ಹೊರಟ ರೈಲು, ಮರುದಿನ (ಶನಿವಾರ) ಬೆಳಿಗ್ಗೆ 9.05ಕ್ಕೆ ಕಲಬುರಗಿ ತಲುಪಲಿದೆ. ಕಲಬುರಗಿಯಿಂದ ಶನಿವಾರ ಸಂಜೆ 5.10ಕ್ಕೆ ಹೊರಡುವ ರೈಲು, ಮರುದಿನ (ಭಾನುವಾರ) ಬೆಳಿಗ್ಗೆ 4.15ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ತಲುಪಲಿದೆ.

ಈ ವೇಳೆ ಮಾತನಾಡಿದ ಸಂಸದ ಜಾಧವ, ‘ಕಲಬುರಗಿಯಿಂದ ನೇರವಾಗಿ ಬೆಂಗಳೂರಿಗೆ ರೈಲು ಸೇವೆ ಕಲ್ಪಿಸಬೇಕೆಂಬ ದಶಕಗಳ ಬೇಡಿಕೆ ಈಡೇರಿಸಲಾಗಿದೆ. ಮಾರ್ಚ್ 12ರಿಂದ ಕಲಬುರಗಿ– ಬೆಂಗಳೂರು ಮಧ್ಯೆ ವಂದೇ ಭಾರತ್ ರೈಲು ಸೇವೆ ಆರಂಭವಾಗಲಿದೆ. ಕಲಬುರಗಿಯಿಂದ ಬೆಳಿಗ್ಗೆ 5.15ಕ್ಕೆ ಹೊರಟು ಮಧ್ಯಾಹ್ನ 2ಕ್ಕೆ ಬೆಂಗಳೂರು ತಲುಪಲಿದೆ. ಬೆಂಗಳೂರಿನಿಂದ ಮಧ್ಯಾಹ್ನ 2.40ಕ್ಕೆ ಹೊರಟು ರಾತ್ರಿ 11.30ಕ್ಕೆ ಕಲಬುರಗಿ ಮುಟ್ಟಲಿದೆ. ರಾಯಚೂರು, ಮಂತ್ರಾಲಯಂ ರೋಡ್, ಗುಂತಕಲ್, ಅನಂತಪುರ ಮತ್ತು ಯಲಹಂಕ ನಡುವೆ ನಿಲುಗಡೆಯಾಗಲಿದೆ. ವಾರದಲ್ಲಿ ಆರು ದಿನ ಓಡಾಡಲಿದೆ’ ಎಂದರು.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 10-3-1999

• ಭಾಗವತ್ ವಜಾ ಪ್ರಕರಣ ಚರ್ಚೆಗೆ ಲೋಕಸಭೆಯಲ್ಲಿ ಆಗ್ರಹ, ಚಕಮಕಿ

ನವದೆಹಲಿ, ಮಾ. 9– ಅಡ್ಮಿರಲ್ ವಿಷ್ಣು ಭಾಗವತ್ ಅವರನ್ನು ನೌಕಾ ಪಡೆಯ ಮುಖ್ಯಸ್ಥ ಹುದ್ದೆಯಿಂದ ಮಾಡಿರುವ ಅಪರೂಪದ ಪ್ರಕರಣದ ಮೇಲೆ ಚರ್ಚೆಗೆ ಒತ್ತಾಯಿಸಿದ್ದರಿಂದ ಲೋಕಸಭೆಯಲ್ಲಿ ಇಂದು ಪ್ರತಿಪಕ್ಷಗಳು ಮತ್ತು ಆಳುವ ಪಕ್ಷಗಳ ಸದಸ್ಯರ ನಡುವೆ ನಡೆದ ಮಾತಿನ ಚಕಮಕಿ ನಡೆಯಿತು. 45 ನಿಮಿಷಗಳ ಕಾಲ ಭಾರಿ ಗದ್ದಲ ಉಂಟಾಯಿತು.

ಪ್ರಶ್ನೋತ್ತರ ಮುಗಿದು ಶೂನ್ಯವೇಳೆ ಆರಂಭವಾಗುತ್ತಿದ್ದಂತೆ ಸಿಪಿಐ ನಾಯಕ ಇಂದ್ರಜಿತ್ ಗುಪ್ತ ಮತ್ತು ಕಾಂಗ್ರೆಸ್‌ನ ಕಕಮಲ್‌ನಾಥ್ ಈ ಪ್ರಶ್ನೆ ಎತ್ತಿ ಚರ್ಚೆಗೆ ಆಗ್ರಹಪಡಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 10-3-1974

• ಡಿಯಾಗೊಗಾರ್ಸಿಯಾ: ಭಾರತದ ನಿಲುವು ಅಚಲ ಎಂದ ಇಂದಿರಾ

ಶಾಂತಿನಿಕೇತನ, ಮಾ. 9– ಯಾವುದೇ ರಾಷ್ಟ್ರ ವ್ಯಕ್ತಪಡಿಸುವ ಪ್ರತಿಕ್ರಿಯೆಯೂ ಡಿಯಾಗೊಗಾರ್ಸಿಯಾ ಕುರಿತ ಭಾರತದ ನಿಲುವನ್ನು ಬದಲಾಯಿಸದು ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ಡಿಯಾಗೊಗಾರ್ಸಿಯಾದಲ್ಲಿ ಇರುವ ತಮ್ಮ ಸೈನಿಕ ಸೌಲಭ್ಯಗಳನ್ನು ಅಮೆರಿಕ ವಿಸ್ತರಿಸುವುದರಿಂದ ಹಿಂದೂ ಮಹಾಸಾಗರದ ತಾಟಸ್ಥ್ಯ ಹೇಗೆ ಉಳಿಯುವುದೆಂದು ಸುದ್ದಿಗಾರರು ಪ್ರಶ್ನಿಸಿದರು.

‘ನಮ್ಮ ನಿರ್ಧಾರ ಬದಲಾಗದು. ಅದನ್ನು ಇನ್ನೂ ಸ್ಪಷ್ಟಪಡಿಸುವ ಅಗತ್ಯ ಇಲ್ಲ’ ಎಂದು ಪ್ರಧಾನಿ ನುಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಮಾರ್ಚ್ 10, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಮಾವಾಸ್ಯೆ ಗಂ. 14-30 **ನಕ್ಷತ್ರ:** ಪೂರ್ವಾಭಾದ್ರಾ ಗಂ. 25-55 **ಯೋಗ:** ಸಾಧ್ಯಾ ಗಂ. 16-13 **ಕರಣ:** ನಾಗ ಗಂ. 14-31, ಕುಂಭ ಮಾಸದ 26 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 2, **ರಾಹುಕಾಲ:** ಸಾಯಂಕಾಲ 04-30 – 06-00
ಸೂರ್ಯೋದಯ: 06-44 **ಸೂರ್ಯಾಸ್ತ:** 06-37
ಮುಸ್ಲಿಂ ದಿನಾಂಕ: 28 ಶಬನ್
ಅದೃಷ್ಟ ಸಂಖ್ಯೆ: 1, 10

ಮೇಷ: ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ ಕಾಣುತ್ತವೆ. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ. ಒಂದು ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.

ವೃಷಭ: ಮನೆಯ ನವೀಕರಣಗೊಳಿಸುವ ಕಾರ್ಯಕ್ಕೆ ಕೈ ಹಾಕುವವರು ವಾಸ್ತುಶಾಸ್ತ್ರದ ಬಗ್ಗೆ ಗಮನಕೊಡಿ. ಯಾವುದನ್ನೇ ಆದರೂ ಇಂದು ಷರತ್ತುಗಳ ರೀತಿಯಲ್ಲಿ ವರ್ತಿಸುವಿರಿ. ಮನಸ್ಸು ಉಲ್ಲಾಸದಾಯಕವಾಗಿ ಇರುತ್ತದೆ.

ಮಿಥುನ: ಹೊಸ ಉದ್ಯೋಗಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳುವುದು ಸರಿಯಲ್ಲ. ಈ ದಿನ ನಿಮ್ಮ ಬಾಲ್ಯದ ಕನಸು ನನಸಾಗುವ ದಿನ. ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಹಣ ನಿಮ್ಮ ಕೈ ಸೇರಲಿದೆ.

ಕರ್ಕಾಟಕ: ಮಾತಿನಲ್ಲದೇ ವ್ಯವಹಾರದಲ್ಲಿಯೂ ಚಾಣಾಕ್ಷತನ ತೋರುವುದು ನಿಮ್ಮ ಏಳಿಗೆಗೆ ಕಾರಣವಾಗಲಿದೆ. ವ್ಯಾಪಾರದಲ್ಲಿ ಹಣವನ್ನು ಪಡೆಯಲು ಕಷ್ಟವಾಗಬಹುದು. ಇಂದು ನೀವು ರಾಜಕೀಯದಲ್ಲಿ ಮೇಲ್ದರ್ಜೆಗೇರುವಿರಿ.

ಸಿಂಹ: ಈ ದಿನದ ಕಾರ್ಯಕ್ಕೆ ನಿಮ್ಮ ಆರ್ಥಿಕ ಬಲ ಮತ್ತು ಪ್ರಯತ್ನಬಲ ಎಷ್ಟಿದ್ದರೂ, ಸಹೋದರರ ಅಥವಾ ಸಂಬAಧಿಕರ ಸಹಾಯ ಕೇಳುವುದು ಅನಿವಾರ್ಯವಾಗುವುದು. ಸಾಹಿತಿಗಳಿಗೆ ಹೆಚ್ಚಿನ ಅವಕಾಶಗಳು ಲಭಿಸುವುದು.

ಕನ್ಯಾ: ವಿದೇಶೀ ಗೆಳೆಯನ ಆಗಮನ ಮತ್ತು ಅವನ ಸಹವಾಸದಿಂದ ನಿಮ್ಮ ವ್ಯವಹಾರದಲ್ಲಿ ಉತ್ತಮ ಬದಲಾವಣೆ ಕಾಣುವಿರಿ. ಮಹತ್ವವಾದ ಕೆಲಸದ ಪೂರ್ವತಯಾರಿಗಾಗಿ ದೂರ ಸಂಚಾರದ ಯೋಗವಿದೆ.

ತುಲಾ: ಯಾವುದೇ ರೀತಿಯ ವಾದ ವಿವಾದಗಳು, ಅಸಮಾಧಾನ ನಿಮ್ಮ ಕಾರ್ಯಕ್ಕೆ ಅಡ್ಡಿ ಮಾಡದಂತೆ ಗಮನಹರಿಸಿ. ನಿಮ್ಮ ಸಾಮರ್ಥ್ಯದ ಅರಿವು ನಿಮಗಿರಲಿ. ಯಾವುದೇ ವಿಷಯದಲ್ಲಾದರೂ ನಿಮಗೆ ಜಯ ಇರಲಿದೆ.

ವೃಶ್ಚಿಕ: ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಅಥವಾ ಬೇಜವಾಬ್ದಾರಿತನದಿಂದಾಗಿ ಕಳೆದುಕೊಳ್ಳುವ ಸಂಭವವಿದೆ. ಮನೆಯಲ್ಲಿ ಆನಂದದ ವಾತಾವರಣ ಉದಯವಾಗುತ್ತದೆ. ವ್ಯಾಪಾರಿಗಳಿಗೆ ಬಂಡವಾಳ ಹೂಡಿಕೆಯಲ್ಲಿ ಲಾಭ.

ಧನು: ನೀವು ಬೇರೆ ಯಾರಿಗೂ ನಿಮ್ಮ ಯೋಜನೆಯ ಸುಳಿವು ನೀಡಬಾರದು. ಜೀವನದಲ್ಲಿ ಹಣಕ್ಕಿಂತ ಸ್ನೇಹ ಸಂಬಂಧಗಳು ಮುಖ್ಯವೆಂಬುವುದು ತಿಳಿಯುವುದು. ಕುಟುಂಬದಲ್ಲಿ ಅತ್ಯಂತ ಸಂತೋಷದ ವಾತಾವರಣವಿರಲಿದೆ.

ಮಕರ: ತರಕಾರಿ, ಹಣ್ಣು, ಹೂವು ವ್ಯಾಪಾರಿಗಳಿಗೆ ಉದ್ಯೋಗದಲ್ಲಿ ಲಾಭ ಬರುತ್ತದೆ. ಕಲಾವಿದರುಗಳಿಗೆ, ಪತ್ರಕರ್ತರಿಗೆ ಪ್ರಶಂಸೆಯ ಮಾತುಗಳು ಕೇಳಿ ಬರುವವು. ಹೋಟೆಲ್ ಉದ್ದಿಮೆಯವರಿಗೆ ಕ್ಲೇಶ ಕಂಡುಬರಲಿದೆ.


ಕುಂಭ: ಇಂದಿನ ದಿನದ ಪ್ರಾರಂಭದಲ್ಲಿ ಉಂಟಾಗುವ ವಿಫಲತೆ ಬಗ್ಗೆ ನಿರಾಶೆಗೊಳ್ಳಬಾರದು. ಆಹಾರ ಪದಾರ್ಥಗಳ ತಯಾರಕರಿಗೆ, ವ್ಯಾಪಾರಸ್ಥರಿಗೆ ಉತ್ತಮ ಲಾಭ. ಕೇವಲ ಮನರಂಜನೆಗಾಗಿ ದೂರ ಪ್ರಯಾಣ ಸರಿಯಲ್ಲ.

ಮೀನ: ಹಿತಶತ್ರುಗಳು ನಿಮ್ಮ ಹೆಸರನ್ನು ಹಾಳು ಮಾಡುವ ಪ್ರಯತ್ನ ಮಾಡಬಹುದು, ಜಾಗ್ರತರಾಗಿರಿ. ಶತ್ರುಗಳ ಬಲೆಗೆ ಬೀಳದಂತೆ ನೀವು ಎಚ್ಚರ ವಹಿಸಬೇಕು. ನಿರಂತರ ಕೆಲಸ ಕಾರ್ಯಗಳಿಂದ ಹೊರ ಬರಲು ಪ್ರಯತ್ನಿಸುವಿರಿ.

ಪದಬಂಧ 5616 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎರಡು ಸ್ಥಳಗಳ ನಡುವಿನ ಅಂತರ (2)
3.ಹಾಡಿನ ಧಾಟಿಯಲ್ಲೇ ಮೂಡಿದ ಒಲವು! (2)
5.ಭೇದ ಭಾವವಿಲ್ಲದಿರುವಿಕೆ (5)
6.ಸರಸದ ಮಾತುಕತೆ (3)
7.ಮಾವು ಅಥವಾ ನೆಲ್ಲಿಕಾಯಿಯ ಮುರಬ್ಬ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರವು ತನ್ನ ಸ್ವಾಮ್ಯವನ್ನು ಸ್ಥಾಪಿಸುವುದು (5)
9.ಮಾಸ ಕಳೆದ ನಂತರ ಕಟ್ಟಿಸಿದ ಗೋರಿ (3)
10.ಕಕ್ಷದೊಳಗಿರುವ ಕೃಪಾ ದೃಷ್ಟಿ! (3)
13.ಹಲ್ಲುಗಳನ್ನು ತೊಳೆಯುವುದು (5)
14.ಮಂತ್ರವನ್ನು ಮತ್ತೆ ಮತ್ತೆ ಉಚ್ಚರಿಸುವುದು (2)
15.ಮಾತಿಲ್ಲದ ನೀರವತೆ (2)

ಮೇಲಿಂದ ಕೆಳಕ್ಕೆ
1.ರಾಯಭಾರಿಯ ವಾಸಸ್ಥಾನ (4)
2.ಕುಂಕುಮ ಅಥವಾ ಅರಿಶಿಣ ಸವರಿದ ಅಕ್ಕಿ (3)
4.ನೇಣಿಗೇರಿಸುವ ಕಂಬ (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಒಳ್ಳೆಯ ಕುಲದಲ್ಲಿ ಹುಟ್ಟಿದವನು (4)
11.ತಪ್ಪನ್ನು ಮನ್ನಿಸುವುದು (4)
12.ಅಧೀನ ರಾಜನಿಲ್ಲಿದ್ದಾನೆ (3)



5615ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮದಗಜ 3.ಒಬ್ಬಂಟಿಗ
5.ಖುಲುಮೆ 6.ರಿಕಾಪು
8.ವಿಚಾರ 9.ಹರುಷ
10.ನಗದು 12.ಸಂಭಾವ್ಯ
14.ರತ್ನಾಕರ 15.ನಡುಮನೆ

ಮೇಲಿಂದ ಕೆಳಕ್ಕೆ:
1.ಮದನಾರಿ 2.ಜಹಬು
3.ಒಲುಮೆ 4.ಗಡಿಯಾರ
7.ಪುರುಷ 8.ವಿಧಾನ
9.ಹರಿಕಾರ 11.ದುರ್ವರ್ತನೆ
12.ಸಂಕರ 13.ವ್ಯಸನ

ಸುಡೊಕು 6001

6		4		9		1		8
	1			3			6	
		7	4		1	3		9
2	9				4	6		
1	4							
							9	4
3		9			5		7	1
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6000 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಶಂಕಿತ ಉಗ್ರರ ಕಸ್ಟಡಿ ಅವಧಿ ಮುಕ್ತಾಯ • ಎನ್‌ಐಎ ತನಿಖೆ ಮುಂದುವರಿಕೆ: ಮತ್ತಷ್ಟು ಫೋಟೊ ಬಿಡುಗಡೆ

ಬಾಂಬ್ ಸ್ಫೋಟ: ಬಾಯ್ಬಿಡದ ಶಂಕಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿದ್ದಾರೆ' ಎಂಬ ಅನುಮಾನದ ಮೇರೆಗೆ ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದಿರುವ ನಾಲ್ವರು ಶಂಕಿತ ಉಗ್ರರು, ಕೆಫೆಯಲ್ಲಿ ಬಾಂಬ್ ಇಟ್ಟವನ ಬಗ್ಗೆ ಮಾಹಿತಿ ಬಾಯ್ಬಿಡುತ್ತಿಲ್ಲವೆಂದು ಗೊತ್ತಾಗಿದೆ.

'ಶಂಕಿತ ಉಗ್ರ ಬಳ್ಳಾರಿಯ ಮಿನಾಜ್ ಅಲಿಯಾಸ್ ಸುಲೇಮಾನ್ (26), ಸೈಯದ್ ಸಮೀರ್ (19), ಮುಂಬೈನ ಅನಾಸ್ ಇಕ್ಬಾಲ್ ಶೇಖ್ (23) ಹಾಗೂ ದೆಹಲಿಯ ಶಯಾನ್ ರಹಮಾನ್ ಅಲಿಯಾಸ್ ಹುಸೈನ್‌ನನ್ನು (26) ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿತ್ತು. ಇವರು ವಿಚಾರಣೆಗೂ ಸಹಕರಿಸುತ್ತಿಲ್ಲ' ಎಂದು ಮೂಲಗಳು ಹೇಳಿವೆ.

'ಮಿನಾಜ್ ಹಾಗೂ ಇತರರನ್ನು ಜೈಲಿನಲ್ಲಿ ಭೇಟಿಯಾಗಿದ್ದವರ ವಿಚಾರಣೆ ನಡೆಸಲಾಗಿದೆ. ಕೆಲ ತಾಂತ್ರಿಕ ಪುರಾವೆಗಳನ್ನು ಆಧರಿಸಿ ಬಳ್ಳಾರಿ, ಕಲಬುರಗಿಯಲ್ಲಿ ಶೋಧ ನಡೆಸಲಾಗಿದೆ. ನಾಲ್ವರ ಕಸ್ಟಡಿ ಅವಧಿ ಶನಿವಾರ ಮುಕ್ತಾಯಗೊಂಡಿದ್ದು, ಅವರನ್ನು ಕೋರ್ಟ್‌ಗೆ ಹಾಜರುಪಡಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.



ಎನ್‌ಐಎ ಬಿಡುಗಡೆ ಮಾಡಿರುವ ಶಂಕಿತನ ಫೋಟೊ

ಮತ್ತಷ್ಟು ಫೋಟೊ ಬಿಡುಗಡೆ: ಕೆಫೆಯಲ್ಲಿ ಬಾಂಬ್ ಇರಿಸಿದ್ದ ಶಂಕಿತನ ಮತ್ತಷ್ಟು ಫೋಟೊಗಳನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಶನಿವಾರ ಬಿಡುಗಡೆ ಮಾಡಿದ್ದಾರೆ. ಶಂಕಿತನ ಸುಳಿವು ನೀಡುವಂತೆ ಜನರನ್ನು ಕೋರಿದ್ದಾರೆ.

ಬೆಂಗಳೂರು ಬ್ರೂಕ್‌ಫೀಲ್ಡ್‌ನಲ್ಲಿರುವ ಕೆಫೆಯಲ್ಲಿ ಮಾರ್ಚ್ 1ರಂದು ಬಾಂಬ್ ಸ್ಫೋಟ ನಡೆದಿತ್ತು. ಬಳಿಕ ಶಂಕಿತ, ಬಳ್ಳಾರಿ ಹಾಗೂ ಅಲ್ಲಿಂದ ಕಲಬುರಗಿಗೆ ಹೋಗಿರುವ ಮಾಹಿತಿ ಎನ್‌ಐಎ ಅಧಿಕಾರಿಗಳಿಗೆ ಲಭ್ಯವಾಗಿದೆ. ಜೊತೆಗೆ, ಶಂಕಿತ ಹೊರ ರಾಜ್ಯಕ್ಕೆ ಪರಾರಿಯಾಗಿರುವ ಬಗ್ಗೆಯೂ ಅಧಿಕಾರಿಗಳಿಗೆ ಶಂಕೆ ಇದೆ.

ಬಳ್ಳಾರಿ, ಕಲಬುರಗಿ, ಹೊಸಪೇಟೆ ಹಾಗೂ ಇತರೆ ನಗರಗಳಲ್ಲಿ ಶನಿವಾರ ಸುತ್ತಾಡಿದ ಎನ್‌ಐಎ ಅಧಿಕಾರಿಗಳು ಹಾಗೂ ಸ್ಥಳೀಯ ಪೊಲೀಸರು, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದರು. ಶಂಕಿತ ಉಗ್ರ ಓಡಾಡಿದ್ದ ಸ್ಥಳಗಳನ್ನು ಗುರುತಿಸಿ, ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿದರು.

'ವ್ಯವಸ್ಥಿತವಾಗಿ ಶಂಕಿತ ಕೆಫೆಯಲ್ಲಿ ಬಾಂಬ್ ಇರಿಸಿದ್ದ. ಈತ ಎಲ್ಲೆಲ್ಲಿ ಓಡಾಡಿದ್ದ? ಯಾರನ್ನೆಲ್ಲ ಭೇಟಿಯಾಗಿದ್ದ? ಎಂಬ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಆದರೆ, ಶಂಕಿತ ಯಾರು? ಆತನ ವಿಳಾಸವೇನು? ಎಂಬುದು ಮಾತ್ರ ಪತ್ತೆಯಾಗುತ್ತಿಲ್ಲ. ಶಂಕಿತ ಉಗ್ರರೂ ಈ ಬಗ್ಗೆ ಮಾಹಿತಿ ಬಾಯ್ಬಿಡುತ್ತಿಲ್ಲ' ಎಂದು ತನಿಖಾ ಸಂಸ್ಥೆಯ ಮೂಲಗಳು ಹೇಳಿವೆ.

ಆರೋಪಿಗಾಗಿ ಕಲಬುರಗಿಯಲ್ಲಿ ಎನ್‌ಐಎ ಶೋಧ

ಕಲಬುರಗಿ: ಬೆಂಗಳೂರಿನ ದಿ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಶಂಕಿತ ಆರೋಪಿಗಳಿಗಾಗಿ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ತಂಡ ಶನಿವಾರ ಕಲಬುರಗಿಗೆ ಬಂದು ಬೆಳಿಗ್ಗೆಯಿಂದ ಹಲವು ಕಡೆ ಶೋಧ ನಡೆಸಿತು.

ಶಂಕಿತರ ಜಾಡು ಹಿಡಿದು ಬಳ್ಳಾರಿಯಿಂದ ಕಲಬುರುಗಿಗೆ ಬಂದ ಎನ್‌ಐಎ ಅಧಿಕಾರಿಗಳು ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ನಗರದ ವಿವಿಧೆಡೆ ಪರಿಶೀಲನೆ ನಡೆಸಿದರು. ಬಸ್ ಮತ್ತು ರೈಲು ನಿಲ್ದಾಣಗಳಲ್ಲಿನ ಸಿಸಿಟಿವಿ ಕ್ಯಾಮೆರಾದ ದೃಶ್ಯಗಳನ್ನು ಪರಿಶೀಲಿಸಿ, ಒಂದು ವಾರದ ಹಿಂದಿನಿಂದ ದಾಖಲಾದ ವಿಡಿಯೊ ದೃಶ್ಯಗಳ ಹಾರ್ಡ್‌ಡಿಸ್ಕ್ ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸ್ಫೋಟದ ಬಳಿಕ ಬಳಿಕ ಬಳ್ಳಾರಿಯಲ್ಲಿ ಕಾಣಿಸಿಕೊಂಡ ಶಂಕಿತ, ಅಲ್ಲಿಂದ ಇನ್ನೊಬ್ಬನ ಜತೆಗೂಡಿ ಬಳ್ಳಾರಿ ಬಸ್ ನಿಲ್ದಾಣದಲ್ಲಿ ಕಾಯ್ದಿರಿಸದ ಟಿಕೆಟ್ ಪಡೆದು ಕೆಎ 32 ಎಫ್ 1885 ನಾನ್ ಎಸಿ ಸ್ಲೀಪರ್ ಬಸ್‌ನಲ್ಲಿ ಕಲಬುರಗಿಗೆ ಬಂದಿದ್ದಾರೆ ಎನ್ನಲಾಗಿದೆ. ಒಬ್ಬ ರಾಮಮಂದಿರ ವೃತ್ತ, ಮತ್ತೊಬ್ಬ ಕೇಂದ್ರ ಬಸ್ ನಿಲ್ದಾಣದಲ್ಲಿ ಇಳಿದುಕೊಂಡ ಶಂಕೆ ವ್ಯಕ್ತವಾಗಿದೆ.

ಎನ್‌ಐಎ ಅಧಿಕಾರಿಗಳು ಬಸ್ ನಿಲ್ದಾಣದಲ್ಲಿನ 18 ಸಿ.ಸಿ. ಟಿವಿ ಕ್ಯಾಮೆರಾದ ದೃಶ್ಯಗಳನ್ನು ಪರಿಶೀಲನೆ ನಡೆಸಿ, ನಂತರ ಬಸ್ ಚಾಲಕ ಮತ್ತು ನಿರ್ವಾಹಕನನ್ನು ವಿಚಾರಣೆ ನಡೆಸಿ ಅವರಿಂದ ಮಾಹಿತಿ ಕಲೆಹಾಕಿದರು. ಈ ಇಬ್ಬರಲ್ಲಿ ಒಬ್ಬ ಬಾಂಬ್ ಇರಿಸಿದವ ಇರಬಹುದು ಎನ್ನಲಾಗಿದೆ.

ರೈಲು ನಿಲ್ದಾಣದ ಸಮೀಪ, ಹಳೆ ಜೇವರ್ಗಿ ರಸ್ತೆ ಸೇರಿ ಹಲವೆಡೆಯ ಲಾಡ್ಜ್‌ಗಳಲ್ಲಿ ಶಂಕಿತ ತಂಗಿರುವ ಅನುಮಾನದಲ್ಲಿ ಶೋಧ ಕಾರ್ಯ ನಡೆಸಲಾಗಿದೆ. ನಗರದ ಕೆಲವು ಪ್ರಮುಖ ಬಡಾವಣೆಗಳಲ್ಲಿ ಎನ್‌ಐಎ ತಂಡ ಪರಿಶೀಲಿಸಿ ಮಾಹಿತಿ ಕಲೆ ಹಾಕಿದೆ ಎಂದು ತಿಳಿದು ಬಂದಿದೆ.

'ಕೆಐಎಡಿಬಿ ನಿವೇಶನ ಪಾರದರ್ಶಕ ಹಂಚಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೈಗಾರಿಕೆ ಪ್ರದೇಶ ಹಾಗೂ ನಾಗರಿಕ ಸೌಲಭ್ಯಗಳಿಗೆ (ಸಿ.ಎ) ಮೀಸಲಿಟ್ಟ ನಿವೇಶನಗಳನ್ನು ಪಾರದರ್ಶಕವಾಗಿ ಹಂಚಿಕೆ ಮಾಡಲಾಗುತ್ತಿದೆ ಎಂದು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಮಹೇಶ್ ಹೇಳಿದ್ದಾರೆ.

'ಪ್ರಜಾವಾಣಿ'ಯ ಮಾರ್ಚ್ 9ರ ಸಂಚಿಕೆಯಲ್ಲಿ 'ಜಮೀನು ಹಂಚಿಕೆಗೆ ಕೆಐಎಡಿಬಿ ತರಾತುರಿ' ಶೀರ್ಷಿಕೆಯಡಿ ಪ್ರಕಟವಾದ ವರದಿಗೆ ಪ್ರತಿಕ್ರಿಯಿಸಿದ ಅವರು, ಹೂಡಿಕೆ ಪ್ರಸ್ತಾವ, ಹೂಡಿಕೆ ಮೊತ್ತ, ಉತ್ಪಾದನೆ, ರಫ್ತು ಸಾಧ್ಯತೆಗಳು, ಉದ್ಯೋಗ ಸೃಷ್ಟಿ ಇವುಗಳನ್ನು ಗಮನಿಸಿಯೇ ನಿಯಮಾನುಸಾರ ನಿವೇಶನ ಹಂಚಲಾಗುತ್ತಿದೆ ಎಂದಿದ್ದಾರೆ.

ಬೆಂಗಳೂರು, ಮೈಸೂರು, ಹಾಸನ, ಕಲಬುರಗಿ, ರಾಯಚೂರು, ಕೋಲಾರ, ಚಾಮರಾಜನಗರ ಸೇರಿದಂತೆ 12 ಕೆಐಎಡಿಬಿ ವಿಭಾಗಗಳಲ್ಲಿ ಹಂಚಿಕೆಯಾಗದಿದ್ದ ಸಿ.ಎ.ನಿವೇಶನಗಳಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ಹಂಚಿಕೆ ಮಾಡಲಾಗಿದೆ. ಹಲವೆಡೆ ಸಿ.ಎ ನಿವೇಶನಗಳ ಹಂಚಿಕೆ ದಶಕಗಳಿಂದ ನನೆಗುದಿಗೆ ಬಿದ್ದಿತ್ತು. ಇದನ್ನು ಇತ್ಯರ್ಥಪಡಿಸಲು 18 ದಿನ ಸಮಯ ಕೊಟ್ಟು ಅರ್ಜಿ ಆಹ್ವಾನಿಸಿತ್ತು. 193 ನಿವೇಶನಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತಾದರೂ, ಹಂಚಿಕೆ ಮಾಡಿದ್ದು 41 ನಿವೇಶನಗಳಿಗೆ ಮಾತ್ರ. ಒಂದೇ ಅರ್ಜಿ ಸಲ್ಲಿಕೆಯಾದ ಪ್ರಕರಣಗಳಲ್ಲಿ ಹಂಚಿಕೆಯನ್ನೇ ಮಾಡಿಲ್ಲ. ದಾಖಲೆ ಇಲ್ಲ ಎನ್ನುವ ಕಾರಣಕ್ಕೆ ಯಾವ ಅರ್ಜಿಯನ್ನೂ ತಿರಸ್ಕರಿಸಿಲ್ಲ ಎಂದಿದ್ದಾರೆ.

ಸಿ.ಎ. ಮತ್ತು ಅಮೆನಿಟಿ ನಿವೇಶನಗಳ ಹಂಚಿಕೆ ಮಾಡುವಾಗ ಪರಿಶಿಷ್ಟ ಜಾತಿ, ಪಂಗಡಗಳ ಉದ್ಯಮಿಗಳಿಗೆ ಶೇ 24.1 ನಿವೇಶನ ಮೀಸಲಿಟ್ಟಿದ್ದು, ಇಲ್ಲೂ ಸಾಮಾಜಿಕ ನ್ಯಾಯ ಪಾಲಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಿ.ಎಂ ನೇತೃತ್ವದ ಉನ್ನತ ಮಟ್ಟದ ಅನುಮೋದನಾ ಸಮಿತಿಯ ಎರಡು ಸಭೆ, ಕೈಗಾರಿಕಾ ಸಚಿವರ ಅಧ್ಯಕ್ಷತೆಯ ಏಕ ಗವಾಕ್ಷಿ ಸಮಿತಿ ಐದು ಸಭೆಗಳನ್ನು ನಡೆಸಿದೆ. ಈ ಸಭೆಗಳಲ್ಲಿ ಬೆಂಗಳೂರು ಹೊರತುಪಡಿಸಿದ 229 ಯೋಜನೆಗಳಿಗೆ ಮಂಜೂರಾತಿ ನೀಡಿದ್ದು, 2,016 ಎಕರೆ ಭೂಮಿಯನ್ನು ಹಂಚಿಕೆ ಮಾಡಲಾಗಿದೆ. ಬೆಂಗಳೂರು ಸುತ್ತಮುತ್ತ ಹಂಚಿಕೆ ಮಾಡಿರುವುದು 275 ಎಕರೆ ಮಾತ್ರ ಎಂದು ವಿವರಿಸಿದ್ದಾರೆ.

ನಿಪ್ಪಾಣಿ ಶ್ರೀರಾಮ ಮಂದಿರ ಸ್ಫೋಟಿಸುವ ಬೆದರಿಕೆ

ಪ್ರಜಾವಾಣಿ ವಾರ್ತೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಇಲ್ಲಿನ ಐತಿಹಾಸಿಕ ಶ್ರೀರಾಮ ಮಂದಿರವನ್ನು ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಒಡ್ಡಿದ ಎರಡು ಪತ್ರಗಳು ದೇವಸ್ಥಾನದಲ್ಲಿ ಸಿಕ್ಕಿವೆ. ಒಂದು ಪತ್ರ ಫೆಬ್ರುವರಿ 7ರಂದು, ಇನ್ನೊಂದು ಪತ್ರ ಫೆಬ್ರುವರಿ 28ರಂದು ಜನರ ಕೈಗೆ ಸಿಕ್ಕಿವೆ. ಆದರೆ, ಮಾರ್ಚ್ 7ರಂದು ನಿಪ್ಪಾಣಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮಾರ್ಚ್ 20 ಅಥವಾ 21ರಂದು ಮಂದಿರವನ್ನು ಸ್ಫೋಟಿಸುವುದಾಗಿ ಪತ್ರದಲ್ಲಿ ಬರೆಯಲಾಗಿದೆ. ಇದರಿಂದ ನೂರು ವರ್ಷ ಹಳೆಯದಾದ ಈ ಮಂದಿರಕ್ಕೆ ಈಗ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಬೆದರಿಕೆ ಪತ್ರದ ಸಂಗತಿ ಶನಿವಾರ ಬಹಿರಂಗವಾಗಿದ್ದರಿಂದ ನಗರದ ಜನ ಕೆಲಕಾಲ ಆತಂಕಕ್ಕೆ ಒಳಗಾದರು.

'ಮೊದಲ ಪತ್ರ ಫೆಬ್ರುವರಿ 7ರಂದು ಮಧ್ಯಾಹ್ನ 1.30ಕ್ಕೆ ಶ್ರೀರಾಮ ಮಂದಿರದ ಗರ್ಭಗುಡಿಯಲ್ಲಿ ಪಾಕೀಟ್‌ನಲ್ಲಿ ಮಂದಿರದ ಪೂಜಾರಿ ಸುರೇಶ ದೇಶಪಾಂಡೆ ಅವರಿಗೆ ಸಿಕ್ಕಿತ್ತು. ಎರಡನೇಯ ಪತ್ರ ಫೆಬ್ರುವರಿ 28ರಂದು ಬೆಳಿಗ್ಗೆ 6.30ಕ್ಕೆ ಶ್ರೀರಾಮ ಮಂದಿರದ ಎದುರು ಇರುವ ಹನುಮ ಮಂದಿರದ ಕಟ್ಟೆಯ ಮೇಲೆ ಸಿಕ್ಕಿದೆ' ಎಂದು ಮಂದಿರದ ಸಮಿತಿಯ ಅಧ್ಯಕ್ಷ ಆನಂದ ಸೋಲಾಪೂರಕರ 'ಪ್ರಜಾವಾಣಿ'ಗೆ ತಿಳಿಸಿದರು.



ನಿಪ್ಪಾಣಿಯ ಶ್ರೀರಾಮ ಮಂದಿರ

ಶ್ರೀರಾಮ ಮಂದಿರದ ಎದುರು ಇರುವ ಹನುಮ ಮಂದಿರದ ಜೀರ್ಣೋದ್ಧಾರ ಕಾರ್ಯ ನಡೆದಿದ್ದು, ಮಾರ್ಚ್ 19 ಹಾಗೂ 20ರಂದು ಕಳಸಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

'ಬೆದರಿಕೆ ಕಾರಣ 13 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು ಪೊಲೀಸ್ ಕಾವಲು ನಿಯೋಜಿಸಲಾಗಿದೆ. ಜನ ಆತಂಕಪಡುವ ಅಗತ್ಯವಿಲ್ಲ' ಎಂದು ಸಿಪಿಐ ಬಿ.ಎಸ್.ತಳವಾರ ಹೇಳಿದ್ದಾರೆ.

'ಅಯೋಧ್ಯೆಯಲ್ಲಿ ಶ್ರೀರಾಮ ಪ್ರತಿಮೆ ಪ್ರತಿಷ್ಠಾಪನೆಯ ನಂತರ ಸ್ಥಳೀಯ ಶ್ರೀರಾಮ ಸೇವಾ ಹಿಂದೂಸ್ತಾನ್ ಹಾಗೂ ವಿವಿಧ ಸಂಘಟನೆಗಳು ಅದ್ದೂರಿಯಾಗಿ ಮೆರವಣಿಗೆ ನೆರವೇರಿಸಿದ್ದರು. ನಂತರದ ದಿನಗಳಲ್ಲಿ ಈ ಪತ್ರಗಳು ಸಿಕ್ಕಿವೆ. ತನಿಖೆ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

ಎರಡನೇ ಪತ್ರದಲ್ಲಿ 'ಸಂಜಯ ಕುನ್ನೂರೆ' ಒಳ್ಳೆಯ ಮನುಷ್ಯ ಇದ್ದಾನೆ' ಎಂಬ ಸಾಲೂ ಇದೆ. ಪತ್ರಗಳು ಹಿಂದಿ ಭಾಷೆಯ ಲ್ಲಿವೆ.

ಪತ್ರಗಳಲ್ಲಿ ಏನಿದೆ?

'ನಮ್ಮ ಬಾಬರಿ ಮಸೀದಿಯನ್ನು ನೀವು ನೆಲಸಮಗೊಳಿಸಿದ್ದೀರಿ. ನಾವು ಸುಮ್ಮನೆ ಹೇಗೆ ಕುಳಿತುಕೊಳ್ಳಲು ಸಾಧ್ಯ? ಮೋದಿ ಮೋದಿ ಎಂದು ಏಕೆ ಗುಂಗು ಹಚ್ಚಿಕೊಂಡಿದ್ದೀರಿ. ಅಲ್ಲಾಹ್ ಇಚ್ಛಿಸಿದಲ್ಲಿ ಭಾಷಣ ಮಾಡುವಾಗಲೇ ದಾಳಿಗೆ ತುತ್ತಾಗಿ ಮೋದಿ ಸಾಯುವನು. ನೀವು ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಿದ್ದೀರಿ. ಆದರೆ, ಇಲ್ಲಿ ಮೆರವಣಿಗೆ ತೆಗೆದು ನಮ್ಮ ಗಲ್ಲಿಯಲ್ಲಿ ಬಂದು 'ಜೈರಾಮ' ಘೋಷಣೆಗಳನ್ನು ಕೂಗಿ ನಮ್ಮನ್ನೇಕೆ ರೇಗಿಸುತ್ತೀರಿ? ಈಗ ಸಾಕು ಮಾಡಿ. ಕರ್ನಾಟಕ, ಪೂರ್ಣ ಭಾರತದ ವಿನಾಶ ನಿಪ್ಪಾಣಿಯಿಂದ ಆರಂಭಗೊಳ್ಳಲಿದೆ. ಈ ಮಂದಿರವನ್ನು ನಾವು ಸ್ಫೋಟಿಸುತ್ತೇವೆ. ಈ ಮಂದಿರದ ಸಮಿತಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಕೇಳಿದ್ದೇವೆ. ಈ ಮಂದಿರದ ಎಲ್ಲರಿಗೂ ಗುಂಡು ಹಾರಿಸಲಿದ್ದೇವೆ. ಇದು ಬಿಜೆಪಿ, ಆರ್‌ಎಸ್‌ಎಸ್‌ಗಳ ಅಡ್ಡೆಯಾಗಿದೆ. ನಿಮಗೆ ನಮ್ಮ 10 ನಿಮಿಷ ಅಜಾನ್‌ನ ಲೌಡ್‌ಸ್ಪೀಕರ್ ಇಷ್ಟ ಆಗುವುದಿಲ್ಲ. ನೀವು ದೊಡ್ಡ ಸೌಂಡ್ ಹಾಕಿ ಕುಣಿಯುವುದು ನಿಮಗೆ ಸರಿ ಅನಿಸುತ್ತದೆಯೇ? ದೇಶ ಸ್ವಾತಂತ್ರ್ಯ ಬಂದಾಗಿನಿಂದ ನಾವು ಇಲ್ಲೇ ಇದ್ದೇವೆ. ಈಗ ಏಕಾಏಕಿ ನಿಮಗೆ ಶತ್ರುಗಳು ಆಗಿದ್ದೇವೆಯೇ?' ಎಂದು ಫೆ.7ರ ಪತ್ರದಲ್ಲಿ ಬರೆಯಲಾಗಿದೆ.

'ಈಗ ಶುರುವಾಗಿದೆ. ಮುಂದೆ ಇನ್ನೂ ಧಮಾಕಾ ಆಗಲಿವೆ. ಮಂದಿರದ ಮುಖ್ಯಸ್ಥರಿಗೆ ನಾವು ನಿಧಾನವಾಗಿ ಸಾಯುವ ವಿಷ ಕೊಟ್ಟಿದ್ದೇವೆ. ಅವನಂತೂ ಸಾಯುತ್ತಾನೆ. ಬಾಕಿ ಜನರೂ ಸಿದ್ಧರಾಗಿ. ಮಂದಿರದ ಮುಖ್ಯಸ್ಥ ನಾಯಿ ಇದ್ದಹಾಗೆ. ಅವನಿಗೆ ಪೂಜಾರಿಗೆ, ಕಮಿಟಿ ಸದಸ್ಯರಿಗೆ ಪ್ರಸಾದದಲ್ಲಿ ವಿಷ ಸೇರಿಸಿ ಕೊಡಲಾಗುವುದು. ಯಾರಿಗೂ ಗೊತ್ತೂ ಆಗುವುದಿಲ್ಲ. ಮಂದಿರ ಹತ್ತಿರದಲ್ಲೇ ಪೆಟ್ರೋಲ್ ಪಂಪ್ ಇದೆ. ಸ್ಫೋಟಗೊಂಡಾಗ ದೊಡ್ಡ ಧಮಾಕಾ ಆಗಲಿದೆ. ಅಲ್ಲಾಹ್‌ನಿಗೆ ನಾವು ಕುರುಬಾನಿ ಕೊಡಬೇಕಿದೆ. ಅವರಿಗೆ ಬ್ರಾಹ್ಮಣ ಇಷ್ಟವಾಗುತ್ತಾರೆ. ಅವರನ್ನೇ ಕುರುಬಾನಿ ಕೊಡುತ್ತೇವೆ' ಎಂದು ಎರಡನೇ ಪತ್ರದಲ್ಲಿದೆ.

> ರಾಮಮಂದಿರಕ್ಕೆ ಬೆದರಿಕೆ ಪತ್ರ ಬಂದಿರುವುದರಿಂದ ಎಲ್ಲಾ ದೇವಾಲಯಗಳಲ್ಲಿ ಭದ್ರತೆ ಹೆಚ್ಚಿಸುವಂತೆ ಮುಜರಾಯಿ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದೇನೆ
>
> **ರಾಮಲಿಂಗಾ ರೆಡ್ಡಿ**
> ಮುಜರಾಯಿ ಮತ್ತು ಸಾರಿಗೆ ಸಚಿವ

'ಸಿಲಿಂಡರ್ ದರ ಏರಿಸಲ್ಲ ಎಂದು ಪ್ರಧಾನಿ ಭರವಸೆ ನೀಡಲಿ'

ಚೆನ್ನೈ (ಪಿಟಿಐ): ಕೇಂದ್ರ ಸರ್ಕಾರವು ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ₹100 ಇಳಿಕೆ ಮಾಡಿರುವುದನ್ನು ಸ್ವಾಗತಿಸಿರುವ ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ, 'ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಸಿಲಿಂಡರ್ ದರವನ್ನು ಏರಿಕೆ ಮಾಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಬೇಕು' ಎಂದು ಶನಿವಾರ ಹೇಳಿದರು.

ಲೋಕಸಭಾ ಚುನಾವಣೆಯ ಪೂರ್ವಭಾವಿಯಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೇಶಕ್ಕೆ ಐದು ಗ್ಯಾರಂಟಿಗಳನ್ನು ನೀಡಿದ್ದಾರೆ. ಇವುಗಳು ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಇರಲಿವೆ ಎಂದು ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಫೆಬ್ರುವರಿ 22ರಿಂದ ಮಾರ್ಚ್ 7ರ ನಡುವೆ ಮೋದಿ ಅವರು ದೇಶದಾದ್ಯಂತ ₹5.90 ಲಕ್ಷ ಕೋಟಿ ವೆಚ್ಚದ ಯೋಜನೆಗಳನ್ನು ಘೋಷಿಸಿದ್ದರು. ಇದರಲ್ಲಿ ತಮಿಳುನಾಡಿಗೆ ಘೋಷಿಸಿರುವ ₹17,300 ಕೋಟಿಯ ಯೋಜನೆಯೂ ಸೇರಿದೆ. ಆದರೆ ಈ ಯೋಜನೆಗಳ ಕುರಿತು ಕೇಂದ್ರ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಈ ಘೋಷಣೆಗಳು ಕೇವಲ ಕಾಗದದ ಹೂವುಗಳಂತೆ' ಎಂದು ಅವರು ಲೇವಡಿ ಮಾಡಿದರು.

ಬಿಜೆಪಿ ತೊರೆದ ಸಂಸದ ಕುನಾರ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಝಾರ್‌ಗ್ರಾಮ್ ಕ್ಷೇತ್ರದ ಬಿಜೆಪಿ ಸಂಸದ ಕುನಾರ್ ಹೆಮ್‌ಬ್ರಮ್ ಅವರು ಶನಿವಾರ ಲೋಕಸಭೆಯ ಸದಸ್ಯತ್ವ ಮತ್ತು ಪಕ್ಷದ ಸದಸ್ಯತ್ವಕ್ಕೂ ರಾಜೀನಾಮೆ ಸಲ್ಲಿಸಿದ್ದಾರೆ.

ಮೊದಲ ಬಾರಿಗೆ ಸಂಸದರಾಗಿದ್ದ ಹೆಮ್‌ಬ್ರಮ್, 'ವೈಯಕ್ತಿಕ ಕಾರಣಗಳಿಂದ ಈ ನಿರ್ಧಾರ ತೆಗೆದುಕೊಂಡಿದ್ದೇನೆ. ರಾಜಕಾರಣದಲ್ಲಿ ಮುಂದುವರಿಯುವ ಆಸಕ್ತಿ ಇಲ್ಲ. ಯಾವುದೇ ಪಕ್ಷವನ್ನು ಸೇರುತ್ತಿಲ್ಲ. ಪುಸ್ತಕ ಬರವಣಿಗೆ ಮತ್ತು ಸಮಾಜ ಸೇವೆಯಲ್ಲಿ ನನ್ನ ಸಮಯ ಕಳೆಯಲಿದ್ದೇನೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.


ಬಿಜೆಪಿ ಕಾರ್ಯಕ್ರಮ: ಕಾಲ್ತುಳಿತ– ಮಹಿಳೆ ಸಾವು

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿ ಬಿಜೆಪಿ ಶನಿವಾರ ಬೆಳಿಗ್ಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಲ್ತುಳಿತ ಉಂಟಾಗಿ ಒಬ್ಬ ಮಹಿಳೆ ಮೃತಪಟ್ಟು, ಇತರ ನಾಲ್ವರು ಮಹಿಳೆಯರು ಗಾಯಗೊಂಡ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಕ್ರಮದ ವೇಳೆ ಕಟ್ಟಡ ಕಾರ್ಮಿಕರಿಗೆ ಪಾತ್ರೆಗಳನ್ನು ವಿತರಿಸಲಾಗುತ್ತಿತ್ತು. ಇದರಿಂದ ಸ್ಥಳದಲ್ಲಿ ಭಾರಿ ಜನಸ್ತೋಮ ನೆರೆದಿತ್ತು. ಮನು ತುಳಶಿರಾಮ್ ರಜಪೂತ್ ಎಂಬ ಮಹಿಳೆ ಕಾಲ್ತುಳಿತದಲ್ಲಿ ಕುಸಿದು ಬಿದ್ದರು. ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು ಎಂದು ಸಕ್ಕರ್‌ದಾರ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮೀಸಲಾತಿ: ಶೇ 50ರ ಮಿತಿ ತೆಗೆಯುತ್ತೇವೆ'

ಜನರ ಸ್ಥಿತಿಗತಿ ತಿಳಿಯಲು ಜಾತಿ ಗಣತಿ, ಸಮೀಕ್ಷೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆ



ರಾಹುಲ್ ಗಾಂಧಿ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಜಾತಿ ಗಣತಿ ಮತ್ತು ಆರ್ಥಿಕ ಸ್ಥಿತಿಗತಿ ಆಧರಿಸಿ ಮೀಸಲಾತಿ ಮೇಲಿನ ಶೇ 50ರಷ್ಟು ಮಿತಿಯನ್ನು ತೆಗೆದು ಹಾಕುತ್ತೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಪ್ರತಿಪಾದಿಸಿದ್ದಾರೆ.

'ಯಾರು ಬಡವರು ಎಂದು ನಾವು ಎಂದಾದರೂ ಯೋಚಿಸಿದ್ದೀವಾ? ಎಷ್ಟು ಮಂದಿ ಬಡವರಿದ್ದಾರೆ ಮತ್ತು ಅವರ ಸ್ಥಿತಿ ಹೇಗಿದೆ? ಇವೆಲ್ಲವನ್ನೂ ಲೆಕ್ಕ ಹಾಕುವ ಅಗತ್ಯವಿಲ್ಲವೇ?' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹೀಗಾಗಿ ಕಾಂಗ್ರೆಸ್ ಘೋಷಣೆಯು 'ಲೆಕ್ಕಿಸು' ಎಂಬುದಾಗಿದ್ದು, ಇದು ನ್ಯಾಯದ ಕಡೆಗೆ ಮೊದಲ ಹೆಜ್ಜೆಯಾಗುತ್ತದೆ ಎಂದು ಅವರು ಹೇಳಿದ್ದಾರೆ.

'ಬಿಹಾರದಲ್ಲಿ ನಡೆಸಿದ ಜಾತಿ ಸಮೀಕ್ಷೆಯು ಶೇ 88ರಷ್ಟು ಬಡ ಜನರು ದಲಿತ, ಬುಡಕಟ್ಟು, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು ಎಂಬುದನ್ನು ಬಹಿರಂಗಪಡಿಸಿದೆ. ಬಿಹಾರದ ಅಂಕಿ ಅಂಶಗಳು ದೇಶದ ನೈಜ ಚಿತ್ರಣದ ಸಣ್ಣ ನೋಟವಾಗಿದೆ. ದೇಶದ ಬಡ ಜನರು ಯಾವ ಸ್ಥಿತಿಯಲ್ಲಿದ್ದಾರೆ ಎಂಬ ಕಲ್ಪನೆಯೂ ನಮಗೆ ಇಲ್ಲ' ಎಂದಿದ್ದಾರೆ.

'ಹೀಗಾಗಿಯೇ ನಾವು ಜಾತಿ ಗಣತಿ ಮತ್ತು ಆರ್ಥಿಕ ಸ್ಥಿತಿಗತಿಯ ಸಮೀಕ್ಷೆ ಎಂಬ ಎರಡು ಐತಿಹಾಸಿಕ ಕ್ರಮಗಳನ್ನು ಕೈಗೊಳ್ಳಲಿದ್ದೇವೆ. ಅದರ ಆಧಾರದ ಮೇಲೆ ಮೀಸಲಾತಿಗೆ ಸಂಬಂಧಿಸಿದಂತೆ ಇರುವ ಶೇ 50ರ ಮಿತಿಯನ್ನು ತೆಗೆಯುತ್ತೇವೆ' ಎಂದು ಅವರು ಭರವಸೆ ನೀಡಿದ್ದಾರೆ.

'ಇದರಿಂದ ದೇಶದ ಜನರ ವಾಸ್ತವ ಸ್ಥಿತಿಗತಿ ಗೊತ್ತಾಗುತ್ತದೆ. ಎಲ್ಲರಿಗೂ ಸರಿಯಾದ ಮೀಸಲಾತಿ, ಹಕ್ಕುಗಳು ಮತ್ತು ಹಂಚಿಕೆಯನ್ನು ಒದಗಿಸಲು ಸಾಧ್ಯವಾಗುತ್ತದೆ' ಎಂದು ಅವರು ಹೇಳಿದ್ದಾರೆ.


'ಅಲ್ಲದೆ ಬಡವರಿಗೆ ಸರಿಯಾದ ನೀತಿ, ಯೋಜನೆಗಳನ್ನು ಮಾಡಲು ಇದು ಸಹಾಯಕವಾಗುತ್ತದೆ. ಶಿಕ್ಷಣ, ಸಂಪಾದನೆ, ಔಷಧಿಗಾಗಿ ಪರದಾಡುವುದರಿಂದ ಅವರನ್ನು ಪಾರು ಮಾಡಬಹುದಾಗಿದೆ. ಅಲ್ಲದೆ ಅವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ಜೋಡಿಸಲೂ ನೆರವಾಗುತ್ತದೆ' ಎಂದು ರಾಹುಲ್ ವಿವರಿಸಿದ್ದಾರೆ.

'ಜಾತಿ ಗಣತಿ ನಿಮ್ಮೆಲ್ಲರ ಹಕ್ಕಾಗಿದ್ದು, ನಿಮ್ಮನ್ನು ಕಷ್ಟಗಳ ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುತ್ತದೆ. ಆದ್ದರಿಂದ ಇದಕ್ಕಾಗಿ ಧ್ವನಿ ಎತ್ತಿ' ಎಂದು ಅವರು ಕರೆ ನೀಡಿದ್ದಾರೆ.

'ಸಾಮಾಜಿಕ– ಆರ್ಥಿಕ ಜಾತಿ ಗಣತಿಯು ಜನರಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸರ್ಕಾರಕ್ಕೆ ನೆರವಾಗುತ್ತದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಹವನ) ಜೈರಾಮ್ ರಮೇಶ್ ತಿಳಿಸಿದ್ದಾರೆ.

'ಇದರಿಂದ ಪ್ರತಿ ಕುಟುಂಬದ ಆಸ್ತಿ, ಸಾಲದ ಹೊರೆ, ಜಮೀನು, ಆದಾಯ ಒಳಗೊಂಡಂತೆ ಸಮಗ್ರ ಆರ್ಥಿಕ ಸ್ಥಿತಿಗತಿಯ ಚಿತ್ರಣ ದೊರೆಯುತ್ತದೆ. ದೇಶದಲ್ಲಿ ಈಗಿರುವ ಜಾತಿಗಳು, ಯಾವ ಜಾತಿ ಬಲಿಷ್ಠವಾಗಿದೆ ಮತ್ತು ಯಾವುದು ಬಲಹೀನವಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ ಎಂದು ಅವರು ಹೇಳಿದ್ದಾರೆ.

ದೇಶದ ಅಭಿವೃದ್ಧಿಯಲ್ಲಿ ಕಾಂಗ್ರೆಸ್ ಪಾತ್ರವಿದೆ: ಖರ್ಗೆ



ಮಲ್ಲಿಕಾರ್ಜುನ ಖರ್ಗೆ

ಮುಂಬೈ (ಪಿಟಿಐ): 'ದೇಶದ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ತಮ್ಮ ಪಕ್ಷ ಪ್ರಮುಖ ಪಾತ್ರ ವಹಿಸಿದ್ದರೂ ಇದರ ಶ್ರೇಯವನ್ನು ಆಡಳಿತಾರೂಢ ಬಿಜೆಪಿ ಪಡೆಯಲು ಪ್ರಯತ್ನಿಸುತ್ತಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಮುಂಬೈ ಕಾಂಗ್ರೆಸ್ ಕಾರ್ಯಕರ್ತರ ಒಂದು ದಿನದ ಸಮಾವೇಶವನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಅವರು ಶನಿವಾರ ಮಾತನಾಡಿದರು.

'ಮುಂಬೈನಲ್ಲಿ ಕಾಂಗ್ರೆಸ್ ಬಲಗೊಂಡರೆ ಮಾತ್ರ ರಾಷ್ಟ್ರ ಮಟ್ಟದಲ್ಲಿ ಪಕ್ಷ ಬಲಿಷ್ಠವಾಗಲು ಸಾಧ್ಯ. ಪಕ್ಷವನ್ನು ಪುನರ್ ಸಂಘಟಿಸುವ ಭಾರಿ ಸವಾಲು ನಗರ ಘಟಕದ ಹೆಗಲಿಗಿದೆ. ಪಕ್ಷ ಬಲಪಡಿಸುವುದು ಮುಂಬೈನಲ್ಲಿರುವ ಪ್ರತಿಯೊಬ್ಬ ಕಾರ್ಯಕರ್ತರ ಜವಾಬ್ದಾರಿಯಾಗಿದೆ' ಎಂದು ಖರ್ಗೆ ಹೇಳಿದರು.

'1885ರ ಡಿಸೆಂಬರ್ 28ರಂದು ಇಲ್ಲಿ ಪಕ್ಷ ಸ್ಥಾಪನೆ ಮಾಡಿದಾಗಿನಿಂದ ಮುಂಬೈ ಮತ್ತು ಕಾಂಗ್ರೆಸ್ ನಡುವೆ ಹಳೆಯ ಸಂಬಂಧವಿದೆ. ಉದ್ಯೋಗ ಖಾತ್ರಿ ಯೋಜನೆಯಂತಹ ಹಲವು ನಿರ್ಧಾರಗಳನ್ನು ಕಾಂಗ್ರೆಸ್ ರಾಷ್ಟ್ರೀಯ ಮಟ್ಟದಲ್ಲಿ ಕಾಯ್ದೆ ರೂಪದಲ್ಲಿ ಅಂಗೀಕರಿಸುವ ಮೊದಲು ಮಹಾರಾಷ್ಟ್ರದಲ್ಲಿ ಇದನ್ನು ರೂಪಿಸಲಾಗಿತ್ತು' ಎಂದು ಅವರು ಹೇಳಿದರು.

'ನೀವು ಇತಿಹಾಸ ಮರೆತರೆ, ಭವಿಷ್ಯದಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ. ಪಕ್ಷವು ದೇಶಕ್ಕಾಗಿ ಏನು ಮಾಡಿದೆ ಎಂಬುದನ್ನು ಹೊಸ ಪೀಳಿಗೆಗೆ ತಿಳಿಸುವುದು ಎಲ್ಲರ ಜವಾಬ್ದಾರಿ' ಎಂದು ತಿಳಿಸಿದರು.

'1989ರಿಂದ ಗಾಂಧಿ ಕುಟುಂಬದ ಯಾವೊಬ್ಬ ಸದಸ್ಯರು ಸಚಿವ, ಮುಖ್ಯಮಂತ್ರಿ ಅಥವಾ ಪ್ರಧಾನಿಯಾಗಿ ಅಧಿಕಾರ ನಡೆಸಿಲ್ಲ. ಆದರೆ, ಬಿಜೆಪಿಯು, ಕಾಂಗ್ರೆಸ್ ಮತ್ತು ಗಾಂಧಿ ಕುಟುಂಬವನ್ನು ನಿಂದಿಸುವುದರಲ್ಲಿ ತೊಡಗಿದೆ. ಅಲ್ಲದೆ, ದೇಶದ ಪ್ರಗತಿಯ ಶ್ರೇಯವನ್ನು ತನ್ನಾಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ' ಎಂದು ಟೀಕಿಸಿದರು.

ನಿರುದ್ಯೋಗವು ದೇಶ ಎದುರಿಸುತ್ತಿರುವ ದೊಡ್ಡ ಸವಾಲು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಸಮೃದ್ಧಿ ತಂದಿರುವುದಾಗಿ ಭಾವಿಸಿದ್ದಾರೆ. ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಯುಪಿಎ ಆಡಳಿತಾವಧಿಯಲ್ಲಿ ರಚಿಸಲಾದ ಸ್ವಸಹಾಯ ಗುಂಪುಗಳೊಂದಿಗೆ (ಎಸ್‌ಎಚ್‌ಜಿ) ಕಾಂಗ್ರೆಸ್ ಕಾರ್ಯಕರ್ತರು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಸ್ವಸಹಾಯ ಸಂಘಗಳ ಕಿರು ಆರ್ಥಿಕ ನಿರ್ವಹಣೆ ಮಹಿಳೆಯರ ಏಳಿಗೆಗೆ ಸಹಕಾರಿಯಾಗಿದೆ ಎಂದರು.

ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ ಎಂಎನ್‌ಎಂ



ಚೆನ್ನೈ (ಪಿಟಿಐ): ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವ ಬೆನ್ನಲ್ಲೇ ನಟ ಕಮಲ್ ಹಾಸನ್ ನೇತೃತ್ವದ ಮಕ್ಕಳ್ ನೀಧಿ ಮೈಯಂ (ಎಂಎನ್‌ಎಂ) ಪಕ್ಷವು ತಮಿಳುನಾಡಿನ ಆಡಳಿತಾರೂಢ ಡಿಎಂಕೆ ನೇತೃತ್ವದ ಮೈತ್ರಿಕೂಟದೊಂದಿಗೆ ಕೈಜೋಡಿಸಿದೆ.

ಕಮಲ್ ಹಾಸನ್, ಡಿಎಂಕೆ ಅಧ್ಯಕ್ಷ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪಕ್ಷದ ಕೇಂದ್ರ ಕಚೇರಿಯಲ್ಲಿ ಮೈತ್ರಿ ಒಪ್ಪಂದವನ್ನು ಅಂತಿಮಗೊಳಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಮಲ್ ಹಾಸನ್, 'ಈ ದೇಶದ ಜನರ ಹಿತದೃಷ್ಟಿಯಿಂದ ಈ ಮೈತ್ರಿಕೂಟಕ್ಕೆ ಸೇರ್ಪಡೆಯಾಗಿದ್ದೇನೆಯೇ ಹೊರತು, ಯಾವುದೇ ಸ್ಥಾನಕ್ಕಾಗಿ ಅಲ್ಲ' ಎಂದು ಹೇಳಿದರು.

ಎಂಎನ್‌ಎಂ ಪಕ್ಷವು ತಮಿಳುನಾಡಿನ 39 ಲೋಕಸಭಾ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಿದೆ.

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್‌ಗೆ ಎದುರಾದ ಆಘಾತ

ಮಾಜಿ ಸಚಿವ ಪಚೌರಿ ಬಿಜೆಪಿಗೆ ಸೇರ್ಪಡೆ

ಭೋಪಾಲ್ (ಪಿಟಿಐ): ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್‌ಗೆ ಆಘಾತ ಎದುರಾಗಿದೆ. ಪಕ್ಷದ ಹಿರಿಯ ನಾಯಕ ಹಾಗೂ ಕೇಂದ್ರದ ಮಾಜಿ ಸಚಿವ ಸುರೇಶ್ ಪಚೌರಿ, ಮಾಜಿ ಸಂಸದ ಗಜೇಂದ್ರ ಸಿಂಗ್ ರಾಜೂಖೇಡಿ ಮತ್ತು ಇತರ ಹಲವರು ಶನಿವಾರ ಬಿಜೆಪಿ ಸೇರಿದ್ದಾರೆ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದವರಲ್ಲಿ ಮಾಜಿ ಶಾಸಕರು ಕೂಡ ಇದ್ದಾರೆ.

ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್, ಮಧ್ಯಪ್ರದೇಶದ ಬಿಜೆಪಿ ಘಟಕದ ಅಧ್ಯಕ್ಷ ವಿ.ಡಿ. ಶರ್ಮ ಮತ್ತು ಪಕ್ಷದ ಮುಖಂಡ ಶಿವರಾಜ್ ಸಿಂಗ್ ಚೌಹಾಣ್ ಸಮ್ಮುಖದಲ್ಲಿ ಇವರು ಬಿಜೆಪಿ ಸೇರಿದರು. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದವರಲ್ಲಿ ಮಾಜಿ ಶಾಸಕರಾದ ಸಂಜಯ್ ಶುಕ್ಲಾ, ಅರ್ಜುನ್ ಪಾಲಿಯಾ, ವಿಶಾಲ್ ಪಟೇಲ್ ಅವರೂ ಇದ್ದಾರೆ.

ಪಚೌರಿ ಅವರು ಗಾಂಧಿ ಕುಟುಂಬಕ್ಕೆ ಆಪ್ತರಾಗಿದ್ದರು. ಅವರು ರಕ್ಷಣಾ ಖಾತೆ ರಾಜ್ಯ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.



ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಮತ್ತು ಬಿಜೆಪಿ ಮುಖಂಡ ಶಿವರಾಜ್ ಸಿಂಗ್ ಚೌಹಾಣ್ ಅವರು ಸುರೇಶ್ ಪಚೌರಿ (ಎಡದಿಂದ ಮೊದಲನೆಯವರು) ಅವರನ್ನು ಬಿಜೆಪಿಗೆ ಬರಮಾಡಿಕೊಂಡರು —ಪಿಟಿಐ ಚಿತ್ರ

ಕಾಂಗ್ರೆಸ್ ತೊರೆದ ಖಂಡೂರಿ ಬಿಜೆಪಿಗೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಮುಖ್ಯಮಂತ್ರಿಯಾಗಿದ್ದ ಬಿ.ಸಿ. ಖಂಡೂರಿ ಅವರ ಪುತ್ರ ಮನೀಶ್ ಖಂಡೂರಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು. ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದ ಮನೀಶ್ ಬಿಜೆಪಿ ಕಚೇರಿಯಲ್ಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ರಾಜ್ಯ ಘಟಕದ ಅಧ್ಯಕ್ಷ ಮಹೇಂದ್ರ ಭಟ್, ಉಸ್ತುವಾರಿ ದುಷ್ಯಂತ್‌ಕುಮಾರ್ ಗೌತಮ್ ಸಮ್ಮುಖದಲ್ಲಿ ಶನಿವಾರ ಪಕ್ಷಕ್ಕೆ ಸೇರಿದರು.

ಹಲವು 'ಕೈ' ಮುಖಂಡರು ಬಿಜೆಪಿಯತ್ತ

ಜೈಪುರ: ರಾಜಸ್ಥಾನದಲ್ಲಿ ಲೋಕಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್‌ನ ಹಲವು ಮುಖಂಡರು ಬಿಜೆಪಿಗೆ ಸೇರ್ಪಡೆಗೊಳ್ಳಲು ಸನ್ನದ್ಧರಾಗಿದ್ದು, ಪಕ್ಷವು ಸಂದಿಗ್ಧತೆಗೆ ಸಿಲುಕಿದೆ ಎಂದು ಮೂಲಗಳು ಹೇಳಿವೆ.


ಕಾಂಗ್ರೆಸ್‌ನ ಮಾಜಿ ಸಚಿವರಾದ ಲಾಲ್‌ಚಂದ್ ಕಟಾರಿಯಾ, ರಾಜೇಂದ್ರ ಯಾದವ್, ಮಾಜಿ ಶಾಸಕರಾದ ರಿಚ್ಪಾಲ್ ಮಿರ್ಧಾ, ವಿಜಯ್‌ಪಾಲ್ ಮಿರ್ಧಾ, ಖಿಲಾಡಿಲಾಲ್ ಭೈರವ, ಅಲೋಕ್ ಬೇನಿವಾಲ್, ಮುಖಂಡರಾದ ರಾಮ್‌ಗೋಪಾಲ್ ಶರ್ಮಾ ಅವರು ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರ ಸಮ್ಮುಖದಲ್ಲಿ ಬಿಜೆಪಿಗೆ ಭಾನುವಾರ ಸೇರ್ಪಡೆಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿವೆ.

ಅರುಣಾಚಲ: ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಬಮ್ ತುಕಿ ರಾಜೀನಾಮೆ ಸಲ್ಲಿಕೆ

ಇಟಾನಗರ (ಪಿಟಿಐ): ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಅರುಣಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ನಬಮ್ ತುಕಿ ಅವರು ಶನಿವಾರ ಹೇಳಿದರು. 'ಪಕ್ಷದ ಶಾಸಕರು ಇತರ ಪಕ್ಷಗಳಿಗೆ ಪಕ್ಷಾಂತರಗೊಳ್ಳುವುದನ್ನು ತಡೆಯಲು ಸಾಧ್ಯವಾಗದ್ದಕ್ಕೆ, ನೈತಿಕ ಹೊಣೆ ಹೊತ್ತು ನಬಮ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ' ಎಂದು ಎಪಿಸಿಸಿ ಪ್ರಧಾನ ಕಾರ್ಯದರ್ಶಿ ಗ್ಯಾಮರ್ ತಾನಾ ತಿಳಿಸಿದರು.


ಮಿಷನ್–370: ಬೇಕಿದೆ ಸ್ಟ್ರೈಕ್ ದರ 80!

• ಮಂಜುನಾಥ ಹೆಬ್ಬಾರ್



ನವದೆಹಲಿ: ಇಂದಿರಾ ಗಾಂಧಿ ಅವರ ಹತ್ಯೆಯ ಬೆನ್ನಲ್ಲೇ 1984ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸಹಾನುಭೂತಿ ಅಲೆಯಿಂದಾಗಿ 'ಕೈ' ಪಾಳಯ 404 ಸೀಟು ಮುಡಿಗೇರಿಸಿಕೊಂಡಿತ್ತು. ಸ್ವತಂತ್ರ ಭಾರತದ ಯಾವುದೇ ಲೋಕಸಭಾ ಚುನಾವಣೆಯಲ್ಲಿ ಪಕ್ಷವೊಂದರ ಗರಿಷ್ಠ ಗಳಿಕೆ ಇದು. ಬಿಜೆಪಿಗೆ ಆಗ ಸಿಕ್ಕಿದ್ದು ಎರಡು ಸ್ಥಾನಗಳಷ್ಟೆ. ಇದೀಗ ಬಿಜೆಪಿ ನಾಯಕತ್ವದ ಎನ್‌ಡಿಎ ಮೈತ್ರಿಕೂಟವು 400 ಸೀಟುಗಳತ್ತ ದೃಷ್ಟಿ ನೆಟ್ಟಿದೆ. ನರೇಂದ್ರ ಮೋದಿ- ಅಮಿತ್ ಶಾ ಜೋಡಿ ತನ್ನ ಈ ಕನಸನ್ನು ನನಸಾಗಿಸಿಕೊಳ್ಳಲು ಸ್ಟ್ರೈಕ್ ದರವನ್ನು ಕನಿಷ್ಠ 10ರಷ್ಟು ಹೆಚ್ಚಿಸಿಕೊಳ್ಳಬೇಕಿದೆ.

ಈ ಗುರಿ ಮುಟ್ಟಬೇಕಾದರೆ ಕೇಸರಿ ಪಾಳಯವು ದಕ್ಷಿಣದ ರಾಜ್ಯಗಳಲ್ಲಿ ಹೆಚ್ಚಿನ ಮತಬೇಟೆ ಮಾಡಬೇಕಿದೆ. 1984ರ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ದಕ್ಷಿಣದ ರಾಜ್ಯಗಳಲ್ಲಿ ಭದ್ರ ನೆಲೆ ಹೊಂದಿತ್ತು. ಆದರೆ, ಬಿಜೆಪಿಗೆ ಕರ್ನಾಟಕ ಹೊರತುಪಡಿಸಿ ದಕ್ಷಿಣದ ಉಳಿದ ರಾಜ್ಯಗಳಲ್ಲಿ ನೆಲೆಯೂರಲು ಹೆಣಗಾಡುತ್ತಿದೆ. 2019ರ ಚುನಾವಣೆಯಲ್ಲಿ ತಮಿಳುನಾಡು (39 ಕ್ಷೇತ್ರಗಳು), ಕೇರಳ (20 ಕ್ಷೇತ್ರಗಳು) ಹಾಗೂ ಆಂಧ್ರ ಪ್ರದೇಶದಲ್ಲಿ (25 ಕ್ಷೇತ್ರಗಳಲ್ಲಿ) ಬಿಜೆಪಿಯು ಖಾತೆಯನ್ನೇ ತೆರೆದಿರಲಿಲ್ಲ.



ತಮಿಳುನಾಡಿನಲ್ಲಿ ಪ್ರಮುಖ ಮಿತ್ರಪಕ್ಷವಾಗಿದ್ದ ಎಐಎಡಿಎಂಕೆ ಸಖ್ಯವನ್ನು ಬಿಜೆಪಿ ಕಳೆದುಕೊಂಡಿದೆ. ಅಲ್ಲಿ ಕಮಲ ಪಾಳಯಕ್ಕೆ ಭದ್ರ ನೆಲೆ ಇಲ್ಲ. ಮೈತ್ರಿ ಕಡಿದುಕೊಂಡ ಬಳಿಕ ರಾಜ್ಯದಲ್ಲಿ ಆ ಪಕ್ಷ ಮತ್ತಷ್ಟು ಆಕ್ರಮಣಕಾರಿಯಾಗಿದೆ. ಐದು ಸಣ್ಣ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡು ಲೋಕ ಸಮರ ಎದುರಿಸಲು ಸಜ್ಜಾಗಿದೆ. ರಾಜ್ಯದಲ್ಲಿ ಕನಿಷ್ಠ 10 ಸ್ಥಾನಗಳನ್ನು ಗೆಲ್ಲಬೇಕು ಎಂಬುದು ಬಿಜೆಪಿಯ ಯೋಜನೆ. ಕೇರಳದಲ್ಲಿ ಖಾತೆ ತೆರೆಯಲು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ನಟ ಸುರೇಶ್ ಗೋಪಿ, ಅನಿಲ್ ಆ್ಯಂಟನಿ ಮತ್ತಿತರ ನಾಯಕರನ್ನು ನೆಚ್ಚಿಕೊಂಡಿದೆ. ಆಂಧ್ರ ಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ನೇತೃತ್ವದ ಟಿಡಿಪಿ ಜತೆಗಿನ ಮೈತ್ರಿ ಚೌಕಾಸಿ ಅಂತಿಮ ಹಂತಕ್ಕೆ ತಲುಪಿದೆ. ಕಳೆದೊಂದು ವರ್ಷದಿಂದ ನಡೆಸುತ್ತಿರುವ 'ಮಿಷನ್ ದಕ್ಷಿಣ'ದ ಯತ್ನಗಳು ಹೆಚ್ಚಿನ ಫಸಲು ಕೊಡಲಿವೆ ಎಂಬ 'ಅಮಿತ' ವಿಶ್ವಾಸ ಕೇಸರಿ ಪಾಳಯದ ನಾಯಕರದ್ದು.

ಉತ್ತರ ಪ್ರದೇಶ ಮತ್ತು ಬಿಹಾರವನ್ನು ಹಿಂದಿ ಸೀಮೆಯ ಹೃದಯ ಭಾಗವೆಂದು ಪರಿಗಣಿಸಲಾಗುತ್ತದೆ. ಉತ್ತರ ಪ್ರದೇಶದಲ್ಲಿ 80 ಹಾಗೂ ಬಿಹಾರದಲ್ಲಿ 40 ಕ್ಷೇತ್ರಗಳಿವೆ. ಉತ್ತರ ಪ್ರದೇಶದಲ್ಲಿ ಜಯಂತ್ ಚೌಧರಿ ಅವರ ಆರ್‌ಎಲ್‌ಡಿ ಎನ್‌ಡಿಎ ಬಣಕ್ಕೆ ಬಂದಿದೆ. ಬಿಎಸ್‌ಪಿ ನಾಯಕಿ ಮಾಯಾವತಿ ಅವರ 'ಮಹಾ ಮೌನ'ವು ಪಕ್ಷಕ್ಕೆ ಅನುಕೂಲ ಮಾಡಿಕೊಡಬಲ್ಲದು ಎಂಬುದು ಕಮಲ ನಾಯಕರ ಲೆಕ್ಕಾಚಾರ.

ಬಿಹಾರದಲ್ಲಿ 2019ರಲ್ಲಿ ಎನ್‌ಡಿಎ ಮೈತ್ರಿಕೂಟ 39 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿತ್ತು. ಉಳಿದ ಒಂದು ಸ್ಥಾನ 'ಕೈ' ಪಾಲಾಗಿತ್ತು. ಈ ಹಿಂದೆ ಬಿಹಾರದಲ್ಲಿ ನಿತೀಶ್ ಕುಮಾರ್ ಅವರ ಸಂಯುಕ್ತ ಜನತಾದಳ, ಕಾಂಗ್ರೆಸ್ ಹಾಗೂ ಲಾಲೂ ಪ್ರಸಾದ್ ಅವರ ರಾಷ್ಟ್ರೀಯ ಜನತಾದಳದ ಮಹಾಮೈತ್ರಿಕೂಟವು ಬಿಜೆಪಿಯನ್ನು ಸೋಲಿಸಿತ್ತು. ಈ ಸಲವೂ ಈ ಮಹಾಮೈತ್ರಿಕೂಟದಿಂದ ಬಿಜೆಪಿಗೆ ಪ್ರಬಲ ಸವಾಲು ಎದುರಾಗಬಹುದು ಎಂದು ವಿಶ್ಲೇಷಿಸಲಾಗಿತ್ತು. ನಿತೀಶ್ ಅವರನ್ನು ಮತ್ತೆ ಸೆಳೆದುಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಕಳೆದ ಸಲ ಬಿಜೆಪಿ ಹಾಗೂ ಜೆಡಿಯು ತಲಾ 17 ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಈ ಸಲ ಜೆಡಿಯುಗೆ 14 ಸ್ಥಾನಗಳನ್ನು ಬಿಟ್ಟುಕೊಟ್ಟು ಬಿಜೆಪಿ 20ರಲ್ಲಿ ಸ್ಪರ್ಧಿಸುವ ಬಗ್ಗೆ ಮಾತುಕತೆಗಳು ನಡೆದಿವೆ.

ಮಹಾರಾಷ್ಟ್ರದಲ್ಲಿ 2019ರಲ್ಲಿ 25 ಕ್ಷೇತ್ರಗಳಲ್ಲಿ ಹುರಿಯಾಳುಗಳನ್ನು ಕಣಕ್ಕಿಳಿಸಿದ್ದ ಬಿಜೆಪಿಯು 23ರಲ್ಲಿ ಗೆದ್ದಿತ್ತು. ಶಿವಸೇನಾ (ಶಿಂದೆ ಬಣ) ಹಾಗೂ ಎನ್‌ಸಿಪಿಗೆ (ಅಜಿತ್ ಪವಾರ್ ಬಣ) 18 ಕ್ಷೇತ್ರಗಳನ್ನಷ್ಟೇ ನೀಡಲು ಬಿಜೆಪಿ ಒಲವು ತೋರಿದೆ. 30 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ಕಮಲ ನಾಯಕರ ಯೋಚನೆ. ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಜಾರ್ಖಂಡ್ ಹಾಗೂ ಪಶ್ಚಿಮ ಬಂಗಾಳದಲ್ಲಿ ವಿಪಕ್ಷಗಳ ಹಿರಿಯ ತಲೆಯಾಳುಗಳನ್ನು ಬಿಜೆಪಿ ಸೆಳೆದುಕೊಂಡಿದೆ. ಇವರಲ್ಲಿ ಹಲವರನ್ನು ಹುರಿಯಾಳುಗಳನ್ನಾಗಿ ಮಾಡಿದೆ. ಈ ಎಲ್ಲ ತಂತ್ರಗಾರಿಕೆಗಳಿಂದ 370ರ ಗುರಿ ತಲುಪುವುದು ಅಸಾಧ್ಯವೇನಲ್ಲ ಎಂದು ಮೋದಿ- ಶಾ ಜೋಡಿ ಲೆಕ್ಕ ಹಾಕುತ್ತಾ ದೇಶ ಸುತ್ತುತ್ತಿದೆ.

ಮತ ಗಳಿಕೆ ಲೆಕ್ಕಾಚಾರ


1999ರಲ್ಲಿ ಕಾಂಗ್ರೆಸ್ ಶೇ 49.10ರಷ್ಟು ಮತಗಳನ್ನು ಪಡೆದಿತ್ತು. ಬಿಜೆಪಿ ಗಳಿಸಿದ್ದು ಶೇ 7.74 ಮತಗಳನ್ನು. ಬಿಜೆಪಿ 2014ರಲ್ಲಿ ಶೇ 31ರಷ್ಟು ಮತಗಳನ್ನು ಪಡೆದು 282 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. 2019ರ ಚುನಾವಣೆಯಲ್ಲಿ ಶೇ 37.36 ಮತಗಳನ್ನು ಗಳಿಸಿ, 303 ಸೀಟುಗಳನ್ನು ಗೆದ್ದುಕೊಂಡಿತ್ತು. ಆ ಚುನಾವಣೆಯಲ್ಲಿ ಪಕ್ಷದ ಸ್ಟ್ರೈಕ್ ದರ 69.5ರಷ್ಟು. ಬಿಜೆಪಿಯು ಈ ಸಲ ಎನ್‌ಡಿಎ ಪಾಳಯದಲ್ಲಿರುವ 30ಕ್ಕೂ ಅಧಿಕ ಮಿತ್ರ ಪಕ್ಷಗಳಿಗೆ 70ರಿಂದ 80 ಕ್ಷೇತ್ರಗಳನ್ನು ಬಿಟ್ಟುಕೊಟ್ಟು 460 ಸ್ಥಾನಗಳಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ. ಎನ್‌ಡಿಎ ಮೈತ್ರಿಕೂಟದ ತೆಕ್ಕೆಗೆ ಟಿಡಿಪಿ ಹಾಗೂ ಬಿಜೆಡಿ ಮರಳಿದರೆ ಕೇಸರಿ ಪಡೆಯು ಸ್ಪರ್ಧಿಸುವ ಸ್ಥಾನಗಳ ಸಂಖ್ಯೆ ಮತ್ತಷ್ಟು ಕಡಿಮೆಯಾಗಬಹುದು. ಆದರೆ, ಪಕ್ಷ ಗುರಿ ಇಟ್ಟಿರುವುದು 370 ಕ್ಷೇತ್ರಗಳಲ್ಲಿ ಗೆಲುವಿನತ್ತ. ಅಂದರೆ, ಪಕ್ಷವು ಸ್ಪರ್ಧಿಸಿದ ಪ್ರತೀ 10 ಸ್ಥಾನಗಳ ಪೈಕಿ ಎಂಟರಲ್ಲಿ ಗೆಲುವು ಸಾಧಿಸಬೇಕು. ಪಕ್ಷದ ಮತ ಪ್ರಮಾಣ ಕನಿಷ್ಠ ಶೇ 46ಕ್ಕೆ ಜಿಗಿಯಬೇಕು. ಸ್ಟ್ರೈಕ್ ರೇಟ್ 80ರ ಗಡಿ ದಾಟಬೇಕು!

ಏನಿದು ಸ್ಟ್ರೈಕ್ ದರ?

ಯಾವುದೇ ರಾಜಕೀಯ ಪಕ್ಷವು ತಾನು ಕಣಕ್ಕಿಳಿಸಿದ ಪ್ರತೀ ನೂರು ಅಭ್ಯರ್ಥಿಗಳಲ್ಲಿ ಎಷ್ಟು ಜನರನ್ನು ಗೆಲ್ಲಿಸಿಕೊಂಡು ಬಂದಿದೆ ಎಂಬುದರ ಸರಾಸರಿ ಲೆಕ್ಕಾಚಾರವೇ ಸ್ಟ್ರೈಕ್ ದರ. ಉದಾಹರಣೆಗೆ 2014ರಲ್ಲಿ ಬಿಜೆಪಿ ಸ್ಟ್ರೈಕ್ ದರ 69.9 ಇದೆ ಎಂದರೆ ಚುನಾವಣೆಗೆ ನಿಂತ ಪ್ರತೀ ನೂರು ಅಭ್ಯರ್ಥಿಗಳಲ್ಲಿ (69.9) 70 ಜನ ಗೆದ್ದಿದ್ದಾರೆ ಎಂದರ್ಥ.

ಗುರಿ ಈಡೇರಿಕೆಯಲ್ಲಿ ಬಿಜೆಪಿ 'ಅಸ್ತ್ರ'ಗಳು

- ನರೇಂದ್ರ ಮೋದಿ ವರ್ಚಸ್ಸು ಹಾಗೂ 'ಮೋದಿ ಗ್ಯಾರಂಟಿ'
- ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ
- ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು
- 'ಆಪರೇಷನ್ ಕಮಲ' ನಡೆಸಿ ವಿಪಕ್ಷಗಳ ಕೂಟ ದುರ್ಬಲ ಮಾಡಿದ್ದು
- ಐವರು ಸಾಧಕರಿಗೆ ಭಾರತರತ್ನ ಘೋಷಣೆ
- ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ
- ವಿಕಸಿತ ಭಾರತ ಅಭಿಯಾನದಡಿ 16 ಕೋಟಿ ಫಲಾನುಭವಿಗಳನ್ನು ತಲುಪಿದ್ದು
- 'ಮಿಷನ್ ದಕ್ಷಿಣ ಭಾರತ' ತಂತ್ರಗಾರಿಕೆ
- ಬಡವರು, ಮಹಿಳೆಯರು, ಯುವಜನರು ಮತ್ತು ರೈತರು ಎಂಬ ನಾಲ್ಕು 'ಜಾತಿ'ಗಳ ಜಪ




ಸಂಸದೆ ಸುಮಲತಾ ಪಟ್ಟು, ಬಿಜೆಪಿ– ಜೆಡಿಎಸ್ ಮೈತ್ರಿ ಹುರಿಯಾಳು ಆಯ್ಕೆ ಇನ್ನೂ ಕಗ್ಗಂಟು

ಕಾಂಗ್ರೆಸ್ 'ನಾಟಿ' ವಿರುದ್ಧ 'ಹೈಬ್ರಿಡ್' ಅಭ್ಯರ್ಥಿ?

• ಎಂ.ಎನ್.ಯೋಗೇಶ್

ಮಂಡ್ಯ: ನಾಗಮಂಗಲ ತಾಲ್ಲೂಕಿನ ಕನ್ನಾಘಟ್ಟದಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ಉದ್ಯಮಿಯಾಗಿ ಬೆಳೆದಿರುವ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು (ವೆಂಕಟರಮಣೇಗೌಡ) ಸ್ಥಳೀಯವಾಗಿ 'ನಾಟಿ ಅಭ್ಯರ್ಥಿ' ಎಂದೇ ಗುರುತಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ 'ನಾಟಿ' ವಿರುದ್ಧ ಬಿಜೆಪಿ– ಜೆಡಿಎಸ್ ಹುರಿಯಾಳಾಗಿ 'ಫಾರಂ' ಅಭ್ಯರ್ಥಿ ಬರುವರೋ, 'ಹೈಬ್ರಿಡ್' ಅಭ್ಯರ್ಥಿ ಬರುವರೋ ಎಂಬ ಚರ್ಚೆ ಈಗ ಜಿಲ್ಲೆಯಲ್ಲಿ ಆರಂಭವಾಗಿದೆ.

ಸ್ಟಾರ್ ಚಂದ್ರು ಹೆಸರು ಮುನ್ನೆಲೆಗೆ ಬರುವ ಮೊದಲು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ 'ನಾಟಿ ತಳಿಯೊಂದನ್ನು ಕಣಕ್ಕಿಳಿಸಿ ಗೆಲ್ಲಿಸುತ್ತೇವೆ' ಎಂದಿದ್ದರು. ಅಲ್ಲಿಂದ ಆರಂಭವಾದ 'ನಾಟಿ' ಹೆಸರು ಈಗ 'ಫಾರಂ', 'ಹೈಬ್ರಿಡ್'ವರೆಗೂ ಬಂದಿದೆ. ಕಾಂಗ್ರೆಸ್ ಅಭ್ಯರ್ಥಿ ಹೆಸರು ಮೊದಲ ಪಟ್ಟಿಯಲ್ಲೇ ಘೋಷಣೆಯಾದ ಬೆನ್ನಲ್ಲೇ ಮೈತ್ರಿ ಅಭ್ಯರ್ಥಿ ಯಾರಾಗುತ್ತಾರೆ ಎಂಬುದು ಕುತೂಹಲ ಮೂಡಿಸಿದೆ.


ಸ್ಟಾರ್ ಚಂದ್ರು


ಸುಮಲತಾ


ಕುಮಾರಸ್ವಾಮಿ

'ದಳಪತಿಗಳಿಗೆ ಶಕ್ತಿ'ಯಾಗಿರುವ ಸಕ್ಕರೆ ಜಿಲ್ಲೆಯನ್ನು ಬಿಜೆಪಿಯು ಜೆಡಿಎಸ್‌ಗೆ ಬಿಟ್ಟುಕೊಡುವುದು ಖಚಿತ ಎಂದೇ ಹೇಳಲಾಗುತ್ತಿದೆ. ಆದರೆ, ಸಂಸದೆ ಸುಮಲತಾ ಪ್ರಧಾನಿ ಸೇರಿದಂತೆ ಬಿಜೆಪಿ ವರಿಷ್ಠರ ಮಟ್ಟದಲ್ಲೇ ಟಿಕೆಟ್‌ಗಾಗಿ ಪಟ್ಟುಹಿಡಿದಿರುವುದರಿಂದ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿಯೇ ಉಳಿದಿದೆ.

ಜಿಲ್ಲೆಯ ಸೊಸೆಯಾಗಿದ್ದರೂ ಸುಮಲತಾ ಅವರು ಸ್ಥಳೀಯವಾಗಿ ನೆಲೆಸದ ಕಾರಣ, ಕೆಲವರು ಅವರನ್ನು 'ಫಾರಂ ಅಭ್ಯರ್ಥಿ' ಎಂದು ಬಣ್ಣಿಸುತ್ತಾರೆ. ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸಿದ್ದರಾಮಯ್ಯ ಕೂಡ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಹೈಬ್ರಿಡ್ ಅಭ್ಯರ್ಥಿ ಯಾರು?: ಜೆಡಿಎಸ್‌ಗೆ ಕ್ಷೇತ್ರ ಬಿಟ್ಟುಕೊಟ್ಟರೆ ಅಭ್ಯರ್ಥಿ ಯಾರಾಗುತ್ತಾರೆ ಎಂಬ ಪ್ರಶ್ನೆಗೆ ಇಲ್ಲಿಯವರೆಗೂ ಉತ್ತರ ಸಿಕ್ಕಿಲ್ಲ. ಸ್ಥಳೀಯ ಮುಖಂಡರೆಲ್ಲರೂ ಸಭೆ ಸೇರಿ 'ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮೂವರಲ್ಲಿ ಒಬ್ಬರು ಅಭ್ಯರ್ಥಿಯಾಗಬೇಕು' ಎಂಬ ಒಂದು ಸಾಲಿನ ನಿರ್ಣಯ ಕೈಗೊಂಡಿದ್ದರು.

ಆದರೆ 'ನಿಖಿಲ್ ಸ್ಪರ್ಧಿಸುವುದಿಲ್ಲ' ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ. ಈ ಮೂವರಲ್ಲಿ ಯಾರೇ ಅಭ್ಯರ್ಥಿಯಾದರೂ ಸ್ಥಳೀಯ ಹಿನ್ನೆಲೆ ಹೊಂದಿರದ ಕಾರಣ 'ಹೈಬ್ರಿಡ್ ಅಭ್ಯರ್ಥಿ'ಯಾಗುತ್ತಾರೆ ಎಂದೇ ಹೇಳಲಾಗುತ್ತಿದೆ.

ಇನ್ನೊಂದೆಡೆ, 'ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ ಇಬ್ಬರಲ್ಲಿ ಒಬ್ಬರು ಅಭ್ಯರ್ಥಿಯಾಗಲಿದ್ದಾರೆ' ಎಂಬ ಮಾತುಗಳೂ ಹರಿದಾಡುತ್ತಿವೆ. ಸ್ಥಳೀಯರಾದ ಇವರು 'ಪಕ್ಕಾ ನಾಟಿ' ಅಭ್ಯರ್ಥಿಯಾಗಲಿದ್ದಾರೆ ಎಂಬ ಚರ್ಚೆ ಇದೆ.

'ಟಿಕೆಟ್ ಆಕಾಂಕ್ಷಿಗಳೆಲ್ಲರೂ ಹೊರಗಿನವರೇ ಆಗಿರುವ ಕಾರಣ ನಾಟಿ, ಫಾರಂ, ಹೈಬ್ರಿಡ್ ಚರ್ಚೆ ಮುನ್ನೆಲೆಗೆ ಬಂದಿದೆ. ಪ್ರತಿ ಚುನಾವಣೆಯಲ್ಲೂ ಮಂಡ್ಯ ಜಿಲ್ಲೆ ಇಂತಹ ಭಿನ್ನ ಚರ್ಚೆಗಳಿಂದಲೇ ಗಮನ ಸೆಳೆಯುತ್ತದೆ' ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್ ಹೇಳಿದರು.

'ಹಣದ ಅಭ್ಯರ್ಥಿ ಚಂದ್ರು' ವಿರುದ್ಧ ಹೋರಾಟ

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿರುವ ಡಾ.ಎಚ್.ಎನ್.ರವೀಂದ್ರ, ಸ್ಟಾರ್ ಚಂದ್ರು ಅವರನ್ನು 'ಹಣದ ಅಭ್ಯರ್ಥಿ' ಎಂದು ಕರೆದಿದ್ದು ಅವರ ವಿರುದ್ಧ ಪ್ರಚಾರ ಮಾಡುವುದಾಗಿ ತಿಳಿಸಿದ್ದಾರೆ.

'ಪ್ರತಿ ಚುನಾವಣೆಗೂ ಹಣವಂತರಿಗೆ ಮಣೆ ಹಾಕುವುದಾದರೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಹಿರಿಯ ಮುಖಂಡರು ಎಲ್ಲಿಗೆ ಹೋಗಬೇಕು' ಎಂದು ರವೀಂದ್ರ ಪ್ರಶ್ನಿಸಿದರು.

ಯದುವೀರಗೆ ಬಿಜೆಪಿ ಗಾಳ?

ಪ್ರಜಾವಾಣಿ ವಾರ್ತೆ


ಯದುವೀರ

ಮೈಸೂರು: 'ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಬಿಜೆಪಿ ಯೋಜಿಸಿದ್ದು, ಅವರೊಂದಿಗೆ ಮಾತುಕತೆ ನಡೆಸಿದೆ' ಎಂದು ತಿಳಿದುಬಂದಿದೆ.

ಹಾಲಿ ಸಂಸದ ಪ್ರತಾಪ ಸಿಂಹ ಅವರೊಂದಿಗೆ ಯದುವೀರರ ಹೆಸರನ್ನೂ ಶಿಫಾರಸು ಮಾಡಲಾಗಿದೆ. ಅವರ ತಾಯಿ ಪ್ರಮೋದಾದೇವಿ ಒಡೆಯರ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಸಮ್ಮತಿಸಿದರೆ, ಅವರಿಗೇ ಟಿಕೆಟ್ ನೀಡಲು ಮುಖಂಡರು ಚಿಂತನೆ ನಡೆಸಿದ್ದಾರೆ. ಈ ಬೆಳವಣಿಗೆಯಿಂದ ಪ್ರತಾಪ ಸಿಂಹ ಅವರಿಗೆ ಟಿಕೆಟ್ ಕೈತಪ್ಪುವ ಭೀತಿ ಎದುರಾಗಿದೆ.

> ಲೋಕಸಭಾ ಚುನಾವಣೆಯಲ್ಲಿ ಜನ ನನ್ನ ಕೈ ಹಿಡಿಯಲು ಸಿದ್ಧವಿದ್ದಾರೆ. ಪಕ್ಷ ಕೈ ಬಿಡುವುದಿಲ್ಲ ಎಂಬ ನಂಬಿಕೆ ಇದೆ
> **ಪ್ರತಾಪ ಸಿಂಹ,** ಸಂಸದ

'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಆರ್‌ಎಸ್‌ಎಸ್ ನಾಯಕರು ತಂತ್ರ ರೂಪಿಸಿದ್ದು, ಯದುವೀರರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅವರೊಂದಿಗೆ ಮಾತುಕತೆಯೂ ನಡೆದಿದ್ದು, ಮನವೊಲಿಸುವ ಪ್ರಯತ್ನ ನಡೆದಿದೆ. ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲೂ ಈ ಬಗ್ಗೆ ಚರ್ಚೆಯಾಗಿದೆ' ಎಂದು ತಿಳಿದುಬಂದಿದೆ.

'ಮೈಸೂರು ರಾಜವಂಶಸ್ಥರ ಕೊಡುಗೆಗಳನ್ನು ಜನ ಗೌರವದಿಂದ ಸ್ಮರಿಸುತ್ತಾರೆ. ಅದನ್ನು ರಾಜಕೀಯ ಲಾ ಭ ವ ನ್ನಾ ಗಿ ಸಿ ಕೊ ಳ್ಳು ವು ದು ನಾಯಕರ ಯೋಜನೆ. ಅವರು ಸ್ಪರ್ಧಿಸಿದರೆ ಮೈಸೂರು–ಕೊಡಗು ಕ್ಷೇತ್ರದೊಂದಿಗೆ ಚಾಮರಾಜನಗರ, ಮಂಡ್ಯ ಹಾಗೂ ಹಾಸನದಲ್ಲೂ ಪಕ್ಷಕ್ಕೆ ಅನುಕೂಲವಾಗ ಬಹುದೆಂಬುದು ಲೆಕ್ಕಾಚಾರ. ಯಡಿಯೂರಪ್ಪ ಅವರು ಹೈಕಮಾಂಡ್ ಮಟ್ಟದಲ್ಲೂ ಇದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ' ಎಂದು ಹೇಳಲಾಗುತ್ತಿದೆ.

'ಯದುವೀರ ಅವರನ್ನು ಕಣಕ್ಕಿಳಿಸುವ ಬಗ್ಗೆ ಗಂಭೀರ ಚರ್ಚೆಯಾಗಿರುವುದು ನಿಜ. ಹಾಲಿ ಸಂಸದರ ಬಗ್ಗೆ ಸ್ಥಳೀಯ ನಾಯಕರಲ್ಲೇ ವಿರೋಧವಿದೆ. ಕೆಲವು ವಿವಾದಗಳಿಗೂ ಕಾರಣವಾಗಿದ್ದಾರೆ. ಕ್ಷೇತ್ರದ ನಾಯಕರೊಂದಿಗೆ ಸಮನ್ವಯ ಸಾಧಿಸುವಲ್ಲಿಯೂ ವಿಫಲವಾಗಿದ್ದಾರೆ. ಹೀಗಾಗಿ, ಬೇರೆಯವರ ಬಗ್ಗೆ ವರಿಷ್ಠರು ಪರಿಶೀಲಿಸುತ್ತಿದ್ದಾರೆ' ಎಂದು ಪಕ್ಷದ ಮುಖಂಡರೊಬ್ಬರು ಪ್ರತಿಕ್ರಿಯಿಸಿದರು.

'ರಾಜವಂಶಸ್ಥ ಸ್ಪರ್ಧಿಸಿದರೆ ಹಳೆಯ ಮೈಸೂರು ಭಾಗದಲ್ಲಿ ಸಂಚಲನ ಉಂಟಾಗುತ್ತದೆ. ಜಾತ್ಯತೀತವಾಗಿ ಎಲ್ಲ ವರ್ಗದವರಿಂದಲೂ ಬೆಂಬಲ ದೊರೆಯುತ್ತದೆ. ಪಕ್ಷಕ್ಕೆ ಒಳ್ಳೆಯ ಇಮೇಜ್ ಸೃಷ್ಟಿಯಾಗುತ್ತದೆ ಎಂಬುದನ್ನು ವರಿಷ್ಠರು ಪರಿಗಣಿಸುತ್ತಿದ್ದಾರೆ' ಎಂದರು.

ಪ್ರತಿಕ್ರಿಯೆಗೆ ಯದುವೀರ ಲಭ್ಯವಾಗಲಿಲ್ಲ.

'ಚುನಾವಣೆಗೆ ಸ್ಪರ್ಧಿಸಲ್ಲ'

ಮಂಗಳೂರು: 'ಲೋಕಸಭೆ ಚುನಾವಣೆಯಲ್ಲಿ ಈ ಸಲ ನಾನು ಸ್ಪರ್ಧಿಸುವುದಿಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಇಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಮನಸ್ಸಿಲ್ಲದಿದ್ದರೂ 2009ರಲ್ಲಿ ಪಕ್ಷದ ಸೂಚನೆ ಮೇರೆಗೆ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದೆ. 2019ರಲ್ಲಿ ಪಕ್ಷದ ಸೂಚನೆಗೆ ಗೌರವ ಕೊಟ್ಟು ಕೊನೆಯ ಕ್ಷಣದಲ್ಲಿ ಸ್ಪರ್ಧಿಸಿದ್ದೆ. ಎರಡೂ ಸಲ ಸೋತಿದ್ದೇನೆ. ಪದೇ ಪದೇ ಈ ರೀತಿ ಒತ್ತಡ ಹೇರುವುದು ಸರಿಯಲ್ಲ. ಈಗಾಗಲೇ ಪಕ್ಷದ ವರಿಷ್ಠರಿಗೂ ಇದೇ ಅಭಿಪ್ರಾಯ ತಿಳಿಸಿದ್ದು, ಅವರು ಇದನ್ನು ಗೌರವಿಸಿರುವುದಾಗಿ ಭಾವಿಸಿದ್ದೇನೆ' ಎಂದರು.

'ಸಂಪುಟದಲ್ಲಿರುವ ಸಚಿವರು ಸ್ಪರ್ಧೆ ಮಾಡಬೇಕೇ ಬೇಡವೋ ಎನ್ನುವುದನ್ನು ಸಿಎಂ ನಿರ್ಧರಿಸುತ್ತಾರೆ' ಎಂದು ತಿಳಿಸಿದರು.

ಹಾವೇರಿ: ಎನ್‌ಆರ್‌ಐ ಕಣ್ಣು

• ಕೆ.ಎಂ.ಸತೀಶ್ ಬೆಳ್ಳಕ್ಕಿ


ಶಶಿಧರ ನಾಗರಾಜಪ್ಪ

ಗದಗ: ಹಾವೇರಿ–ಗದಗ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಆನಂದಸ್ವಾಮಿ ಗಡ್ಡದೇವರಮಠ ಸ್ಪರ್ಧಿಸಲಿದ್ದು, ಬಿಜೆಪಿ ಅಭ್ಯರ್ಥಿ ಯಾರು ಎಂಬ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ನಡೆದಿದೆ.

ಬಿಜೆಪಿಯ ಸಂಭಾವ್ಯ ಅಭ್ಯರ್ಥಿಗಳ ಪೈಕಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೆಸರು ಒಂದೆಡೆ ಕೇಳಿ ಬರುತ್ತಿದ್ದರೆ, ಮತ್ತೊಂದೆಡೆ ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಅವರ ಪುತ್ರ ಕೆ.ಇ.ಕಾಂತೇಶ್ ಆರು ತಿಂಗಳಿನಿಂದ ಕ್ಷೇತ್ರದಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ಡಾ. ಮಹೇಶ ನಾಲವಾಡ ಮತ್ತು ಡಾ. ಶೇಖರ ಸಜ್ಜನರ ಕೂಡ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಸಿದ್ದಾರೆ. ಇದರ ನಡುವೆ ಎನ್‌ಆರ್‌ಐ ಶಶಿಧರ ನಾಗರಾಜಪ್ಪ ಸಹ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ದುಬೈನಲ್ಲಿ ಕೆಲಸ ಮಾಡುವ ಶಶಿಧರ ನಾಗರಾಜಪ್ಪ, ದುಬೈ ಕರ್ನಾಟಕ ಸಂಘದ ಅಧ್ಯಕ್ಷರೂ ಹೌದು. ಅಲ್ಲಿನ ಕೆಲ ಸಂಘಟನೆಗಳ ಪ್ರಮುಖ ಹುದ್ದೆಯಲ್ಲಿದ್ದಾರೆ. ದುಬೈಗೆ ಭೇಟಿ ನೀಡುವ ಬಿಜೆಪಿ ಮುಖಂಡರ ಆದರ–ಆತಿಥ್ಯ ವಹಿಸಿಕೊಳ್ಳುತ್ತಾರೆ. 22 ವರ್ಷಗಳ ಸಾಗರೋತ್ತರ ಬಿಜೆಪಿ ಜೊತೆಗಿನ ಒಡನಾಟದಿಂದ ಹಲವು ಹಿರಿಯ ನಾಯಕರ ವಿಶ್ವಾಸ ಗಳಿಸಿದ್ದು, ಈಗ ಬಿಜೆಪಿಯಿಂದ ಸ್ಪರ್ಧಿಸಲು ಬಯಸಿದ್ದಾರೆ.

'ಅನಿವಾಸಿ ಭಾರತೀಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವನ್ನು ಬಿಜೆಪಿ ಕೊಟ್ಟರೆ, ಎನ್‌ಆರ್‌ಐಗಳಿಗೂ ಒಬ್ಬ ಪ್ರತಿನಿಧಿ ಸಿಕ್ಕಂತಾಗುತ್ತದೆ. ಹೊರದೇಶದಲ್ಲಿನ ಭಾರತೀಯರನ್ನು ದೇಶಕ್ಕೆ ವಾಪಸ್ ಸೆಳೆಯಬೇಕು. ಅವರ ಜ್ಞಾನ, ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದು ಶಶಿಧರ ನಾಗರಾಜಪ್ಪ ತಿಳಿಸಿದರು.

'ಬಿಜೆಪಿಯಿಂದ ಬೊಮ್ಮಾಯಿ ಅವರಿಗೆ ಟಿಕೆಟ್ ಸಿಕ್ಕರೆ, ಬೆಂಬಲಿಸುವೆ. ಅವರು ಸ್ಪರ್ಧಿಸದಿದ್ದರೆ, ನನಗೆ ಅವಕಾಶ ಕೋರುವೆ. ಸ್ಪರ್ಧೆಯಲ್ಲಿರುವ ಎಲ್ಲರೂ ಬಿಜೆಪಿಗೆ ದುಡಿದವರು. ಪಕ್ಷದ ತೀರ್ಮಾನವೇ ಅಂತಿಮ' ಎಂದು ಹೇಳಿದರು.

ಬಿಜೆಪಿ ಪಟ್ಟಿ ಪ್ರಕಟಣೆಗೆ ಮುನ್ನವೇ ಸೆಡವು

ಬೆಂಗಳೂರು: ಲೋಕಸಭೆಗೆ ಚುನಾವಣೆಯ ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಅಖೈರುಗೊಳಿಸಲು ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿ ಸಭೆ ಭಾನುವಾರ ನಡೆಯಲಿದ್ದು, ಅದಕ್ಕೆ ಮುನ್ನವೇ ಆಕಾಂಕ್ಷಿಗಳ ಅಬ್ಬರ–ಸೆಡವು ಜೋರಾಗಿದೆ. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ ಟಿಕೆಟ್ ಸಿಗುವ ವಿಶ್ವಾಸ ವ್ಯಕ್ತಪಡಿಸಿದರೆ, ಕೆಲವು ಸಂಸದರು ತಮಗೆ ಟಿಕೆಟ್ ಸಿಗಲಿದೆ ಎಂದು ಪ್ರತಿಪಾದಿಸಿದ್ದಾರೆ. ಟಿಕೆಟ್ ಸಿಗದಿದ್ದರೆ ತಮ್ಮ ದಾರಿ ನೋಡಿಕೊಳ್ಳುತ್ತೇವೆ ಎಂದು ಆಕಾಂಕ್ಷಿಗಳಾದ ಕೆಲವು ಮಾಜಿ ಶಾಸಕರು ಬೆದರಿಕೆಯ ಧಾಟಿಯಲ್ಲಿ ಮಾತನಾಡಿದ್ದಾರೆ

'ನಾನೂ ಟಿಕೆಟ್ ಆಕಾಂಕ್ಷಿ'


ಸದಾನಂದ ಗೌಡ

'ನಾನು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ನನಗೇ ಟಿಕೆಟ್ ಸಿಗುವ ವಿಶ್ವಾಸವಿದೆ' ಎಂದು ಈ ಕ್ಷೇತ್ರದ ಹಾಲಿ ಸಂಸದ ಡಿ.ವಿ.ಸದಾನಂದ ಗೌಡ ಶನಿವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೇರೆಯವರಿಗೆ ಟಿಕೆಟ್ ಕೊಡಿ ಎಂದು ಹಿಂದೆ ಹೇಳಿದ್ದೆ. ಕ್ಷೇತ್ರದ ಶಾಸಕರು, ಮುಖಂಡರು ನೀವೇ ಅಭ್ಯರ್ಥಿಯಾಗಿ ಎಂದು ಒತ್ತಾಯಿಸಿದ್ದರು. ಹೀಗಾಗಿ, ಟಿಕೆಟ್ ಬಯಸಿದ್ದೇನೆ' ಎಂದರು.

'ಬಿಜೆಪಿ ನನಗೆ ಎಲ್ಲವನ್ನೂ ಕೊಟ್ಟಿದೆ. ಬಿ.ಎಸ್. ಯಡಿಯೂರಪ್ಪ ಅವರ ನಂತರದಲ್ಲಿ ನನಗೆ ಹೆಚ್ಚು ಅವಕಾಶಗಳನ್ನು ನೀಡಿದೆ. ಆದರೆ, ಈಗ ಟಿಕೆಟ್ ಕೊಡದೇ ಇದ್ದರೆ ಸ್ವಲ್ಪ ನೋವಾಗುತ್ತದೆ' ಎಂದು ಹೇಳಿದರು.

ಗೆಲ್ಲುವ ಅಭ್ಯರ್ಥಿಗೆ ಟಿಕೆಟ್: ಬಿ.ವೈ. ವಿಜಯೇಂದ್ರ



ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯ ಇರುವ, ಉತ್ತಮ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮೈಸೂರು ಸೇರಿದಂತೆ ಕೆಲವು ಲೋಕಸಭಾ ಕ್ಷೇತ್ರಗಳಲ್ಲಿ ಹಾಲಿ ಸಂಸದರ ಬದಲಿಗೆ ಬೇರೆಯವರಿಗೆ ಟಿಕೆಟ್ ನೀಡಲಾಗುತ್ತಿದೆ ಎಂಬ ಚರ್ಚೆ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಯಾವುದೇ ಊಹಾಪೋಹಗಳಿಗೆ ನಾನು ಉತ್ತರಿಸುವುದಿಲ್ಲ. ನಾಲ್ಕು ಗೋಡೆಗಳ ಮಧ್ಯೆ ನಡೆದ ಚರ್ಚೆಯನ್ನು ಬಹಿರಂಗಪಡಿಸಲೂ ಆಗುವುದಿಲ್ಲ' ಎಂದರು.

ಬಿಜೆಪಿ ಅಭ್ಯರ್ಥಿಗಳ ಆಯ್ಕೆ ವಿಳಂಬವಾಗಿಲ್ಲ. ಎರಡು ಹಂತಗಳಲ್ಲಿ ಅಭ್ಯರ್ಥಿಗಳ ಹೆಸರು ಪ್ರಕಟಿಸುವ ಸಾಧ್ಯತೆ ಇದೆ. ರಾಜ್ಯದ ಎಲ್ಲ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸುವ ಗುರಿಯೊಂದಿಗೆ ಅಭ್ಯರ್ಥಿಗಳ ಆಯ್ಕೆ ನಡೆಯುತ್ತಿದೆ ಎಂದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಾ.ಸಿ.ಎನ್. ಮಂಜುನಾಥ್ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆಯೆ ಎಂಬ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ, 'ಮಂಜುನಾಥ್ ಸ್ಪರ್ಧೆ ಕುರಿತು ನಿಮ್ಮಿಂದಲೇ ನನಗೆ ಮಾಹಿತಿ ಸಿಗುತ್ತಿದೆ. ಅವರೂ ಸೇರಿದಂತೆ ಯಾರೇ ಬಿಜೆಪಿ ಅಭ್ಯರ್ಥಿಯಾದರೂ ಗೆಲ್ಲಿಸುತ್ತೇವೆ' ಎಂದರು.

'ಸಂಸದರಿಗೆ ಟಿಕೆಟ್ ಇಲ್ಲ ಎಂಬುದು ಊಹಾಪೋಹ'


ಪ್ರಲ್ಹಾದ ಜೋಶಿ

ಶಿವಮೊಗ್ಗ: 'ಪಕ್ಷದ ಹಾಲಿ ಸಂಸದರ ಪೈಕಿ ಬಹುತೇಕರಿಗೆ ಟಿಕೆಟ್ ಕೈತಪ್ಪಲಿದೆ. ಹಳಬರಲ್ಲಿ ಶೇ 50ರಷ್ಟು ಮಂದಿಗೆ ಮಾತ್ರ ಟಿಕೆಟ್ ನೀಡಲಾಗುತ್ತದೆ ಎಂಬ ಮಾನದಂಡ ಬಿಜೆಪಿಯಲ್ಲಿ ಇಲ್ಲ. ಅದೆಲ್ಲ ಕೇವಲ ಊಹಾಪೋಹ. ಗೆಲ್ಲುವ ಅಭ್ಯರ್ಥಿಗೆ, ಪಕ್ಷ ನಿಷ್ಠರಿಗೆ ಟಿಕೆಟ್ ಸಿಗಲಿದೆ' ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

'ಚುನಾವಣೆಗೆ ಟಿಕೆಟ್ ಹಂಚಿಕೆ ಮಾಡುವುದು ಪಕ್ಷದ ಹಂತದಲ್ಲಿ ನಡೆಯುವ ಒಂದು ಪ್ರಕ್ರಿಯೆ ಅಷ್ಟೇ. ಇದರಲ್ಲಿ ಯಾವುದೇ ಕಸರತ್ತು ಇರಲ್ಲ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 'ಮುಖ್ಯಮಂತ್ರಿ ಸಿದ್ದರಾಮಯ್ಯ ತುಷ್ಟೀಕರಣದ ರಾಜಕಾರಣ ಮಾಡುತ್ತಿದ್ದಾರೆ. ಪಾಕಿಸ್ತಾನ ಜಿಂದಾಬಾದ್ ಅಂದವರಿಗೆ ರಕ್ಷಣೆ, ಹಿಂದೂಸ್ತಾನ್ ಜಿಂದಾಬಾದ್ ಅಂದವರಿಗೆ ಶಿಕ್ಷೆ. ಇದು ಅವರ ಧೋರಣೆ. ಇದನ್ನೂ ಜನ ಗಮನಿಸುತ್ತಿದ್ದಾರೆ. ಕರ್ನಾಟಕದಲ್ಲಿ 28 ಸ್ಥಾನಗಳನ್ನು ಗೆಲ್ಲುವ ಮೂಲಕ ದಾಖಲೆ ಬರೆಯಲಿದ್ದೇವೆ' ಎಂದರು.

ಅಧಿಕಾರ ತ್ಯಾಗ ಮಾಡಿದ ನನಗೆ ಟಿಕೆಟ್ ಕೊಡಿ: ಪಾಟೀಲ


ಬಿ.ಸಿ.ಪಾಟೀಲ

ಹಿರೇಕೆರೂರು (ಹಾವೇರಿ ಜಿಲ್ಲೆ): 'ಟಿಕೆಟ್‌ಗಾಗಿ ಹೆದರಿಸುವುದು, ಬೆದರಿಸುವುದು ನಂಗೊತ್ತಿಲ್ಲ. ಸುಮ್ಮನಿದ್ದೇವೆ ಎಂದರೆ ಅದು ನಮ್ಮ ದೌರ್ಬಲ್ಯವಾಗಿ ಭಾವಿಸಬಾರದು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷ ನನಗೆ ಟಿಕೆಟ್ ನೀಡಬೇಕು' ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಆಗ್ರಹಿಸಿದರು.

'ನಾವು 17 ಶಾಸಕರು ಅಧಿಕಾರ, ಸ್ಥಾನ ತ್ಯಾಗ ಮಾಡಿದವರು. ನಮ್ಮಿಂದ ರಾಜ್ಯದಲ್ಲಿ ನಾಲ್ಕು ವರ್ಷ ಬಿಜೆಪಿ ಸರ್ಕಾರ ರಚನೆಯಾಗಿ, ಆಡಳಿತ ನಡೆಸಿತು. ನಮಗೆ ಟಿಕೆಟ್ ಕೊಡುವುದರಲ್ಲಿ ನ್ಯಾಯ ಇದೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಬಸವರಾಜ ಬೊಮ್ಮಾಯಿ ಈಗಾಗಲೇ ಒಮ್ಮೆ ಮುಖ್ಯಮಂತ್ರಿ ಆಗಿದ್ದಾರೆ. ನಾನು ಹಾವೇರಿ–ಗದಗ ಜಿಲ್ಲೆಗಳ ಉಸ್ತುವಾರಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಹಾವೇರಿ ಲೋಕಸಭೆ ಟಿಕೆಟ್ ನನಗೆ ಕೊಡುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಹಾಗೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದೇನೆ. ಆದರೆ, ಕೇಂದ್ರದ ನಾಯಕರನ್ನು ಭೇಟಿಯಾಗಿಲ್ಲ' ಎಂದು ಅವರು ತಿಳಿಸಿದರು.

'ಕಾಂತೇಶ್ ಇಲ್ಲವೇ ಬೊಮ್ಮಾಯಿ ಅವರಿಗೆ ಟಿಕೆಟ್ ಕೊಟ್ಟರೆ ಕಾರ್ಯಕರ್ತರೊಂದಿಗೆ ಮಾತನಾಡಿ ಮುಂದಿನ ನಿರ್ಣಯ ಕೈಗೊಳ್ಳುವೆ. ಅಭ್ಯರ್ಥಿಯು ಹಾವೇರಿ-ಗದಗನವರೇ ಆಗಬೇಕಲ್ಲವೇ? ಎಲ್ಲ ಈಗಲೇ ಹೇಳಿದರೆ ರುಚಿ ಉಳಿಯುವುದಿಲ್ಲ. ನಾನು ಎಚ್ಚರಿಕೆ ಕೊಡುತ್ತಿಲ್ಲ. ಟಿಕೆಟ್ ಕೊಡಿ ಎಂದು ಬೇಡಿಕೆ ಇಟ್ಟಿದ್ದೇನೆ' ಎಂದರು.

'ಟಿಕೆಟ್ ಸಿಗದಿದ್ದರೆ, ನನ್ನ ಮುಂದಿನ ನಡೆಯ ಬಗ್ಗೆ ಕಾರ್ಯಕರ್ತರ ಜೊತೆ ಚರ್ಚಿಸುವೆ. ನನಗೆ ನನ್ನದೇ ಹಾದಿ ಇದೆ. ನಾನು ನಡೆದಿದ್ದೇ ದಾರಿ. ನನಗೆ ಹೆಬ್ಬಾರ್, ಶೇಖರ್ ಹಾದಿ ಬೇಕಾಗಿಲ್ಲ. ಕೃಷಿ ಸಚಿವನಾಗಿ ರೈತರ ಹಿತ ಕಾಯ್ದಿದ್ದೇನೆ. ಕಾಂತೇಶ್ ಅವರ ಬಗ್ಗೆ ಮಾತನಾಡಲ್ಲ. ಕಾಂತೇಶ್‌ಗೂ ಮತ್ತು ನನಗೂ ಸಂಬಂಧ ಇಲ್ಲ' ಎಂದರು.

'ನನ್ನ ವಿರುದ್ಧದ ಪಿತೂರಿಯಿಂದ ಸತ್ಯ ಬಯಲು'


ಶೋಭಾ ಕರಂದ್ಲಾಜೆ

ಬೆಳಗಾವಿ: 'ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ನನ್ನ ವಿರುದ್ಧ ಪಿತೂರಿ ನಡೆದಿದೆ. ಇದರಿಂದ ತೊಂದರೆ ಬದಲು ಒಳ್ಳೆಯದೇ ಆಗಿದೆ. ನಾನು ಏನೆಲ್ಲ ಕೆಲಸ ಮಾಡಿದ್ದೇನೆ ಎಂಬುದು ನಾಯಕರಿಗೆ, ಜನರಿಗೆ ಗೊತ್ತಾಗಿದೆ' ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

'ಯಾವಾಗ ವಿರೋಧ ವ್ಯಕ್ತವಾಗುವುದೋ, ಆಗಲೇ ನಮ್ಮ ನಾಯಕರು ಮಾಹಿತಿ ಸಂಗ್ರಹಿಸುವರು. ನಮ್ಮ ಕೆಲಸ ಗುರುತಿಸುವರು. ಶೋಭಾಗೆ ಏಕೆ ವಿರೋಧವಿದೆ ಎಂಬ ಸತ್ಯ ಗೊತ್ತಾಗುತ್ತದೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿಯ ಬಹುತೇಕ ಹಾಲಿ ಸಂಸದರಿಗೆ ಟಿಕೆಟ್ ತಪ್ಪುತ್ತದೆ ಎಂದು ನಮ್ಮ ನಾಯಕರು ಎಲ್ಲಿಯೂ ಹೇಳಿಲ್ಲ. ಇದು ಮಾಧ್ಯಮಗಳಲ್ಲಿ ಮಾತ್ರ ಹರಿದಾಡುತ್ತಿದೆ. ಯಾರು ಒಳ್ಳೆಯ ಕೆಲಸ ಮಾಡಿದ್ದಾರೋ, ಅವರಿಗೆ ಟಿಕೆಟ್ ಸಿಗುತ್ತದೆ. ಇದು ಬಿಜೆಪಿಯ ಸೂತ್ರ. ಈ ಸಲವೂ ಬಿಜೆಪಿಗೆ ಅಭಿವೃದ್ಧಿಯೇ ಮಾನದಂಡ' ಎಂದು ಅವರು ಹೇಳಿದರು.

'ಚುನಾವಣೆ ಬಂದ ಕಾರಣ ಅಡುಗೆ ಅನಿಲ ಹಾಗೂ ಪೆಟ್ರೋಲ್ ದರ ಇಳಿಸಿಲ್ಲ. ಅನಿಲಗಳ ದರ ವ್ಯತ್ಯಾಸ ವಿದೇಶಿ ಮಾರುಕಟ್ಟೆ ಮೇಲೆ ನಿರ್ಧಾರವಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳು, ರಸಗೊಬ್ಬರ, ಖಾದ್ಯ ತೈಲದಲ್ಲಿ ನಾವು ಸ್ವಾವಲಂಬಿ ಆಗಿಲ್ಲ. ಹೀಗಾಗಿ ದರ ಏರಿಕೆ–ಇಳಿಕೆ ಸಹಜ' ಎಂದು ಅವರು ಹೇಳಿದರು.

'ಸಂವಿಧಾನ ತಿದ್ದುಪಡಿಗೆ 400 ಸೀಟು ಗೆಲ್ಲಬೇಕು'

ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): 'ದೇಶದ ಸಂವಿಧಾನದಲ್ಲಿ ಕಾಂಗ್ರೆಸ್ ಬೇಡದ್ದನ್ನು ಸೇರಿಸಿದೆ. ಸಂವಿಧಾನದಲ್ಲಿ ತಿದ್ದುಪಡಿ ಮಾಡಬೇಕಿದ್ದು, ಅದಕ್ಕಾಗಿ ಬಿಜೆಪಿಯು ಲೋಕಸಭೆ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕಿದೆ' ಎಂದು ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ತಾಲ್ಲೂಕಿನ ಹಲಗೇರಿಯಲ್ಲಿ ಶನಿವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಸಾವಿರ ವರ್ಷದಿಂದ ಹಿಂದೂ ಸಮಾಜವನ್ನು ತುಳಿಯಲಾಗುತ್ತಿದೆ. ಈಗ ನಾವು ಉತ್ತರ ಕೊಡುವ ಸ್ಥಾನಕ್ಕೆ ಬಂದಿದ್ದೇವೆ. ಜಗತ್ತು ನಮ್ಮ ಕಡೆ ತಿರುಗಿ ನೋಡುತ್ತಿದೆ. ಇದಕ್ಕೆ ಕಾರಣ ಮೋದಿ ನೇತೃತ್ವದ ಬಿಜೆಪಿ ಸರ್ಕಾರ' ಎಂದರು.

'ಕೈ' ಟಿಕೆಟ್ ನಿರಾಕರಿಸಿದ ಎಸ್‌ಟಿಎಸ್, ಹೆಬ್ಬಾರ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ತ್ಯಜಿಸಿ ಮರಳಿ 'ಕೈ' ಹಿಡಿಯಲು ಮುಂದಾಗಿರುವ ಶಾಸಕರಾದ ಎಸ್.ಟಿ. ಸೋಮಶೇಖರ್ (ಯಶವಂತಪುರ) ಮತ್ತು ಶಿವರಾಮ ಹೆಬ್ಬಾರ್ (ಯಲ್ಲಾಪುರ) ಅವರಿಗೆ ಲೋಕಸಭೆ ಚುನಾವಣೆಗೆ ಟಿಕೆಟ್ ನೀಡಲು ಕಾಂಗ್ರೆಸ್ ಮುಂದಾದರೂ ಇಬ್ಬರೂ ಕಣಕ್ಕಿಳಿಯಲು ನಿರಾಕರಿಸಿದ್ದಾರೆ.

ಏಳು ಕ್ಷೇತ್ರಗಳಿಗೆ ಟಿಕೆಟ್ ಘೋಷಿಸಿರುವ ಕಾಂಗ್ರೆಸ್, ಇನ್ನೂ 21 ಕ್ಷೇತ್ರಗಳಿಗೆ ಅಭ್ಯರ್ಥಿ ಹುಡುಕಾಟದಲ್ಲಿದೆ. ಕೆಲವು ಕ್ಷೇತ್ರಗಳಿಗೆ ಪಕ್ಷದ ರಾಜ್ಯ ಘಟಕ ಶಿಫಾರಸು ಮಾಡಿರುವ ಹೆಸರುಗಳ ಪಟ್ಟಿಗೆ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್ ವರಿಷ್ಠರು, ಈ ಕಾರಣಕ್ಕೆ ಟಿಕೆಟ್ ಘೋಷಣೆ ತಡೆಹಿಡಿದಿದ್ದಾರೆ ಎಂದು ಗೊತ್ತಾಗಿದೆ.

'ಬೆಂಗಳೂರು ಉತ್ತರ ಅಥವಾ ಮೈಸೂರು– ಕೊಡಗು ಕ್ಷೇತ್ರದಿಂದ ಎಸ್.ಟಿ.ಸೋಮಶೇಖರ್, ಉತ್ತರಕನ್ನಡ ಕ್ಷೇತ್ರದಿಂದ ಶಿವರಾಮ ಹೆಬ್ಬಾರ್ ಅವರನ್ನು ಅಚ್ಚರಿಯ ಅಭ್ಯರ್ಥಿಗಳಾಗಿ ಕಣಕ್ಕಿಳಿಸಲು ಚರ್ಚೆ ನಡೆದಿರುವುದು ನಿಜ. ಆದರೆ, ಲೋಕಸಭೆ ಚುನಾವಣೆ ಎದುರಿಸಲು ಅವರಿಬ್ಬರೂ ಉತ್ಸುಕತೆ ತೋರಿಸಿಲ್ಲ' ಎನ್ನುತ್ತವೆ ಕಾಂಗ್ರೆಸ್ ಮೂಲಗಳು.

ವಿಧಾನಸಭೆಯಿಂದ ರಾಜ್ಯಸಭೆಗೆ ಇತ್ತೀಚೆಗೆ ನಡೆದಿದ್ದ ಚುನಾವಣೆಯಲ್ಲಿ ಎಸ್.ಟಿ.ಸೋಮಶೇಖರ್ ಅವರು ಅಡ್ಡ ಮತದಾನ ಮಾಡಿ ಬಿಜೆಪಿಗೆ ಸಡ್ಡು ಹೊಡೆದಿದ್ದರು. ಮತದಾನಕ್ಕೆ ಗೈರಾಗುವ ಮೂಲಕ ಶಿವರಾಮ ಹೆಬ್ಬಾರ್ ಪಕ್ಷದ ವಿಪ್ ಉಲ್ಲಂಘಿಸಿದ್ದರು. ಈ ಇಬ್ಬರೂ ಕಾಂಗ್ರೆಸ್ ಕಡೆಗೆ ವಾಲಿದ್ದಾರೆ.

'ಈಗ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರೆ, ಆ ವಿಧಾನಸಭಾ ಕ್ಷೇತ್ರಗಳಿಗೆ ಲೋಕಸಭೆ ಚುನಾವಣೆ ಜೊತೆಗೇ ಉಪ ಚುನಾವಣೆ ಘೋಷಣೆಯಾಗಬಹುದು. ಅದನ್ನು ತಪ್ಪಿಸಲು ಲೋಕಸಭೆ ಚುನಾವಣೆ ಘೋಷಣೆಯಾದ ಬಳಿಕ ರಾಜೀನಾಮೆ ನೀಡಲು ಸೋಮಶೇಖರ್ ಮತ್ತು ಹೆಬ್ಬಾರ್ ನಿರ್ಧರಿಸಿದ್ದಾರೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

ಚಿತ್ರದುರ್ಗ 'ಕೈ' ಟಿಕೆಟ್ ಜಟಾಪಟಿ: ಚಿತ್ರದುರ್ಗ (ಎಸ್‌ಸಿ ಮೀಸಲು) ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಜಟಾಪಟಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಂಗಳ ತಲುಪಿದೆ. ಈ ಕ್ಷೇತ್ರದಿಂದ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ ಅವರ ಹೆಸರು ಬಲವಾಗಿ ಕೇಳಿ ಬರುತ್ತಿದೆ. ಮೊದಲ ಪಟ್ಟಿಯಲ್ಲಿ ಹೆಸರು ಘೋಷಣೆಯಾಗದ ಕಾರಣ ಇದೀಗ ಪೈಪೋಟಿ ತೀವ್ರವಾಗಿದೆ.

'ಬಿ.ಎನ್. ಚಂದ್ರಪ್ಪ ಅವರು ಮಾದಿಗ ಸಮುದಾಯದವರೇ ಅಲ್ಲ. ಹೀಗಾಗಿ ಅವರಿಗೆ ಟಿಕೆಟ್ ನೀಡಬಾರದು' ಎಂದು ಮಾದಿಗ ಸಮುದಾಯದ ಕೆಲವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಒತ್ತಾಯಿಸಿದ್ದಾರೆ. ಚಂದ್ರಪ್ಪ ಅವರ ಶಾಲಾ ದಾಖಲಾತಿ ಜೊತೆ ಬಂದಿದ್ದ ಈ ನಾಯಕರು, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ಪುತ್ರ ವಿನಯ್ ತಿಮ್ಮಾಪುರಗೆ ಟಿಕೆಟ್ ನೀಡುವಂತೆ ಆಗ್ರಹಿಸಿದ್ದಾರೆ.


100ನೇ ಟೆಸ್ಟ್ ಆಡಿದ ಅಶ್ವಿನ್‌ಗೆ ಐದರ ಗೊಂಚಲು • ಆ್ಯಂಡರ್ಸನ್‌ಗೆ 700ರ ಮೈಲುಗಲ್ಲು

ಇಂಗ್ಲೆಂಡ್ 'ಬಾಝ್‌ಬಾಲ್' ಧ್ವಂಸ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಭಾರತ ತಂಡಕ್ಕೆ ಇಂಗ್ಲೆಂಡ್ ಎದುರು 4–1ರಿಂದ ಸರಣಿ ಜಯ
- ಐದು ವಿಕೆಟ್ ಗೊಂಚಲು ಗಳಿಸಿದ ಬಷೀರ್



ಸರಣಿ ಜಯದ ಟ್ರೋಫಿಯೊಂದಿಗೆ ಭಾರತ ತಂಡದ ಆಟಗಾರರ ಸಂಭ್ರಮ —ಪಿಟಿಐ ಚಿತ್ರ

ಧರ್ಮಶಾಲಾ: ರವಿಚಂದ್ರನ್ ಅಶ್ವಿನ್ ಮತ್ತು ಜಾನಿ ಬೆಸ್ಟೊ ಅವರಿಬ್ಬರೂ 100ನೇ ಟೆಸ್ಟ್ ಆಡಿದರು. ಆದರೆ ಅವರಿಬ್ಬರ ಅದೃಷ್ಟವೂ ವಿಭಿನ್ನವಾಗಿತ್ತು.

ಅನುಭವಿ ಆಫ್‌ಸ್ಪಿನ್ನರ್ ಅಶ್ವಿನ್ ಈ ಸರಣಿಯ ಮೊದಲ ಮೂರು ಪಂದ್ಯಗಳಲ್ಲಿ ಆಡಿದ್ದಕ್ಕಿಂತಲೂ ಹಿಮಾಚಲಪ್ರದೇಶ ಕ್ರಿಕೆಟ್ ಕ್ರೀಡಾಂಗಣದಲ್ಲಿ ವಿಭಿನ್ನವಾಗಿ ಆಡಿದರು. ತಮ್ಮ ನೈಜ ಲಯಕ್ಕೆ ಮರಳಿದ ಅವರು (128ಕ್ಕೆ9 –ಪಂದ್ಯದಲ್ಲಿ) ತಮ್ಮ ನೂರನೇ ಟೆಸ್ಟ್ ಪಂದ್ಯವನ್ನು ಸ್ಮರಣೀಯಗೊಳಿಸಿಕೊಂಡರು. ಅದರಲ್ಲಿ ಎರಡನೇ ಇನಿಂಗ್ಸ್‌ನ ಐದು ವಿಕೆಟ್ ಗೊಂಚಲು ಕೂಡ ಸೇರಿತ್ತು. ಅದರಿಂದಾಗಿ ಭಾರತ ತಂಡವು ಸರಣಿಯಲ್ಲಿಯೇ ದೊಡ್ಡ ಜಯ ಸಾಧಿಸಿತು. ಇನ್ನೊಂದೆಡೆ ಜಾನಿ ಬೆಸ್ಟೊ ಎರಡೂ ಇನಿಂಗ್ಸ್‌ಗಳಲ್ಲಿ (29 ಮತ್ತು 39 ರನ್) ಬಿರುಸಿನಿಂದ ಬ್ಯಾಟ್ ಬೀಸಿದರು. ಇಂಗ್ಲೆಂಡ್ ತಂಡದ 'ಬ್ರ್ಯಾಂಡ್' ಬಾಝ್‌ಬಾಲ್ ಕ್ರಿಕೆಟ್ ಅವರ ಬ್ಯಾಟಿಂಗ್‌ನಲ್ಲಿ ಕಂಡಿತು. ಆದರೆ ಅದು ಪ್ರವಾಸಿ ತಂಡಕ್ಕೆ ತಿರುಗುಬಾಣವಾಯಿತು.

ಸರಣಿಯ ಮೊದಲ ಟೆಸ್ಟ್‌ನಲ್ಲಿ ಸೋತರೂ ಭಾರತ ನಂತರದ ಪಂದ್ಯಗಳಲ್ಲಿ ಸತತ ಜಯ ಸಾಧಿಸಿತು. 4–1ರಿಂದ ಸರಣಿ ಕಿರೀಟ ಧರಿಸಿತು. ಆತಿಥೇಯರು ಪುಟಿದೆದ್ದ ರೀತಿ ನೋಡಿಯೂ ತನ್ನ ಸಾಂಪ್ರದಾಯಿಕ ತಂತ್ರಗಾರಿಕೆಗೆ ಇಂಗ್ಲೆಂಡ್ ಕಟ್ಟುಬಿದ್ದಿದ್ದು ಸೋಲಿಗೆ ಹಾದಿಯಾಯಿತು. ಐದನೇ ಮತ್ತು ಕೊನೆಯ ಪಂದ್ಯದ ಮೂರನೇ ದಿನದ ಎರಡನೇ ಅವಧಿಯಲ್ಲಿಯೇ ಇನಿಂಗ್ಸ್ ಮತ್ತು 64 ರನ್‌ಗಳಿಂದ ಸೋತಿತು.

ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ತಂಡವು 8 ವಿಕೆಟ್‌ಗಳಿಗೆ 473 ರನ್ ಗಳಿಸಿತ್ತು. ಶನಿವಾರ ಬೆಳಿಗ್ಗೆ ಈ ಮೊತ್ತಕ್ಕೆ ಹೆಚ್ಚು ರನ್‌ಗಳು ಸೇರಲು ವೇಗಿ ಜೇಮ್ಸ್ ಆ್ಯಂಡರ್ಸನ್ ಮತ್ತು ಸ್ಪಿನ್ನರ್ ಶೋಯಬ್ ಬಷೀರ್ ಬಿಡಲಿಲ್ಲ. ಕ್ರೀಸ್‌ನಲ್ಲಿದ್ದ ಕುಲದೀಪ್ ಯಾದವ್ ವಿಕೆಟ್ ಗಳಿಸಿದ ಆ್ಯಂಡರ್ಸನ್ 700ರ ಮೈಲುಗಲ್ಲು ಮುಟ್ಟಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ವೇಗದ ಬೌಲರ್ ಎನಿಸಿದರು. ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಸ್ಪಿನ್ನರ್‌ಗಳಾದ ಮುತ್ತಯ್ಯ ಮುರಳೀಧರನ್ ಮತ್ತು ಶೇನ್ ವಾರ್ನ್ ನಂತರದ ಸ್ಥಾನ ಗಳಿಸಿದರು.

ಯಾದವ್ ವಿಕೆಟ್ ಪಡೆದ 42 ವರ್ಷದ ಆ್ಯಂಡರ್ಸನ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು. ಕೆಲ ನಿಮಿಷಗಳ ನಂತರ ಬಷೀರ್ ಬೌಲಿಂಗ್‌ನಲ್ಲಿ ಬೂಮ್ರಾ ಕೂಡ ಔಟಾದರು. ನಂತರದಲ್ಲಿ ಇಂಗ್ಲೆಂಡ್ ತಂಡಕ್ಕೆ ಸಂಭ್ರಮಿಸುವ ಅವಕಾಶಗಳು ಸಿಗಲಿಲ್ಲ.

ಭಾರತ ಗಳಿಸಿದ್ದ 259 ರನ್‌ಗಳ ಮುನ್ನಡೆಯನ್ನು ಚುಕ್ತಾ ಮಾಡುವ ಹಾದಿಯಲ್ಲಿ ಇಂಗ್ಲೆಂಡ್ 48.1 ಓವರ್‌ಗಳಲ್ಲಿ 195 ರನ್‌ಗಳಿಗೆ ಸರ್ವಪತನ ಕಂಡಿತು. ಜೋ ರೂಟ್ (84; 128ಎ, 4X12) ಅವರೊಬ್ಬರೇ ಭಾರತ ತಂಡದ ದಾಳಿಯನ್ನು ದಿಟ್ಟವಾಗಿ ಎದುರಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಕುಲದೀಪ್ ಯಾದವ್ ಐದು ವಿಕೆಟ್ ಗಳಿಸಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಅಶ್ವಿನ್ ಸೃಷ್ಟಿಸಿದ 'ಚಕ್ರವ್ಯೂಹ'ದಲ್ಲಿ ಇಂಗ್ಲೆಂಡ್ ಪತನವಾಯಿತು. ಹೊಸ ಚೆಂಡಿನಲ್ಲಿ ಅಶ್ವಿನ್ (77ಕ್ಕೆ5) ಪಂಚಗುಚ್ಛದ ಸಾಧನೆ ಮಾಡಿ, ಅನಿಲ್ ಕುಂಬ್ಳೆ (35) ದಾಖಲೆಯನ್ನು ಹಿಂದಿಕ್ಕಿದರು.

ಸಾಂಪ್ರದಾಯಿಕ ಆಫ್‌ಸ್ಪಿನ್ ಎಸೆತಗಳ ಜೊತೆಗೆ, ಕೇರಂ ಬಾಲ್, ಅಂಡರ್‌ಕಟರ್ಸ್ ಗಳ ಮೂಲಕ ವಿಕೆಟ್ ಕಬಳಿಸಿದರು. ಇದರಿಂದಾಗಿ ಪ್ರವಾಸಿ ಬಳಗವು ಊಟದ ವಿರಾಮಕ್ಕೆ 103 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಅದರಲ್ಲಿ ಬೆನ್ ಸ್ಟೋಕ್ಸ್ ಸೇರಿದಂತೆ ನಾಲ್ಕು ವಿಕೆಟ್‌ಗಳೂ ಅಶ್ವಿನ್ ಪಾಲಾಗಿದ್ದವು. ರೋಹಿತ್ ಶರ್ಮಾ ಬೆನ್ನುನೋವಿನಿಂದಾಗಿ ಫೀಲ್ಡಿಂಗ್ ಮಾಡಲಿಲ್ಲ. ವಿರಾಮದ ನಂತರ ಬೂಮ್ರಾ ಅವರಿಗೆ ಟಾಮ್ ಹಾರ್ಟ್ಲಿ ಮತ್ತು ಮಾರ್ಕ್ ವುಡ್ ವಿಕೆಟ್ ಒಪ್ಪಿಸಿದರು. ಬಷೀರ್ ವಿಕೆಟ್ ಜಡೇಜ ಪಾಲಾಯಿತು. ರೂಟ್ ಅವರೂ ಕುಲದೀಪ್ ಎಸೆತದಲ್ಲಿ ಬೂಮ್ರಾಗೆ ಕ್ಯಾಚಿತ್ತರು. ಸರಣಿಗೆ ತೆರೆಬಿತ್ತು.

ಟೆಸ್ಟ್ ಸರಣಿಯಲ್ಲಿ ಗರಿಷ್ಠ ಸಿಕ್ಸರ್‌ಗಳು

ಸರಣಿ	ಸಿಕ್ಸರ್
ಭಾರತ–ಇಂಗ್ಲೆಂಡ್ (2024)	102
ಇಂಗ್ಲೆಂಡ್–ಆಸ್ಟ್ರೇಲಿಯಾ (2024)	74
ಆಸ್ಟ್ರೇಲಿಯಾ–ಇಂಗ್ಲೆಂಡ್ (2013–24)	65
ಭಾರತ–ದ.ಆಫ್ರಿಕಾ (2019)	65
ಪಾಕಿಸ್ತಾನ–ನ್ಯೂಜಿಲೆಂಡ್ (2014)	59

ಮಾಹಿತಿ: ಐಸಿಸಿ ವೆಬ್‌ಸೈಟ್

ಡಬ್ಲ್ಯುಟಿಸಿ: ಅಗ್ರಸ್ಥಾನದಲ್ಲಿ ಭಾರತ

ದುಬೈ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಇಂಗ್ಲೆಂಡ್ ವಿರುದ್ಧ 4–1ರಿಂದ ಸರಣಿ ಜಯಿಸಿದ ಭಾರತ ತಂಡವು ಡಬ್ಲ್ಯುಟಿಸಿ ಪಾಯಿಂಟ್‌ಗಳಲ್ಲಿ ಶೇ 68.51ರ ಸಾಧನೆ ಮಾಡಿದೆ. ಭಾರತ ತಂಡವು ಈ ಆವೃತ್ತಿಯಲ್ಲಿ ಆಡಿರುವ ಒಂಬತ್ತು ಟೆಸ್ಟ್‌ಗಳಲ್ಲಿ ಆರರಲ್ಲಿ ಗೆದ್ದಿದೆ. ಎರಡರಲ್ಲಿ ಸೋತಿದೆ ಮತ್ತು ಒಂದು ಪಂದ್ಯ ಡ್ರಾ ಆಗಿದೆ. ಧರ್ಮಶಾಲಾ ಪಂದ್ಯದ ಗೆಲುವಿನಿಂದ 12 ಅಂಕಗಳನ್ನು ಗಳಿಸಿದೆ. ಶೇ 60ರ ಪಾಯಿಂಟ್ ಸರಾಸರಿಯೊಂದಿಗೆ ನ್ಯೂಜಿಲೆಂಡ್ ತಂಡವು ಎರಡನೇ ಸ್ಥಾನದಲ್ಲಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್

ಇಂಗ್ಲೆಂಡ್ 218 (57.4 ಓವರ್‌ಗಳಲ್ಲಿ)

ಭಾರತ: 477 (124.1 ಓವರ್‌ಗಳಲ್ಲಿ) (ಶುಕ್ರವಾರ: 8 ವಿಕೆಟ್‌ಗೆ 473)

ಕುಲದೀಪ್ ಸಿ ಫೋಕ್ಸ್ ಬಿ ಆ್ಯಂಡರ್ಸನ್ 30 (69ಎ, 4x2)
ಬೂಮ್ರಾ ಸ್ಟಂ ಫೋಕ್ಸ್ ಬಿ ಬಶೀರ್ (64ಎ, 4x2)
ಸಿರಾಜ್ ಔಟಾಗದೇ 0 (2ಎ)
ಇತರೆ: 6 (ಲೆಗ್‌ಬೈ 4, ನೋಬಾಲ್ 2)
ವಿಕೆಟ್ ಪತನ: 9–477 (ಕುಲದೀಪ್ ಯಾದವ್, 123.4), 10–477 (ಜಸ್‌ಪ್ರೀತ್ ಬೂಮ್ರಾ, 124.1)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 16–2–60–2; ಮಾರ್ಕ್ ವುಡ್ 15–1–89–0; ಟಾಮ್ ಹಾರ್ಟ್ಲಿ 39–3–126–2; ಶೋಯೆಬ್ ಬಶೀರ್ 46.1–5–173–5; ಬೆನ್ ಸ್ಟೋಕ್ಸ್ 5–1–17–1; ಜೋ ರೂಟ್ 3–1–8–0

ಎರಡನೇ ಇನಿಂಗ್ಸ್: ಇಂಗ್ಲೆಂಡ್: 195 (48.1 ಓವರುಗಳಲ್ಲಿ)

ಕ್ರಾಲಿ ಸಿ ಖಾನ್, ಬಿ ಅಶ್ವಿನ್ 0 (16ಎ)
ಡಕೆಟ್ ಬಿ ಅಶ್ವಿನ್ 2 (5ಎ)
ಪೋಪ್ ಸಿ ಜೈಸ್ವಾಲ್ ಬಿ ಅಶ್ವಿನ್ 19 (23ಎ, 4x3)
ರೂಟ್ ಸಿ ಬೂಮ್ರಾ ಬಿ ಕುಲದೀಪ್ 84 (128ಎ, 4x12)
ಬೇಸ್ಟೊ ಎಲ್‌ಬಿಡಬ್ಲ್ಯು ಕುಲದೀಪ್ 39 (31ಎ, 4x3, 6x3)
ಸ್ಟೋಕ್ಸ್ ಬಿ ಅಶ್ವಿನ್ 2 (10ಎ)
ಫೋಕ್ಸ್ ಬಿ ಅಶ್ವಿನ್ 8 (17ಎ)
ಹಾರ್ಟ್ಲಿ ಎಲ್‌ಬಿಡಬ್ಲ್ಯು ಬಿ ಬೂಮ್ರಾ 20 (24ಎ, 4x4)
ವುಡ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (2ಎ)
ಬಶೀರ್ ಬಿ ಜಡೇಜ 13 (29ಎ, 4x3)
ಆ್ಯಂಡರ್ಸನ್ ಔಟಾಗದೇ 0 (5ಎ)
ಇತರೆ: 8 (ಬೈ 6, ಲೆಗ್‌ಬೈ 1, ನೋಬಾಲ್ 1)
ವಿಕೆಟ್ ಪತನ: 1–2 (ಬೆನ್ ಡಕೆಟ್, 1.5), 2–21 (ಜಾಕ್ ಕ್ರಾಲಿ, 5.3), 3–36 (ಓಲಿ ಪೋಪ್, 9.2), 4–92 (ಜಾನಿ ಬೆಸ್ಟೊ, 17.4), 5–103 (ಬೆನ್ ಸ್ಟೋಕ್ಸ್, 22.5), 6–113 (ಬೆನ್ ಫೋಕ್ಸ್, 26.4), 7–141 (ಟಾಮ್ ಹಾರ್ಟ್ಲಿ, 34.2), 8–141 (ಮಾರ್ಕ್ ವುಡ್, 34.4), 9–189 (ಶೋಯೆಬ್ ಬಶೀರ್, 45.5), 10–195 (ಜೋ ರೂಟ್, 48.1).
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–2–38–2; ರವಿಚಂದ್ರನ್ ಅಶ್ವಿನ್ 14–0–77–5; ರವೀಂದ್ರ ಜಡೇಜ 9–1–25–1; ಕುಲದೀಪ್ ಯಾದವ್ 14.1–0–40–2; ಮೊಹಮ್ಮದ್ ಸಿರಾಜ್ 1–0–8–0
ಪಂದ್ಯದ ಆಟಗಾರ: ಕುಲದೀಪ್ ಯಾದವ್
ಸರಣಿಯ ಆಟಗಾರ: ಯಶಸ್ವಿ ಜೈಸ್ವಾಲ್

ಫಲಿತಾಂಶ: ಭಾರತಕ್ಕೆ ಇನಿಂಗ್ಸ್ ಹಾಗೂ 62 ರನ್ ಜಯ

100ನೇ ಟೆಸ್ಟ್‌ನಲ್ಲಿ ಶ್ರೇಷ್ಠ ಬೌಲಿಂಗ್

ವಿಕೆಟ್	ಬೌಲರ್	ಎದುರಾಳಿ	ಸ್ಥಳ	ವರ್ಷ
128ಕ್ಕೆ9	ಆರ್. ಅಶ್ವಿನ್ (ಭಾರತ)	ಇಂಗ್ಲೆಂಡ್	ಧರ್ಮಶಾಲಾ	2024
141ಕ್ಕೆ9	ಮುತ್ತಯ್ಯ ಮುರಳೀಧರನ್ (ಶ್ರೀಲಂಕಾ)	ಬಾಂಗ್ಲಾ	ಛತ್ತೋಗ್ರಾಮ್	2006
231ಕ್ಕೆ8	ಶೇನ್ ವಾರ್ನ್ (ಆಸ್ಟ್ರೇಲಿಯಾ)	ದ.ಆಫ್ರಿಕಾ	ಕೇಪ್‌ಟೌನ್	2002
151ಕ್ಕೆ7	ಕಪಿಲ್ ದೇವ್ (ಭಾರತ)	ಪಾಕಿಸ್ತಾನ	ಕರಾಚಿ	1989

ತಮ್ಮ 100ನೇ ಟೆಸ್ಟ್‌ನಲ್ಲಿ ಐದು ವಿಕೆಟ್ ಸಾಧನೆ

ವಿಕೆಟ್	ಬೌಲರ್	ಎದುರಾಳಿ	ಸ್ಥಳ	ವರ್ಷ
161ಕ್ಕೆ6	ಶೇನ್ ವಾರ್ನ್ (ಆಸ್ಟ್ರೇಲಿಯಾ)	ದಕ್ಷಿಣ ಆಫ್ರಿಕಾ	ಕೇಪ್‌ಟೌನ್	2002
89ಕ್ಕೆ5	ಅನಿಲ್ ಕುಂಬ್ಳೆ (ಭಾರತ)	ಶ್ರೀಲಂಕಾ	ಅಹಮದಾಬಾದ್	2005
54ಕ್ಕೆ6	ಮುತ್ತಯ್ಯ ಮುರಳೀಧರನ್ (ಶ್ರೀಲಂಕಾ)	ಬಾಂಗ್ಲಾ	ಛತ್ತೋಗ್ರಾಮ್	2006
77ಕ್ಕೆ5	ಆರ್. ಅಶ್ವಿನ್ (ಭಾರತ)	ಇಂಗ್ಲೆಂಡ್	ಧರ್ಮಶಾಲಾ	2024

* ಪದಾರ್ಪಣೆ ಮತ್ತು 100ನೇ ಟೆಸ್ಟ್‌ಗಳಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ ಮೊದಲ ಬೌಲರ್ ಆರ್. ಅಶ್ವಿನ್


ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು ಔಟಾದಾಗ ಹತಾಶೆಯಿಂದ ಬ್ಯಾಟ್ ಬೀಸಾಕಿದರು —ಎಎಫ್‌ಪಿ ಚಿತ್ರ

ಮುಂಬೈ ಗೆಲ್ಲಿಸಿದ ಹರ್ಮನ್‌ಪ್ರೀತ್ ಕೌರ್

ಮಹಿಳಾ ಪ್ರೀಮಿಯರ್ ಲೀಗ್: ಗುಜರಾತ್ ಜೈಂಟ್ಸ್ ವಿರುದ್ಧ 7 ವಿಕೆಟ್ ಜಯ

ನವದೆಹಲಿ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡ, ಶನಿವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಕೇವಲ ಒಂದು ಎಸೆತ ಇರುವಂತೆ ಏಳು ವಿಕೆಟ್‌ಗಳಿಂದ ಸೋಲಿಸಿತು. ಮುಂಬೈ ತಂಡ ಈ ಗೆಲುವಿನೊಡನೆ ಒಟ್ಟು 10 ಪಾಯಿಂಟ್ಸ್ ಗಳಿಸಿದ್ದು ಲೀಗ್‌ನಲ್ಲಿ ಅಗ್ರಸ್ಥಾನಕ್ಕೇರಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಕೌರ್ ಅಜೇಯ 95 ರನ್ ಬಾರಿಸಿದರು. ಐದು ರನ್‌ಗಳಿಂದ ಶತಕ ಕಳೆದುಕೊಂಡರೂ ಅವರ ಆಟ ಶತಕದಷ್ಟೇ ಮೌಲ್ಯಯುತವಾಯಿತು. ಕೇವಲ 48 ಎಸೆತಗಳ ಇನಿಂಗ್ಸ್‌ನಲ್ಲಿ ಅವರು 10 ಬೌಂಡರಿ, ಐದು ಸಿಕ್ಸರ್‌ಗಳನ್ನು ಬಾರಿಸಿ ಸವಾಲೆಂದು ಕಂಡಿದ್ದ ಗೆಲುವನ್ನು ಸುಲಭಗೊಳಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ್ದ ಗುಜರಾತ್ ಜೈಂಟ್ಸ್ 20 ಓವರುಗಳಲ್ಲಿ 7 ವಿಕೆಟ್‌ಗೆ 190 ರನ್ ಗಳಿಸಿತು. ಮುಂಬೈ ತಂಡ 19.5 ಓವರುಗಳಲ್ಲಿ 3 ವಿಕೆಟ್‌ಗೆ 191 ರನ್ ಹೊಡೆದು ಸಂಭ್ರಮಿಸಿತು.

ಆರಂಭ ಆಟಗಾರ್ತಿ ಹಾಗೂ ವಿಕೆಟ್‌ಕೀಪರ್ ಯಷ್ತಿಕಾ ಭಾಟಿಯಾ 49 ರನ್‌ಗಳ ಕೊಡುಗೆಯಿತ್ತರು.


ಮುಂಬೈ ಇಂಡಿಯನ್ಸ್ ತಂಡದ ಹರ್ಮನ್‌ಪ್ರೀತ್ ಕೌರ್ ಪಿಟಿಐ ಚಿತ್ರ

ಆದರೆ 'ಪಂದ್ಯದ ಆಟಗಾರ್ತಿ' ಹರ್ಮನ್‌ಪ್ರೀತ್ ಅವರ ಅಬ್ಬರದ ಆಟವೇ ಗೆಲುವಿನಲ್ಲಿ ಎದ್ದುಕಂಡಿತು. ಮೂರನೇ ವಿಕೆಟ್‌ಗೆ ಬಂದ 93 ರನ್‌ಗಳಲ್ಲಿ ಸಿಂಹಪಾಲು ಅವರದೇ ಕೊಡುಗೆ. ಅಮೆಲಿಯಾ ಕೆರ್ ಗಳಿಸಿದ್ದು ಅಜೇಯ 12 (10 ಎಸೆತ).

ಕೊನೆಯ ಓವರ್‌ನಲ್ಲಿ 13 ರನ್ ಬೇಕಿದ್ದು, ಮೊದಲ ಎರಡು ಎಸೆತಗಳಲ್ಲಿ ಕೌರ್ ಸಿಕ್ಸರ್ ಮತ್ತು ಬೌಂಡರಿ ಬಾರಿಸಿ ಗೆಲುವನ್ನು ಸುಲಭಗೊಳಿಸಿದರು.

ಇದಕ್ಕೆ ಮೊದಲು, ಎಡಗೈ ಬ್ಯಾಟರ್ ಬೆತ್ ಮೂನಿ (66, 35 ಎಸೆತ, 4x8, 6x3) ಮತ್ತು ಡಿ.ಹೇಮಲತಾ (74, 40ಎಸೆತ, 4x9 6x2) ಅವರ ಮಿಂಚಿನ ಅರ್ಧ ಶತಕಗಳ ನೆರವಿನಿಂದ ಗುಜರಾತ್ ತಂಡ ಸವಾಲಿನ ಮೊತ್ತ ಗಳಿಸಿತ್ತು. ಇವರಿಬ್ಬರು ಎರಡನೇ ವಿಕೆಟ್‌ಗೆ ಕ್ಷಿಪ್ರಗತಿಯಲ್ಲಿ 121 ರನ್ ಸೇರಿಸಿದ್ದರು.

ಆಸ್ಟ್ರೇಲಿಯಾದ ಮೂನಿ ಅವರಿಗೆ ಇದು ಲೀಗ್‌ನಲ್ಲಿ ಸತತ ಎರಡನೇ ಅರ್ಧಶತಕ. ಹೇಮಲತಾ, ಮುಂಬೈ ಇಂಡಿಯನ್ಸ್ ಸ್ಪಿನ್ನರ್ ಮೇಲೆ ಮುಗಿಬಿದ್ದರೆ, ಮೂನಿ ಎದುರಾಳಿ ವೇಗಿಗಳನ್ನು ದಂಡಿಸಿದರು. ಮೂನಿ ಕೇವಲ 27 ಎಸೆತಗಳಲ್ಲಿ ಅರ್ಧ ಶತಕ ದಾಟಿದರು.

ಸ್ಕೋರುಗಳು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 7 ವಿಕೆಟ್‌ಗೆ 190 (ಬೆತ್ ಮೂನಿ 66, ಡಿ.ಹೇಮಲತಾ 74, ಭಾರತಿ ಫುಲ್ಮಾಲಿ ಔಟಾಗದೇ 21; ಸೈಕಾ ಇಶಾಖ್ 31ಕ್ಕೆ2); ಮುಂಬೈ ಇಂಡಿಯನ್ಸ್: 19.5 ಓವರುಗಳಲ್ಲಿ 3 ವಿಕೆಟ್‌ಗೆ 191 (ಯಷ್ತಿಕಾ ಭಾಟಿಯಾ 49 ಹರ್ಮನ್‌ಪ್ರೀತ್ ಕೌರ್ ಔಟಾಗದೇ 95).

ಭಾನುವಾರದ ಪಂದ್ಯ: ಡೆಲ್ಲಿ ಕ್ಯಾಪಿಟಲ್ಸ್– ರಾಯಲ್ ಚಾಲೆಂಜರ್ಸ್ ಬೆಂಗಳೂರು (ರಾತ್ರಿ 7.30).

ವಿದರ್ಭ– ಮುಂಬೈ ಸೆಣಸಾಟ • 42ನೇ ಬಾರಿ ಪ್ರಶಸ್ತಿಗೆ ಮುಂಬೈ ಪ್ರಯತ್ನ

ರಣಜಿ ಟ್ರೋಫಿ ಫೈನಲ್ ಇಂದಿನಿಂದ

ಮುಂಬೈ (ಪಿಟಿಐ): ನಾಯಕ ಅಜಿಂಕ್ಯ ರಹಾನೆ ನೇತೃತ್ವದಲ್ಲಿ ಮುಂಬೈ ತಂಡ ಭಾನುವಾರ ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ 42ನೇ ಬಾರಿ ಪ್ರಶಸ್ತಿಗೆ ಯತ್ನಿಸಲಿದೆ. ಆದರೆ ಹೋರಾಟಕ್ಕೆ ಹೆಸರಾದ ವಿದರ್ಭ ಸುಲಭವಾಗಿ ಮಣಿಯುವ ತಂಡವಲ್ಲ. ಹೀಗಾಗಿ ಫೈನಲ್ ಕುತೂಹಲಕ್ಕೆ ಎಡೆಮಾಡಿದೆ.

ಮೂರು ವರ್ಷ ಮೊದಲು ಆಸ್ಟ್ರೇಲಿಯಾದಲ್ಲಿ ಭಾರತದ ಸರಣಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ರಹಾನೆ ಈಗ ರಾಷ್ಟ್ರೀಯ ತಂಡದ ಗಣನೆಯಲ್ಲಿ ಇಲ್ಲ. ಅವರು ಉತ್ತಮ ಲಯದಲ್ಲೂ ಇಲ್ಲ. ರಣಜಿ ಋತುವಿನಲ್ಲಿ 13.4 ಸರಾಸರಿಯಲ್ಲಿ 134 ರನ್‌ಗಳನ್ನಷ್ಟೇ ಗಳಿಸಿದ್ದಾರೆ. ಅವರಿಗಿಂತ ಪರಿಣತ ವೇಗಿ ಮೋಹಿತ್ ಅವಸ್ಥಿ ಹೆಚ್ಚು ರನ್ (192) ಗಳಿಸಿದ್ದಾರೆ.

ಗಾಯಾಳು ಸೂರ್ಯಕುಮಾರ್ ಯಾದವ್ ಮತ್ತು ರಾಷ್ಟ್ರೀಯ 'ಎ' ಮತ್ತು ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಸರ್ಫರಾಜ್ ಖಾನ್ ಅವರ ಅಲಭ್ಯತೆ ಅಷ್ಟೇನೂ ಕಾಡದಂತೆ ನೋಡಿಕೊಂಡರು. ಶ್ರೇಯಸ್


ಅಜಿಂಕ್ಯ ರಹಾನೆ

ಅಯ್ಯರ್ 'ಗಾಯ'ದ ಕಾರಣ ಕ್ವಾರ್ಟರ್‌ಫೈನಲ್‌ಗೆ ಲಭ್ಯರಾಗಲಿಲ್ಲ. ಆದರೆ ರಹಾನೆ ನಾಯಕತ್ವದ ಕೌಶಲ ತಂಡವನ್ನು 48ನೇ ಬಾರಿ ಫೈನಲ್‌ಗೆ ತಂದು ನಿಲ್ಲಿಸಿದೆ.

ಪ್ರಮುಖರ ಅಲಭ್ಯದ ಕೊರತೆಯನ್ನು ವಿಕೆಟ್ ಕೀಪರ್ ಬ್ಯಾಟರ್ ಹಾರ್ದಿಕ್ ತಮೋರೆ (252 ರನ್), ವೇಗದ ಬೌಲರ್ ತನುಷ್ ಕೋಟ್ಯಾನ್ (481), ಶಮ್ಸ್ ಮುಲಾನಿ (290) ಅವರು ಸರಿದೂಗಿಸಿದ್ದಾರೆ. 19 ವರ್ಷದೊಳಗಿನವರ ತಂಡದಲ್ಲಿ ಆಡಿದ್ದ ಮುಶೀರ್ ಖಾನ್ ಅವರೂ ಬ್ಯಾಟಿಂಗ್‌ನಲ್ಲಿ ಉಪಯುಕ್ತ ಕೊಡುಗೆ ನೀಡಬಲ್ಲರು. ಎರಡು ಬಾರಿಯ ಚಾಂಪಿಯನ್ ವಿದರ್ಭ ಸ್ಥಿರ ಪ್ರದರ್ಶನ ನೀಡಿದೆ. ಬ್ಯಾಟರ್‌ಗಳ ಪೈಕಿ ಕನ್ನಡಿಗ ಕರುಣ್ ನಾಯರ್ (41.06 ಸರಾಸರಿಯಲ್ಲಿ 616 ರನ್), ಧ್ರುವ್ ಶೋರೆ (549 ರನ್), ಅಥರ್ವ ತೈಡೆ (44.08 ಸರಾಸರಿಯಲ್ಲಿ 529), ಯಶ್ ರಾಥೋಡ್ (456) ಅವರು ವಿದರ್ಭ ಪರ ವಿವಿಧ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಆದಿತ್ಯ ಸರ್ವಟೆ (40 ವಿಕೆಟ್) ಮತ್ತು ಆದಿತ್ಯ ಠಾಕರೆ (33) ಅವರು ತಂಡದ ಯಶಸ್ವಿ ಬೌಲರ್‌ಗಳಲ್ಲಿ ಪ್ರಮುಖರು.

ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡದ ಮೇಲೆ ಜಯಗಳಿಸಿದ್ದ ವಿದರ್ಭ, ಸೆಮಿಫೈನಲ್ ನಲ್ಲಿ ಮಧ್ಯಪ್ರದೇಶ ಮೇಲೆ ಸಾಧಿಸಿದ ಗೆಲುವು ಅದರ ಹೋರಾಟದ ಕೆಚ್ಚಿಗೆ ನಿದರ್ಶನವಾಗಿತ್ತು. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಧ್ಯಪ್ರದೇಶ 82 ರನ್‌ಗಳ ಮುನ್ನಡೆ ಪಡೆದಿತ್ತು.

ಸಿ.ಕೆ.ನಾಯ್ಡು: ಕರ್ನಾಟಕಕ್ಕೆ ಉತ್ತರಪ್ರದೇಶ ಸವಾಲು

ಬೆಂಗಳೂರು: ಕರ್ನಾಟಕ ಮತ್ತು ಉತ್ತರ ಪ್ರದೇಶದ 23 ವರ್ಷದೊಳಗಿನ ಕ್ರಿಕೆಟ್ ತಂಡಗಳು ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾಗುವ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡವು ವಿದರ್ಭ ವಿರುದ್ಧ ಜಯಿಸಿತ್ತು. ಉತ್ತರಪ್ರದೇಶ ತಂಡವು ಮುಂಬೈ ಎದುರು ಜಯಿಸಿತ್ತು. ಕರ್ನಾಟಕ ತಂಡದ ಪ್ರತಿಭಾವಂತ ಬ್ಯಾಟರ್ ಆರ್. ಸ್ಮರಣ್ (776 ರನ್), ಮೆಕ್‌ನೀಲ್ ಹ್ಯಾಡ್ಲಿ ನೊರೊನಾ (491 ರನ್) ಮತ್ತು ಪ್ರಖರ್ ಚತುರ್ವೇದಿ (506 ರನ್) ಉತ್ತಮ ಲಯದಲ್ಲಿದ್ದಾರೆ.

ಅನೀಶ್ ಕೆ.ವಿ. (665 ರನ್) ಮತ್ತು ಅನೀಶ್ವರ್ ಗೌತಮ್ (406 ರನ್) ಕೂಡ ಉತ್ತಮವಾಗಿ ಆಡಿದ್ದಾರೆ. ಅನೀಶ್ ಈಚೆಗೆ ರಣಜಿ ಟ್ರೋಫಿಯಲ್ಲಿ ಸೀನಿಯರ್ ತಂಡದಲ್ಲಿ ಆಡಿದ್ದರು. ಆಲ್‌ರೌಂಡರ್ ಧೀರಜ್ ಗೌಡ ಕೂಡ ತಂಡದಲ್ಲಿದ್ದಾರೆ. ಪಾರಸ್ ಗುರುಭಕ್ಷ್ ಆರ್ಯ ಮತ್ತು ಮೊಹಸಿನ್ ಖಾನ್ ಅವರು ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಉತ್ತರಪ್ರದೇಶ ತಂಡವು ಸಮೀರ್ ರಿಜ್ವಿ (553 ರನ್) ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ಪಂದ್ಯ ಆರಂಭ: ಬೆಳಿಗ್ಗೆ 9.30

'ಕೇಂದ್ರೀಯ ಗುತ್ತಿಗೆ: ಸಂಬಂಧವಿಲ್ಲ'


ಧರ್ಮಶಾಲಾ (ಪಿಟಿಐ): 'ಆಟಗಾರರ ಗುತ್ತಿಗೆಯನ್ನು ನಾನು ನಿರ್ಧರಿಸುವುದಿಲ್ಲ. ಆಯ್ಕೆಗಾರರು ಮತ್ತು ಮಂಡಳಿ (ಬಿಸಿಸಿಐ) ನಿರ್ಧರಿಸುತ್ತದೆ. ನನಗೆ ಅದರ ಮಾನದಂಡಗಳೂ (ಸೇರ್ಪಡೆಗೆ) ಗೊತ್ತಿಲ್ಲ. ನಾನು ಮತ್ತು ರೋಹಿತ್ ಪಂದ್ಯದಲ್ಲಿ ಆಡುವ 11ರ ತಂಡವನ್ನಷ್ಟೇ ಆಯ್ಕೆ ಮಾಡುತ್ತೇವೆ...'

–ಹೀಗೆಂದು ಹೇಳಿದವರು ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್. ಕೇಂದ್ರೀಯ ಗುತ್ತಿಗೆಗೆ ಸಂಬಂಧಿಸಿದಂತೆ ಎದ್ದಿರುವ ಈ ಸೂಕ್ಷ್ಮ ವಿಷಯದ ಬಗ್ಗೆ ಅವರು ಶನಿವಾರ ಅಂತಿಮ ಟೆಸ್ಟ್ ಪಂದ್ಯ ಗೆದ್ದ ನಂತರ ಮಾಧ್ಯಮಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದರು. 'ಆಟಗಾರ ಗುತ್ತಿಗೆಯಡಿ ಬರುತ್ತಾರೊ, ಇಲ್ಲವೇ ಎಂಬ ಬಗ್ಗೆ ನಾವು ಚರ್ಚಿಸಿಯೇ ಇಲ್ಲ. ಗುತ್ತಿಗೆ ಆಟಗಾರರ ಪಟ್ಟಿ ಬಗ್ಗೆಯೂ ಮಾಹಿತಿಯಿಲ್ಲ' ಎಂದರು.

ಭಾರತ ತಂಡದ ಆಟಗಾರರಾದ ಇಶಾನ್ ಕಿಶನ್, ಶ್ರೇಯಸ್ ಅಯ್ಯರ್ ಅವರನ್ನು ಕಳೆದ ತಿಂಗಳು ಬಿಸಿಸಿಐ, ಕೇಂದ್ರೀಯ ಆಟಗಾರರ ಪಟ್ಟಿಯಿಂದ ಕೈಬಿಟ್ಟಿತ್ತು. ವಿಶ್ರಾಂತಿಯ ಕಾರಣ ನೀಡಿ ದಕ್ಷಿಣ ಆಫ್ರಿಕಾ ಪ್ರವಾಸದ ವೇಳೆ ಅರ್ಧದಲ್ಲಿ ನಿರ್ಗಮಿಸಿದ್ದ ಇಶಾನ್ ನಂತರ ಹಾರ್ದಿಕ್ ಪಾಂಡ್ಯ ಜೊತೆ ಬರೋಡಾದ ಖಾಸಗಿ ಕೇಂದ್ರ ದಲ್ಲಿ ಐಪಿಎಲ್‌ಗೆ ಸಿದ್ಧತೆ ನಡೆಸಿದ್ದು ಚರ್ಚೆಗೆ ಕಾರಣವಾಗಿತ್ತು.

ಪಾಕ್ ಅಧ್ಯಕ್ಷರಾಗಿ ಜರ್ದಾರಿ ಆಯ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ 14ನೇ ಅಧ್ಯಕ್ಷರಾಗಿ, ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ಸಹ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರು ಆಯ್ಕೆಯಾಗಿದ್ದಾರೆ. ಅವರು ಎರಡನೇ ಬಾರಿಗೆ ಈ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.


ಆಸಿಫ್ ಅಲಿ ಜರ್ದಾರಿ

68 ವರ್ಷ ವಯಸ್ಸಿನ ಜರ್ದಾರಿ ಅವರು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಮತ್ತು ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷದ ಜಂಟಿ ಅಭ್ಯರ್ಥಿಯಾಗಿದ್ದರು. ಸುನ್ನಿ ಇತ್ತೇಹಾದ್ ಕೌನ್ಸಿಲ್‌ನ ಅಭ್ಯರ್ಥಿಯಾಗಿ 75 ವರ್ಷದ ಮಹಮ್ಮದ್ ಖಾನ್ ಅಚಕ್‌ಜಾಯ್ ಅವರೂ ಅಧ್ಯಕ್ಷ ಸ್ಥಾನದ ಚುನಾವಣಾ ಕಣದಲ್ಲಿದ್ದರು.

ಶನಿವಾರ ನಡೆದ ಚುನಾವಣೆಯಲ್ಲಿ ಜರ್ದಾರಿ ಅವರು 255 ಮತವನ್ನು ಪಡೆದರೆ, ಪ್ರತಿಸ್ಪರ್ಧಿ ಅಚಕ್‌ಜಾಯ್ 119 ಮತ ಪಡೆದರು ಎಂದು ಸ್ಥಳೀಯ ಮಾಧ್ಯಮವು ವರದಿ ಮಾಡಿದೆ. ಜರ್ದಾರಿ ಅವರು ಮಾಜಿ ಪ್ರಧಾನಿ ದಿವಂಗತ ಬೆನಜೀರ್ ಭುಟ್ಟೋ ಅವರ ಪತಿ. ಈ ಹಿಂದೆ 2008 ರಿಂದ 2013ವರೆಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಹಾಲಿ ಅಧ್ಯಕ್ಷ ಅರಿಫ್ ಅಲ್ವಿ ಅವರ ಐದು ವರ್ಷದ ಅಧಿಕಾರವಧಿಯು ಕಳೆದ ವರ್ಷವೇ ಮುಗಿದಿತ್ತು. ಆದರೆ, ನೂತನ ಶಾಸನ ಸಭೆ ರಚನೆಯಾಗದ ಕಾರಣ ಅಧಿಕಾರದಲ್ಲಿ ಮುಂದುವರಿದಿದ್ದರು.

ಬಿಬಿಸಿ ನಿರೂಪಕಿ ವಿರುದ್ಧ ದೂರು

ಲಂಡನ್ (ಪಿಟಿಐ): ಬಿಬಿಸಿಯ, ಸಿಖ್ ಸಮುದಾಯದ ಹೊಸ ನಿರೂಪಕಿಯಿಂದ ಪ್ರತ್ಯೇಕತಾವಾದಿ ಅಭಿಪ್ರಾಯವನ್ನು ಹೇರುವ ಯತ್ನ ನಡೆದಿದೆ ಎಂದು ಭಾರತ ಮೂಲದ ನಿವಾಸಿಗಳು ಆರೋಪಿಸಿದ್ದು, ದೂರು ನೀಡಿದ್ದಾರೆ.

ಬರಹಗಾರ್ತಿ, ಶಿಕ್ಷಕಿ ಜಸ್‌ಪ್ರೀತ್ ಕೌರ್ ಎಂಬವರು ಇತ್ತೀಚೆಗೆ ಬಿಬಿಸಿಯಲ್ಲಿ 'ಏಷಿಯನ್ ನೆಟ್‌ವರ್ಕ್ ಚಿಲ್' ಹೆಸರಿನ ವಾರದ ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದರು.

'ತಾನು ಕಾರ್ಯಕ್ರಮ ನಿರೂಪಿಸುವುದರ ಕುರಿತು ಜಾಲತಾಣದಲ್ಲಿಯೂ ಮಾಹಿತಿ ಹಂಚಿಕೊಂಡಿದ್ದರು. ಹಿಂದೆಯೇ ಭಾರತ ಮೂಲದ ನಿವಾಸಿಗಳಿಂದ 'ಆಕೆ ಖಾಲಿಸ್ತಾನ್ ಪರ ಚಿಂತನೆ ಹೊಂದಿದ್ದಾರೆ' ಎಂಬ ಆರೋಪಗಳು ಕೇಳಿಬಂದಿವೆ. ನಾವು ವ್ಯಕ್ತಿಗತವಾಗಿ ಅಥವಾ ಖಾಸಗಿ ಟ್ವೀಟ್‌ಗಳ ಕುರಿತು ಪ್ರತಿಕ್ರಿಯಿಸುವುದಿಲ್ಲ. ದೂರುಗಳಿದ್ದರೆ ತನಿಖೆ ಮಾಡುತ್ತೇವೆ. ಅಗತ್ಯವಿದ್ದರೆ ಕ್ರಮಜರುಗಿಸುತ್ತೇವೆ ಎಂದು ಬಿಬಿಸಿ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಸುಮಾತ್ರಾ: ಭಾರಿ ಮಳೆ, 10 ಸಾವು

ಪಡಂಗ್, ಇಂಡೊನೇಷ್ಯಾ (ಎ.ಪಿ): ಧಾರಾಕಾರ ಮಳೆ ಮತ್ತು ಪ್ರವಾಹ ಪರಿಸ್ಥಿತಿಯಿಂದಾಗಿ ಇಂಡೊನೇಷ್ಯಾದ ಸುಮಾತ್ರಾ ದ್ವೀಪ ಭಾಗದಲ್ಲಿ ಭೂಕುಸಿತ ಸಂಭವಿಸಿದೆ. ಕನಿಷ್ಠ 10 ಜನ ಸತ್ತಿದ್ದು, 10 ಜನರು ನಾಪತ್ತೆಯಾಗಿದ್ದಾರೆ.

ಭೂಕುಸಿತದ ಪರಿಣಾಮ ಬಂಡೆ ಕಲ್ಲು ಉರುಳಿವೆ. ಹಲವು ಮರಗಳು ನೆಲಸಮವಾಗಿವೆ. ಪಶ್ಚಿಮ ಸುಮಾತ್ರಾ ಪ್ರಾಂತ್ಯದ ಗ್ರಾಮಗಳು ಜಲಾವೃತಗೊಂಡಿವೆ ಎಂದು ಸ್ಥಳೀಯ ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ.

ಕ್ರಿಕೆಟ್‌ನತ್ತ ಆಟಗಾರರ ಆಕರ್ಷಣೆಗೆ ಬಿಸಿಸಿಐ ಯೋಜನೆ

ಹೆಚ್ಚು ಟೆಸ್ಟ್ ಪಂದ್ಯ: ಬಂಪರ್ ಮೊತ್ತ

ನವದೆಹಲಿ (ಪಿಟಿಐ): ಒಂದು ಕ್ರಿಕೆಟ್ ಋತುವಿನಲ್ಲಿ ಕನಿಷ್ಠ ಏಳು ಟೆಸ್ಟ್‌ಗಳನ್ನು ಆಡುವ ಆಟಗಾರರಿಗೆ ಪಂದ್ಯವೊಂದಕ್ಕೆ ₹ 45 ಲಕ್ಷ ಪಂದ್ಯ ಶುಲ್ಕ ನೀಡಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಘೋಷಿಸಿದೆ.

ಪ್ರಸ್ತುತ ಪಂದ್ಯವೊಂದಕ್ಕೆ ₹ 15 ಲಕ್ಷ ಸಂಭಾವನೆ ನೀಡಲಾಗುತ್ತಿದೆ. ಇನ್ನು ಮುಂದೆ ಆಟಗಾರನೊಬ್ಬ ಒಂದೊಮ್ಮೆ ಹತ್ತು ಪಂದ್ಯಗಳನ್ನು ಆಡಿದರೆ ಒಟ್ಟು ₹ 4.5 ಕೋಟಿ ಜೇಬಿಗಿಳಿಸುವರು. ಇದರೊಂದಿಗೆ ರಿಟೇನರ್ ಶುಲ್ಕ ಮತ್ತು ವಾರ್ಷಿಕ ಗುತ್ತಿಗೆಯ ಮೊತ್ತವನ್ನು ಆಟಗಾರರು ಪ್ರತ್ಯೇಕವಾಗಿ ಪಡೆಯಲಿದ್ದಾರೆ. ಈ ಸೌಲಭ್ಯವು 2022–23ರ ಋತುವಿಗೆ ಪೂರ್ವಾನ್ವಯವಾಗಲಿದೆ ಎಂದೂ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.


ಜಯ್ ಶಾ

ಸದ್ಯದ ನಿಯಮದಲ್ಲಿ ಟೆಸ್ಟ್ ಪಂದ್ಯವೊಂದರಲ್ಲಿ ಕಣಕ್ಕಿಳಿಯುವ 11 ರ ಬಳಗದಲ್ಲಿ ಸ್ಥಾನ ಪಡೆಯುವ ಆಟಗಾರ ₹ 15 ಲಕ್ಷ ಮತ್ತು ಮೀಸಲು ಆಟಗಾರ ₹ 7.5 ಲಕ್ಷ ಪಡೆಯುತ್ತಿದ್ದಾರೆ.

'ಟೆಸ್ಟ್ ಕ್ರಿಕೆಟ್ ಪ್ರೋತ್ಸಾಹಧನ ಯೋಜನೆಯನ್ನು ಪ್ರಕಟಿಸಲು ನನಗೆ ಸಂತಸವಾಗುತ್ತಿದೆ. ಸೀನಿಯರ್ ತಂಡದ ಆಟಗಾರರಿಗೆ ಆರ್ಥಿಕ ಲಾಭ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಇದು ಹೆಚ್ಚುವರಿ ಬಹುಮಾನ ರೂಪದ ಧನವಾಗಿದೆ' ಎಂದು ಜಯ್ ಶಾ ಟ್ವೀಟ್ ಮಾಡಿದ್ದಾರೆ.

ಈ ಯೋಜನೆಯಲ್ಲಿರುವ ಇನ್ನೂ ಕೆಲವು ವಿಷಯಗಳನ್ನೂ ಬಿಸಿಸಿಐ ಪ್ರಸ್ತಾಪ ಮಾಡಿದೆ.

ಒಂದು ಋತುವಿನಲ್ಲಿ 9 ಪಂದ್ಯಗಳಿದ್ದರೆ, ಅದರಲ್ಲಿ ನಾಲ್ಕು ಅಥವಾ ಅದಕ್ಕಿಂತ ಕಡಿಮೆ ಪಂದ್ಯಗಳಲ್ಲಿ ಆಡುವ ಆಟಗಾರ ತಲಾ ₹ 15 ಲಕ್ಷ ಪಂದ್ಯ ಶುಲ್ಕ ಪಡೆಯುವರು. ಮೀಸಲು ಆಟಗಾರರು ಅದರ ಅರ್ಧದಷ್ಟು ಮೊತ್ತ ಗಳಿಸುವರು. 5 ಅಥವಾ 6 ಪಂದ್ಯಗಳಲ್ಲಿ ಆಡಿದರೆ ₹ 30 ಲಕ್ಷ ಗಳಿಸುವರು. ಏಳು ಅಥವಾ ಅದಕ್ಕಿಂತ ಹೆಚ್ಚು ಪಂದ್ಯಗಳನ್ನಾಡಿದರೆ ಟೆಸ್ಟ್‌ವೊಂದಕ್ಕೆ ₹ 45 ಲಕ್ಷ ಪಡೆಯುವರು. ಮೀಸಲು ಆಟಗಾರರು ತಲಾ ₹ 22.5 ಲಕ್ಷ ಪಡೆಯುವರು.

ಲಂಕಾಕ್ಕೆ ಜಯ

ಸಿಲ್ಹೆಟ್ (ಬಾಂಗ್ಲಾದೇಶ), (ಎಎಫ್‌ಪಿ): ಕುಶಲ್ ಮೆಂಡಿಸ್ ಅವರ ಅಮೋಘ ಆಟ (86, 55ಎ, 4x6, 6x6) ಮತ್ತು ವೇಗಿ ನುವಾನ್ ತುಷಾರ ಅವರ 'ಹ್ಯಾಟ್ರಿಕ್' ಸೇರಿ ಐದು ವಿಕೆಟ್ ಗೊಂಚಲಿನ ನೆರವಿನಿಂದ ಶ್ರೀಲಂಕಾ ತಂಡ, ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಶನಿವಾರ ಬಾಂಗ್ಲಾದೇಶ ತಂಡವನ್ನು 28 ರನ್‌ಗಳಿಂದ ಸೋಲಿಸಿತು. ಸರಣಿ 2–1 ರಿಂದ ಶ್ರೀಲಂಕಾ ಪಾಲಾಯಿತು.

ಸ್ಕೋರುಗಳು: ಶ್ರೀಲಂಕಾ: 20 ಓವರುಗಳಲ್ಲಿ 7 ವಿಕೆಟ್‌ಗೆ 174 (ಕುಶಲ್ ಮೆಂಡಿಸ್ 86; ತಸ್ಕಿನ್ ಅಹ್ಮದ್ 25ಕ್ಕೆ2, ರಿಶದ್ ಹುಸೇನ್ 35ಕ್ಕೆ2); ಬಾಂಗ್ಲಾದೇಶ: 19.4 ಓವರುಗಳಲ್ಲಿ 146 (ರಿಶದ್ ಹುಸೇನ್ 53, ತಸ್ಕಿನ್ ಅಹ್ಮದ್ 31; ತುಷಾರ 20ಕ್ಕೆ5, ವನೀಂದು ಹಸರಂಗ 32ಕ್ಕೆ2).

'ವಿಕಾಸ್ ಭಾರತ ವಿಕಸಿತ ಈಶಾನ್ಯ' ಉದ್ಘಾಟಿಸಿದ ಪ್ರಧಾನಿ

5 ವರ್ಷಗಳಲ್ಲಿ ಈಶಾನ್ಯ ಅಭಿವೃದ್ಧಿ: ಮೋದಿ

ಇಟಾನಗರ (ಪಿಟಿಐ): 'ನಮ್ಮ ಸರ್ಕಾರವು ಈಶಾನ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಕಾಂಗ್ರೆಸ್ ಪಕ್ಷವು 20 ವರ್ಷ ತೆಗೆದುಕೊಂಡಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ದೂರಿದರು.

ಅರುಣಾಚಲ ಪ್ರದೇಶದಲ್ಲಿ ₹55,600 ಕೋಟಿ ವೆಚ್ಚದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ನಂತರ, 'ವಿಕಾಸ್ ಭಾರತ ವಿಕಸಿತ ಈಶಾನ್ಯ' ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಸ್ವಾತಂತ್ರ್ಯಾ ನಂತರದಿಂದ 2014ರವರೆಗೆ ಈಶಾನ್ಯದಲ್ಲಿ ಕೇವಲ 10,000 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿತ್ತು. ಆದರೆ ಕಳೆದ ಹತ್ತು ವರ್ಷದಲ್ಲಿ 6,000 ಕಿ.ಮೀ ಗೂ ಹೆಚ್ಚು ಉದ್ದದ ಹೆದ್ದಾರಿ ನಿರ್ಮಾಣವಾಗಿದೆ. ಕಾಂಗ್ರೆಸ್ ಪಕ್ಷವು ಏಳು ದಶಕಗಳಲ್ಲಿ ಮಾಡಿದ ಕೆಲಸವನ್ನು ನಾವು ಕೇವಲ ಒಂದು ದಶಕದಲ್ಲಿ ಮಾಡಿದ್ದೇವೆ ಎಂದು ಹೇಳಿದರು.


ನರೇಂದ್ರ ಮೋದಿ

ದಕ್ಷಿಣ ಆಫ್ರಿಕಾ, ಪೂರ್ವಾ ಏಷ್ಯಾದೊಂದಿಗಿನ ಭಾರತದ ವಾಣಿಜ್ಯ ವ್ಯವಹಾರ, ಪ್ರವಾಸೋದ್ಯಮ ಮತ್ತಿತರ ಸಂಬಂಧಗಳಲ್ಲಿ ಈಶಾನ್ಯವು ಬಹು ಮುಖ್ಯ ಪಾತ್ರ ವಹಿಸಲಿದೆ ಎಂದು ಹೇಳಿದರು.

'ಮೋದಿ ಗ್ಯಾರಂಟಿ ಎಂದರೆ ಏನು ಎಂದು ಇಲ್ಲಿ ಬಂದು ನೋಡಿದ ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ಅರ್ಥವಾಗಲಿದೆ. ಮೋದಿ ಗ್ಯಾರಂಟಿ ಹೇಗೆ ಕಾರ್ಯತತ್ಪರವಾಗಿದೆ ಎಂದು ಇಡೀ ಈಶಾನ್ಯದ ಜನತೆ ನೋಡುತ್ತಿದ್ದಾರೆ' ಎಂದರು. 'ಪ್ರಧಾನಿಯಾಗಿ ದೇಶದ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದರೆ, ವಿರೋಧ ಪಕ್ಷಗಳ ಒಕ್ಕೂಟವಾದ 'ಇಂಡಿಯಾ' ನನ್ನ ವಿರುದ್ಧ 'ಆಕ್ರಮಣ'ದಲ್ಲಿ ನಿರತವಾಗಿದೆ' ಎಂದು ದೂರಿದರು.

ತವಾಂಗ್ ಸಂಪರ್ಕಿಸುವ ಸೇಲಾ ಸುರಂಗ ಮಾರ್ಗವನ್ನು ಉದ್ಘಾಟಿಸಿ ಮಾತನಾಡಿದ ಅವರು, '2019ರಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದ ಸುರಂಗ ಈಗ ಉದ್ಘಾಟನೆಯಾಗುತ್ತಿರುವುದು ಮೋದಿ ಗ್ಯಾರಂಟಿಯ ಪ್ರಾಮಾಣಿಕತೆಗೆ ಸಾಕ್ಷಿ. ಚುನಾವಣೆ ಉದ್ದೇಶದಿಂದ ಶಂಕುಸ್ಥಾಪನೆ ಮಾಡುತ್ತಿರುವುದಾಗಿ ಕೆಲವರು ಭಾವಿಸಿದ್ದರು. ಆದರೆ ಅವರ ಊಹೆ ತಪ್ಪೆಂದು ಇಂದು ಸಾಬೀತಾಗಿದೆ' ಎಂದು ಹೇಳಿದರು.

ನೀರಿಗಾಗಿ ರೋಗಿಗಳ ಕುಟುಂಬಸ್ಥರ ಪರದಾಟ • ಟ್ಯಾಂಕರ್ ನೀರು ಅವಲಂಬಿಸಿದ ಖಾಸಗಿ ಆಸ್ಪತ್ರೆಗಳು

ಆಸ್ಪತ್ರೆಗಳಲ್ಲೂ ಶುದ್ಧ ನೀರು ವ್ಯತ್ಯಯ

• ವರುಣ ಹೆಗಡೆ



ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಆಸ್ಪತ್ರೆಗಳ ಸಮುಚ್ಚಯದಲ್ಲಿ ಇರುವ ಶುದ್ಧ ನೀರಿನ ಘಟಕದಲ್ಲಿ ಆಸ್ಪತ್ರೆಯ ಸಿಬ್ಬಂದಿ ಹಾಗೂ ರೋಗಿಯ ಕುಟುಂಬಸ್ಥರೊಬ್ಬರು ನೀರನ್ನು ಹಿಡಿಯುತ್ತಿರುವುದು

ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರು: ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾಗಿರುವುದರಿಂದ ಆರೋಗ್ಯದ ಹಿತದೃಷ್ಟಿಯಿಂದ ಹೆಚ್ಚು ನೀರನ್ನು ಆಗಾಗ ಸೇವಿಸಬೇಕೆಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ. ಆದರೆ, ನಗರದ ಪ್ರಮುಖ ಆಸ್ಪತ್ರೆಗಳ ಕೊಳವೆ ಬಾವಿಯ ನೀರಿನಲ್ಲಿ ವ್ಯತ್ಯಾಸ ಆಗುತ್ತಿರುವುದರಿಂದ ಶುದ್ಧ ಕುಡಿಯುವ ನೀರಿನ ವ್ಯತ್ಯಯವಾಗಿದೆ.

ಬಿಸಿಲಿನ ತೀವ್ರತೆ, ದೂಳು, ಶುಷ್ಕ ವಾತಾವರಣದಿಂದ ನಗರದ ಜನರಲ್ಲಿ ಗಂಟಲು ಬೇನೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಈ ಸಮಸ್ಯೆ ಎದುರಿಸುತ್ತಿರುವವರಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಕುಡಿಯುವಂತೆ ವೈದ್ಯರು ಸಲಹೆ ನೀಡುತ್ತಿದ್ದಾರೆ. ಆದರೆ. ಇದೇ ವೇಳೆ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸದ್ಯ ನೀರು ಲಭ್ಯವಾಗುತ್ತಿದ್ದರೂ ಅವರ ಜತೆಗಿರುವ ಕುಟುಂಬಸ್ಥರು ಹಾಗೂ ಸಂಬಂಧಿಗಳಿಗೆ ಆಸ್ಪತ್ರೆಗಳ ಒಳಗಡೆ ನೀರು ಪಡೆಯಲು ಬಿಡುತ್ತಿಲ್ಲ. ಇದರಿಂದಾಗಿ ಅವರು ಸಾರ್ವಜನಿಕ ಶುದ್ಧ ನೀರಿನ ಘಟಕಗಳು ಹಾಗೂ ಹೋಟೆಲ್‌ಗಳನ್ನು ಅವಲಂಬಿಸಬೇಕಾಗಿದೆ. ಇದರಿಂದಾಗಿ ರೋಗಿಗಳ ಕಡೆಯವರು ಹಣ ನೀಡಿ ಕುಡಿಯಲು ನೀರು ಪಡೆಯಬೇಕಾಗಿದೆ.

ನಗರದ ಕೆ.ಆರ್. ಮಾರುಕಟ್ಟೆ ಬಳಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ-ಯೂರಾಲಜಿ ಸಂಸ್ಥೆ, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊ-ಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳ ಸಂಕೀರ್ಣದಲ್ಲಿ ಚಿಕಿತ್ಸೆ ಪಡೆಯಲು ಪ್ರತಿನಿತ್ಯ 2.5 ಸಾವಿರಕ್ಕೂ ಅಧಿಕ ರೋಗಿಗಳು ರಾಜ್ಯದ ವಿವಿಧೆಡೆಯಿಂದ ಇಲ್ಲಿಗೆ ಬರುತ್ತಾರೆ. ಅವರ ಕುಟುಂಬಸ್ಥರು ಹಾಗೂ ಸಂಬಂಧಿಗಳು ಆಸ್ಪತ್ರೆಗಳ ಸಂಕೀರ್ಣದ ಆವರಣದಲ್ಲಿಯೇ ವಿಶ್ರಾಂತಿ ಪಡೆಯುತ್ತಾರೆ. ಶಾಸಕರ ಅನುದಾನದಡಿ ನಿರ್ಮಿಸಲಾಗಿರುವ ಶುದ್ಧ ನೀರಿನ ಘಟಕವೇ ಅವರ ಬಾಯಾರಿಕೆ ನೀಗಿಸುತ್ತಿದೆ. ಅಲ್ಲಿ ₹2 ನಾಣ್ಯ ಹಾಕಿ 2 ಲೀಟರ್ ನೀರು ಪಡೆಯಬಹುದಾಗಿದೆ.



ವಿಕ್ಟೋರಿಯಾ ಆಸ್ಪತ್ರೆಯ ಎದುರು ರೋಗಿಗಳ ಕುಟುಂಬಸ್ಥರು ಶುದ್ಧ ನೀರಿನ ಕ್ಯಾನ್ ಖರೀದಿಸಿ ಇಟ್ಟುಕೊಂಡಿರುವುದು

ಟ್ಯಾಂಕರ್ ನೀರು ಅವಲಂಬನೆ: ನಗರದ ಬಹುತೇಕ ಖಾಸಗಿ ಆಸ್ಪತ್ರೆಗಳು ಟ್ಯಾಂಕರ್ ನೀರನ್ನೇ ಅವಲಂಬಿಸಿವೆ. ಬನ್ನೇರುಘಟ್ಟ, ಎಚ್‌ಎಸ್‌ಆರ್ ಲೇಔಟ್, ಯಲಹಂಕ, ಇಂದಿರಾನಗರ, ವೈಟ್‌ಫೀಲ್ಡ್, ಬಿಟಿಎಂ ಲೇಔಟ್, ಮಹದೇವಪುರ, ಕೆ.ಆರ್. ಪುರ ಸೇರಿದಂತೆ ವಿವಿಧೆಡೆ ನೀರಿನ ಸಮಸ್ಯೆ ಸ್ಥಳೀಯ ನಿವಾಸಿಗಳ ಜತೆಗೆ ಆಸ್ಪತ್ರೆಗಳಿಗೂ ತಟ್ಟಿದೆ. ಶಸ್ತ್ರಚಿಕಿತ್ಸೆ, ಡಯಾಲಿಸಿಸ್ ಸೇರಿ ವಿವಿಧ ಸಂದರ್ಭದಲ್ಲಿ ಶುದ್ಧ ನೀರು ಬಳಕೆ ಅನಿವಾರ್ಯವಾಗಿರುವುದರಿಂದ ಆಸ್ಪತ್ರೆಗಳು ದುಪ್ಪಟ್ಟು ಹಣ ನೀಡಿ ಟ್ಯಾಂಕರ್ ನೀರನ್ನು ಹಾಕಿಸಿಕೊಳ್ಳುತ್ತಿವೆ.

ಶಿವಾಜಿನಗರದಲ್ಲಿರುವ ಬೌರಿಂಗ್ ಆಸ್ಪತ್ರೆಯಲ್ಲಿ ಎರಡು ಕೊಳವೆ ಬಾವಿ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಮಲ್ಲೇಶ್ವರದಲ್ಲಿ ಇರುವ ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆ ಸೇರಿ ನಗರದ ಪ್ರಮುಖ ಸರ್ಕಾರಿ ಆಸ್ಪತ್ರೆಗಳು ಕೊಳವೆ ಬಾವಿಗಳನ್ನೂ ಹೊಂದಿವೆ. ಇದರಿಂದ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಅಗತ್ಯ ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿದೆ.

‘ಸದ್ಯ ಆಸ್ಪತ್ರೆಯಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡಿಲ್ಲ. ಕೊಳವೆ ಬಾವಿ ಇರುವುದರಿಂದ ಅದರ ನೀರನ್ನೂ ಬಳಸಿಕೊಳ್ಳಲಾಗುತ್ತಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಕೊಳವೆ ಬಾವಿ ನೀರು ಕಡಿಮೆಯಾಗಿ, ಸಮಸ್ಯೆಯಾಗುವ ಸಾಧ್ಯತೆಯಿದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಜಲ ಜಂಜಾಟ 3



ಕೊಳವೆ ಬಾವಿಯಲ್ಲಿ ಅಗತ್ಯ ಪ್ರಮಾಣ ನೀರಿದೆ. ಆ ನೀರನ್ನು ಶುದ್ಧೀಕರಿಸಿ, ಒಂದು ರೂಪಾಯಿಗೆ ಒಂದು ಲೀಟರ್ ನೀರನ್ನು ಒದಗಿಸುತ್ತಿದ್ದೇವೆ

ವೆಂಕಟಪ್ಪ, ಬೌರಿಂಗ್ ಆಸ್ಪತ್ರೆಯಲ್ಲಿರುವ ಶುದ್ಧ ನೀರು ಘಟಕದ ನಿರ್ವಾಹಕ



ಆಸ್ಪತ್ರೆಗಳಲ್ಲಿ ರೋಗಿಗಳ ಕುಟುಂಬಸ್ಥರನ್ನು ಒಳಗಡೆ ಬಿಟ್ಟುಕೊಳ್ಳುತ್ತಿಲ್ಲ. ಇದರಿಂದ ಹೊರಗಡೆ ಕಾಯುವ ನಮಗೆ ನೀರಿನ ಸಮಸ್ಯೆ ಕಾಡುತ್ತಿದೆ

ರೀಟಾ, ಶಿವಾಜಿನಗರ



ವಿಕ್ಟೋರಿಯಾದಲ್ಲಿ ರೋಗಿಗಳಿಗಿಂತ ಅವರ ಜತೆಗೆ ಬಂದವರಿಗೆ ನೀರಿನ ಸಮಸ್ಯೆ ಎದುರಾಗುತ್ತಿದೆ. ಹೋಟೆಲ್ ಸೇರಿ ವಿವಿಧೆಡೆ ಹಣ ನೀಡಿ ನೀರು ತರಬೇಕಾಗಿದೆ

ಮಾಲಾ, ಬೆಳಗಾವಿ

ನೀರಿನ ಬವಣೆ

ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ. ನಿಮ್ಮ ಪ್ರದೇಶದಲ್ಲಿಯೂ ನೀರಿನ ಬವಣೆ ಇದ್ದರೆ ಬರೆದು ಕಳುಹಿಸಿ

ವಾಟ್ಸ್‌ಆ್ಯಪ್ ನಂಬರ್: **9606038256**

‘ನೀರು ಅಸಮರ್ಪಕ ಪೂರೈಕೆ’

‘ಬಹುತೇಕ ಎಲ್ಲ ಖಾಸಗಿ ಆಸ್ಪತ್ರೆಗಳು ಟ್ಯಾಂಕರ್ ನೀರನ್ನೇ ಹಾಕಿಸಿಕೊಳ್ಳುತ್ತಿವೆ. ಈಗ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಇಷ್ಟಾಗಿಯೂ ಆಸ್ಪತ್ರೆಗಳು ಪರಿಸ್ಥಿತಿಯನ್ನು ನಿಭಾಯಿಸುತ್ತಿವೆ. ಸಮಸ್ಯೆ ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ. ಗೋವಿಂದಯ್ಯ ಯತೀಶ್ ತಿಳಿಸಿದರು.

‘ಇತ್ತೀಚಿನ ದಿನಗಳಲ್ಲಿ ಟ್ಯಾಂಕರ್ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ. ನೀರಿನ ದರವನ್ನು ಟ್ಯಾಂಕರ್‌ಗಳ ಮಾಲೀಕರು ಹೆಚ್ಚಳ ಮಾಡಿದ್ದರು. ಅದಕ್ಕೆ ಒಪ್ಪಿಕೊಂಡಿದ್ದೆವು. ಆದರೂ ನೀರು ಸಿಗುತ್ತಿಲ್ಲ. ಕೊಳವೆ ಬಾವಿಗಳು ಬರಿದಾಗುತ್ತಿರುವುದರಿಂದ ದಿಕ್ಕು ಕಾಣದಂತಾಗಿದೆ. ಮುಂದಿನ ದಿನಗಳಲ್ಲಿ ಏನು ಮಾಡಬೇಕು ಅನ್ನುವುದು ತಿಳಿಯುತ್ತಿಲ್ಲ. ಸರ್ಕಾರವೇ ಏನಾದರೂ ಮಾಡಬೇಕು’ ಎಂದು ಸುಗುಣ ಆಸ್ಪತ್ರೆ ಮುಖ್ಯಸ್ಥ ಡಾ. ರವೀಂದ್ರ ಆರ್. ತಿಳಿಸಿದರು.

‘ಕಾಂಗ್ರೆಸ್ ಸರ್ಕಾರದಿಂದ ಬೆಂಗಳೂರಿನ ಮಾನ ಹರಾಜು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಧಾನಿಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಕುಂಭಕರ್ಣ ನಿದ್ದೆಯಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಬೆಂಗಳೂರಿನ ಮಾನವನ್ನು ಹರಾಜು ಹಾಕುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರಕಿಸುವಲ್ಲಿ ಸರ್ಕಾರ ವಿಫಲವಾಗಿದೆ. ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾದರೂ ಎಚ್ಚೆತ್ತುಕೊಂಡಿಲ್ಲ’ ಎಂದರು.

ರಾಜ್ಯದ ಹಿತವನ್ನು ಕಡೆಗಣಿಸಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿದರು. ಈಗ ಬೆಂಗಳೂರಿಗೆ ಕಾವೇರಿ ನೀರು ಪೂರೈಕೆಯಲ್ಲಿ ಶೇಕಡ 30ರಷ್ಟು ಕಡಿತ ಮಾಡಲಾಗಿದೆ. ಕೃಷ್ಣರಾಜ ಸಾಗರ ಅಣೆಕಟ್ಟೆಯಲ್ಲಿ ಅತ್ಯಲ್ಪ ಪ್ರಮಾಣದ ನೀರು ಲಭ್ಯವಿದೆ. ಸಮಸ್ಯೆ ಬಿಗಡಾಯಿಸುತ್ತಿದ್ದು, ಸರ್ಕಾರದಿಂದ ಪರಿಹಾರ ಕ್ರಮವೇ ಕೈಗೊಂಡಿಲ್ಲ ಎಂದು ದೂರಿದರು.

ನಗರದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವವರನ್ನು ನಿಯಂತ್ರಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಖಾಸಗಿ ಕೊಳವೆ ಬಾವಿಗಳನ್ನು ವಶಕ್ಕೆ ಪಡೆದು ನೀರು ಪೂರೈಸುವುದಕ್ಕೂ ಕ್ರಮ ಆಗಿಲ್ಲ ಎಂದರು.

‘ರಚನಾತ್ಮಕ ಸಲಹೆ ನೀಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುಡಿಯುವ ನೀರಿನ ಅಭಾವ ಕುರಿತಂತೆ ವಿರೋಧ ಪಕ್ಷಗಳು ರಾಜಕೀಯ ಟೀಕೆ ಬಿಟ್ಟು ರಚನಾತ್ಮಕ ಸಲಹೆ ನೀಡಿದರೆ ಸ್ವೀಕರಿಸಲು ಸಿದ್ಧ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಸರ್ಕಾರ ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಖಾಸಗಿ ಟ್ಯಾಂಕರ್‌ಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಮಾಫಿಯಾ ತಡೆಗಟ್ಟಿದೆ’ ಎಂದರು.

‘ನಗರದಲ್ಲಿ ಶೇ 50ರಷ್ಟು ಕೊಳವೆಬಾವಿಗಳು ಬರಿದಾಗಿವೆ. ಸಾವಿರಾರು ಟ್ಯಾಂಕರ್‌ಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಜಲ ಮೂಲಗಳಿರುವ ಕಡೆಗಳಿಂದ ನೀರು ಪೂರೈಸಲು ನಿರ್ಧರಿಸಲಾಗಿದೆ. ದೂರದಿಂದ ನೀರು ಪೂರೈಸಬೇಕಾದ ಕಾರಣ ಟ್ಯಾಂಕರ್ ನೀರಿನ ದರ ನಿಗದಿಪಡಿಸಲು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಖಾಲಿ ಇರುವ ದೊಡ್ಡ ಹಾಲಿನ ಟ್ಯಾಂಕರ್‌ಗಳನ್ನೂ ನೀರು ಪೂರೈಸಲು ಬಳಸಲಾಗುವುದು’ ಎಂದರು.

‘ಕೊಳವೆಬಾವಿಗಳು ಬತ್ತಿದಾಗ ಹಾಹಾಕಾರ ಉದ್ಭವಿಸುತ್ತದೆ. ಈ ಪರಿಸ್ಥಿತಿಯಲ್ಲಿ ಕುಡಿಯುವ ನೀರನ್ನು ವಾಹನ ತೊಳೆಯಲು ಮತ್ತು ಇತರ ಬಳಕೆಗೆ ಬಳಸದಂತೆ ಜನರಲ್ಲಿ ಮನವಿ ಮಾಡಿದ್ದೇವೆ. ನೀರಿನ ಬೆಲೆ ಎಲ್ಲರಿಗೂ ಅರ್ಥವಾಗಬೇಕು’ ಎಂದರು.

‘ಖಾಸಗಿ ಟ್ಯಾಂಕರ್‌ಗಳಿಗೆ ಸಿಗುವ ನೀರು, ಸರ್ಕಾರಕ್ಕೆ ಯಾಕೆ ಸಿಗುತ್ತಿಲ್ಲ?’ ಎಂದು ಸಾರ್ವಜನಿಕವಾಗಿ ಚರ್ಚೆಯಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಖಾಸಗಿ ಟ್ಯಾಂಕರ್‌ನವರು ಖಾಸಗಿ ಕೊಳವೆಬಾವಿಗಳಿಂದ ನೀರು ಪೂರೈಸುತ್ತಾರೆ. ಶುದ್ಧ ಕುಡಿಯುವ ನೀರಿನ ಘಟಕಗಳಿಂದ ಸರ್ಕಾರ ನೀರು ಪೂರೈಸುತ್ತಿದೆ. ದುರಸ್ತಿಯಲ್ಲಿರುವ ಘಟಕಗಳನ್ನು ರಿಪೇರಿ ಮಾಡುತ್ತಿದ್ದೇವೆ. ಇನ್ನೂ 3–4 ತಿಂಗಳು ಈ ಸಮಸ್ಯೆ ಇರಲಿದೆ’ ಎಂದರು.

ನೋಡಲ್ ಅಧಿಕಾರಿ ನೇಮಕ: ‘ಬೆಂಗಳೂರು ಗ್ರಾಮಾಂತರ ಭಾಗದ ವಾರ್ಡ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿದ್ದು, ಬೇರೆ ಭಾಗಗಳಲ್ಲಿ ಯಾಕೆ ನೇಮಿಸಿಲ್ಲ’ ಎಂದು ಕೇಳಿದಾಗ, ‘ಬೆಂಗಳೂರು ಗ್ರಾಮಾಂತರ ಭಾಗ ಸಂಪೂರ್ಣವಾಗಿ ಕೊಳವೆ ಬಾವಿಗಳ ಮೇಲೆ ಅವಲಂಬಿತವಾಗಿದ್ದು, ಹೆಚ್ಚು ಸಂಖ್ಯೆಯಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಹೀಗಾಗಿ, ಅಲ್ಲಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಬೆಂಗಳೂರು ನಗರ ಪ್ರದೇಶ ಕಾವೇರಿ ನೀರನ್ನು ಅವಲಂಬಿಸಿದೆ’ ಎಂದು ವಿವರಿಸಿದರು.

ನದಿಗೆ ಕೆಆರ್‌ಎಸ್ ನೀರು ಬಿಡುಗಡೆ ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವುದಕ್ಕಾಗಿ ಕೆಆರ್‌ಎಸ್ ಜಲಾಶಯದಿಂದ ಶನಿವಾರ 4 ಸಾವಿರ ಕ್ಯುಸೆಕ್ ನೀರು ಹರಿಸಲಾಗಿದ್ದು, ಸ್ಥಳೀಯ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

‘ಬೆಂಗಳೂರಿಗೆ ಕುಡಿಯುವ ಉದ್ದೇಶಕ್ಕೆ 700 ಕ್ಯುಸೆಕ್ ನೀರು ಸಾಕು, ಆದರೆ 4 ಸಾವಿರ ಕ್ಯುಸೆಕ್ ನೀರು ಬಿಟ್ಟಿರುವುದೇಕೆ? ತಮಿಳುನಾಡಿಗೆ ನೀರು ಕೊಡುವ ಉದ್ದೇಶ ಸರ್ಕಾರದ್ದು’ ಎಂದು ರೈತ ಮುಖಂಡರು ಆರೋಪಿಸಿದ್ದಾರೆ.

ಭಾನುವಾರ ನಗರದಲ್ಲಿ ನಡೆಯಲಿರುವ ಗ್ಯಾರಂಟಿ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಲ್ಗೊಳ್ಳಲಿದ್ದು, ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಲು ನಿರ್ಧರಿಸಲಿದ್ದಾರೆ.

‘ಬೆಂಗಳೂರು ನಗರಕ್ಕೆ ಕುಡಿಯುವ ಉದ್ದೇಶಕ್ಕೆ ನೀರು ಹರಿಸುತ್ತಿದ್ದು, ಸತ್ತೇಗಾಲದ ಬಳಿಯ ಶಿವ ಅಣೆಕಟ್ಟೆ ತಲುಪುವ ವರೆಗೆ ಎರಡು ದಿನಗಳ ಕಾಲ ನೀರು ಹರಿಸಿ ನಂತರ ನಿಲ್ಲಿಸಲಾಗುವುದು’ ಎಂದು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ಜಯಂತ್ ತಿಳಿಸಿದ್ದಾರೆ

ಕೊಳವೆಬಾವಿ ಮೇಲೆ ಅವಲಂಬಿತವಾದ ಹೊರವಲಯದ ಪ್ರದೇಶಗಳಲ್ಲಿ ಸಮಸ್ಯೆ ಹೆಚ್ಚು: ಜಲಮಂಡಳಿ

‘ಜುಲೈ ಅಂತ್ಯದವರೆಗೆ ಕಾವೇರಿ ನೀರಿಗೆ ಸಮಸ್ಯೆ ಇಲ್ಲ’

ಕಾವೇರಿ ಲೆಕ್ಕಾಚಾರ



1,470 ಎಂಎಲ್‌ಡಿ	ಬೆಂಗಳೂರಿಗೆ ಪ್ರತಿನಿತ್ಯ ಸರಬರಾಜಾಗುತ್ತಿರುವ ನೀರು
1.54 ಟಿಎಂಸಿ ಅಡಿ	ಬೆಂಗಳೂರಿಗೆ ಒಂದು ತಿಂಗಳಿಗೆ ಬೇಕಿರುವ ನೀರು
8 ಟಿಎಂಸಿ ಅಡಿ	ಬೆಂಗಳೂರಿಗೆ ಜುಲೈ ಅಂತ್ಯದವರೆಗೆ ಬೇಕಿರುವ ನೀರು
17 ಟಿಎಂಸಿ ಅಡಿ	ಬೆಂಗಳೂರು ಸೇರಿದಂತೆ ಕೈಗಾರಿಕೆ ಹಾಗೂ ಇತರೆ ನಗರಗಳಿಗೆ ಜುಲೈ ಅಂತ್ಯದವರೆಗೆ ಬೇಕಿರುವ ನೀರು
34 ಟಿಎಂಸಿ ಅಡಿ	ಕಾವೇರಿ ನದಿಯಲ್ಲಿರುವ ನೀರು
2,100 ಎಂಎಲ್‌ಡಿ	110 ಹಳ್ಳಿ ಸೇರಿದಂತೆ ಬೆಂಗಳೂರು ನಗರಕ್ಕೆ ಬೇಕಿರುವ ನೀರು
775 ಎಂಎಲ್‌ಡಿ	ಕಾವೇರಿ ಐದನೇ ಹಂತದಿಂದ ಮೇ 15ರ ವೇಳೆಗೆ ಲಭ್ಯವಾಗುವ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿಯಿಂದ ನಗರಕ್ಕೆ ಜುಲೈ ಅಂತ್ಯದವರೆಗೆ ಕುಡಿಯುವ ನೀರು ಸರಬರಾಜು ಮಾಡಬಹುದು. ಅಗತ್ಯಕ್ಕಿಂತ ಹೆಚ್ಚಿನ ಸಂಗ್ರಹವಿದೆ. ಆದರೆ ಹೊರವಲಯದಲ್ಲಿ ಕೊಳವೆಬಾವಿ ಬತ್ತಿರುವುದರಿಂದ ನೀರಿನ ಸಮಸ್ಯೆ ಇದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಹೇಳಿದರು.

‘ಕಾವೇರಿ ನೀರು ಪೂರೈಸಲಾಗುತ್ತಿರುವ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಉಂಟಾಗಿಲ್ಲ. ಸುಮಾರು 20 ಎಂಎಲ್‌ಡಿ (ಪ್ರತಿನಿತ್ಯ ದಶಲಕ್ಷ ಲೀಟರ್) ಹೆಚ್ಚುವರಿಯಾಗಿ ಪಂಪ್ ಮಾಡಲಾಗುತ್ತಿದೆ. ಪ್ರತಿ ವ್ಯಕ್ತಿಗೆ ದಿನಕ್ಕೆ 150 ಲೀಟರ್ ನೀರು ಒದಗಿಸಲು ಯಾವುದೇ ಸಮಸ್ಯೆ ಇಲ್ಲ. ನಗರದ ಕೋರ್ ಹಾಗೂ ಸಿಎಂಸಿ-ಟಿಎಂಸಿ ಪ್ರದೇಶದಲ್ಲಿ ಹಿಂದಿನಂತೆಯೇ ನೀರು ಪೂರೈಕೆಯಾಗುತ್ತಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

‘ನಗರದ ಹೊರವಲಯದ ಪ್ರದೇಶಗಳಿಗೆ 650 ಎಂಎಲ್‌ಡಿ ನೀರಿನ ಅಗತ್ಯವಿದೆ. ಈ ಭಾಗದಲ್ಲಿ ಎಲ್ಲರೂ ಕೊಳವೆಬಾವಿಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ಶೇ 30ರಷ್ಟು ಕೊಳವೆಬಾವಿಗಳು ಬತ್ತಿಹೋಗಿರುವುದರಿಂದ ನೀರಿನ ಸಮಸ್ಯೆ ಉಂಟಾಗಿದೆ. ಒಟ್ಟಾರೆ ಶೇ 10ರಿಂದ 15ರಷ್ಟು ಕೊರತೆ ಉಂಟಾಗಿದೆ. ಈ ಭಾಗದ ಜನರಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. 110 ಹಳ್ಳಿಗಳಿಗೆ ತಲಾ ಆರು ಸಾವಿರ ಲೀಟರ್ ಸಾಮರ್ಥ್ಯದ 79 ಟ್ಯಾಂಕರ್‌ಗಳ ಮೂಲಕ ದಿನಕ್ಕೆ ನಾಲ್ಕರಿಂದ ಐದು ಟ್ರಿಪ್ ನೀರು ಪೂರೈಸಲಾಗುತ್ತಿದೆ’ ಎಂದರು.

582 ಕಡೆ ಟ್ಯಾಂಕ್: ‘ಕೊಳೆಗೇರಿ ಪ್ರದೇಶ, ಜನನಿಬಿಡ ಪ್ರದೇಶ, ತಗ್ಗು ಮತ್ತು ಎತ್ತರದ ಪ್ರದೇಶಗಳಲ್ಲಿ ಒಂದು ಸಾವಿರದಿಂದ ಮೂರು ಸಾವಿರ ಲೀಟರ್ ಸಾಮರ್ಥ್ಯದ 582 ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಮಂಡಳಿ ವತಿಯಿಂದ ಅಳವಡಿಸಲಾಗಿದೆ. ನಿತ್ಯ ಎರಡು ಬಾರಿ ಟ್ಯಾಂಕ್‌ಗಳನ್ನು ಭರ್ತಿ ಮಾಡಲಾಗುತ್ತದೆ. ಬೇಡಿಕೆ ಪರಿಶೀಲಿಸಿ ಹೆಚ್ಚು ಬಾರಿಯೂ ತುಂಬಿಸಲು ಕ್ರಮವಹಿಸಲಾಗಿದೆ. ಈ ಪ್ರದೇಶದಲ್ಲಿ ವಾಸವಾಗಿರುವ ಜನರು ಟ್ಯಾಂಕ್‌ಗಳ ಮೂಲಕ ಕುಡಿಯುವ ನೀರನ್ನು ಉಚಿತವಾಗಿ ಪಡೆಯುತ್ತಿದ್ದಾರೆ. ನೀರು ಪೂರೈಸುವಲ್ಲಿ ಸಮಸ್ಯೆಯಾದರೆ ನಮ್ಮ ನೋಡಲ್ ಅಧಿಕಾರಿಗಳು ಅಥವಾ ನಮ್ಮ ಕಂಟ್ರೋಲ್ ರೂಂಗೆ ಕರೆ ಮಾಡಿ ದೂರು ನೀಡಬಹುದು. ಕೂಡಲೇ ಕ್ರಮಕೈಗೊಳ್ಳಲಾಗುತ್ತದೆ’ ಎಂದು ರಾಮ್ ಪ್ರಸಾತ್ ಮನೋಹರ್ ಹೇಳಿದರು.

ನಗರದಲ್ಲಿ ಹೊಸದಾಗಿ ಕೊಳವೆಬಾವಿ ಕೊರೆಯಲು ಕಾರ್ಯಾದೇಶ ನೀಡಲಾಗಿದೆ. ನೀರಿನ ಲಭ್ಯತೆ ಆಧರಿಸಿ, ಭೂವಿಜ್ಞಾನಿಗಳ ವರದಿಯಂತೆ ಕೊಳವೆಬಾವಿ ಕೊರೆಯಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ನಾಲ್ವರು ಭೂವಿಜ್ಞಾನಿಗಳನ್ನು ನಿಯೋಜಿಸಲಾಗಿದೆ ಎಂದರು.

ಅಪಾರ್ಟ್‌ಮೆಂಟ್‌ಗಳಲ್ಲಿ ಸಮಸ್ಯೆ!: ‘ನಗರದ ಹೊರವಲಯಗಳಾದ ಮಹದೇವಪುರ, ವೈಟ್‌ಫೀಲ್ಡ್, ಐಟಿ–ಬಿಟಿ ಕಂಪನಿಗಳು ಹೆಚ್ಚಿರುವ ಪ್ರದೇಶ ಸೇರಿದಂತೆ ಯಶವಂತಪುರ, ಬೆಂಗಳೂರು ದಕ್ಷಿಣ ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್‌ಗಳು ಹೆಚ್ಚಿವೆ. ಈ ಅಪಾರ್ಟ್‌ಮೆಂಟ್‌ಗಳವರು ಕಾವೇರಿ ನೀರಿನ ಸಂಪರ್ಕ ಬಹುತೇಕ ಹೊಂದಿಲ್ಲ. ಇವರೆಲ್ಲ ಕೊಳವೆಬಾವಿಗಳ ಮೇಲೆ ಅವಲಂಬಿತವಾಗಿರುವುದರಿಂದ ನೀರಿನ ಸಮಸ್ಯೆ ಉಂಟಾಗಿದೆ. ಆದರೂ, ನಗರದಲ್ಲೇ ಕಾವೇರಿ ನೀರಿಲ್ಲ ಎಂದು ವದಂತಿ ಹಬ್ಬಿಸಲಾಗುತ್ತಿದೆ. ನಾಗರಿಕರು ಇದಕ್ಕೆ ಕಿವಿಗೊಡಬಾರದು. ಕುಡಿಯಲು ನೀರು ಸರಬರಾಜು ಆಗುತ್ತದೆ, ಆತಂಕ ಬೇಡ’ ಎಂದು ಭರವಸೆ ನೀಡಿದರು.

ಟ್ಯಾಂಕರ್ ನೋಂದಣಿಗೆ ಮಾರ್ಚ್ 15ರವರೆಗೆ ಅವಕಾಶ



‘ಬಿಬಿಎಂಪಿ ಪೋರ್ಟಲ್‌ನಲ್ಲಿ 1,530 ನೀರಿನ ಟ್ಯಾಂಕರ್‌ಗಳ ಮಾಲೀಕರು ನೋಂದಣಿ ಮಾಡಿಕೊಂಡಿದ್ದು, ಈ ಟ್ಯಾಂಕರ್‌ಗಳ ಸಾಮರ್ಥ್ಯ 1.14 ಕೋಟಿ ಲೀಟರ್‌ಗಳಾಗಿದ್ದು, ಸರಿಸುಮಾರು 10 ಎಂಎಲ್‌ಡಿ ಆಗಲಿದೆ. 419 ಟ್ಯಾಂಕರ್‌ಗಳನ್ನು ಬಾಡಿಗೆಗೆ ಕೊಡಲು ಮಾಲೀಕರು ಒಪ್ಪಿದ್ದಾರೆ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆಯಂತೆ ನೋಂದಣಿ ಮಾಡಿಕೊಳ್ಳುವ ಅವಧಿಯನ್ನು ಮಾರ್ಚ್ 15ರವರೆಗೆ ವಿಸ್ತರಿಸಲಾಗಿದೆ. ನಂತರವೂ ನೋಂದಣಿಯಾಗದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

‘ಮಾರ್ಚ್ 15ರ ನಂತರ ನಗರ ಜಿಲ್ಲಾಡಳಿತ ನಿಗದಿಪಡಿಸಿರುವ ದರದಂತೆಯೇ ಟ್ಯಾಂಕರ್ ನೀರು ಮಾರಾಟ ಮಾಡಬೇಕು. ನೋಂದಣಿಯಾಗಿರುವ ಟ್ಯಾಂಕರ್‌ಗಳ ಮೇಲೆ ಬಿಬಿಎಂಪಿ ಸ್ಟಿಕ್ಕರ್ ಇರುತ್ತದೆ. ಅವರು ಹೆಚ್ಚಿನ ಹಣ ಕೇಳಿದರೆ ನಾಗರಿಕರು ದೂರು ನೀಡಬಹುದು’ ಎಂದು ಹೇಳಿದರು.

ನೀರು ದುರ್ಬಳಕೆ 15ರಿಂದ ದಂಡ

‘ಕಾವೇರಿ ನೀರನ್ನು ಕುಡಿಯುವ ಉದ್ದೇಶಕ್ಕೆ ಹೊರತಾಗಿ ದುರ್ಬಳಕೆ ಮಾಡಿದರೆ ಮಾರ್ಚ್ 15ರಿಂದ ದಂಡ ವಿಧಿಸಲಾಗುವುದು. ಮೀಟರ್ ರೀಡರ್ ಹಾಗೂ ಜಲಮಂಡಳಿ ಸಿಬ್ಬಂದಿ ನಿಗಾವಹಿಸಿ ಸ್ಥಳದಲ್ಲಿಯೇ ದಂಡ ವಿಧಿಸುವ ವ್ಯವಸ್ಥೆ ರೂಪಿಸಲಾಗಿದೆ’ ಎಂದು ರಾಮ್ ಪ್ರಸಾತ್ ಮನೋಹರ್ ಹೇಳಿದರು.

‘ಸರ್ಕಾರದ ವಿಪತ್ತು ನಿರ್ವಹಣೆ ನಿಧಿಯಿಂದ ಅನುದಾನ ನಿರೀಕ್ಷಿಸಲಾಗಿದೆ. ₹110 ಕೋಟಿ ಆದಾಯ ಸೇರಿದಂತೆ ಇತರೆ ಕೆಲವು ಮೂಲಗಳಿಂದ ವರಮಾನ ಬರುತ್ತಿದ್ದು, ಜಲಮಂಡಳಿ ಆರ್ಥಿಕವಾಗಿ ಸದೃಢವಾಗಿದ್ದು, ಯಾವುದೇ ಸಮಸ್ಯೆ ಇಲ್ಲ’ ಎಂದರು.

ಅಂತರ್ಜಲ ವೃದ್ಧಿಗೆ ಕ್ರಮ

‘ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಳಕ್ಕೆ ತುರ್ತು ಹಾಗೂ ದೀರ್ಘಕಾಲದ ಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಬೆಳ್ಳಂದೂರು, ವರ್ತೂರು ಕೆರೆಗಳು ಬರಿದಾಗಿರುವುದರಿಂದ ಆ ಪ್ರದೇಶಗಳಲ್ಲಿ ಅಂತರ್ಜಲ ಕಡಿಮೆಯಾಗಿದೆ. 1,300 ಎಂಎಲ್‌ಡಿ ಸಂಸ್ಕರಿಸಿದ ಗುಣಮಟ್ಟದ ನೀರನ್ನು ಕೆರೆಗಳಿಗೆ ತುಂಬಿಸಲು ಉದ್ದೇಶಿಸಲಾಗಿದೆ. ಪ್ರಾರಂಭದಲ್ಲಿ, ನಾಯಂಡಹಳ್ಳಿ ಕೆರೆ, ಚಿಕ್ಕಬಾಣವಾರ ಕೆರೆ, ವರ್ತೂರು ಕೆರೆ, ಅಗರ ಕೆರೆ ಸೇರಿದಂತೆ ಆರು ಕೆರೆಗಳನ್ನು ತುಂಬಿಸಲಾಗುವುದು’ ಎಂದು ರಾಮ್ ಪ್ರಸಾತ್ ಮನೋಹರ್ ಹೇಳಿದರು.

‘ಕೆರೆಗಳ ಪಕ್ಕದಲ್ಲಿಯೇ ಫಿಲ್ಟರ್ ಬೋರ್‌ವೆಲ್‌ಗಳನ್ನು ಕೊರೆದು, ಸಂಸ್ಕರಣೆ ಘಟಕ ಅಳವಡಿಸಿ, ಸುಮಾರು 10ರಿಂದ 20 ಎಂಎಲ್‌ಡಿ ಕುಡಿಯುವ ನೀರನ್ನು ಒದಗಿಸುವ ಯೋಜನೆ ಇದೆ’ ಎಂದರು.

ಸಂಸ್ಕರಿಸಿದ ನೀರು ಮಾರಾಟ!

ಜಲಮಂಡಳಿ ವತಿಯಿಂದ ಸಂಸ್ಕರಿಸಲಾಗಿರುವ, ಬಹುತೇಕ ಕುಡಿಯಲು ಯೋಗ್ಯವೇ ಆಗಿರುವ ನೀರನ್ನು ಕುಡಿಯಲು, ಅಡುಗೆಗೆ ಹೊರತುಪಡಿಸಿದಂತೆ ಉಪಯೋಗಿಸಲು ನಾಗರಿಕರಿಗೆ ಮಾರಾಟ ಮಾಡಲಾಗುತ್ತದೆ. ಇದಕ್ಕಾಗಿ ವೆಬ್ ಅಪ್ಲಿಕೇಷನ್ ಅನ್ನು ಮುಂದಿನವಾರ ಆರಂಭಿಸಲಾಗುತ್ತದೆ ಎಂದು ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಸಗಟು ನೀರು ಬಳಕೆದಾರರಾದ ವಿಮಾನ ನಿಲ್ದಾಣ, ಎಚ್‌ಎಎಲ್, ರಕ್ಷಣಾ ಇಲಾಖೆ ಸೇರಿದಂತೆ ಕೈಗಾರಿಕೆಗಳಿಗೆ ಸಂಸ್ಕರಿಸಿದ ನೀರನ್ನು ಬಳಸುವಂತೆ ಮನವಿ ಮಾಡಿಕೊಳ್ಳಲಾಗಿದೆ ಎಂದರು.

‘ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪ್ರಕಾರವೇ ನೀರನ್ನು ಸಂಸ್ಕರಿಸಲಾಗಿದ್ದು, ಅದನ್ನು ಮರುಬಳಕೆ ಮಾಡಬಹುದಾಗಿದೆ. ಕೆಲವು ಪರೀಕ್ಷೆಗಳಲ್ಲಿ ಈ ನೀರು ಕುಡಿಯುವ ನೀರಿನ ಮಟ್ಟಕ್ಕಿಂತ ಉತ್ತಮ ಗುಣಮಟ್ಟ ಎಂಬುದು ಸಾಬೀತಾಗಿದೆ. ಒಂದು ಎಕರೆ ಕೆರೆಯನ್ನು ತುಂಬಿದರೆ ಒಂದು ದಶಲಕ್ಷ ಲೀಟರ್‌ನಷ್ಟು ಅಂತರ್ಜಲ ವೃದ್ಧಿಯಾಗುತ್ತದೆ. 186 ಕೆರೆಗಳನ್ನೂ ತುಂಬಿದ್ದರೆ ಅಂತರ್ಜಲ ವೃದ್ಧಿಯಾಗುತ್ತದೆ’ ಜಲಮಂಡಳಿ ತಾಂತ್ರಿಕ ಸಮಿತಿ ಸದಸ್ಯ ಪ್ರೊ.ವಿಶ್ವನಾಥ ಮಾಹಿತಿ ನೀಡಿದರು.

ರಾತ್ರಿ 9.30ಕ್ಕೆ ಬೆಂಗಳೂರಿಗೆ ತಲುಪಬೇಕಿದ್ದ ಬಸ್ ಮರುದಿನ ಮುಂಜಾನೆ ಆಗಮನ

ಪ್ರಯಾಸ ತಂದ ಬಿಎಂಟಿಸಿ ಪ್ಯಾಕೇಜ್ ಪ್ರವಾಸ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಿಎಂಟಿಸಿ ಆರಂಭಿಸಿದ ಈಶ ಫೌಂಡೇಷನ್ ಪ್ರವಾಸ
- ಹವಾನಿಯಂತ್ರಿತ ಬಸ್‌ಗಳಲ್ಲಿನ ಪ್ರವಾಸದ ಆಸನಕ್ಕೆ ₹500 ನಿಗದಿ
- ಭೋಗ ನಂದೀಶ್ವರ ದೇವಸ್ಥಾನಕ್ಕೆ ತೆರಳುವಾಗ ದಾರಿ ತಪ್ಪಿದ ಬಸ್

ಬೆಂಗಳೂರು: ಸರಿಯಾದ ಯೋಜನೆ, ತಯಾರಿಗಳಿಲ್ಲದೇ ಬಿಎಂಟಿಸಿ ಆರಂಭಿಸಿದ ‘ಈಶ ಫೌಂಡೇಷನ್’ ಪ್ರವಾಸವು ಮೊದಲ ದಿನವೇ ಪ್ರಯಾಸವನ್ನು ಉಂಟು ಮಾಡಿದೆ. ರಾತ್ರಿ ವಾಪಸ್ ಆಗಬೇಕಾದ ಬಸ್ ಮರುದಿನ ಬೆಳಿಗ್ಗೆ ಮೆಜೆಸ್ಟಿಕ್ ತಲುಪಿದೆ.

ಚಿಕ್ಕಬಳ್ಳಾಪುರ ಮತ್ತು ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಬಿಎಂಟಿಸಿ ‘ಈಶ ಫೌಂಡೇಷನ್’ ಹೆಸರಿನಡಿ ಪ್ರವಾಸಿ ಪ್ಯಾಕೇಜ್ ಅನ್ನು ಶುಕ್ರವಾರ ಆರಂಭಿಸಿತ್ತು. ರಜಾದಿನಗಳು ಮತ್ತು ವಾರಾಂತ್ಯ ದಿನಗಳಲ್ಲಿ ಹವಾನಿಯಂತ್ರಿತ ಬಸ್‌ಗಳಲ್ಲಿನ ಪ್ರವಾಸದ ಪ್ರತಿ ಆಸನಕ್ಕೆ ₹500 ನಿಗದಿಪಡಿಸಲಾಗಿತ್ತು.

ಭೋಗ ನಂದೀಶ್ವರ ದೇವಸ್ಥಾನ, ಕಣಿವೆ ಬಸವಣ್ಣ ದೇವಸ್ಥಾನ, ಸರ್. ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ಮತ್ತು ಸಮಾಧಿ, ರಂಗಸ್ಥಳ ರಂಗನಾಥ ಸ್ವಾಮಿ ದೇವಸ್ಥಾನ ಮತ್ತು ಈಶ ಫೌಂಡೇಷನ್‌ಗೆ ಭೇಟಿ ನೀಡಿ ರಾತ್ರಿ 9.30ಕ್ಕೆ ಬಸ್‌ಗಳು ಮೆಜೆಸ್ಟಿಕ್‌ಗೆ ವಾಪಸ್ ಆಗಬೇಕಿತ್ತು.

ತಪ್ಪಿದ ದಾರಿ: ‘ಭೋಗ ನಂದೀಶ್ವರ ದೇವಸ್ಥಾನಕ್ಕೆ ತೆರಳುತ್ತಿದ್ದಾಗ ಮುಖ್ಯರಸ್ತೆಯಿಂದ ಎಡಗಡೆಯ ರಸ್ತೆಗೆ ಹೋಗಬೇಕಿತ್ತು. ನಮ್ಮ ಬಸ್‌ನಲ್ಲಿದ್ದ ಹಿರಿಯರೊಬ್ಬರು ಎಡಕ್ಕೆ ತೆಗೆದುಕೊಳ್ಳುವಂತೆ ಚಾಲಕನಿಗೆ ತಿಳಿಸಿದ್ದರು. ಆದರೆ, ನಮ್ಮ ಬಸ್‌ಗಿಂತ ಮುಂದೆ ಇದ್ದ ಇನ್ನೊಂದು ಬಸ್ ಬಲರಸ್ತೆಗೆ ತಿರುಗಿಸಿದ್ದರಿಂದ ನಮ್ಮ ಬಸ್‌ನ ಚಾಲಕ ಕೂಡ ಅದನ್ನೇ ಹಿಂಬಾಲಿಸಿದರು. ಹಲವು ಕಿ.ಮೀ. ದೂರ ಹೋದ ಬಳಿಕ ದಾರಿ ತಪ್ಪಿರುವುದು ಅರಿವಿಗೆ ಬಂದು ಮುಂದಿನ ಬಸ್ ನಿಂತಿತು. ಹಿಂದೆ ಇದ್ದ ನಮ್ಮ ಬಸ್ ಕೂಡ ನಿಂತಿತು.



ಅಗಲವಿಲ್ಲದ ಆ ರಸ್ತೆಯಲ್ಲಿ ಬಸ್ ತಿರುಗಿಸಲು ಕಷ್ಟಪಡಬೇಕಾಯಿತು. ಕೊನೆಗೆ ತಿರುಗಿ ಬಂದು ಭೋಗ ನಂದೀಶ್ವರ ದೇವಸ್ಥಾನ ತಲುಪುವ ಹೊತ್ತಿಗೆ ಕನಿಷ್ಠ 1 ತಾಸು ತಡವಾಗಿತ್ತು’ ಎಂದು ಬಸ್ ಪ್ರಯಾಣಿಕರು ಮಾಹಿತಿ ನೀಡಿದರು.

‘ಅಲ್ಲಿಂದ ಸಮಸ್ಯೆ ಆರಂಭವಾಯಿತು. ತಡವಾಗಿದೆ ಎಂದು ಕೆಲವು ಕ್ಷೇತ್ರಗಳನ್ನು ಬಿಟ್ಟು ಮುಂದಕ್ಕೆ ಹೋಗಲು ಕೆಲವು ಪ್ರಯಾಣಿಕರು ಒತ್ತಾಯಿಸಿದರೆ, ದುಡ್ಡುಕೊಟ್ಟಿದ್ದೇವೆ. ನಿಗದಿಪಡಿಸಿದ ಎಲ್ಲ ಕಡೆಗಳಿಗೆ ಹೋಗಬೇಕು ಎಂದು ಇನ್ನು ಕೆಲವರು ಪಟ್ಟು ಹಿಡಿದರು. ಶಿವರಾತ್ರಿ ಪ್ರಯುಕ್ತ ವಾಹನದಟ್ಟಣೆ ಹೆಚ್ಚಿದ್ದರಿಂದ ಸಂಚಾರ ಬಹಳ ನಿಧಾನವಾಗಿತ್ತು. ಕಣಿವೆ ಬಸವಣ್ಣ ದೇವಸ್ಥಾನಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಮುಂದೆ ಸರ್.ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ತಲುಪುವ ಹೊತ್ತಿಗೆ ಅವರು ಕೆಲಸ ಮುಗಿಸಿ ಬಾಗಿಲು ಹಾಕಿದ್ದರು. ಸಮಾಧಿಯ ಗೇಟ್ ಹಾಕಿ ತೆರಳುತ್ತಿದ್ದ ಸಿಬ್ಬಂದಿಯನ್ನು ನಿಲ್ಲಿಸಿ ಗೇಟ್ ತೆಗೆಸಿ ಕತ್ತಲಲ್ಲಿಯೇ ವಿಶ್ವೇಶ್ವರಯ್ಯರ ಸಮಾಧಿ ನೋಡಬೇಕಾಯಿತು. ಈಶ ಫೌಂಡೇಷನ್‌ಗೆ ತಲುಪುವ ಹೊತ್ತಿಗೆ ಮಧ್ಯರಾತ್ರಿ ದಾಟಿತ್ತು. ಬೆಂಗಳೂರಿಗೆ ತಲುಪುವಾಗ ಬೆಳಿಗ್ಗೆ 5.30 ಆಗಿತ್ತು. ದಾರಿ ಗೊತ್ತಿರುವ ಚಾಲಕರನ್ನು ನಿಯೋಜಿಸಿದ್ದರೆ, ಸರಿಯಾಗಿ ಯೋಜನೆ ರೂಪಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ’ ಎಂದು ಪ್ರಯಾಣಿಕರು ದೂರಿದರು.

‘ಮೊದಲ ದಿನದ ಗೊಂದಲ ಮುಂದುವರಿಯಲ್ಲ’

‘ಈಶ ಫೌಂಡೇಷನ್ ಪ್ರವಾಸಿ ಪ್ಯಾಕೇಜ್‌ಗೆ ಒಂದು ಬಸ್ ನಿಯೋಜಿಸಲಾಗಿತ್ತು. ಆದರೆ, ಭಾರಿ ಸಂಖ್ಯೆಯಲ್ಲಿ ಬೇಡಿಕೆ ಬಂದಿದ್ದರಿಂದ ಒಂದರ ಬದಲು ಎಂಟು ಬಸ್‌ಗಳನ್ನು ಪ್ಯಾಕೇಜ್‌ಗೆ ಕಳುಹಿಸಿ ಯಾರಿಗೂ ನಿರಾಸೆಯಾಗದಂತೆ ನೋಡಿಕೊಂಡೆವು. ದೇವಸ್ಥಾನಗಳಲ್ಲಿ ಶಿವರಾತ್ರಿಯ ಜಾಗರಣೆಗಾಗಿ ಬರುವವರ ಸಂಖ್ಯೆಯೂ ಅಧಿಕ ಇದ್ದಿದ್ದರಿಂದ ಎಲ್ಲಕಡೆ ಜನದಟ್ಟಣೆ, ವಾಹನದಟ್ಟಣೆ ಉಂಟಾಗಿತ್ತು. ದಾರಿ ಗೊತ್ತಿರುವ ಚಾಲಕರೇ ಇದ್ದರು. ಹೆಚ್ಚುವರಿಯಾಗಿ ನಿಯೋಜಿಸಿದ್ದ ಕೊನೆಯ ಬಸ್‌ಗಳಿಗೆ ಬೇರೆ ಮಾರ್ಗದ ಚಾಲಕರು ಇದ್ದಿದ್ದರಿಂದ ತೊಂದರೆಯಾಯಿತು. ಶನಿವಾರ, ಭಾನುವಾರಕ್ಕೂ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೀಟು ಕಾಯ್ದಿರಿಸಿದ್ದಾರೆ. ಮೊದಲ ದಿನದ ಗೊಂದಲ ಮುಂದುವರಿಯುವುದಿಲ್ಲ’ ಎಂದು ಬಿಎಂಟಿಸಿ ವಿಭಾಗ ಸಂಚಾರ ಅಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಪ್ರವೇಶ-ನಿರ್ಗಮನ ದ್ವಾರಕ್ಕೆ ಹಸಿರು ನಿಶಾನೆ

ಬೆಂಗಳೂರು–ಮೈಸೂರು ಹೆದ್ದಾರಿ: ಇಂದು ಗಡ್ಕರಿ ಚಾಲನೆ

• ಆರ್. ಜಿತೇಂದ್ರ

ಮೈಸೂರು: ಬೆಂಗಳೂರು–ಮೈಸೂರು ನಡುವಿನ ಹತ್ತು ಪಥಗಳ ಹೆದ್ದಾರಿಯಲ್ಲಿ ಪ್ರಮುಖ ನಗರಗಳಿಗೆ ವ್ಯವಸ್ಥಿತ ಪ್ರವೇಶ ಮತ್ತು ನಿರ್ಗಮನ ದ್ವಾರ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ, ಲೋಕಸಭೆ ಚುನಾವಣೆಯ ದಿನಾಂಕ ಪ್ರಕಟಗೊಳ್ಳುವ ಹೊಸ್ತಿಲಲ್ಲಿ ಚಾಲನೆ ನೀಡಲಿದ್ದಾರೆ.

ದಶಪಥ ಹೆದ್ದಾರಿ ಉದ್ಘಾಟನೆಗೊಂಡು ವರ್ಷವೇ ಕಳೆದಿದೆ. ಆದಾಗ್ಯೂ ಹೆದ್ದಾರಿಯ ಆರು ಪ್ರಮುಖ ನಗರಗಳಿಗೆ ವ್ಯವಸ್ಥಿತವಾದ ಪ್ರವೇಶ ಮತ್ತು ನಿರ್ಗಮನದ ವ್ಯವಸ್ಥೆ ಇಲ್ಲ. ಅದಕ್ಕಾಗಿ ₹1,200 ಕೋಟಿ ವೆಚ್ಚದಲ್ಲಿ ಪ್ರತ್ಯೇಕ ಯೋಜನೆಯ ಪ್ರಸ್ತಾವವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕೇಂದ್ರಕ್ಕೆ ಸಲ್ಲಿಸಿತ್ತು.

ಭಾನುವಾರ ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸಚಿವರು ಈ ಯೋಜನೆಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆ. ಭೂಸ್ವಾಧೀನ ಹಾಗೂ ಟೆಂಡರ್ ಪ್ರಕ್ರಿಯೆಗಳು ನಂತರದಲ್ಲಿ ಆರಂಭವಾಗಲಿವೆ.

ಬೆಂಗಳೂರು–ಮೈಸೂರು ಮಾರ್ಗ ಮಧ್ಯೆ ಬರುವ ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣ ನಗರಗಳಿಗೆ ಎಕ್ಸ್‌ಪ್ರೆಸ್ ವೇನಲ್ಲಿ ಪ್ರವೇಶ ಮತ್ತು ನಿರ್ಗಮನ ದ್ವಾರಗಳ ನಿರ್ಮಾಣಕ್ಕೆ ಯೋಜನೆಯು ಅವಕಾಶ ಕಲ್ಪಿಸಲಿದೆ.

ಈ ನಗರಗಳಿಗೆ ಕೆಲವೇ ಕಿ.ಮೀ. ದೂರದಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಪ್ರವೇಶ ಮತ್ತು ನಿರ್ಗಮನವನ್ನು ವಿನ್ಯಾಸಗೊಳಿಸಲಾಗುತ್ತದೆ. ಕುಂಬಳಗೋಡು ಟೋಲ್ ಪ್ಲಾಜಾ, ಬಿಡದಿ, ರಾಮನಗರದ ಕೆಂಪೇಗೌಡನದೊಡ್ಡಿ, ಚನ್ನಪಟ್ಟಣದ ತಿಟ್ಟಮಾರನಹಳ್ಳಿ ಇಲ್ಲವೇ ಮತ್ತಿಕೆರೆ–ಶೆಟ್ಟಿಹಳ್ಳಿ, ಮದ್ದೂರು ತಾಲ್ಲೂಕಿನ ನಿಡಘಟ್ಟ, ಮಂಡ್ಯ ಬೈಪಾಸ್ (ಹೋಟೆಲ್ ಅಮರಾವತಿ ಬಳಿ), ಶ್ರೀರಂಗಪಟ್ಟಣ ಟೋಲ್ (ಗಣಂಗೂರು) ಇಲ್ಲವೇ ಕರಿಘಟ್ಟ ರಸ್ತೆ ಬಳಿ ವಾಹನಗಳು ಎಕ್ಸ್‌ಪ್ರೆಸ್ ವೇ ಪ್ರವೇಶಿಸಲು ಇಲ್ಲವೇ ನಿರ್ಗಮಿಸಲು ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ.

ಸದ್ಯ ಬೆಂಗಳೂರು–ಮೈಸೂರು ಹೆದ್ದಾರಿ ನಡುವೆ ಮೂರು ಟೋಲ್ ಸಂಗ್ರಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆರು ಪಥಗಳ ಎಕ್ಸ್‌ಪ್ರೆಸ್‌ವೇನಲ್ಲಿ ಸಂಚರಿಸುವ ವಾಹನಗಳಿಂದ ಟೋಲ್ ಸಂಗ್ರಹ ಮಾಡಲಾಗುತ್ತಿದೆ.

ಇನ್ನೂ ಆರಂಭವಾಗದ ಕಾಮಗಾರಿ

ಮೈಸೂರು–ಕುಶಾಲನಗರ ನಡುವಿನ (ಎನ್.ಎಚ್. 275) ನಾಲ್ಕು ಪಥಗಳ ಹೆದ್ದಾರಿ ಮತ್ತು ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಸಚಿವ ನಿತಿನ್ ಗಡ್ಕರಿ ಭಾನುವಾರ ಚಾಲನೆ ನೀಡಲಿದ್ದಾರೆ.

ಕಳೆದ ವರ್ಷ ಮಾರ್ಚ್‌ನಲ್ಲಿ ವಿಧಾನಸಭೆ ಚುನಾವಣೆಗೆ ಮುನ್ನ ಮಂಡ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಬೆಂಗಳೂರು–ಮೈಸೂರು ಹೆದ್ದಾರಿ ಉದ್ಘಾಟನೆ ಜೊತೆಗೆ ಶ್ರೀರಂಗಪಟ್ಟಣದಿಂದ ಕುಶಾಲನಗರದವರೆಗಿನ ಹೆದ್ದಾರಿ ನಿರ್ಮಾಣ ಕಾಮಗಾರಿಗೂ ಶಂಕುಸ್ಥಾಪನೆ ನೆರವೇರಿಸಿದ್ದರು. ಅದಾದ ಒಂದು ವರ್ಷದ ಬಳಿಕವೂ ಈ ಕಾಮಗಾರಿ ಆರಂಭಗೊಂಡಿಲ್ಲ.

ಒಟ್ಟು 93 ಕಿ.ಮೀ. ಉದ್ದದ ರಸ್ತೆ ನಿರ್ಮಾಣಕ್ಕೆ ₹4,130 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಕಳೆದ ವರ್ಷವೇ ಕಾಮಗಾರಿ ಆರಂಭಗೊಂಡು 2024ರ ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ ಇನ್ನೂ ಭೂಸ್ವಾಧೀನ ಪ್ರಕ್ರಿಯೆಯೇ ಪೂರ್ಣಗೊಂಡಿಲ್ಲ.

2023–24ನೇ ಸಾಲಿನಡಿ ಶೇ 16ರಷ್ಟು ಉತ್ಪಾದನೆ ಕುಸಿತ: ಕೇಂದ್ರ

5 ಲಕ್ಷ ಟನ್ ಈರುಳ್ಳಿ ದಾಸ್ತಾನು

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ 5 ಲಕ್ಷ ಟನ್ ಈರುಳ್ಳಿ ಕಾಪು ದಾಸ್ತಾನು ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಮುಕ್ತ ಮಾರುಕಟ್ಟೆಯಲ್ಲಿ ದರ ಏರಿಕೆ ನಿಯಂತ್ರಿಸಲು ಪ್ರತಿ ವರ್ಷ ಈರುಳ್ಳಿಯನ್ನು ದಾಸ್ತಾನು ಮಾಡಲಾಗುತ್ತದೆ. ಕಳೆದ ವರ್ಷ ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯವು 5 ಲಕ್ಷ ಟನ್ ಈರುಳ್ಳಿ ದಾಸ್ತಾನು ಮಾಡಿತ್ತು. ಈ ಪೈಕಿ ಇನ್ನೂ ಒಂದು ಲಕ್ಷ ಟನ್ ದಾಸ್ತಾನು ಉಳಿದಿದೆ.


ಕೇಂದ್ರ ಸರ್ಕಾರದ ಏಜೆನ್ಸಿಗಳಾದ ಎನ್‌ಸಿಸಿಎಫ್ ಹಾಗೂ ನಾಫೆಡ್ ಮೂಲಕ ರೈತರಿಂದ ನೇರವಾಗಿ ಈರುಳ್ಳಿ ಖರೀದಿಸಿ ದಾಸ್ತಾನು ಮಾಡಲಾಗುತ್ತದೆ. ದರ ಏರಿಕೆಯಾದಾಗ ಸಂಗ್ರಹಿಸಿಟ್ಟಿರುವ ಈರುಳ್ಳಿಯನ್ನು ಖರೀದಿ ಏಜೆನ್ಸಿಗಳ ಮೂಲಕವೇ ಚಿಲ್ಲರೆ ಮಾರುಕಟ್ಟೆಯಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಿದೆ.

ದೇಶದಲ್ಲಿ ಈರುಳ್ಳಿಯ ಬೆಲೆ ನಿಯಂತ್ರಿಸುವ ಉದ್ದೇಶದಿಂದ ಇದೇ 31ರ ವರೆಗೆ ರಫ್ತಿಗೆ ನಿಷೇಧ ಹೇರಲಾಗಿದೆ. ಆದರೆ, ಮಿತ್ರ ರಾಷ್ಟ್ರಗಳನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ.

ಶೇ 16ರಷ್ಟು ಉತ್ಪಾದನೆ ಕುಸಿತ: ಕಳೆದ ವರ್ಷಕ್ಕೆ ಹೋಲಿಸಿದರೆ 2023–24ನೇ ಸಾಲಿನಡಿ ಈರುಳ್ಳಿ ಉತ್ಪಾದನೆಯು ಶೇ 16ರಷ್ಟು ಕಡಿಮೆಯಾಗಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯವು ಅಂದಾಜಿಸಿದೆ.

ಮಹಾರಾಷ್ಟ್ರದಲ್ಲಿ 34.31 ಲಕ್ಷ ಟನ್, ಕರ್ನಾಟಕ 9.95 ಲಕ್ಷ ಟನ್, ಆಂಧ್ರಪ್ರದೇಶ 3.54 ಲಕ್ಷ ಟನ್ ಹಾಗೂ ರಾಜಸ್ಥಾನದಲ್ಲಿ 3.12 ಲಕ್ಷ ಟನ್‌ನಷ್ಟು ಉತ್ಪಾದನೆ ಕುಸಿತವಾಗಲಿದೆ ಎಂದು ತಿಳಿಸಿದೆ.

'ಹಾಗಾಗಿ, ದೇಶದಲ್ಲಿ ಮುಂದಿನ ದಿನಗಳಲ್ಲಿ ಬೆಲೆ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಮುಂಜಾಗ್ರತೆಯಾಗಿ ಈರುಳ್ಳಿ ದಾಸ್ತಾನಿಗೆ ಸರ್ಕಾರ ನಿರ್ಧರಿಸಿದೆ' ಎಂದು ಮೂಲಗಳು ತಿಳಿಸಿವೆ.



ಆಹಾರ ಪದಾರ್ಥಗಳ ಬೆಲೆ ನಿಯಂತ್ರಣಕ್ಕೆ ಕ್ರಮ: ಗೋಯಲ್

ನವದೆಹಲಿ (ಪಿಟಿಐ): 'ದೇಶದಲ್ಲಿ ಈರುಳ್ಳಿ, ಟೊಮೆಟೊ, ಬೇಳೆಕಾಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಕ್ರಮಕೈಗೊಂಡಿದೆ' ಎಂದು ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

'ಲೋಕಸಭೆಗೆ ಶೀಘ್ರವೇ ಚುನಾವಣೆ ನಡೆಯಲಿದೆ. ಈ ಹೊತ್ತಿನಲ್ಲಿ ಆಹಾರ ಪದಾರ್ಥಗಳ ಬೆಲೆಗಳನ್ನು ನಿಯಂತ್ರಿಸಲು ಕ್ರಮವಹಿಸಲಾಗಿದೆ. ಯಾವುದೇ ಪದಾರ್ಥದ ಬೆಲೆಯು ತಾತ್ಕಾಲಿಕವಾಗಿ ಏರಿಕೆಯಾದ ವೇಳೆ ಕೇಂದ್ರ ಸರ್ಕಾರವು ಕೆಲವೇ ದಿನಗಳಲ್ಲಿ ನಿಯಂತ್ರಿಸಿರುವ ಹಲವು ನಿದರ್ಶನಗಳಿವೆ' ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ದೇಶದ ಮಹಿಳೆಯರ ಹಿತಕಾಯಲು ಸರ್ಕಾರ ಬದ್ಧವಾಗಿದೆ. ಆಹಾರದ ಹಣದುಬ್ಬರ ನಿಯಂತ್ರಣಕ್ಕೂ ಕ್ರಮವಹಿಸಿದೆ. ಇದಕ್ಕಾಗಿಯೇ ಕಳೆದ ಕೆಲವು ವರ್ಷಗಳಿಂದ ಬೆಲೆ ಸ್ಥಿರೀಕರಣ ನಿಧಿಯಡಿ ₹28 ಸಾವಿರ ಕೋಟಿಯನ್ನು ಖರ್ಚು ಮಾಡಿದೆ ಎಂದು ವಿವರಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

9-3-2024

ಜಾವಾ 70/80(ಹೊಸ)	11100-11000
ಜಾವಾ 80/90(ಹೊಸ)	10600-10600
ದಪ್ಪ ಮಧ್ಯಪ್ರದೇಶ(ಹೊಸ)	9600-9600
ದಪ್ಪ ಗುಜರಾತ್(ಹೊಸ)	10500-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	955 (940)
ಪಾಮ್ ವಾರದ ಡೆಲಿವರಿ	917 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	945 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹65,400 (64,800)
ಬೆಳ್ಳಿ ಕೆ.ಜಿ ₹72,300 (73,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹14300
ಎಸಿ	₹7000
ಆರ್‌ಪಿ	₹8500
ಆರ್‌ಸಿ	₹4530


ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1490 (1480)
ಸೋಯಾ (ರಿಫೈನ್ಡ್)	₹970 (960)
ಸೂರ್ಯಕಾಂತಿ (ರಿಫೈನ್ಡ್)	₹945 (940)
ಪಾಮೋಲಿನ್	₹917 (915)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹68
ಮೈಸೂರು	
100ಕ್ಕೆ	₹490

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹315-435
ದ್ವಿತಳಿ (ಬಿ.ವಿ)	₹336-553

'ಮಂಥನ್': ಉಪ ರಾಷ್ಟ್ರಪತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ಶುಕ್ರವಾರ ಆಗಮಿಸಿದ್ದ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ನಿಯೋಗವು, ಸೌಹಾರ್ದ ಭೇಟಿ ಮಾಡಿ ಚರ್ಚಿಸಿತು.

ಜೂನ್‌ನಲ್ಲಿ ಬೆಂಗಳೂರಿನ ಮಹಾಸಂಸ್ಥೆಯ ಸರ್ ಎಂ.ವಿ. ಸಭಾಂಗಣದಲ್ಲಿ 16ನೇ ಆವೃತ್ತಿಯ 'ಮಂಥನ್-2024' ಕಾರ್ಯಕ್ರಮ ಏರ್ಪಡಿಸಲಾಗಿದೆ. ಇದರಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವಂತೆ ನಿಯೋಗವು ಕೋರಿತು. ಇದಕ್ಕೆ ಧನಕರ್ ಅವರು ಒಪ್ಪಿಗೆ ಸೂಚಿಸಿದರು.

ನವೋದ್ಯಮಗಳಿಗೆ ಉತ್ತೇಜನ ನೀಡಲು ಹಾಗೂ ಭಾರತದ ಆರ್ಥಿಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಯಶಸ್ವಿ ಉದ್ಯಮಿಗಳನ್ನಾಗಿ ರೂಪಿಸಲು ಎಫ್‌ಕೆಸಿಸಿಐ 'ಮಂಥನ್' ಕಾರ್ಯಕ್ರಮವನ್ನು ರೂಪಿಸಿದೆ.

'ಈ ಸ್ಪರ್ಧೆಯಲ್ಲಿ ರಾಜ್ಯದ 190ಕ್ಕೂ ಹೆಚ್ಚು ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಕಾರ್ಯಕ್ರಮದ ಮೂಲಕ ರಾಷ್ಟ್ರ ನಿರ್ಮಾಣಕ್ಕಾಗಿ ಯುವ ಉದ್ಯಮಿಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ' ಎಂದು ನಿಯೋಗದ ನೇತೃತ್ವವಹಿಸಿದ್ದ ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ವಿವರಿಸಿದರು.

ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ತಂಡಗಳಿಗೆ ಕಾರ್ಯಾಗಾರ ನಡೆಸಲಾಗುತ್ತದೆ. ಅವರ ಪ್ರಸ್ತಾವನೆಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ. ವಾಣಿಜ್ಯಿಕವಾಗಿ ಕಾರ್ಯಗತಗೊಳಿಸಬಹುದಾದ ವ್ಯಾಪಾರ ಯೋಜನೆಗಳಿಗೆ ₹10 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ ಎಂದು ತಿಳಿಸಿದರು.

ಎಫ್‌ಕೆಸಿಸಿಐನ ಈ ಪ್ರಯತ್ನಕ್ಕೆ ಧನಕರ್ ಶ್ಲಾಘಿಸಿದರು.

ಮಹಾಸಂಸ್ಥೆಯ ಹಿರಿಯ ಉಪಾಧ್ಯಕ್ಷ ಎಂ.ಜಿ. ಬಾಲಕೃಷ್ಣ, ಉಪಾಧ್ಯಕ್ಷೆ ಉಮಾ ರೆಡ್ಡಿ, ಮಂಥನ್ ಸಮಿತಿ ಅಧ್ಯಕ್ಷರಾದ ಕೀರ್ತನ್ ಕುಮಾರ್ ಹಾಗೂ ಮಹಾಸಂಸ್ಥೆಯ ಸದಸ್ಯ ಡಾ.ವಿ.ಜಿ. ಕಿರಣ್ ಕುಮಾರ್ ಈ ನಿಯೋಗದಲ್ಲಿದ್ದರು.



ಬೆಂಗಳೂರಿಗೆ ಆಗಮಿಸಿದ್ದ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ನೇತೃತ್ವದ ನಿಯೋಗವು ಭೇಟಿ ಮಾಡಿತು



ಕಚ್ಚಾತೈಲವನ್ನು ಹೊತ್ತು ಮಂಗಳೂರಿಗೆ ಬಂದಿರುವ 'ಸ್ವರ್ಣ ಸಿಂಧು' ಹಡಗು

ಮಂಗಳೂರು: ಕಚ್ಚಾತೈಲ ಹೊತ್ತ 'ಸ್ವರ್ಣ ಸಿಂಧು' ಹಡಗು ಆಗಮನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್‌ನ (ಎಂಆರ್‌ಪಿಎಲ್) ಮಾತೃಸಂಸ್ಥೆಯಾಗಿರುವ ಒಎನ್‌ಜಿಸಿ (ಆಯಿಲ್ ಆ್ಯಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್) ಬಂಗಾಳಕೊಲ್ಲಿಯ ಕೃಷ್ಣಾ–ಗೋದಾವರಿ ಜಲಾನಯನ ಪ್ರದೇಶದ ತೈಲ ನಿಕ್ಷೇಪದಿಂದ ತೆಗೆದಿರುವ ಕೆಜಿ 98/2 ಕಚ್ಚಾತೈಲವನ್ನು ಹೊತ್ತ ಮೊದಲ ಹಡಗನ್ನು ಶನಿವಾರ ನವ ಮಂಗಳೂರು ಬಂದರಿನಲ್ಲಿ ಸ್ವಾಗತಿಸಲಾಯಿತು.

'ಸ್ವರ್ಣ ಸಿಂಧು' ಹಡಗಿನಲ್ಲಿ ಬಂದಿರುವ 60 ಸಾವಿರ ಮೆಟ್ರಿಕ್ ಟನ್ ಕಚ್ಚಾತೈಲವನ್ನು ಎಂಆರ್‌ಪಿಎಲ್ ಸಂಸ್ಕರಿಸಿ, ವಿವಿಧ ಇಂಧನ ಮತ್ತು ಪೆಟ್ರೊಕೆಮಿಕಲ್ಸ್ ಉತ್ಪನ್ನಗಳನ್ನು ತಯಾರಿಸಲಿದೆ.

'ಇದು ಕಡಿಮೆ ಸಲ್ಫರ್ ಹೊಂದಿದ್ದು, ಸಿಹಿ ಕಚ್ಚಾತೈಲವಾಗಿದೆ. ಮಾರ್ಚ್ 2ರಂದು ಪ್ರಧಾನಿ ನರೇಂದ್ರ ಮೋದಿ ಅವರು ತೈಲವನ್ನು ಹೊತ್ತ ಹಡಗು ಸಂಚಾರಕ್ಕೆ ಹಸಿರು ನಿಶಾನೆ ತೋರಿದ್ದರು' ಎಂದು ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಶ್ಯಾಮಪ್ರಸಾದ್ ಕಾಮತ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ₹30 ಸಾವಿರ ಕೋಟಿ ಹೂಡಿಕೆಯೊಂದಿಗೆ 2016ರಲ್ಲಿ ಕೃಷ್ಣಾ–ಗೋದಾವರಿ ಜಲಾನಯನ ಪ್ರದೇಶದಲ್ಲಿ ಆರಂಭವಾದ ಯೋಜನೆ ಇದಾಗಿದೆ. ಪ್ರಸ್ತುತ 12 ಸಾವಿರ ಬ್ಯಾರೆಲ್ ಕಚ್ಚಾತೈಲ ಹೊರತೆಗೆಯಲಾಗುತ್ತಿದ್ದು, ಈ ಯೋಜನೆ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ವೇಳೆಗೆ ದಿನಕ್ಕೆ ಸುಮಾರು 45 ಸಾವಿರ ಬ್ಯಾರಲ್ ಕಚ್ಚಾತೈಲ ಮತ್ತು 10 ಮಿಲಿಯನ್ ಎಸ್‌ಸಿಎಂ (ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್) ನೈಸರ್ಗಿಕ ಅನಿಲ ಪಡೆಯಬಹುದೆಂದು ನಿರೀಕ್ಷಿಸಲಾಗಿದೆ' ಎಂದು ವಿವರಿಸಿದರು.

'ಭಾರತವು ತನ್ನ ಬೇಡಿಕೆಯ ಶೇ 85ರಷ್ಟು ಪ್ರಮಾಣದ ಕಚ್ಚಾತೈಲವನ್ನು ಹೊರದೇಶದಿಂದ ಮುಖ್ಯವಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಈ ನಿಕ್ಷೇಪದ ಮೂಲಕ ಭವಿಷ್ಯದಲ್ಲಿ ದೇಶದ ಕಚ್ಚಾ ತೈಲದ ಆಮದು ಪ್ರಮಾಣ ಶೇ 7ರಷ್ಟು ಕಡಿಮೆಯಾಗಲಿದೆ' ಎಂದು ಎಂಆರ್‌ಪಿಎಲ್ (ರಿಫೈನರಿ) ನಿರ್ದೇಶಕ ಸಂಜಯ್ ವರ್ಮಾ ತಿಳಿಸಿದರು.

'ಅಲ್ಲದೆ, ಭಾರತದ ವಿದೇಶಿ ವಿನಿಮಯದಲ್ಲಿ ಉಳಿತಾಯವಾಗಲಿದೆ. ಎಂಆರ್‌ಪಿಎಲ್ 250 ಮಾದರಿಯ ಕಚ್ಚಾ ತೈಲ ಸಂಸ್ಕರಣೆ ಸಾಮರ್ಥ್ಯ ಹೊಂದಿದ್ದು, 100 ಮಾದರಿಯ ತೈಲ ಸಂಸ್ಕರಣೆಗಳು ಇಲ್ಲಿ ನಡೆದಿವೆ' ಎಂದು ಹೇಳಿದರು.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹161
ಗುಡ್ ಲಾಟ್	₹150

(ಪ್ರತಿ ಕೆ.ಜಿಗೆ)

ಸ್ವದೇಶಿ ನಿರ್ಮಿತ ರೂಟರ್ ಲೋಕಾರ್ಪಣೆ

ಬೆಂಗಳೂರು (ಪಿಟಿಐ): ದೇಶದ ಅತಿವೇಗದ ಹಾಗೂ ಸ್ವದೇಶಿ ನಿರ್ಮಿತ ಐಪಿ/ಎಂಪಿಎಲ್‌ಎಸ್ (ಮಲ್ಟಿಪ್ರೊಟೊಕಾಲ್ ಲೇಬಲ್ ಸ್ವಿಚಿಂಗ್) ರೂಟರ್ ಅನ್ನು ನಗರದಲ್ಲಿ ಶನಿವಾರ ಕೇಂದ್ರ ಸಂವಹನ, ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಲೋಕಾರ್ಪಣೆಗೊಳಿಸಿದರು.

ನಿವೆಟ್ಟಿ ಸಿಸ್ಟಂನಿಂದ ವಿನ್ಯಾಸಗೊಳಿಸಿರುವ ಈ ರೂಟರ್, 2.4 ಟಿಬಿಪಿಎಸ್ ಸಾಮರ್ಥ್ಯ ಹೊಂದಿದೆ. ಅತಿವೇಗದ ನೆಟ್‌ವರ್ಕ್ ಸೇವೆಯನ್ನು ನೀಡಲಿದೆ.

'ಪ್ರಧಾನಿ ನರೇಂದ್ರ ಮೋದಿ ಡಿಜಿಟಲ್ ಇಂಡಿಯಾಕ್ಕೆ ಒತ್ತು ನೀಡಿದ್ದಾರೆ. ಅವರ ಆಶಯಕ್ಕೆ ಅನುಗುಣವಾಗಿ ಈ ರೂಟರ್ ನಿರ್ಮಾಣವಾಗಿದೆ' ಎಂದು ಸಚಿವರು ಶ್ಲಾಘಿಸಿದರು.

'ರೂಟರ್ ನಿರ್ಮಾಣವು ಸಣ್ಣ ವಿಷಯವಲ್ಲ. ಭಾರತದ ಪಾಲಿಗೆ ಮಹತ್ವದ ಸಾಧನೆಯಾಗಿದೆ. ದೇಶದಲ್ಲಿ ಮುಂಬರುವ ದಿನಗಳಲ್ಲಿ ಇಂತಹ ಸಾವಿರಾರು ಉತ್ಪನ್ನಗಳನ್ನು ತಯಾರಿಸಬೇಕಿದೆ. ಈ ರೂಟರ್ ಅನ್ನು ರಫ್ತು ಕೂಡ ಮಾಡಬಹುದಾಗಿದೆ' ಎಂದರು.

ಮುಗಿದ ಖರೀದಿ ಮಿತಿ: ಕೊಬ್ಬರಿ ನೋಂದಣಿ ಸ್ಥಗಿತ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಬಲ ಬೆಲೆ ಯೋಜನೆಯಡಿ ಉಂಡೆ ಕೊಬ್ಬರಿ ಖರೀದಿ ಮಿತಿ ಶನಿವಾರ ಮುಗಿದಿದ್ದು, ಜಿಲ್ಲೆಯಲ್ಲಿ ನೋಂದಣಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಯಿತು. ಕೊಬ್ಬರಿ ಖರೀದಿಗೆ ಮಾರ್ಚ್ 4ರಿಂದ ಹೆಸರು ನೋಂದಣಿ ಪ್ರಕ್ರಿಯೆ ಆರಂಭವಾಗಿತ್ತು.

ಜಿಲ್ಲೆಗೆ ನಿಗದಿಪಡಿಸಿದ್ದ ಖರೀದಿ ಪ್ರಮಾಣವನ್ನು ಇತರೆ ಜಿಲ್ಲೆಗಳ ರೈತರು ಬಳಸಿಕೊಂಡಿದ್ದರಿಂದ ಜಿಲ್ಲೆಯ ಏಳು ಸಾವಿರ ಕ್ವಿಂಟಲ್ ಕೊಬ್ಬರಿ ಖರೀದಿ ಕಡಿಮೆಯಾಗಿದೆ. ಜಿಲ್ಲೆಯ ನಿಗದಿತ ಮಿತಿ ತಲುಪುವ ಮುನ್ನವೇ ನೋಂದಣಿ ಪ್ರಕ್ರಿಯೆ ಕೊನೆಗೊಂಡಿದೆ.

ಬೆಳಿಗ್ಗೆಯಿಂದ ವಿವಿಧ ಕೊಬ್ಬರಿ ಕೇಂದ್ರಗಳ ಬಳಿ ಸರದಿ ಸಾಲಿನಲ್ಲಿ ನಿಂತಿದ್ದ ರೈತರು ನೋಂದಣಿ ಸಾಧ್ಯವಾಗದೆ ನಿರಾಸೆಯಿಂದ ಮನೆಗೆ ತೆರಳಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ 6,92,500 ಕ್ವಿಂಟಲ್ ಕೊಬ್ಬರಿ ಖರೀದಿಗೆ ಅವಕಾಶ ನೀಡಲಾಗಿತ್ತು. ಶನಿವಾರ ಮಧ್ಯಾಹ್ನ ಇಷ್ಟು ಪ್ರಮಾಣದ ಕೊಬ್ಬರಿ ನೋಂದಣಿ ಮುಗಿದ ಕೂಡಲೇ ಪ್ರಕ್ರಿಯೆ ನಿಲ್ಲಿಸಲಾಗಿದೆ.

ಜಿಲ್ಲೆಗೆ 3.25 ಲಕ್ಷ ಕ್ವಿಂಟಲ್ ಕೊಬ್ಬರಿ ಖರೀದಿಗೆ ಅವಕಾಶ ಕಲ್ಪಿಸಲಾಗಿತ್ತು. 27,212 ರೈತರು 3,17,917 ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ.

ಡ್ರಗ್ಸ್ ಪ್ರಕರಣ: ನಿರ್ಮಾಪಕ ಸೆರೆ

ನವದೆಹಲಿ(ಪಿಟಿಐ): ಅಂತರ ರಾಷ್ಟ್ರೀಯ ಮಟ್ಟದ ಮಾದಕ ವಸ್ತುಗಳ ದಂಧೆಯ ನಂಟು ಹೊಂದಿರುವ ಆರೋಪದಡಿ ತಮಿಳುನಾಡಿನ ಡಿಎಂಕೆ ಪಕ್ಷದ ಮಾಜಿ ಪದಾಧಿಕಾರಿ, ನಿರ್ಮಾಪಕ ಜಾಫರ್ ಸಾಧಿಕ್ ಅವರನ್ನು ಬಂಧಿಸಲಾಗಿದೆ ಎಂದು ಮಾದಕ ವಸ್ತುಗಳ ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ಶನಿವಾರ ತಿಳಿಸಿದೆ.

'₹2,000 ಕೋಟಿ ಮೌಲ್ಯದ ಮಾದಕ ವಸ್ತುಗಳ ದಂಧೆ ಕುರಿತಾಗಿ ತನಿಖೆ ನಡೆಯುತ್ತಿದ್ದು, ಅದರ ಭಾಗವಾಗಿ ಸಾಧಿಕ್ ಅವರನ್ನು ದೆಹಲಿಯಲ್ಲಿ ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಎನ್‌ಸಿಬಿ ಮಾಹಿತಿ ನೀಡಿದೆ.

ತಮಿಳು ಚಲನಚಿತ್ರ ನಿರ್ಮಾಪಕರಾಗಿರುವ ಸಾಧಿಕ್ ಅವರು ಆಡಳಿತಾರೂಢ ಡಿಎಂಕೆ ಪಕ್ಷದ ವಿದೇಶಿ ಘಟಕದ ಪದಾಧಿಕಾರಿಯಾಗಿದ್ದರು. ಮಾದಕ ವಸ್ತುಗಳ ದಂಧೆಯಲ್ಲಿ ಸಾಧಿಕ್ ಹೆಸರು ಕೇಳಿ ಬಂದ ಹಿನ್ನೆಲೆಯಲ್ಲಿ ಡಿಎಂಕೆಯು ಇತ್ತೀಚಿಗೆ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿತ್ತು.

'ಸಾಧಿಕ್ ಅವರು ಭಾರತ, ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ದೇಶಗಳಲ್ಲಿ ಹರಡಿರುವ ಮಾದಕ ವಸ್ತುಗಳ ಜಾಲದ ಮಾಸ್ಟರ್ ಮೈಂಡ್ ಮತ್ತು ಕಿಂಗ್‌ಪಿನ್ ಆಗಿದ್ದಾರೆ' ಎಂದು ಎನ್‌ಸಿಬಿ ತಿಳಿಸಿದೆ. 'ಮಾದಕವಸ್ತುಗಳ ದಂಧೆಯಲ್ಲಿ ಗಳಿಸಿದ ಹಣವನ್ನು ಉದ್ಯಮ, ಸಿನಿಮಾ ಇನ್ನಿತರ ಚಟುವಟಿಕೆಗಳಿಗೆ ವಿನಿಯೋಗಿಸಿರುವುದಾಗಿ ಸಾಧಿಕ್ ಒಪ್ಪಿಕೊಂಡಿದ್ದಾರೆ' ಎಂದು ಮಾಹಿತಿ ನೀಡಿದೆ.

ಭಾರತದಿಂದ ಬೃಹತ್ ಪ್ರಮಾಣದಲ್ಲಿ ಮಾದಕ ವಸ್ತುಗಳ ಕಳ್ಳಸಾಗಾಣಿಕೆ ಆಗುತ್ತಿರುವ ಬಗ್ಗೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಅಧಿಕಾರಿಗಳು ನೀಡಿದ ಮಾಹಿತಿ ಆಧರಿಸಿ ಎನ್‌ಸಿಬಿಯು ಕಳೆದ ತಿಂಗಳು ದೆಹಲಿಯಲ್ಲಿ ದಾಳಿ ನಡೆಸಿತ್ತು. ಆ ದಾಳಿಯಲ್ಲಿ ತಮಿಳುನಾಡಿನ ಮೂವರನ್ನು ಬಂಧಿಸಿ 50 ಕಿಲೋ ಗ್ರಾಂ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿತ್ತು.

'ಕಳೆದ ಮೂರು ವರ್ಷಗಳಲ್ಲಿ ₹2000 ಕೋಟಿ ಮೌಲ್ಯದ 3,500 ಕಿಲೋ ಗ್ರಾಂ ಮಾದಕ ವಸ್ತುಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಪೂರೈಸಿರುವುದಾಗಿ ಬಂಧಿತ ಆರೋಪಿಗಳು ಮಾಹಿತಿ ನೀಡಿದ್ದಾರೆ' ಎಂದು ಎನ್‌ಸಿಬಿ ತಿಳಿಸಿದೆ.

ವಿದ್ಯಾರ್ಥಿ ಸಾವು: ಸಿಬಿಐ ತನಿಖೆಗೆ

ತಿರುವನಂತಪುರ: ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯದ ವಿದ್ಯಾರ್ಥಿಯ ಸಾವಿನ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಲು ಕೇರಳ ಸರ್ಕಾರ ನಿರ್ಧರಿಸಿದೆ.

'ಪೊಲೀಸರ ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದ್ದರೂ, ಮೃತ ವಿದ್ಯಾರ್ಥಿಯ ಪೋಷಕರ ಮನವಿಯನ್ನು ಪರಿಗಣಿಸಿ ಸಿಬಿಐ ತನಿಖೆಗೆ ಈ ಪ್ರಕರಣವನ್ನು ಒಪ್ಪಿಸಲಾಗುವುದು' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಯನಾಡ್‌ನ ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿ ಜೆ.ಎಸ್. ಸಿದ್ಧಾರ್ಥನ್ ಫೆ. 18ರಂದು ವಿಶ್ವವಿದ್ಯಾಲಯದ ಹಾಸ್ಟೆಲ್‌ನ ಶೌಚಾಲಯದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಅವರು ಮೂರು ದಿನ ಅನುಭವಿಸಿದ ಕ್ರೂರ ಚಿತ್ರಹಿಂಸೆ ಬಹಿರಂಗವಾಗಿದೆ. ಈ ಪ್ರಕರಣದ ಆರೋಪಿಗಳಲ್ಲಿ ಆಡಳಿತಾರೂಢ ಸಿಪಿಎಂನ ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐ ಕಾರ್ಯಕರ್ತರಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರ ಆರೋಪಿಗಳನ್ನು ರಕ್ಷಿಸುತ್ತಿದೆ ಎಂಬ ಆರೋಪ ಕೇಳಿಬಂದಿತ್ತು.

ಉತ್ತರಾಖಂಡ ಬೀಡುಬಿಟ್ಟ 'ಕೈ' ಶಾಸಕರು

ರಿಷಿಕೇಶ (ಪಿಟಿಐ): ಈಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಅಭಿಷೇಕ್ ಮನು ಸಿಂಘ್ವಿ ಅವರ ವಿರುದ್ಧ ಮತ ಚಲಾಯಿಸಿದ್ದ ಹಿಮಾಚಲ ಪ್ರದೇಶದ ಕಾಂಗ್ರೆಸ್‌ನ ಆರು ಮಂದಿ ಅನರ್ಹ ಶಾಸಕರು ಬಿಜೆಪಿ ಆಡಳಿತ ಇರುವ ಉತ್ತರಾಖಂಡದ ಹೋಟೆಲ್ ಒಂದರಲ್ಲಿ ಬೀಡು ಬಿಟ್ಟಿದ್ದಾರೆ. ಅವರ ಜೊತೆ ಮೂವರು ಪಕ್ಷೇತರ ಶಾಸಕರು, ಇಬ್ಬರು ಬಿಜೆಪಿ ಶಾಸಕರು ಕೂಡ ಇದ್ದಾರೆ.

ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ವಿರುದ್ಧ ಕಾಂಗ್ರೆಸ್ ಪಕ್ಷದಲ್ಲಿ ಅಸಮಾಧಾನ ಇನ್ನೂ ಶಮನಗೊಂಡಂತಿಲ್ಲ. ಕಾಂಗ್ರೆಸ್ ಶಾಸಕರು ಹಾಗೂ ಪಕ್ಷೇತರ ಶಾಸಕರನ್ನು ಬಿಜೆಪಿಯ ಶಾಸಕರಾದ ವಿಕ್ರಮ್ ಠಾಕೂರ್ ಮತ್ತು ತ್ರಿಲೋಕ್ ಜಮ್ವಾಲ್ ಹರಿಯಾಣದ ಪಂಚಕುಲಾದಿಂದ ಚಾರ್ಟರ್ಡ್ ವಿಮಾನವೊಂದರಲ್ಲಿ ಶುಕ್ರವಾರ ರಾತ್ರಿ ಇಲ್ಲಿಗೆ ಕರೆದುಕೊಂಡು ಬಂದಿದ್ದಾರೆ. ಅವರೆಲ್ಲ ಹೋಟೆಲ್ ತಾಜ್‌ನಲ್ಲಿ ವಾಸ್ತವ ಹೂಡಿದ್ದಾರೆ.

ಕಾಂಗ್ರೆಸ್ಸಿನ ಶಾಸಕರಾದ ಸುಧೀರ್ ಶರ್ಮ, ರಾಜಿಂದರ್ ರಾಣಾ, ಇಂದ್ರದತ್ ಲಖನ್‌ಪಾಲ್, ದೇವಿಂದರ್ ಕುಮಾರ್ ಭುಟ್ಟು, ರವೀಂದ್ರ ಠಾಕೂರ್ ಮತ್ತು ಚೈತನ್ಯ ಶರ್ಮ ಅವರನ್ನು ಪಕ್ಷದ ವಿಪ್ ಉಲ್ಲಂಘಿಸಿದ ಕಾರಣಕ್ಕಾಗಿ ಅನರ್ಹಗೊಳಿಸಲಾಗಿದೆ. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಪಕ್ಷೇತರ ಶಾಸಕರಾದ ಹೋಶಿಯಾರ್ ಸಿಂಗ್, ಕೆ.ಎಲ್. ಠಾಕೂರ್ ಮತ್ತು ಆಶಿಶ್ ಶರ್ಮ ಕೂಡ ಕಾಂಗ್ರೆಸ್ ಶಾಸಕರ ಜೊತೆ ಇದ್ದಾರೆ. ಅವರು ಇರುವ ಹೋಟೆಲ್ ಸುತ್ತ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಆನ್‌ಲೈನ್ ಮೂಲಕ ಕೊಠಡಿ ಕಾಯ್ದಿರಿಸಿದವರನ್ನು ಹೊರತುಪಡಿಸಿ ಬೇರೆ ಯಾರನ್ನೂ ಒಳಕ್ಕೆ ಬಿಡುತ್ತಿಲ್ಲ.

ಮರಳು ಗಣಿಗಾರಿಕೆ: ಇ.ಡಿ ಶೋಧ

ಚೆನ್ನೈ (ಪಿಟಿಐ): ಮರಳು ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯವು ಶನಿವಾರ ತಮಿಳುನಾಡಿನ ಹಲವೆಡೆ ಶೋಧ ನಡೆಸಿತು.

'ಲಾಟರಿ ಕಿಂಗ್' ಸ್ಯಾಂಟಿಗೊ ಮಾರ್ಟಿನ್ ಅವರ ಅಳಿಯ ಆಧವ್ ಅರ್ಜುನ್ ಅವರ ನಿವಾಸ ಸೇರಿದಂತೆ ಚೆನ್ನೈ ಮತ್ತು ಕೊಯಮತ್ತೂರಿನ ಹಲವರ ಮನೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ತಮಿಳುನಾಡಿನಲ್ಲಿ ಮರಳು ಅಕ್ರಮ ಗಣಿಗಾರಿಕೆಯಲ್ಲಿ ಹಣ ಅಕ್ರಮ ವರ್ಗಾವಣೆ ಮಾಡಿರುವ ಪ್ರಕರಣದ ಬಗ್ಗೆ ಜಾರಿ ನಿರ್ದೇಶನಾಲಯವು ತನಿಖೆ ನಡೆಸುತ್ತಿದೆ. 10 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ' ಎಂದು ತಿಳಿಸಿವೆ.



ವಿದ್ಯುತ್ ಉತ್ಪಾದನೆ: 'ರೈತ ಸೌರ ಶಕ್ತಿ ಮೇಳ'ದ ಉದ್ಘಾಟನೆಯಲ್ಲಿ ಮುಖ್ಯಮಂತ್ರಿ ಘೋಷಣೆ

28,000 ಮೆಗಾವಾಟ್ ಹೆಚ್ಚಳಕ್ಕೆ ಗುರಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮುಂದಿನ ಏಳು ವರ್ಷಗಳಲ್ಲಿ 28,000 ಮೆಗಾ ವಾಟ್‌ನಷ್ಟು ಹೆಚ್ಚಿಸುವ ಗುರಿ ಇದೆ. ಇದಕ್ಕಾಗಿ ಸಿದ್ಧತೆಗಳನ್ನು ಆರಂಭಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಶನಿವಾರ 'ರೈತ ಸೌರಶಕ್ತಿ ಮೇಳ' ಉದ್ಘಾಟಿಸಿದ ಅವರು, 'ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆಯೂ ಹೆಚ್ಚಬೇಕು. ಈಗ ರಾಜ್ಯದಲ್ಲಿ ಉತ್ಪಾದನಾ ಸಾಮರ್ಥ್ಯ 32,000 ಮೆಗಾವಾಟ್‌ನಷ್ಟಿದೆ. 2031ರ ವೇಳೆಗೆ 60,000 ಮೆಗಾವಾಟ್‌ಗಳಿಗೆ ಹೆಚ್ಚಿಸುವ ಗುರಿ ಇದೆ' ಎಂದರು.

2013ರಲ್ಲಿ ತಮ್ಮ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಉತ್ಪಾದನಾ ಸಾಮರ್ಥ್ಯ 14,000 ಮೆಗಾವಾಟ್ ಇತ್ತು. ಐದು ವರ್ಷಗಳಲ್ಲಿ ಅದನ್ನು 28,000 ಮೆಗಾವಾಟ್‌ಗೆ ಏರಿಸಲಾಗಿತ್ತು. ಸಮ್ಮಿಶ್ರ ಸರ್ಕಾರ ಹಾಗೂ ಬಿಜೆಪಿ ಆಡಳಿತದ ಐದು ವರ್ಷಗಳ ಅವಧಿಯಲ್ಲಿ ಕೇವಲ 4,000 ಮೆಗಾವಾಟ್ ಹೆಚ್ಚಳವಾಯಿತು. ಈ ಕಾರಣದಿಂದಾಗಿಯೇ ರಾಜ್ಯವು ಈಗ ವಿದ್ಯುತ್ ಕೊರತೆಯ ಸಮಸ್ಯೆ ಎದುರಿಸುತ್ತಿದೆ ಎಂದು ದೂರಿದರು.

'ನಮ್ಮ ಸರ್ಕಾರವು ಪಾವಗಡದಲ್ಲಿ ಅತಿದೊಡ್ಡ ಸೌರವಿದ್ಯುತ್ ಪಾರ್ಕ್ ನಿರ್ಮಿಸಿತ್ತು. ನಂತರ ಆಡಳಿತ ನಡೆಸಿದವರು ಅದೇ ವೇಗ ಕಾಯ್ದುಕೊಂಡಿದ್ದರೆ ಈಗ ಸಮಸ್ಯೆ ಉದ್ಭವಿಸುತ್ತಿರಲಿಲ್ಲ' ಎಂದರು.



ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಶನಿವಾರ ನಡೆದ ರೈತ ಸೌರಶಕ್ತಿ ಮೇಳದಲ್ಲಿ ಸೌರವಿದ್ಯುತ್ ಚಾಲಿತ ಪಂಪ್‌ಗಳ ಕಾರ್ಯನಿರ್ವಹಣೆಯ ಪ್ರಾತ್ಯಕ್ಷಿಕೆ ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಮಾಹಿತಿ ನೀಡಿದರು. ಇಂಧನ ಸಚಿವ ಕೆ.ಜೆ. ಜಾರ್ಜ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ.ಡಿ. ರಾಜೇಗೌಡ ಜತೆಗಿದ್ದರು –ಪ್ರಜಾವಾಣಿ ಚಿತ್ರ

ಸೌರವಿದ್ಯುತ್ ಬಳಕೆ ಹೆಚ್ಚಿಸಿ: ಸೌರವಿದ್ಯುತ್ ಉತ್ಪಾದನೆ, ಬಳಕೆಯಲ್ಲಿನ ಹೊಸ ತಂತ್ರಜ್ಞಾನಗಳನ್ನು ರೈತರು ಬಳಸಿಕೊಳ್ಳಬೇಕು. ಸೌರವಿದ್ಯುತ್ ಚಾಲಿತ ಪಂಪ್‌ಗಳ ಬಳಕೆಗೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಇಂಧನ ಸಚಿವ ಕೆ.ಜೆ. ಜಾರ್ಜ್, 'ಪ್ರಧಾನಮಂತ್ರಿ ಕುಸುಮ್ ಯೋಜನೆಯಡಿ ಕೃಷಿ ನೀರಾವರಿಗೆ ಸೌರವಿದ್ಯುತ್ ಚಾಲಿತ ಪಂಪ್ ಅಳವಡಿಕೆಗೆ ವೆಂಡರ್‌ಗಳನ್ನು ಗುರುತಿಸಲಾಗಿದೆ. ಮೊಬೈಲ್ ಆ್ಯಪ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು' ಎಂದು ಹೇಳಿದರು.

ಪ್ರಾತ್ಯಕ್ಷಿಕೆ: ಸೌರವಿದ್ಯುತ್ ಚಾಲಿತ ಪಂಪ್‌ಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. 20ಕ್ಕೂ ಹೆಚ್ಚು ಕಂಪನಿಗಳು ಸೌರವಿದ್ಯುತ್ ಉತ್ಪಾದನಾ ಕಿರು ಘಟಕಗಳು, ಅವುಗಳಿಂದ ನೀರೆತ್ತುವ ಪಂಪ್‌ಗಳ ಕಾರ್ಯನಿರ್ವಹಣೆಯ ಪ್ರಾತ್ಯಕ್ಷಿಕೆ ಒದಗಿಸಿದ್ದವು. ಸಾವಿರಾರು ರೈತರು ಮಾಹಿತಿ ಪಡೆದರು.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ.ಡಿ. ರಾಜೇಗೌಡ ಮಾತನಾಡಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜು, ನಸೀರ್ ಅಹಮದ್, ವಿಧಾನ ಪರಿಷತ್ ಸದಸ್ಯ ಸುಧಾಮ್ ದಾಸ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಸೇರಿದಂತೆ ಇಂಧನ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

'ನಮ್ಮ ದುಡ್ಡು; ಪ್ರಧಾನಿ ಹೆಸರು'

'ಪ್ರಧಾನ ಮಂತ್ರಿ ಕುಸುಮ್ ಯೋಜನೆಯಲ್ಲಿ ರಾಜ್ಯ ಸರ್ಕಾರ ಶೇ 50ರಷ್ಟು ಅನುದಾನ ನೀಡಲಿದೆ. ಕೇಂದ್ರ ಸರ್ಕಾರದ್ದು ಶೇ 30ರಷ್ಟಾದರೆ, ಶೇ 20 ಫಲಾನುಭವಿಗಳ ವಂತಿಗೆ. ಹಣ ರಾಜ್ಯ ಸರ್ಕಾರದ್ದು, ಹೆಸರು ಪ್ರಧಾನಿಗೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

2 ಯೋಜನೆಗಳಿಗೆ ಚಾಲನೆ

40,000 ಕೃಷಿ ನೀರಾವರಿ ಪಂಪ್‌ಗಳಿಗೆ ಸೌರವಿದ್ಯುತ್ ಸಂಪರ್ಕ ಕಲ್ಪಿಸುವುದು, 248 ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 806 ಫೀಡರ್‌ಗಳಿಗೆ ಸೌರವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಗಳಿಗೆ ಚಾಲನೆ, 24 ವಿದ್ಯುತ್ ಉಪ ಕೇಂದ್ರಗಳ ಉದ್ಘಾಟನೆಯನ್ನು ಮುಖ್ಯಮಂತ್ರಿ ನೆರವೇರಿಸಿದರು.

ಹಿಂದುತ್ವಕ್ಕೆ ಅಂಬೇಡ್ಕರ್‌ವಾದ ಪರ್ಯಾಯ

ಪುಸ್ತಕ ಬಿಡುಗಡೆ ಕಾರ್ಯಕ್ರಮ; ಸಚಿವ ಲಾಡ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುತ್ವವಾದಿಗಳನ್ನು ಟೀಕಿಸುವ ಬದಲು, ಹಿಂದುತ್ವಕ್ಕೆ ಪರ್ಯಾಯವಾಗಿ ಅಂಬೇಡ್ಕರ್ ವಾದವನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಶನಿವಾರ ಹೇಳಿದರು.

ಗದಗದ ಲಡಾಯಿ ಪ್ರಕಾಶನ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನವೀನ್ ಸೂರಿಂಜೆ ಅವರ 'ಮಹೇಂದ್ರ ಕುಮಾರ್, ನಡು ಬಗ್ಗಿಸದ ಎದೆಯ ದನಿ. ಹಿಂದುತ್ವವಾದಿಯ ಅನುಭವ ಕಥನ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್ ಹಿಂದುತ್ವದ ಆಧಾರದಲ್ಲೇ ರಾಜಕೀಯ ಮಾಡುತ್ತಿವೆ. ಯುವಜನರನ್ನು ದುರುಪಯೋಗ ಮಾಡುತ್ತಿದೆ. ಇಂತಹ ಸಮಯದಲ್ಲಿ ಸಂವಿಧಾನದ ಮೂಲಕ ದೇಶದ ಎಲ್ಲ ಜನರಿಗೂ ಸ್ವಾಭಿಮಾನದ ಬದುಕುಕೊಟ್ಟ ಅಂಬೇಡ್ಕರ್ ವಾದವನ್ನು ಪರ್ಯಾಯ ಅಸ್ತ್ರವಾಗಿ ಬಳಸಿದರೆ ಅನುಕೂಲವಾಗುತ್ತದೆ. ಹಾಗೆಯೇ ಅಂಬೇಡ್ಕರ್ ಅವರ ಆಶಯದ 'ಹಿಂದೂ ಕೋಡ್ ಬಿಲ್' ಕುರಿತು ವ್ಯಾಪಕ ಚರ್ಚೆಗಳು ನಡೆಯಬೇಕು ಎಂದರು.

ನಟ ಪ್ರಕಾಶ್ ರಾಜ್ ಮಾತನಾಡಿ, 'ರೈತರು, ಬಡವರ ವಿರೋಧಿ ಮನೋಸ್ಥಿತಿಯ ಅಧಿಕಾರಸ್ಥರನ್ನು ಏಕವಚನದಲ್ಲಿ ಟೀಕಿಸಿದ್ದಕ್ಕೆ ಕೆಲವರು ಬೇಸರ ಮಾಡಿಕೊಂಡಿದ್ದಾರೆ. ಹಾಗಾಗಿ, ಇನ್ನು ಮುಂದೆ ಅವರನ್ನು 'ಮಹಾಪ್ರಭುಗಳು' ಎಂದೇ ಸಂಬೋಧಿಸುವೆ ಎಂದು ಪ್ರಧಾನಿ ಮೋದಿ ವಿರುದ್ಧ ಪರೋಕ್ಷ ವಾಗ್ದಾಳಿ' ನಡೆಸಿದರು.



ಲಡಾಯಿ ಪ್ರಕಾಶನ ಶನಿವಾರ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ನಟ ಪ್ರಕಾಶ್ ರಾಜ್, ಸಚಿವ ಸಂತೋಷ್ ಲಾಡ್, ಶಾಸಕಿ ನಯನಾ ಮೋಟಮ್ಮ ಚರ್ಚೆಯಲ್ಲಿ ತೊಡಗಿದ್ದರು. ಲೇಖಕ ನವೀನ್ ಸೂರಿಂಜೆ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಕೃತಿ: ಮಹೇಂದ್ರ ಕುಮಾರ್, ನಡು ಬಗ್ಗಿಸದ ಎದೆಯ ದನಿ. ಹಿಂದುತ್ವವಾದಿಯ ಅನುಭವ ಕಥನ
ಲೇಖಕ: ನವೀನ್ ಸೂರಿಂಜೆ
ಪ್ರಕಾಶನ: ಲಡಾಯಿ ಪ್ರಕಾಶನ
ಪುಟ: 200
ಬೆಲೆ: ₹ 200

'ಜನರ ಪರವಾಗಿರುವ ನಾನು ಎಂದಿಗೂ ಪ್ರತಿಪಕ್ಷದ ಸ್ಥಾನದಲ್ಲಿರುತ್ತೇನೆ. ಜನರ ಧ್ವನಿಯಾಗಿ ಆಡಳಿತ ನಡೆಸುವವರನ್ನು ಟೀಕಿಸುತ್ತೇನೆ. ಅದು ಯಾವ ಪಕ್ಷವೇ ಆಗಿರಲಿ. ಕರ್ನಾಟಕದಲ್ಲಿ ಬಿಜೆಪಿ ತನ್ನ ಕಪಟತನದಿಂದ ಸೋಲು ಕಂಡಿತು. ಈಗ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಸೋಲದಂತೆ ಎಚ್ಚರಿಕೆಯ ಹೆಜ್ಜೆ ಇಡಬೇಕಿದೆ' ಎಂದು ಹೇಳಿದರು.

'ಮಹಾಪ್ರಭುಗಳ ಅಂತಪುರದಲ್ಲಿ ವಿಡಿಯೊಗ್ರಾಫರ್, ಫೋಟೊಗ್ರಾಫರ್, ವಸ್ತ್ರವಿನ್ಯಾಸಕರೇ ತುಂಬಿದ್ದಾರೆ. ಅವರ ಸಂಘ ಪರಿವಾರದಲ್ಲಿ ಬಡವರು, ರೈತರು, ಮಣಿಪುರಿಗಳಿಗೆ ಸ್ಥಾನವಿಲ್ಲ. ಅವರ ರಾಮನೂ ಕುಟುಂಬದ ರಾಮನಲ್ಲ, ಕೊಲ್ಲುವ ರಾಮ. ಕುಟುಂಬ ದ್ವೇಷಿ ಮನೋಭಾವದ ಮಹಾನುಭಾವರು ಅದಕ್ಕಾಗಿಯೇ ಸೀತೆ ಹೊರತಾದ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಮಾಡಿದ್ದಾರೆ. ಪೂರ್ಣಗೊಳ್ಳದ ದೇವಸ್ಥಾನ, ಆಸ್ಪತ್ರೆ ಉದ್ಘಾಟಿಸಿ ವಾಸ್ತವ ಮರೆಮಾಚುತ್ತಿದ್ದಾರೆ' ಟೀಕಿಸಿದರು.

ವಕೀಲ ಎಸ್.ಬಾಲನ್, ಕಾಂಗ್ರೆಸ್ ಮುಖಂಡರಾದ ಸುಧೀರ್ ಮುರೊಳ್ಳಿ, ನಿಕೇತ್ ರಾಜ್ ಮೌರ್ಯ, ಶಾಸಕಿ ನಯನಾ ಮೋಟಮ್ಮ ಮಾತನಾಡಿದರು. ಡಿವೈಎಫ್‌ಐ ರಾಜ್ಯ ಉಪಾಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೃತಿಯ ಲೇಖಕ ನವೀನ್ ಸೂರಿಂಜೆ, ಪ್ರಕಾಶಕ ಬಸವರಾಜ ಸೂಳಿಬಾವಿ ಅವರು ಉಪಸ್ಥಿತರಿದ್ದರು.

ಬಾಂಬೆ ಮಿಠಾಯಿ, ಮಂಚೂರಿ ನಿಷೇಧ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸುರಕ್ಷತೆ ಆಯುಕ್ತಾಲಯ ಸಂಗ್ರಹಿಸಿದ ಬಾಂಬೆ ಮಿಠಾಯಿ (ಕಾಟನ್ ಕ್ಯಾಂಡಿ) ಹಾಗೂ ವಿವಿಧ ಬಗೆಯ ಬಣ್ಣ ಬಳಸಿ ತಯಾರಿಸಲಾದ ಗೋಬಿ ಮಂಚೂರಿ ಮಾದರಿಯ ಪರೀಕ್ಷಾ ವರದಿ ಆರೋಗ್ಯ ಇಲಾಖೆಗೆ ಸಲ್ಲಿಕೆಯಾಗಿದ್ದು, ರಾಜ್ಯದಲ್ಲಿಯೂ ಇವು ನಿಷೇಧವಾಗುವ ಸಾಧ್ಯತೆಯಿದೆ.

ಪುದುಚೇರಿ, ತಮಿಳುನಾಡು ಸರ್ಕಾರಗಳು ಬಾಂಬೆ ಮಿಠಾಯಿ ಉತ್ಪಾದನೆ, ಮಾರಾಟ ನಿಷೇಧಿಸಿದೆ. ತಮಿಳುನಾಡಿನ ಸರ್ಕಾರಿ ಪ್ರಯೋಗಾಲಯದಲ್ಲಿ ನಡೆಸಲಾದ ಪರೀಕ್ಷೆಗಳಲ್ಲಿ ಬಾಂಬೆ ಮಿಠಾಯಿಯಲ್ಲಿ 'ರೊಡಮೈನ್-ಬಿ' ಅಂಶ ಇರುವುದು ದೃಢಪಟ್ಟಿದೆ. ಹೀಗಾಗಿ, ಕರ್ನಾಟಕದ ಆಹಾರ ಸುರಕ್ಷತೆ ಆಯುಕ್ತಾಲಯ ಕೂಡ ಬಾಂಬೆ ಮಿಠಾಯಿ ಹಾಗೂ ಗೋಬಿ ಮಂಚೂರಿ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಗಳಿಗೆ ಕಳುಹಿಸಿತ್ತು.



'ಬಾಂಬೆ ಮಿಠಾಯಿ ಜತೆಗೆ 170ಕ್ಕೆ ಹೆಚ್ಚು ಗೋಬಿ ಮಂಚೂರಿ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಅವುಗಳಲ್ಲಿ 100ಕ್ಕೂ ಅಧಿಕ ಮಾದರಿಗಳು ತಿನ್ನಲು ಯೋಗವಲ್ಲ ಎಂದು ವರದಿ ಉಲ್ಲೇಖಿಸಿದೆ. ಬಾಂಬೆ ಮಿಠಾಯಿ ಹಾಗೂ ಕೃತಕ ಬಣ್ಣ ಬಳಸಿ ತಯಾರಿಸುವ ಗೋಬಿ ಮಂಚೂರಿಯನ್ನು ನಿಷೇಧ ಮಾಡುವ ಸಾಧ್ಯತೆಯಿದೆ. ಆರೋಗ್ಯಕ್ಕೆ ಹಿತಕಾರಿಯಾದ ಸಹಜ ಬಣ್ಣ ಬಳಸಿ ತಯಾರಿಸುವ ಗೋಬಿ ಮಂಚೂರಿಗೆ ಅವಕಾಶ ಇರಲಿದೆ. ಈ ಬಗ್ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇದೇ ಸೋಮವಾರ ವರದಿ ಬಿಡುಗಡೆ ಮಾಡಲಿದ್ದಾರೆ' ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಕೃಷಿ ಬೇಡಿಕೆ ಸಲ್ಲಿಸದ ರಾಜ್ಯ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕೃಷಿ ಉತ್ಪಾದನೆ ಹೆಚ್ಚಳ ಆಗಬೇಕಾದರೆ, ಯಾವ ಜಿಲ್ಲೆಯ ರೈತರಿಗೆ ಏನು ಬೇಕು ಎಂಬ ಬೇಡಿಕೆ ಸಲ್ಲಿಸಬೇಕು. ಆದರೆ, ಕರ್ನಾಟಕ ಸೇರಿ ಕೆಲ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು ಯಾವ ಜಿಲ್ಲೆಗೆ ಏನು ಬೇಕು ಎಂಬ ಬೇಡಿಕೆ ನೀಡಿಲ್ಲ' ಎಂದು ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಇಲ್ಲಿ ದೂರಿದರು.


ವಿದ್ಯಾರ್ಥಿಗಳಿಗೆ ಶೇ 100ಕ್ಕಿಂತ ಹೆಚ್ಚು ಅಂಕ!

ಬೆಂಗಳೂರು: ಲಿಖಿತ ಪರೀಕ್ಷೆ ಅಂಕಗಳ ಜತೆ ಪ್ರಾಯೋಗಿಕ ಪರೀಕ್ಷೆ ಅಂಕಗಳನ್ನು ಜೋಡಿಸುವಾಗ ಆದ ಪ್ರಮಾದದಿಂದ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಹಲವು ವಿದ್ಯಾರ್ಥಿಗಳು ಶೇ 100ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ!

ಫಲಿತಾಂಶವನ್ನು ಈಚೆಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಾಗ ಪ್ರಮಾದವಾಗಿರುವುದು ಗಮನಕ್ಕೆ ಬಂದಿದೆ. ದೋಷಪೂರಿತ ಫಲಿತಾಂಶವನ್ನು ತಕ್ಷಣ ತಡೆ ಹಿಡಿದ ವಿ.ವಿ, ಲೋಪ ಸರಿಪಡಿಸಿ, ಪರಿಷ್ಕೃತ ಫಲಿತಾಂಶವನ್ನು ಪ್ರಕಟಿಸಿದೆ.

'ವಿ.ವಿ ಇದೇ ಮೊದಲ ಬಾರಿ ಸೆಮಿಸ್ಟರ್ ಪದ್ಧತಿ ಅಳವಡಿಸಿಕೊಂಡಿದೆ. ಬದಲಾದ ವ್ಯವಸ್ಥೆ ಮೌಲ್ಯಮಾಪನ ವಿಭಾಗದ ಸಿಬ್ಬಂದಿ ಹೊಂದಿಕೊಳ್ಳದೇ ಇರುವುದು ಇಂಥ ಸಮಸ್ಯೆಗೆ ಕಾರಣ. ಪರಿಷ್ಕೃತ ಫಲಿತಾಂಶದಿಂದಾಗಿ ವಿದ್ಯಾರ್ಥಿಗಳ ನೈಜ ಅಂಕಗಳು ದೊರೆತಿವೆಯೇ ಹೊರತು, ಉತ್ತೀರ್ಣ, ಅನುತ್ತೀರ್ಣದಲ್ಲಿ ವ್ಯತ್ಯಾಸವಾಗಿಲ್ಲ' ಎಂದು ವಿ.ವಿ ಅಧಿಕಾರಿಗಳು ಹೇಳಿದ್ದಾರೆ.







ಚಿತ್ರಗಳು: ಮಾಲತೇಶ ಇಚ್ಚಂಗಿ

ಗಾಢ ಕೆಂಪು+ ಕೊಂಚ ಖಾರ+ ಜಾಸ್ತಿ ಪರಿಮಳ = ಬ್ಯಾಡಗಿ ಮೆಣಸಿನಕಾಯಿ

ಎಲ್ಲಿಂದಲೋ ಬಂದ ಮೆಣಸಿನಕಾಯಿ ತಳಿಯೊಂದು ಹೊರ ಜಗತ್ತಿಗೆ ಅಪರಿಚಿತವಾಗಿದ್ದ ಊರಿಗೆ ತನ್ನದೇ ಬ್ರ್ಯಾಂಡ್ ಐಡೆಂಟಿಟಿಯನ್ನು ತಂದುಕೊಟ್ಟ ಕತೆಯೇ ಸ್ವಾರಸ್ಯಕರ...

ಸಿದ್ದು ಆರ್.ಜಿ.ಹಳ್ಳಿ

ಈ 'ಕೆಂಪು ಬೆಡಗಿ'ಯ ತವರೂರು ದೂರದ ಮೆಕ್ಸಿಕೊ. ಈಕೆಯನ್ನು 15 ನೇ ಶತಮಾನದ ಅಂತ್ಯದಲ್ಲಿ ಗೋವಾಕ್ಕೆ ಪರಿಚಯಿಸಿದವರು ಪೋರ್ಚುಗೀಸರು. ಇವರು ತಮ್ಮ ಆಹಾರಕ್ಕಾಗಿ ಜತೆಯಲ್ಲಿ ಈಕೆಯನ್ನು ಕರೆತಂದರು. ಈಕೆ ಕರ್ನಾಟಕಕ್ಕೂ ಕಾಲಿಟ್ಟಳು. ಅಲ್ಲಿಯವರೆಗೂ ಇಲ್ಲಿ 'ಕಪ್ಪು ಸುಂದರಿ' (ಕಾಳುಮೆಣಸು)ಯದೇ ದರ್ಬಾರು. ಯಾವಾಗ ಇಲ್ಲಿಯ ಜನ 'ಕೆಂಪು ಬೆಡಗಿ'ಯ ಬಣ್ಣ, ರುಚಿ, ಸುವಾಸನೆಗೆ ಮರುಳಾದರೋ, ಅಂದಿನಿಂದ ಇಂದಿನವರೆಗೂ ಈ ಬೆಡಗಿಯದೇ ಕಾರುಬಾರು. ಈಕೆ ಯಾರು ಎಂದು ತಿಳಿದಿದ್ದೀರಿ? ಅದೇ, 'ಬ್ಯಾಡಗಿ ಬೆಡಗಿ' ಎಂದೇ ಕರೆಸಿಕೊಳ್ಳುವ 'ಬ್ಯಾಡಗಿ ಮೆಣಸಿನಕಾಯಿ!' ಇದು ಎಲ್ಲಿಂದಲೋ ಬಂದು ಹೆಸರು ಮಾಡಿದ್ದು ಮಾತ್ರ ನಮ್ಮ ಬ್ಯಾಡಗಿಯಲ್ಲಿ!

ಈ ಬ್ಯಾಡಗಿ ಮೆಣಸಿನಕಾಯಿ ಕುಗ್ರಾಮದ ಅಡುಗೆಮನೆಯಲ್ಲಿ ಅರೆಯುವ ಶೇಂಗಾ ಚಟ್ನಿಯಿಂದ ಹಿಡಿದು ಮಹಾನಗರಗಳಲ್ಲಿ ಜಗಮಗಿಸುವ ಮಾಲ್‌ಗಳಲ್ಲಿ ದೊರೆಯುವ ಪಿಜ್ಜಾ, ಬರ್ಗರ್‌ವರೆಗೂ ವಿವಿಧ ರೂಪಗಳಲ್ಲಿ ಬಳಕೆಯಾಗುತ್ತಿದೆ. ಆಹಾರ ಮತ್ತು ಔಷಧ ಉದ್ಯಮಕ್ಕೆ ಮಾತ್ರವಲ್ಲದೇ ಸೌಂದರ್ಯವರ್ಧಕಗಳಾದ ಉಗುರುಬಣ್ಣ, ತುಟಿಬಣ್ಣಕ್ಕೂ 'ಬ್ಯಾಡಗಿ ಬೆಡಗಿ' ರಂಗು ತುಂಬಿದ್ದಾಳೆ. ರಾಜ್ಯದ ಮುಖ್ಯ ವಾಣಿಜ್ಯ ಹಾಗೂ ಮಸಾಲೆ (ಸಾಂಬಾರು) ಬೆಳೆಯಾಗಿದ್ದು ದೇಶದ ರಫ್ತು ಉದ್ಯಮದಲ್ಲಿ ವಿಶೇಷ ಸ್ಥಾನ ಗಳಿಸಿಕೊಂಡಿದೆ.

ಗಾಢ ಕೆಂಪು ಬಣ್ಣ, ಕಡಿಮೆ ಖಾರ ಮತ್ತು ಸುವಾಸನೆಯ ವಿಶಿಷ್ಟ ಗುಣಗಳನ್ನು ಮೈಗೂಡಿಸಿಕೊಂಡಿರುವ ಈ ಮೆಣಸಿನಕಾಯಿ ಜಗತ್ಪ್ರಸಿದ್ಧ. ದೀರ್ಘಕಾಲದವರೆಗೆ ಬಣ್ಣಗೆಡುವುದಿಲ್ಲ, ರುಚಿ ಕಳೆದುಕೊಳ್ಳುವುದಿಲ್ಲ ಎಂಬುದೇ ಇದರ ಹೆಗ್ಗಳಿಕೆ. ನೆರಿಗೆಯುಕ್ತ ಕಾಯಿಯಲ್ಲಿ ಅಡಕವಾಗಿರುವ 'ಓಲಿಯೊರೈಸಿನ್' ಎಣ್ಣೆ ವಿಶ್ವ ಮನ್ನಣೆ ತಂದುಕೊಟ್ಟಿದೆ. 2011ರಲ್ಲಿ ಭೌಗೋಳಿಕ ಸೂಚಿಯಾಗಿಯೂ (Geographical Indication–129) ಮಾನ್ಯತೆ ಪಡೆದಿದೆ. ಅಷ್ಟೇ ಏಕೆ, 2021ರಿಂದ ಅಂಚೆ ಇಲಾಖೆ ಲಕೋಟೆ ಮೇಲೆಯೂ ಬ್ಯಾಡಗಿ ಮೆಣಸಿನಕಾಯಿ ರಾರಾಜಿಸುತ್ತಿದೆ.

ಆಂಧ್ರ ಪ್ರದೇಶದ ಗುಂಟೂರು ಸಣ್ಣಂ, ತಮಿಳುನಾಡಿನ ವಿಲಾತಿಕುಲಂ ಗುಂಡು, ಕೇರಳದ ಎಡ್ಯೂರ್ ಚಿಲ್ಲಿ, ಗೋವಾದ ಖೋಲಾ, ಹರ್ಮಲ್–ಹೀಗೆ ಹದಿನಾರಕ್ಕೂ ಹೆಚ್ಚು ಮೆಣಸಿನಕಾಯಿ ತಳಿಗಳು ಭೌಗೋಳಿಕ ಸೂಚಿ (ಜಿಐ) ಮಾನ್ಯತೆ ಪಡೆದಿವೆ. ಇವುಗಳಲ್ಲಿ ಬ್ಯಾಡಗಿಯ ಡಬ್ಬಿ ಮತ್ತು ಕಡ್ಡಿ ಮೆಣಸಿನಕಾಯಿಗೆ ವಿಶಿಷ್ಟ ಸ್ಥಾನವಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹುಬೇಡಿಕೆಯ ತಳಿಯಾಗಿದೆ.

ಆರಂಭದಲ್ಲಿ ಹಾವೇರಿ ಜಿಲ್ಲೆಯ ಅರೆ ಮಲೆನಾಡು ಪ್ರದೇಶವಾದ ಹಿರೇಕೆರೂರು ಮತ್ತು ರಟ್ಟೀಹಳ್ಳಿ ಭಾಗಗಳಲ್ಲಿ ಈ ಬೆಳೆ ಪ್ರವರ್ಧಮಾನಕ್ಕೆ ಬಂದಿತು. ಕಾರಣ ಇಲ್ಲಿಯ ಆರ್ದ್ರತೆಯ ಹವಾಮಾನ ಮತ್ತು ಮಣ್ಣಿನ ಗುಣ ಮೆಣಸಿನಕಾಯಿ ಬೆಳೆಗೆ ಹೇಳಿ ಮಾಡಿಸಿದಂತಿತ್ತು. ಮುಂಗಾರು–ಹಿಂಗಾರು ಮಳೆ ಸಮ ಪ್ರಮಾಣದಲ್ಲಿ ಬೀಳುತ್ತಿತ್ತು. ಹೀಗಾಗಿ, ವಾಣಿಜ್ಯ ಮತ್ತು ಮಿಶ್ರಬೆಳೆಯಾಗಿ ಮೆಣಸಿನಕಾಯಿ ರೈತರ ಮನ ಗೆದ್ದಿತು.



ಬ್ಯಾಡಗಿ ಮಾರುಕಟ್ಟೆ ಪ್ರಾಂಗಣದ ವಿಹಂಗಮ ನೋಟ

'ಹಾವೇರಿ ಭಾಗದಲ್ಲಿ ಮೆಣಸಿನಕಾಯಿ ಬೆಳೆ ಕ್ಷೇತ್ರ ಹೆಚ್ಚು ವಿಸ್ತರಣೆಯಾದಂತೆ, ಬ್ಯಾಡಗಿ ಪಟ್ಟಣ ವ್ಯಾಪಾರ ಕೇಂದ್ರವಾಗಿ ರೂಪುಗೊಂಡಿತು. ಇಲ್ಲಿನ ಮಾರುಕಟ್ಟೆಯಿಂದಲೇ ಕಡ್ಡಿ ಮತ್ತು ಡಬ್ಬಿ ತಳಿ ಮೆಣಸಿನಕಾಯಿಗೆ 'ಬ್ಯಾಡಗಿ' ಎಂಬ ಹೆಸರು ತಳಕು ಹಾಕಿಕೊಂಡು, ವಿಶ್ವದಾದ್ಯಂತ ತನ್ನ ಘಾಟು ಪರಿಮಳವನ್ನು ಪಸರಿಸಿದೆ' ಎನ್ನುತ್ತಾರೆ ಬ್ಯಾಡಗಿಯ ಉದ್ಯಮಿ ಎಸ್.ಆರ್.ಪಾಟೀಲ.

ಇದೇ ವರ್ಷ ಒಂದು ದಿನ ಬ್ಯಾಡಗಿ ಮಾರುಕಟ್ಟೆಯಲ್ಲಿ 4.09 ಲಕ್ಷ ಚೀಲ (1,02,280 ಕ್ವಿಂಟಲ್) ಮೆಣಸಿನಕಾಯಿ ಆವಕವಾಗಿ ದಾಖಲೆ ಬರೆಯಿತು! ಭಾರತದ ಮಸಾಲೆ ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ವಾರ್ಷಿಕವಾಗಿ ₹9 ಲಕ್ಷ ಕೋಟಿಗೂ ಅಧಿಕ ವಹಿವಾಟು ನಡೆಸುವ ಮೂಲಕ ಅಗ್ರಸ್ಥಾನ ಕಾಯ್ದುಕೊಂಡಿದೆ. ಪ್ರಸಿದ್ಧ ಮಸಾಲೆ ಪದಾರ್ಥ ತಯಾರಿಕ ಕಂಪನಿಗಳಿಗೆ ಬ್ಯಾಡಗಿ ಮಾರುಕಟ್ಟೆಯಿಂದಲೇ ಮೆಣಸಿನಕಾಯಿಯ ಖಾರದಪುಡಿ ಪೂರೈಕೆಯಾಗುತ್ತದೆ. ಅಮೆರಿಕ, ರಷ್ಯಾ, ಮಲೇಷಿಯಾ, ಇಂಡೊನೇಷ್ಯಾ, ಸಿಂಗಪುರ, ಶ್ರೀಲಂಕಾ, ಅರಬ್, ಯುರೋಪ್ ಸೇರಿದಂತೆ ಹಲವು ದೇಶಗಳಿಗೆ ಬ್ಯಾಡಗಿ ಮೆಣಸಿನಕಾಯಿ ರಫ್ತಾಗುತ್ತದೆ.

'ಒಣಬೇಸಾಯದಲ್ಲಿ ಬೆಳೆದ ಬ್ಯಾಡಗಿ ತಳಿಯ ಎರಡು ಚೀಲ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹82 ಸಾವಿರದಂತೆ ಮಾರಾಟವಾಗಿದ್ದು, ಚಿನ್ನದ ಬೆಲೆ ಸಿಕ್ಕಿದೆ. ನಾನು ಬೆಳೆದ ಮೆಣಸಿನಕಾಯಿ ಬೀಜವನ್ನು ಖರೀದಿಸಲು ರೈತರು ಮುಗಿಬಿದ್ದಿದ್ದಾರೆ. ಬ್ಯಾಡಗಿ ಮೆಣಸಿನಕಾಯಿ ಬೆಳೆಗಾರರ ಪಾಲಿನ ಕೆಂಪು ಬಂಗಾರ' ಎನ್ನುತ್ತಾರೆ ಗದಗ ಜಿಲ್ಲೆಯ ಬೆಟಗೇರಿಯ ರೈತ ಎಂ.ಬಿ. ಕರಿಬಿಸ್ಟಿ.

ಬ್ಯಾಡಗಿ ಮಾರುಕಟ್ಟೆಯಲ್ಲಿ ಇ–ಟೆಂಡರ್ ಪ್ರಕ್ರಿಯೆ ಇದ್ದು, ಉತ್ಪನ್ನ ಮಾರಾಟವಾದ ದಿನವೇ ರೈತರಿಗೆ ಹಣ ಪಾವತಿಯಾಗುತ್ತದೆ. ಪಟ್ಟಣದಲ್ಲಿ 30ಕ್ಕೂ ಹೆಚ್ಚು ಶೈತ್ಯಾಗಾರಗಳಿದ್ದು, ಮೆಣಸಿನಕಾಯಿ ಬಣ್ಣ ಮತ್ತು ಗುಣಮಟ್ಟವನ್ನು ಸಂರಕ್ಷಣೆ ಮಾಡಲು ಅನುಕೂಲವಾಗಿದೆ. ವಿದೇಶಿ ಕಂಪನಿಗಳೂ ಖರೀದಿಗೆ ಬರುತ್ತಿದ್ದು, ಉಳಿದೆಡೆಗಿಂತ ಉತ್ತಮ ಬೆಲೆ ಸಿಗುತ್ತಿದೆ. ಆಂಧ್ರ ಪ್ರದೇಶ, ತೆಲಂಗಾಣ ರಾಜ್ಯಗಳ ರೈತರು ನೂರಾರು ಕಿಲೊಮೀಟರ್‌ಗಳಿಂದ ಬ್ಯಾಡಗಿ ಮಾರುಕಟ್ಟೆಗೆ ಉತ್ಪನ್ನವನ್ನು ವಾಹನಗಳಲ್ಲಿ ತರುತ್ತಾರೆ.

ಬ್ಯಾಡಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ಮೊದಲು ಡಬ್ಬಿ ಮತ್ತು ಕಡ್ಡಿ ಮೆಣಸಿನಕಾಯಿ ಮಾತ್ರ ಆವಕವಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಹೈಬ್ರಿಡ್ ತಳಿಗಳು ಕೂಡ ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಸುಧಾರಿತ ತಳಿಗಳಲ್ಲಿ ಅತಿಯಾದ ಖಾರ, ಅತಿಯಾದ ಬಣ್ಣ, ಅಧಿಕ ಇಳುವರಿ ಸಿಗುತ್ತಿದೆ. ಆದರೆ, ರುಚಿ, ಬಣ್ಣ, ಸುವಾಸನೆ ಎಲ್ಲವನ್ನೂ ಹದವಾದ ಪ್ರಮಾಣದಲ್ಲಿ ಹೊಂದಿರುವ ಮೂಲ ತಳಿಯ ಗುಣಮಟ್ಟ ಬೇರ್‍ಯಾವುದರಲ್ಲೂ ಸಿಗುತ್ತಿಲ್ಲ. ಹೀಗಾಗಿಯೇ ಬ್ಯಾಡಗಿ ಡಬ್ಬಿ ಮತ್ತು ಕಡ್ಡಿ ಮೆಣಸಿನಕಾಯಿ ಖರೀದಿಸಲು ವ್ಯಾಪಾರಸ್ಥರು ಮತ್ತು ಮಸಾಲೆ ಪದಾರ್ಥ ತಯಾರಕರು ಮುಗಿಬೀಳುತ್ತಾರೆ.

11ನೇ ಪುಟಕ್ಕೆ...

"ನಮ್ಮ ಬ್ರ್ಯಾಂಡ್ ಮೂಲಕ 24 ಬಗೆಯ ಉಪ್ಪಿನಕಾಯಿ, 9 ರೀತಿಯ ಚಟ್ನಿಗಳು, 4 ತರಹದ ಹಪ್ಪಳ ಸೇರಿದಂತೆ 50 ಬಗೆಯ ಪದಾರ್ಥಗಳನ್ನು ತಯಾರಿಸುತ್ತೇವೆ. ನಾವು ಶುದ್ಧ ಬ್ಯಾಡಗಿ ಮೆಣಸಿನಕಾಯಿಯನ್ನೇ ಬಳಸುವುದು. ಅಮೆಜಾನ್, ಫ್ಲಿಪ್‌ಕಾರ್ಟ್, ಡಿ–ಮಾರ್ಟ್, ರಿಲಯನ್ಸ್ ಸೇರಿದಂತೆ ಹಲವು ಕಂಪನಿಗಳ ಮಳಿಗೆ ಮತ್ತು ಜಾಲತಾಣಗಳ ಮೂಲಕ ನಮ್ಮ ಉತ್ಪನ್ನಗಳು ಮಾರಾಟವಾಗುತ್ತವೆ"

ರಾಜಶೇಖರ ಉಮದಿ ವ್ಯಾಪಾರಿ, ವಿಜಯಪುರ

ಕೊಡಗಿನಲ್ಲಿ ನಕ್ಷತ್ರಗಳ ಹಬ್ಬ!

ಕೆ.ಎಸ್.ಗಿರೀಶ

ಅಕ್ಷಿನಿಮೀಲನ ಮಾಡದ ನಕ್ಷತ್ರದ
ಗಣ ಗಗನದಿ ಹಾರದಿದೆ...

ಇದು ದ.ರಾ.ಬೇಂದ್ರೆಯವರ 'ಅನಂತ ಪ್ರಣಯ' ಕವಿತೆಯಲ್ಲಿ ಬರುವ ಸಾಲುಗಳು. 'ಉತ್ತರಧ್ರುವದಿಂ ದಕ್ಷಿಣಧ್ರುವಕೂ ಚುಂಬಕ ಗಾಳಿಯು ಬೀಸುತಿದೆ' ಎಂದು ಆರಂಭವಾಗುವ ಕವಿತೆಯಲ್ಲಿ ಬರುವ ಈ ಸಾಲುಗಳು ಗಗನದಲ್ಲಿರುವ ತಾರಾಸಮೂಹವು ಶೋಭಿಸುತ್ತಿರುವ ಹಾರದಂತೆ ಕಾಣುತ್ತದೆ ಎಂದು ಅವರು ಬರೆಯುತ್ತಾರೆ. ಪುಟ್ಟಣ್ಣ ಕಣಗಾಲ್ ಅವರು ಕೊಡಗಿನಲ್ಲಿ ಚಿತ್ರೀಕರಿಸಿದ 'ಶರಪಂಜರ' ಚಿತ್ರದಲ್ಲಿ ಈ ಕವಿತೆಯನ್ನು ತಂದು, ದೃಶ್ಯಕಾವ್ಯವನ್ನೇ ಸೃಜಿಸಿದರು. ಇದೀಗ ಖಗೋಳ ವೀಕ್ಷಕರೆಲ್ಲ ತಾರಾಲೋಕದ ವೀಕ್ಷಣೆಗೆ ರಾಜ್ಯದಲ್ಲೇ ಕೊಡಗು ಪ್ರಶಸ್ತ ಜಿಲ್ಲೆಯೆಂದು ಇಲ್ಲಿಗೆ ಧಾವಿಸುತ್ತಿದ್ದಾರೆ.


ಇತ್ತೀಚಿನ ವರ್ಷಗಳಲ್ಲಿ ಖಗೋಳ ವೀಕ್ಷಕರ ಗಮನವನ್ನು ಡಿಸೆಂಬರ್‌ನಿಂದ ಮಾರ್ಚ್ ತಿಂಗಳವರೆಗೆ ಕೊಡಗು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಮದ್ಯದ ಪಾರ್ಟಿಗಳಿಗೆ ಖ್ಯಾತಿ ಪಡೆದಿರುವ ಜಿಲ್ಲೆ, ಇದೀಗ 'ಸ್ಟಾರ್ ಪಾರ್ಟಿ'ಗಳಿಗೂ ಪ್ರಸಿದ್ಧವಾಗುತ್ತಿದೆ. ಖಗೋಳ ಆಸಕ್ತರು ಈ ನಾಲ್ಕು ತಿಂಗಳ ಕಾಲ ಕೊಡಗಿಗೆ ಬಂದು ಟೆಲಿಸ್ಕೋಪ್‌ಗಳಲ್ಲಿ ನಕ್ಷತ್ರಪುಂಜಗಳನ್ನು ವೀಕ್ಷಿಸುತ್ತಾರೆ.

ಬೆಂಗಳೂರು ಅಸ್ಟ್ರಾನಮಿಕಲ್ ಸೊಸೈಟಿ ಎಂಬ ಖಗೋಳಾಸಕ್ತರ ಸಂಘಟನೆ 'ಸ್ಟಾರ್ ಪಾರ್ಟಿ'ಗಳನ್ನು ಆಯೋಜಿಸುತ್ತಿದೆ. ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಟೆಲಿಸ್ಕೋಪ್ ಮೂಲಕ ರಾತ್ರಿ ವೇಳೆ ಆಕಾಶಕಾಯಗಳನ್ನು ವೀಕ್ಷಿಸಿ, ಗುರುತಿಸಿ ಸಂಭ್ರಮಿಸುವ ಅವಕಾಶವನ್ನು ನೀಡುತ್ತಿದೆ.

ಈ ಸಂಘಟನೆಯಲ್ಲಿ ಸದ್ಯ 20ರಿಂದ 30 ಮಂದಿ ಸ್ವಯಂಸೇವಕರಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಮಂದಿ ಸಕ್ರಿಯರಾಗಿದ್ದಾರೆ. 2020ರಲ್ಲಿ ಇಂತಹದ್ದೊಂದು ಪರಿಕಲ್ಪನೆಯನ್ನಿಟ್ಟುಕೊಂಡು ನಕ್ಷತ್ರ ವೀಕ್ಷಣೆಯನ್ನು ಶುರು ಮಾಡಿದ ಈ ಸಂಘಟನೆಯು, ಇದೀಗ ಸತತ ಐದನೇ ವರ್ಷವೂ ಯಶಸ್ವಿಯಾಗಿ ಕಾರ್ಯಕ್ರಮ ನಡೆಸಿದೆ. ಈ ಗುಂಪಿನ ಸದಸ್ಯರು ಖಗೋಳ ಕೌತುಕಗಳನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.



ಭಾಗಮಂಡಲದಲ್ಲಿ ಬೆಂಗಳೂರು ಅಸ್ಟ್ರಾನಮಿಕಲ್ ಸೊಸೈಟಿ ಸದಸ್ಯರೊಬ್ಬರು ಟೆಲಿಸ್ಕೋಪ್ ಮೂಲಕ ನಕ್ಷತ್ರ ವೀಕ್ಷಣೆ ಮಾಡುತ್ತಿರುವುದು. ಚಿತ್ರ: ವಿನಯ್ ಗಣೇಶ್



ಟೆಲಿಸ್ಕೋಪ್ ಮೂಲಕ ಶುಕ್ರ ಮತ್ತು ಚಂದ್ರನ ಚಿತ್ರವನ್ನು ಸೆರೆ ಹಿಡಿದಿರುವುದು. ಚಿತ್ರ: ವಿಶ್ವನಾಥ್

ದೂಳು, ಬೆಳಕು ಮತ್ತು ಇತರೆ ಮಾಲಿನ್ಯ ಕಡಿಮೆ ಇರುವ ಕೊಡಗು, ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ನಕ್ಷತ್ರ ವೀಕ್ಷಣೆಗೆ ಹೇಳಿ ಮಾಡಿಸಿದ ಜಾಗ. ಅದರಲ್ಲೂ ಡಿಸೆಂಬರ್‌ನಿಂದ ಮಾರ್ಚ್ ಅಂತ್ಯದವರೆಗೂ ಸಾಮಾನ್ಯವಾಗಿ ಎಲ್ಲ ದಿನಗಳಲ್ಲೂ ಮೋಡಗಳಿಲ್ಲದ ಶುಭ್ರ ಆಕಾಶವನ್ನು ಕಾಣಬಹುದು. ಅದರಲ್ಲೂ ಅಮಾವಾಸ್ಯೆಯ ಆಸುಪಾಸಿನಲ್ಲಿ ಹೆಚ್ಚು ನಿಖರವಾಗಿ ಆಕಾಶಕಾಯಗಳನ್ನು ಗುರುತಿಸಬಹುದು. ಹಾಗಾಗಿ, ಹೆಚ್ಚಿನ ಖಗೋಳ ವೀಕ್ಷಕರು ಇಲ್ಲಿಗೆ ಬರುತ್ತಾರೆ.

'ಕೊಡಗು ಸಮಭಾಜಕ ವೃತ್ತಕ್ಕೆ ಸಮೀಪದಲ್ಲಿರುವುದರಿಂದ ಇಲ್ಲಿ ನಿಂತು ನೋಡಿದರೆ ಉತ್ತರ ಗೋಳ ಮತ್ತು ದಕ್ಷಿಣ ಗೋಳ ಎರಡರ ಆಕಾಶ ಕಾಯಗಳನ್ನು ಒಟ್ಟಿಗೆ ವೀಕ್ಷಿಸುವ ಅವಕಾಶವೂ ಇದೆ. ಉತ್ತರ ಕರ್ನಾಟಕ ಭಾಗಗಳಲ್ಲಿ ಕೇವಲ ಉತ್ತರ ಗೋಳದ ಆಕಾಶ ಕಾಯಗಳಷ್ಟೇ ಹೆಚ್ಚು ಸ್ಪಷ್ಟವಾಗಿ ಕಾಣುತ್ತವೆ. ದಕ್ಷಿಣ ಗೋಳದ ಆಕಾಶ ಕಾಯಗಳು ಹೆಚ್ಚು ಸ್ಪಷ್ಟವಾಗಿ ಕಾಣುವುದಿಲ್ಲ' ಎನ್ನುತ್ತಾರೆ ಬೆಂಗಳೂರು ಅಸ್ಟ್ರಾನಮಿಕಲ್ ಸೊಸೈಟಿಯ ವಿಶ್ವನಾಥ್.

ಆಸಕ್ತರು ಟೆಲಿಸ್ಕೋಪ್‌ಗಳನ್ನು ತಾವೇ ತರಬಹುದು. ಇಲ್ಲದೇ ಇದ್ದರೂ ಬೇರೆಯವರ ಟೆಲಿಸ್ಕೋಪ್‌ನಲ್ಲಿ ನಕ್ಷತ್ರ ವೀಕ್ಷಣೆಗೆ ಅನುವು ಮಾಡಿಕೊಡಲಾಗುತ್ತದೆ. ಒಂದು ದಿನಕ್ಕೆ ಊಟ ಮತ್ತು ತಂಗುವುದಕ್ಕೆ ₹ 1,300 ನಿಗದಿ ಪಡಿಸಲಾಗಿದೆ. ಸದ್ಯ, ಮಾರ್ಚ್ 8 ರಿಂದ 12ರವರೆಗೆ ಭಾಗಮಂಡಲದಲ್ಲಿ ನಕ್ಷತ್ರ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ. 'ಇದು ಲಾಭಕ್ಕಾಗಿ ಮಾಡಿದ ಕಾರ್ಯಕ್ರಮ ಅಲ್ಲ. ಜನರಲ್ಲಿ ಬಾಹ್ಯಾಕಾಶ ಕುರಿತು ಕುತೂಹಲ ಮತ್ತು ಅರಿವು ಹೆಚ್ಚಿಸುವ ಮೂಲಕ ವೈಚಾರಿಕತೆ ಬೆಳೆಸುವುದು ನಮ್ಮ ಉದ್ದೇಶ' ಎಂದು ಸೊಸೈಟಿ ಹೇಳುತ್ತದೆ.

ಇಲ್ಲಿ ನಮ್ಮ ಗೆಲಾಕ್ಸಿಯಾದ ಆಕಾಶಗಂಗೆ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಇದರಿಂದಾಚೆ ಇರುವ ಆಂಡ್ರೊಮಿಡಾ ಗೆಲಾಕ್ಸಿಯನ್ನೂ ಸ್ಪಷ್ಟವಾಗಿ ಟೆಲಿಸ್ಕೋಪ್‌ನಲ್ಲಿ ವೀಕ್ಷಿಸಬಹುದು. ಛಾಯಾಚಿತ್ರಗಳನ್ನೂ ತೆಗೆಯಬಹುದು. ನಾಸಾ ಮತ್ತು ಇಸ್ರೊ ತೆಗೆಯುವ ಗುಣಮಟ್ಟದಷ್ಟು ಚಿತ್ರ ತೆಗೆಯುವ ದುಬಾರಿ ಬೆಲೆಯ ಟೆಲಿಸ್ಕೋಪ್‌ಗಳನ್ನು ಕೆಲವರು ಇಲ್ಲಿಗೆ ತಂದು ವೀಕ್ಷಿಸುತ್ತಾರೆ. ಇದೊಂದು ಬಗೆಯ ಹಬ್ಬದಂತೆ ಸಂಘಟನೆಯ ಸದಸ್ಯರು ಸಂಭ್ರಮಿಸುತ್ತಾರೆ.


ಸಾಮಾನ್ಯವಾಗಿ ಡಿಸೆಂಬರ್ ತಿಂಗಳಿನಲ್ಲಿ ಉಲ್ಕಾಪಾತ ಹೆಚ್ಚು ಸಂಭವಿಸುತ್ತದೆ. ಈ ವೇಳೆ ಇಲ್ಲಿಗೆ ಬರುವ ಖಗೋಳ ವೀಕ್ಷಕರ ಟೆಲಿಸ್ಕೋಪ್ ಬಿಟ್ಟು ಬರಿಗಣ್ಣಿನಲ್ಲೇ ರಾತ್ರಿ ಇಡೀ ಆಗಸ ನೋಡುತ್ತಾ ಎಷ್ಟೆಷ್ಟು ಉಲ್ಲೆಗಳು ಉರಿದು ಹೋದವು ಎಂಬುದನ್ನು ಲೆಕ್ಕ ಹಾಕುತ್ತಾರೆ.

ಆಕಾಶ ವೀಕ್ಷಣೆಗಾಗಿಯೇ ಟೆಲಿಸ್ಕೋಪ್ ಖರೀದಿಸಿ ಬೆಂಗಳೂರು ಅಥವಾ ಬೇರೆ ನಗರಗಳಲ್ಲಿ ವೀಕ್ಷಿಸಿ ಗ್ರಹ, ತಾರೆಗಳು ಸ್ಪಷ್ಟವಾಗಿ ಕಾಣದೆ ನಿರಾಶರಾಗಿ ಟೆಲಿಸ್ಕೋಪ್ ಸರಿ ಇಲ್ಲ ಎಂದು ಮೂಲೆಗೆ ಎಸೆದವರೂ ಇದ್ದಾರೆ. ಆ ಟೆಲಿಸ್ಕೋಪ್‌ಗಳನ್ನು ಇಲ್ಲಿಗೆ ತಂದರೆ ಅದ್ಭುತವಾದ ತಾರೆಗಳ ಲೋಕವೇ ತೆರೆದುಕೊಳ್ಳುತ್ತದೆ.

12ನೇ ಪುಟಕ್ಕೆ...

ಕೆಂಪಿರುವೆ ಚಟ್ನಿ ಸಿದ್ದಿಗಳಿಗೆ ಬಲು ಇಷ್ಟ

ಗಣಪತಿ ಹೆಗಡೆ



ತಿಳಿದು ತಿಳಿದೂ ಸಮಸ್ಯೆ ಸೃಷ್ಟಿಸಿಕೊಂಡವರಿಗೆ 'ಸುಮ್ಮನೆ ಇರಲಾರದೆ ಮೈ ಮೇಲೆ ಇರುವೆ ಬಿಟ್ಟುಕೊಂಡ' ಎಂಬ ನಾಣ್ಣುಡಿಯೊಂದಿಗೆ ಛೇಡಿಸುವ ರೂಢಿ ಇದೆ. ಆದರೆ ಕೆಂಪಿರುವೆ ಕಂಡರೆ ಖುಷಿ ಪಟ್ಟು ಅದನ್ನು ಹಿಡಿದು ತಂದು ಚಟ್ನಿ ಮಾಡಿ ಸೇವಿಸುವ ಸಿದ್ದಿಗಳು ಅದೇ ನಾಣ್ಣುಡಿಗೆ ಸವಾಲು ಹಾಕುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಅಂಕೋಲಾ, ಶಿರಸಿ, ಹಳಿಯಾಳ ಭಾಗದಲ್ಲಿ ನೆಲೆಸಿರುವ ನೂರಾರು ಸಿದ್ದಿ ಕುಟುಂಬಗಳಿಗೆ 'ಕೆಂಪಿರುವೆ ಚಟ್ನಿ' ಬ್ರ್ಯಾಂಡ್ ಖಾದ್ಯವಾಗಿದೆ. ಮಲೆನಾಡಿನ ಕಾಡು, ಬೆಟ್ಟಗಳಲ್ಲಿನ ಮರಗಳಲ್ಲಿ ಸ್ವಚ್ಛಂದವಾಗಿ ಓಡಾಡಿಕೊಂಡಿರುವ, ಗೂಡುಕಟ್ಟಿ ಗುಂಪಾಗಿರುವ ಕೆಂಪಿರುವೆಗಳನ್ನು ಕಂಡರೆ ಉಳಿದ ಜನರು ದೂರ ಸರಿದರೆ, ಸಿದ್ದಿಗಳಿಗೆ ಮಾತ್ರ ಖುಷಿಯೋ ಖುಷಿ.

ಕೆಂಪಿರುವೆ ಕಚ್ಚಿದರೆ ಆಗುವ ಉರಿ, ಕಿರಿಕಿರಿ ನೆನೆಸಿಕೊಂಡು ಜನರು ಹೆದರಿದರೆ, ಸಿದ್ದಿಗಳು ಚಟ್ನಿಯ ರುಚಿ ನೆನೆಸಿಕೊಂಡು ಬಾಯಲ್ಲಿ ನೀರೂರಿಸುತ್ತಾರೆ. ಅಷ್ಟರಮಟ್ಟಿಗೆ ಅವರ ಪಾಲಿಗೆ ಕೆಂಪಿರುವೆ ರುಚಿಕಟ್ಟಾದ ಖಾದ್ಯವಾಗಿದೆ.

ಸಿದ್ದಿ ಬುಡಕಟ್ಟು ಸಮುದಾಯ ಕಾಡನ್ನು ಅವಲಂಬಿಸಿ ಜೀವನ ನಡೆಸುತ್ತದೆ. ಈ ಸಮುದಾಯದ ಸಾಂಪ್ರದಾಯಿಕ ಆಹಾರ ಪದ್ಧತಿ ವಿಭಿನ್ನ. ಅದರಲ್ಲಿಯೂ ಕಾಡಿನಲ್ಲಿ ಸಿಗುವ ಕೆಂಪಿರುವೆ ಚಟ್ನಿ ಸಿದ್ದಿಗಳ ವಿಶೇಷ ಖಾದ್ಯ.

11ನೇ ಪುಟಕ್ಕೆ



ಕೆಂಪಿರುವೆ ಚಟ್ನಿ

ಬಣ್ಣಗಳಲ್ಲಿ ಅರಳಿದ ಗ್ರಾಮದೇವತೆಗಳು



ಕ್ಯಾನ್ವಾಸ್‌ನಲ್ಲಿ ಗ್ರಾಮದೇವತೆ ಚಿತ್ರ

ಈರಣ್ಣ ಬೆಂಗಾಲಿ


ಮನುಷ್ಯ ತನ್ನ ಆರಾಧ್ಯದೈವವನ್ನು ನಿತ್ಯವೂ ಪೂಜಿಸುತ್ತಾ, ಆರಾಧಿಸುತ್ತಾ ಬಂದಿದ್ದಾನೆ. ಗ್ರಾಮ-ನಗರಗಳಲ್ಲೂ ವಿವಿಧ ದೇವಸ್ಥಾನಗಳನ್ನು, ದೈವಗಳನ್ನು ನಾವು ಕಾಣುತ್ತೇವೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಗ್ರಾಮದೇವತೆಗಳು ನಮ್ಮ ಗಮನ ಸೆಳೆಯುತ್ತವೆ. ನಾಡಿನ ವಿವಿಧ ಗ್ರಾಮಗಳಲ್ಲಿ ಗ್ರಾಮದೇವತೆ ನೆಲೆಸಿ ಆ ಗ್ರಾಮವನ್ನು ಕಾಪಾಡುವ ಮಹತ್ವದ ಕಾರ್ಯವನ್ನು ನಿಭಾಯಿಸುತ್ತಿವೆ ಎನ್ನುವ ನಂಬಿಕೆ ಜನಪದರದು.

ಆದರೆ, ಬದಲಾದ ಜೀವನಶೈಲಿಯಿಂದ ವಿಶೇಷವಾಗಿ ಆಧುನಿಕತೆಯಿಂದ ಗ್ರಾಮದೇವತೆಗಳ ಮಹತ್ವವನ್ನು ಮರೆಯಲಾಗುತ್ತಿದೆ. ಅನೇಕ ಕಡೆಗಳಲ್ಲಿ ಗ್ರಾಮದೇವತೆಗಳ ಗುಡಿಗಳು ಶಿಥಿಲಾವಸ್ಥೆಯಲ್ಲಿವೆ. ಈಗಿನ ಕಾಲದವರಿಗೆ ಪ್ರಮುಖವಾಗಿ ಯುವಜನತೆಗೆ ಗ್ರಾಮದೇವತೆಗಳ ಪರಿಕಲ್ಪನೆ ಇರುವುದಿಲ್ಲ. ಗ್ರಾಮದೇವತೆಗಳು ಸಂಸ್ಕೃತಿ, ಪರಂಪರೆಯನ್ನು ಪ್ರತಿನಿಧಿಸುತ್ತವೆ.

ಕಲ್ಯಾಣ ಕರ್ನಾಟಕದ ಕಲಬುರಗಿಯ ಹಿರಿಯ ಚಿತ್ರ ಕಲಾವಿದರಾದ ಮೋಹನ್ ಸಿತನೂರ ಅವರು 'ಗ್ರಾಮದೇವತೆ'ಗಳು ವಿಷಯದ ಮೇಲೆ ತಮ್ಮ ಊರಿನ ಸುತ್ತಲೂ ಇರುವ ಗ್ರಾಮದೇವತೆಗಳನ್ನು ತಮ್ಮ ಕ್ಯಾನ್ವಾಸ್‌ನಲ್ಲಿ ಚಿತ್ರಿಸಿದ್ದಾರೆ. ಆ ಮೂಲಕ ಗ್ರಾಮದೇವತೆಗಳ ಪ್ರಾಮುಖ್ಯತೆಯನ್ನು ಸಾರುತ್ತಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮೋಹನ್ ಅವರು ಗ್ರಾಮದೇವತೆಗಳ ತಾಣಗಳನ್ನು ಅಂದರೆ ಗುಡಿಗಳಿಗೆ ಭೇಟಿ ನೀಡಿದಾಗ, ಜಾಜದ ಬದಲು



ಕಲಾವಿದ ಮೋಹನ್ ರಚಿಸಿದ ಚಿತ್ರ



ಮೋಹನ್ ಸಿತನೂರ

ಈಗಿನ ಪೇಂಟ್‌ಗಳು ಆವರಿಸಿದ್ದು, ಎಣ್ಣೆದೀಪಗಳ ಬದಲು ಜಗಮಗಿಸುವ ಲೈಟ್‌ಗಳು ಆಕ್ರಮಿಸಿದ್ದು ಬೇರೆ ಬೇರೆ ಬದಲಾವಣೆಗಳು ಸಂಸ್ಕೃತಿ, ಪರಂಪರೆಯನ್ನು ಕರಗುಸುತ್ತಿರುವುದು, ಇನ್ನಿತರ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಗ್ರಾಮದೇವತೆಗಳ ಮೂಲ ಸ್ವರೂಪವನ್ನು ಬಣ್ಣಗಳಲ್ಲಿ ಚಿತ್ರಿಸಿದ್ದಾರೆ.

ಅಕ್ರಲಿಕ್ ಬಣ್ಣವನ್ನು ರೈಸ್ ಪೇಪರ್ ಮೇಲೆ ಮತ್ತು ಅಕ್ರಲಿಕ್ ಬಣ್ಣವನ್ನು ಕ್ಯಾನ್ವಾಸ್ ಮೇಲೆ ಈ ಎಲ್ಲಾ ಗ್ರಾಮದೇವತೆಗಳ ಪೇಂಟಿಂಗ್‌ಗಳನ್ನು ಮಾಡಿದ್ದಾರೆ. ವರ್ಣಚಿತ್ರ, ರೇಖಾಚಿತ್ರ ಮತ್ತು ಗ್ರಾಫಿಕ್ ಡಿಸೈನ್‌ನಲ್ಲಿ ಪರಿಣಿತರಾದ ಮೋಹನ್ ಅವರು ಕಲಬುರಗಿಯ ನಗರದ ತಮ್ಮ ಸ್ವಗೃಹದಲ್ಲಿ ತಮ್ಮದೇ ಆದ ಕಲಾ ಗ್ಯಾಲರಿಯನ್ನು ಹೊಂದಿದ್ದಾರೆ. ಇವರು ತಮ್ಮ ಕುಂಚ ಮೂಲಕ ಪ್ರಾದೇಶಿಕತೆಯನ್ನು, ದೇಸಿ ಸೌಂದರ್ಯವನ್ನು, ಜನಪದೀಯವನ್ನು ಅಭಿವ್ಯಕ್ತ ಹಾಗೂ ಅನಾವರಣಗೊಳಿಸುತ್ತಿದ್ದಾರೆ.

ಕಾಶಿ ಸ್ವರ ಯಾತ್ರೆ ನಾದ ಮಾಧುರ್ಯದ ಜಾತ್ರೆ

ಉಮಾ ಅನಂತ್

ಕಾಶಿಗೂ ಸಂಗೀತಕ್ಕೂ ಅವಿನಾಭಾವ ನಂಟು. ಗಂಗೆಯ ಮಡಿಲಲ್ಲಿ ಅರಳಿದ ಅದೆಷ್ಟೋ ಸ್ವರ ಕುಸುಮಗಳು ತಮ್ಮ ಸ್ವರಯಾತ್ರೆ ಮೂಲಕ ದೇಶ-ವಿದೇಶಗಳಲ್ಲಿ ನಾದದ ಘಮಲನ್ನು ಹರಡಿ ದೇಸಿ ಸಂಗೀತವನ್ನು ಸಮೃದ್ಧಗೊಳಿಸಿವೆ. ಏಕೆಂದರೆ ಕಾಶಿ-ಬನಾರಸ್ ಎಂದರೆ ಅದು ಸಂಗೀತ ದಿಗ್ಗಜರ ನೆಲೆವೀಡು. ಪಂ. ರವಿಶಂಕರ್, ಪಂ. ಬಿಸ್ಮಿಲ್ಲಾಖಾನ್, ಗಿರಿಜಾದೇವಿ, ಕಿಶನ್ ಮಹಾರಾಜ್, ಪಂ. ರಾಜನ್ ಮಿಶ್ರಾ ಮುಂತಾದ ಸಂಗೀತ ಮಾಂತ್ರಿಕರು ತಮ್ಮ ಅತ್ಯುನ್ನತ ಸಾಧನೆಯಿಂದ ದೇಶದ ಸಂಗೀತ ಪರಂಪರೆಯನ್ನು ವಿಶ್ವವ್ಯಾಪಿಗೊಳಿಸಿದ್ದು ಇದೇ ಬನಾರಸ್‌ನಿಂದ ಎಂಬುದು ಸ್ಮರಣಾರ್ಹ. ಹಿಂದೂಸ್ತಾನಿ ಸಂಗೀತದ ಬನಾರಸ್ ಘರಾಣೆ ಹುಟ್ಟಿಕೊಂಡದ್ದೇ ಈ ಸುಂದರ ನಗರದಲ್ಲಿ. ಸುಮಧುರ ಗಾನ-ಯಾನದ ತೊಟ್ಟಿಲಲ್ಲಿ ತೊನೆದಾಡಿದ ಸಂಗೀತಗಾರರಿಗೆ ಲೆಕ್ಕವಿಲ್ಲ.



ಜಗದೀಶ್ ಕುರ್ತಕೋಟಿ ಲಯವಾದ್ಯ

ಗಂಗಾನದಿಯ ತಟದಲ್ಲಿ ಸುಶ್ರಾವ್ಯ ಸಂಗೀತಕ್ಕೆ ಎಂದಿಗೂ ಮಣೆ, ಮನ್ನಣೆ. ಇದೇ ಮಾಧುರ್ಯ ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಹೊನಲಾಗಿ ಹರಿಯಿತು. ಭಾರತೀಯ ಸಾಮಗಾನ ಸಭಾದ 15ನೇ ವಾರ್ಷಿಕ ಸಂಗೀತ ಸಮಾರಂಭದಲ್ಲಿ ದೇಶದ ಹಲವು ಪ್ರತಿಭಾವಂತ ಕಲಾವಿದರು ಭಾಗಿಯಾದರು. ಕಾಶಿಯ ಸಂಗೀತ ಸಂಸ್ಕೃತಿಯನ್ನು ಅನಾವರಣಗೊಳಿಸಿದರು.

ಸಂಗೀತದ ಮಾಂತ್ರಿಕತೆ ಅನುಭವಿಸಲು ಅನುವು ಮಾಡಿಕೊಟ್ಟ ಈ ಸಂಗೀತ ಹಬ್ಬದಲ್ಲಿ ಗಾಯನ, ವಾದ್ಯ ಸಂಗೀತ, ಜುಗಲಬಂದಿ, ಭಜನೆ ಮತ್ತು ತಾಳವಾದ್ಯ ಮೇಳದಲ್ಲಿ ಕಲಾವಿದರು ತಮ್ಮ ಸಂಗೀತ ಸುಧೆಯನ್ನು ಉಣಬಡಿಸಿದರು. ಭಾರತೀಯ ಸಂಗೀತದ ಅದ್ಭುತವಾದ ನಾದ ಸೌಂದರ್ಯದ ಯಾತ್ರೆಯಲ್ಲಿ ರಂಜನಿ ಗಾಯತ್ರಿ, ಮಹೇಶ್ ಕಾಳೆ, ಸಂದೀಪ್ ನಾರಾಯಣ್, ಶುಭೇಂದ್ರ ರಾವ್, ಸುಮಾ ಸುಧೀಂದ್ರ, ರಾಮಕೃಷ್ಣನ್ ಮೂರ್ತಿ, ವೈಶಾಲಿ, ಜಗದೀಶ್ ಕುರ್ತಕೋಟಿ ಗಾಯನ-ವಾದನವನ್ನು ಪ್ರಸ್ತುತಪಡಿಸಿದರು. ಉದಯೋನ್ಮುಖ ತಾರೆಯರಾದ ಸೂರ್ಯಗಾಯತ್ರಿ ಮತ್ತು ಅನಿರ್ಬನ್ ಅವರ ಸಂಗೀತವೂ ಕೇಳುಗರನ್ನು ಪರವಶರಾಗಿಸಿತು. ಇದೇ ಸಂದರ್ಭದಲ್ಲಿ 'ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ'ಯನ್ನು ಪಿಟೀಲು ವಿದ್ವಾಂಸರಾದ ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಅವರಿಗೆ ನೀಡಿ ಸನ್ಮಾನಿಸಲಾಯಿತು.

ಪಂ. ಶುಭೇಂದ್ರ ರಾವ್ ಅವರ ಸಿತಾರ್ ಹಾಗೂ ಸುಮಾ ಸುಧೀಂದ್ರ ಅವರ ವೀಣಾವಾದನದ ಜುಗಲಬಂದಿ, ಮಹೇಶ್ ಕಾಳೆ, ವೈಶಾಲಿ ಅವರ ಗಾಯನ, ಉದಯೋನ್ಮುಖ ಗಾನ ಪ್ರತಿಭೆ ಸೂರ್ಯ ಗಾಯತ್ರಿ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂದೀಪ್ ನಾರಾಯಣ್ ಅವರ ಗಾನಲಹರಿ, ಜಗದೀಶ್ ಮತ್ತು ತಂಡದವರ ಲಯಮಾಧುರ್ಯ, ರಾಮಕೃಷ್ಣನ್, ರಂಜನಿ- ಗಾಯತ್ರಿ ಅವರ ಮಧುರ ಸಂಗೀತ ಕಛೇರಿ



ಸಂದೀಪ್ ನಾರಾಯಣ್ ಗಾಯನ

ನಾದಾಮೃತವನ್ನು ಉಣಬಡಿಸಿತು.

ಈಚೆಗೆ ನಡೆದ ಕಾಶಿ ಸ್ವರ ಶಂಕರ; ಮಾಧುರ್ಯ ಮತ್ತು ದೈವತ್ವದ ದಿವ್ಯಸಂಗಮವಾಗಿ ಅನಾವರಣವಾದದ್ದು ಕೇಳುಗರ ಸೌಭಾಗ್ಯ. ಕಾಶಿ- ರಾಮೇಶ್ವರ ಸಂಪೂರ್ಣ ಸ್ವರಯಾತ್ರೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಮೆರುಗನ್ನು ಪ್ರದರ್ಶಿಸಿದ್ದು ಎಂದೂ ಮರೆಯಲಾಗದ ಅನುಭವವಾಗಿ ಉಳಿಯಿತು.



...ಬ್ಯಾಡಗಿ ಮೆಣಸಿನಕಾಯಿ

ಮೆಣಸಿನಕಾಯಿ ಆರಿಸುತ್ತಿರುವ ಮಹಿಳೆ

10ನೇ ಪುಟದಿಂದ...

ಅವಸಾನದ ಅಂಚಿನಲ್ಲಿ ಮೂಲತಳಿ

'ಮೂಲ ತಳಿಯಾದ ಕಡ್ಡಿ ಮತ್ತು ಡಬ್ಬಿ ಮೆಣಸಿನಕಾಯಿ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವಸಾನದ ಅಂಚಿನಲ್ಲಿದೆ. ಬ್ಯಾಡಗಿ ಮಾರುಕಟ್ಟೆಗೆ 50ಕ್ಕೂ ಹೆಚ್ಚು ತಳಿಗಳು ಬರುತ್ತಿದ್ದು, ಒಟ್ಟು ಆವಕದಲ್ಲಿ ಶೇಕಡ 15ರಷ್ಟು ಮಾತ್ರ ಮೂಲತಳಿ ಪೂರೈಕೆಯಾಗುತ್ತಿದೆ. ಮೂಲತಳಿಯನ್ನು ಅಭಿವೃದ್ಧಿಪಡಿಸುವಂತೆ ಇಲ್ಲಿಯ ವರ್ತಕರು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದಾರೆ. ಆದರೆ, ಈವರೆಗೂ ಮೂಲತಳಿಯನ್ನು ಉಳಿಸಿ, ಬೆಳೆಸುವ ಕಾರ್ಯ ನಡೆಯುತ್ತಿಲ್ಲ' ಎಂದು ಬ್ಯಾಡಗಿ ಮೆಣಸಿನಕಾಯಿ ವರ್ತಕರ ಸಂಘದ ಅಧ್ಯಕ್ಷ ಸುರೇಶಗೌಡ ಪಾಟೀಲ ಬೇಸರ ವ್ಯಕ್ತಪಡಿಸುತ್ತಾರೆ.

ಆಶ್ಚರ್ಯವೆಂದರೆ, ಬ್ಯಾಡಗಿ ಮೆಣಸಿನಕಾಯಿ ಬೆಳೆ ಹಾವೇರಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಕಣ್ಮರೆಯಾಗಿ, ಮಾರುಕಟ್ಟೆಯೊಂದೇ ಉಳಿದಿದೆ. ಮೆಣಸಿನಕಾಯಿಗೆ ತಗಲುವ ರೋಗ, ಕೀಟಗಳ ಹಾವಳಿ ಹಾಗೂ ಹವಾಮಾನ ವೈಪರೀತ್ಯದಿಂದ ಬೇಸತ್ತ ಹಾವೇರಿ ಜಿಲ್ಲೆಯ ಹೆಚ್ಚಿನ ರೈತರು ಮೆಕ್ಕೆಜೋಳಕ್ಕೆ ಮೊರೆ ಹೋಗಿದ್ದಾರೆ. ಈಗೇನಿದ್ದರೂ ಧಾರವಾಡ ಜಿಲ್ಲೆಯ ಕುಂದಗೋಳ, ಸಂಶಿ, ಗುಡಗೇರಿ, ಗದಗ, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ರಾಯಚೂರು ಜಿಲ್ಲೆಗಳ ರೈತರು ಹೆಚ್ಚಾಗಿ ಬ್ಯಾಡಗಿ ಮೆಣಸಿನಕಾಯಿ ಬೆಳೆಯುತ್ತಿದ್ದಾರೆ.

ರಾಜ್ಯದಲ್ಲಿ 2.50 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯುತ್ತಿದ್ದ ಮೆಣಸಿನಕಾಯಿ ಬಿತ್ತನೆ ಕ್ಷೇತ್ರ ಈಗ 88 ಸಾವಿರ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಬ್ಯಾಡಗಿ ಮೂಲತಳಿ ಹೆಸರಿನಲ್ಲಿ ಮಧ್ಯವರ್ತಿಗಳು ಕಳಪೆ ಬಿತ್ತನೆ ಬೀಜಗಳನ್ನು ಮಾರಾಟ ಮಾಡುವ ಮೂಲಕ ರೈತರನ್ನು ವಂಚಿಸುತ್ತಿದ್ದಾರೆ. ಕಳಪೆ ಬೀಜಗಳಿಂದ ಇಳುವರಿ ಕುಂಠಿತವಾಗಿ ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ಇದಕ್ಕೆ ಪರಿಹಾರವೆಂದರೆ, ಸ್ಪೈಸ್ ಕಂಪನಿಗಳು, ವರ್ತಕರು ಹಾಗೂ ರೈತರ ಸಹಯೋಗದಲ್ಲಿ ಸಹಕಾರ ಸಂಘದ ಮಾದರಿಯಲ್ಲಿ ಬೀಜ ಬ್ಯಾಂಕ್ ಸ್ಥಾಪನೆಯಾಗಬೇಕು. ಆಗ ಉತ್ತಮ ಗುಣಮಟ್ಟದ ಮತ್ತು ವಿಶ್ವಾಸಾರ್ಹ ಬಿತ್ತನೆ ಬೀಜಗಳು ರೈತರಿಗೆ ಸಿಗುತ್ತವೆ. ಈ ಮೂಲಕ ಬ್ಯಾಡಗಿ ಮೆಣಸಿನಕಾಯಿಯ ಮೂಲತಳಿಯನ್ನು ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲು ಸಾಧ್ಯವಾಗುತ್ತದೆ ಎಂಬುದು ಹುಬ್ಬಳ್ಳಿಯ ಯುವ ವರ್ತಕ ಬಸವರಾಜ ಹಂಪಾಳಿ ಅವರ ಅಭಿಮತ.

> **“ 'ಬ್ಯಾಡಗಿ' ರುಚಿಗೆ ಸರಿಸಾಟಿಯಿಲ್ಲ ಮೂವತ್ತು ವರ್ಷಗಳಿಂದ ಬ್ಯಾಡಗಿ ಮೆಣಸಿನಕಾಯಿ ಬಳಸುತ್ತಿದ್ದೇನೆ. ಇದರಿಂದ ಕರಿಂಡಿ, ಕೆಂಪಿಂಡಿ, ಉಪ್ಪಿನಕಾಯಿ ಮಾಡುತ್ತೇನೆ. ತುಪ್ಪ ಹಚ್ಚಿಕೊಂಡು ಬಿಸಿಅನ್ನ ಮತ್ತು ಚಪಾತಿ ಜೊತೆ ತಿನ್ನಲು ರುಚಿಕರವಾಗಿರುತ್ತದೆ. ಒಣಮೆಣಸಿನಕಾಯಿ ಹುರಿದುಕೊಂಡು ಜೀರಿಗೆ, ಕೊತ್ತಂಬರಿ, ಕರಿಬೇವು, ಬೆಳ್ಳುಳ್ಳಿ ಹಾಕಿ ಸಿದ್ಧಪಡಿಸಿದ ಖಾರದಪುಡಿ ಬೇರೇನೇ ಟೇಸ್ಟ್ ಕೊಡುತ್ತದೆ ”**
>
> **ರತ್ನಾ ಶಿರಿಗಣ್ಣವರ,** ಗೃಹಿಣಿ, ಧಾರವಾಡ

'ಬ್ಯಾಡಗಿ ಮೂಲತಳಿಯನ್ನೇ ಹೋಲುವ ಸುಧಾರಿತ ತಳಿಗಳು ಹೆಚ್ಚಿನ ಇಳುವರಿ ನೀಡುತ್ತಿವೆ. ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ 'ರುದ್ರ (ಜಿಪಿಎಂ 120 ಎಸ್-1) ಸುಧಾರಿತ ತಳಿ ಅಭಿವೃದ್ಧಿಪಡಿಸಿದ್ದು, ಖುಷ್ಕಿ ಬೆಳೆಯಲ್ಲಿ ಹೆಕ್ಟೇರ್‌ಗೆ 10-15 ಕ್ವಿಂಟಲ್ ಇಳುವರಿ ಪಡೆಯಬಹುದು' ಎನ್ನುತ್ತಾರೆ ದೇವಿಹೊಸೂರು ತೋಟಗಾರಿಕಾ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಮುಖ್ಯಸ್ಥ ಡಾ.ಪ್ರಭುದೇವ ಅಜ್ಜಪ್ಪಳವರ.

ಇವೆಲ್ಲ ಏನೇ ಇರಲಿ, ಕಾಲದ ಒತ್ತಡದಲ್ಲಿ ರೈತರು ಕಡಿಮೆ ರಿಸ್ಕ್ ಇರುವ ಬೆಳೆಗಳತ್ತ ಮುಖ ಮಾಡುವುದು ಸಹಜ. ಆದರೆ, ಅಪರೂಪದ ತಳಿಯನ್ನು ಉಳಿಸಿ, ಸಂವರ್ಧನೆ ಮಾಡುವುದು ಸರ್ಕಾರದ ಆದ್ಯತೆಯ ಕೆಲಸವಾಗಬೇಕು. ಇದಕ್ಕೆ ರೈತರು, ಕೃಷಿ ವಿಜ್ಞಾನಿಗಳೂ ಕೈ ಜೋಡಿಸಬೇಕು.

... 'ಕೆಂಪಿರುವೆ ಚಟ್ನಿ'

10ನೇ ಪುಟದಿಂದ...

ಕಾಡಂಚಿನಲ್ಲೇ ನೆಲೆಸಿರುವ ಸಿದ್ದಿಗಳ ಮನೆಯಲ್ಲಿ ವಾರಕ್ಕೆ ಕನಿಷ್ಠ ಮೂರು ಅಥವಾ ನಾಲ್ಕು ದಿನವಾದರೂ ಕೆಂಪಿರುವೆ ಚಟ್ನಿ ಮಾಡಲಾಗುತ್ತದೆ. ಚಟ್ನಿಯನ್ನು ಊಟದೊಟ್ಟಿಗೆ ಚಪ್ಪರಿಸುತ್ತ ಸೇವಿಸುತ್ತಾರೆ.

'ಹಿಂದಿನಿಂದಲೂ ಕೆಂಪಿರುವೆಯನ್ನು ಖಾದ್ಯಕ್ಕೆ ಬಳಸುವ ರೂಢಿ ಬೆಳೆದುಕೊಂಡು ಬಂದಿದೆ. ಮನೆಗಳ ಸಮೀಪದ ಕಾಡಿಗೆ ಹೋಗಿ ಹುಡುಕಾಡಿದರೆ ಒಂದಲ್ಲ ಒಂದು ಮರದಲ್ಲಿ ಇರುವೆಯ ಗೂಡು ಕಾಣಸಿಗುತ್ತದೆ. ಮೊಟ್ಟೆಗಳು ಹೆಚ್ಚಿರುವ ಗೂಡನ್ನು ಹುಡುಕಾಡಿ ಅದನ್ನೇ ಹೊತ್ತು ತರುತ್ತೇವೆ. ಹೀಗೆ ತರುವ ಮುನ್ನ ಬಿದಿರಿನ ಮೊರದಲ್ಲಿ ಉಪ್ಪು ಒಯ್ಯುತ್ತೇವೆ. ಗೂಡನ್ನು ಮೊರದಲ್ಲಿ ಹಾಕಿದರೆ ಉಪ್ಪಿನ ಅಂಶಕ್ಕೆ ಇರುವೆಗಳು ಮೂರ್ಛೆ ಹೋಗುತ್ತವೆ. ಅಲ್ಲದೆ ಅವುಗಳಿಗೆ ಕಚ್ಚಲು ಆಗದು' ಎನ್ನುತ್ತಾರೆ ಯಲ್ಲಾಪುರ ಲಿಂಗದಬೈಲ್ ಗ್ರಾಮದ ಮಂಜುನಾಥ ಸಿದ್ದಿ.

ನಸುಕಿನ ಜಾವದಲ್ಲಿ ಇರುವೆಗೂಡು ಹೊತ್ತು ತಂದರೆ ಆ ಸಮಯದಲ್ಲಿ ಅವು ಕಚ್ಚುವ ಪ್ರಮಾಣ ಕಡಿಮೆ. ಅದೇ ಬಿಸಿಲಿನ ವೇಳೆಯಲ್ಲಿ ಗೂಡಿಗೆ ಕೈಹಾಕಿದರೆ ಅವು ತೀಕ್ಷಣವಾಗಿ ದಾಳಿ ಮಾಡುತ್ತವೆ ಎನ್ನುವುದು ಇವರಿಗೆ ಚೆನ್ನಾಗಿ ಗೊತ್ತಿದೆ.

'ಕೆಂಪಿರುವೆ ಚಟ್ನಿ ರುಚಿಕಟ್ಟಾದ ಖಾದ್ಯವಾಗಿರುವ ಜತೆಗೆ ಆರೋಗ್ಯವನ್ನೂ ಉತ್ತಮವಾಗಿಡುತ್ತದೆ ಎಂಬ ನಂಬಿಕೆ ಇದೆ. ಮೈಕೈ ನೋವು ನಿವಾರಣೆ, ನೆಗಡಿಯಂತಹ ಸಮಸ್ಯೆಗೂ ಇದು ಮನೆ ಔಷಧವಾಗಿದೆ' ಎಂದು ಲಲಿತಾ ಸಿದ್ದಿ ಹೇಳುತ್ತಾರೆ.

ಕೆಂಪಿರುವೆಯಲ್ಲಿ ಫಾರ್ಮಿಕ್ ಆಮ್ಲದ ಅಂಶ ಹೆಚ್ಚಿರುತ್ತದೆ. ಇದು ವಿಟಮಿನ್ 'ಸಿ'ಯನ್ನು ದೇಹಕ್ಕೆ ಒದಗಿಸುತ್ತದೆ. ಇದೂ ಅಲ್ಲದೆ ಹಲವು ಪೋಷಕಾಂಶಗಳನ್ನು ಕೆಂಪಿರುವೆ ಒಳಗೊಂಡಿರುವುದರಿಂದ ಸಹಜವಾಗಿ ಅದು ದೇಹಕ್ಕೆ ಉತ್ತಮವೂ ಹೌದು ಎನ್ನುವುದು ಆಯುರ್ವೇದ ತಜ್ಞರ ಅಭಿಪ್ರಾಯ.

ಅಂದಹಾಗೆ ಒಡಿಸ್ಸಾದ ಮಯೂರಭಂಜ್ ಜಿಲ್ಲೆಯಲ್ಲಿರುವ ಕೆಲ ಬುಡಕಟ್ಟು ಸಮುದಾಯಗಳು ಕೆಂಪಿರುವೆ ಚಟ್ನಿ ಸಿದ್ಧಪಡಿಸಲು ಹೆಸರುವಾಸಿಯಾಗಿವೆ. ಅಲ್ಲಿ ತಯಾರಿಸುವ ಕೆಂಪಿರುವೆ ಚಟ್ನಿಗೆ ಭೌಗೋಳಿಕ ಸೂಚಿ (ಜಿ.ಐ ಟ್ಯಾಗ್) ಲಭಿಸಿದೆ.

ಚಟ್ನಿ ಮಾಡೋದು ಹೀಗೆ...

ಕಾಡಿನಿಂದ ಹಿಡಿದು ತಂದ ಕೆಂಪು ಇರುವೆ, ಮೊಟ್ಟೆ ರಾಶಿಯನ್ನು ನೀರಿನಿಂದ ತೊಳೆದು ಅದರೊಟ್ಟಿಗಿರುವ ಇತರ ಕೀಟಗಳನ್ನು ತೆಗೆಯಬೇಕು. ಬಳಿಕ ಕಾಳುಮೆಣಸು, ಹಸಿರು ಮೆಣಸಿನಕಾಯಿ, ಬೆಳ್ಳುಳ್ಳಿ, ತೆಂಗಿನಕಾಯಿ ತುರಿಯೊಂದಿಗೆ ರುಬ್ಬು ಕಲ್ಲಿನಲ್ಲಿ ಅರೆದರೆ ಚಟ್ನಿ ರೆಡಿ. ಚಟ್ನಿಯನ್ನು ಗಾಜಿನಬಾಟಲಿಯಲ್ಲಿ ಶೇಖರಿಸಿಟ್ಟರೆ ಆರು ತಿಂಗಳು ಕೆಡದೇ ಉಳಿಯುತ್ತದೆ.



ಕೆಂಪಿರುವೆ ಮತ್ತು ಅದರ ಮೊಟ್ಟೆಯನ್ನು ಮೊರದಲ್ಲಿ ತಂದ ಸಿದ್ದಿ ಮಹಿಳೆ

ಮುನ್ನೋಟ 10-03-2024 ರಿಂದ -16-03-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸುದ್ದಿಯಲ್ಲಿರಲು ಸಾಕಷ್ಟು ಪ್ರಯತ್ನಪಡುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ನಡವಳಿಕೆಯಿಂದ ಬಂಧುಗಳಿಂದ ದೂರ ಉಳಿಯುವಿರಿ. ಹೈನುಗಾರಿಕೆ ಮಾಡುವವರಿಗೆ ಸಾಮಾನ್ಯ ಆದಾಯವಿರುತ್ತದೆ. ಅಪೇಕ್ಷಿಸಿದ ಆಸ್ತಿ ಕೈ ತಪ್ಪುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಮಧ್ಯಮ ಯಶಸ್ಸು ಇರುತ್ತದೆ. ಹೊಟ್ಟೆಯಲ್ಲಿ ತೊಂದರೆ ಅಥವಾ ಗಡ್ಡೆ ಸಮಸ್ಯೆ ಕಾಣಿಸಬಹುದು.

ವೃಷಭರಾಶಿ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2
ಕಲೆಯನ್ನು ಆದರ್ಶವಾಗಿ ತೆಗೆದುಕೊಳ್ಳಲು ಪ್ರಯತ್ನಿಸುವಿರಿ ಕಲಾವಿದರುಗಳಿಗೆ ಹೆಚ್ಚು ಮಹತ್ವ ಬರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಸಮೂಹದಲ್ಲಿ ಮಾತನಾಡುವಾಗ ಬಹಳ ಜಾಣತನದಿಂದ ಮಾತನಾಡಿ ಜನರ ಮನ ಗೆಲ್ಲುವಿರಿ. ತಾಯಿಯ ಸಹಕಾರ ನಿಮಗೆ ದೊರೆಯುತ್ತದೆ. ಸರ್ಕಾರಿ ಸಂಸ್ಥೆಗಳಲ್ಲಿರುವವರಿಗೆ ನಿವೇಶನ ದೊರೆಯುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮ ಮಾತು ನಡವಳಿಕೆಯಲ್ಲಿ ಹೆಚ್ಚು ವ್ಯವಹಾರಿಕತೆಯನ್ನು ಕಾಣಬಹುದು. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಬಂಧುಗಳಿಂದ ಮತ್ತು ಕೆಲವು ಮಿತ್ರರಿಂದ ನಿಮ್ಮ ಕೆಲಸ ಕಾರ್ಯಗಳಲ್ಲಿ ಅಡೆತಡೆಗಳನ್ನು ಕಾಣುವಿರಿ. ವಿದೇಶಿ ಸಂಸ್ಥೆಗಳಿಗೆ ಭೂಮಿಯನ್ನು ಮಾರುವ ಮತ್ತು ಮಾರಾಟ ಮಾಡಿಸುವ ಮಧ್ಯವರ್ತಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮಧ್ಯಮ ಫಲಿತಾಂಶವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮಲ್ಲಿರುವ ಸೌಮ್ಯತ್ವ ಕಡಿಮೆಯಾದಂತೆ ಅನಿಸುವುದು. ಮಾತಿನಲ್ಲಿ ಬಿಗಿ ಮತ್ತು ಅಧಿಕಾರತೆಯನ್ನು ಕಾಣಬಹುದು. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಡವಳಿಕೆಯಲ್ಲಿ ಹೆಚ್ಚು ದೈವಿಕತೆಯನ್ನು ಕಾಣಬಹುದು.ಭೂಮಿಯನ್ನು ಕೊಳ್ಳಲು ಸೂಕ್ತ ಧನ ಸಹಾಯ ಸಿಗುವ ಸಾಧ್ಯತೆಗಳಿವೆ. ಆದಾಯವನ್ನು ಸರಿತೂಗಿಸದಿದ್ದಲ್ಲಿ ಆರ್ಥಿಕ ಏರುಪೇರು ಆಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮನಸ್ಸಿನಲ್ಲಿ ಒಂದು ರೀತಿ ಪ್ರಶಾಂತತೆ ಇರುತ್ತದೆ. ಮಾತಿನಲ್ಲಿ ಧಾರ್ಮಿಕತೆ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಲ್ಲಿ ಸಂಗಾತಿಯ ಛಾಯೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುತ್ತದೆ. ವೃತ್ತಿಯಲ್ಲಿ ಚಿಂತೆ ಕಂಡುಬರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸೋತು ಹೋದಂತೆ ನಿಮ್ಮ ಮನಸ್ಸಿನಲ್ಲಿ ಭಾವನೆ ಉಂಟಾಗುತ್ತದೆ. ಆದರೆ ಜೀವನ ನಡೆಸುವ ಕಲೆ ಮತ್ತು ಶಕ್ತಿ ಇದ್ದೇ ಇರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ಕ್ರೀಡಾ ತರಬೇತಿ ಪಡೆಯುತ್ತಿರುವವರಿಗೆ ಹೆಚ್ಚಿನ ಫಲಿತಾಂಶವಿರುತ್ತದೆ. ನಿಮ್ಮ ನಡವಳಿಕೆಯಲ್ಲಿ ಹೆಚ್ಚು ಉಗ್ರತ್ವವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಡುವಿರಿ. ನಿಮ್ಮ ಇಚ್ಛೆಯ ಆಸ್ತಿಕೊಳ್ಳಲು ಧನಸಹಾಯ ಒದಗಿ ಬರುತ್ತದೆ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದ ಜನರನ್ನು ಗೆಲ್ಲುವ ಪ್ರಯತ್ನ ಮಾಡುವಿರಿ. ಕ್ರೀಡಾಪಟುಗಳಿಗೆ ಉತ್ತಮ ಪ್ರೋತ್ಸಾಹ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ಮಧ್ಯಮಗತಿಯ ಫಲಿತಾಂಶವಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಚುರುಕಾಗಿ ಕೆಲಸ ಮಾಡುವಿರಿ. ನಿರ್ಧಾರಗಳು ಬಹಳ ದೃಢವಾಗಿರುತ್ತವೆ, ಇದರಿಂದ ನಿಮ್ಮ ಕೆಲಸ ಕಾರ್ಯಗಳಲ್ಲಿ ಅನುಕೂಲವಾಗುತ್ತದೆ. ಬಂಧುಗಳು ಅಥವಾ ಒಡಹುಟ್ಟಿದವರು ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ನೀಡುವರು. ಕೃಷಿಯಿಂದ ಆದಾಯ ಇರುತ್ತದೆ. ಆಹಾರ ವಸ್ತುಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚುವ ಸಾಧ್ಯತೆಗಳಿವೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಉತ್ತಮ ಗೌರವದ ಜೊತೆಗೆ ಸಮಾಜದಲ್ಲಿ ಹೆಚ್ಚು ಜನರ ಪರಿಚಯ ಆಗುತ್ತದೆ. ಕೃಷಿಯಿಂದ ಹೆಚ್ಚು ಆದಾಯ ಬರುವ ಸಾಧ್ಯತೆಗಳಿವೆ. ಯಾರೊಂದಿಗೂ ಕಠಿಣ ಮಾತುಗಳು ಬೇಡ. ನಿಮ್ಮ ನಡವಳಿಕೆ ವಿರುದ್ಧ ಟೀಕೆಗಳು ಬಂದಲ್ಲಿ ಅದಕ್ಕೆ ಉತ್ತರ ಕೊಡುವುದು ಉತ್ತಮ. ವೈದ್ಯಕೀಯ ಉಪಕರಣಗಳನ್ನು ತಯಾರಿಸಿ ಮಾರುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಶ್ರಮದಿಂದ ನೀವು ಉತ್ತಮ ಹೆಸರನ್ನು ಪಡೆಯುವಿರಿ. ಆದಾಯದಲ್ಲಿ ಸ್ವಲ್ಪ ಏರಿಕೆ ಕಾಣಬಹುದು. ವಿದೇಶದಲ್ಲಿ ವೈದ್ಯರಾಗಿರುವವರಿಗೆ ಉತ್ತಮ ಆದಾಯವಿರುತ್ತದೆ. ಮಕ್ಕಳಿಂದ ನಿಮಗೆ ಧನಸಹಾಯ ಸಿಗುವ ಸಾಧ್ಯತೆ ಇದೆ. ಅತಿಯಾದ ಔಷಧಿ ಸೇವನೆ ಅನಾರೋಗ್ಯಕ್ಕೆ ಕಾರಣವಾಗಬಹುದು. ಸಂಗಾತಿಯ ಸಲಹೆಗಳಿಂದ ಆದಾಯ ಬರುವ ಸಾಧ್ಯತೆಗಳಿವೆ. ಧರ್ಮ ಕಾರ್ಯಗಳಿಗೆ ದೇಣಿಗೆ ಕೊಡುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವ್ಯಾಪಾರ ವ್ಯವಹಾರಗಳಲ್ಲಿ ಆದಾಯ ಇರುತ್ತದೆ. ನೀವು ಸೌಮ್ಯವಾಗಿ ಮಾತನಾಡಿದರು ಕೂಡ ಅದರ ತಿರುಳು ತಲುಪಬೇಕಾದವರಿಗೆ ತಲುಪುತ್ತದೆ. ಧರ್ಮ ಕಾರ್ಯಗಳಲ್ಲಿ ಹೆಚ್ಚಿನ ಶ್ರದ್ಧೆ ಮೂಡುತ್ತದೆ. ಸರ್ಕಾರಿ ಸಂಸ್ಥೆಗಳಿಗೆ ಭೂಮಿಯನ್ನು ಒದಗಿಸುವ ವ್ಯಕ್ತಿಗಳಿಗೆ ಹೆಚ್ಚಿನ ಆದಾಯವಿರುತ್ತದೆ. ವಾರ್ತಾ ವಾಚಕರಿಗೆ ಮತ್ತು ಪತ್ರಿಕೋದ್ಯಮಗಳಿಗೆ ಹೆಚ್ಚು ಪ್ರಾಮುಖ್ಯ ಮತ್ತು ಆದಾಯ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬುದ್ಧಿವಂತಿಕೆ ಮೈಗೂಡಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಸಮಯಕ್ಕೆ ತಕ್ಕಂತೆ ಮಾತನಾಡಿ ಹಣ ವಸೂಲಿ ಮಾಡುವಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ಸಂಗಾತಿಯಿಂದಲೇ ಸ್ವಲ್ಪ ಉಪೇಕ್ಷೆ ಬರಬಹುದು. ವ್ಯಾಪಾರ ವಹಿವಾಟುಗಳಲ್ಲಿ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಅನಾರೋಗ್ಯ ಪೀಡಿತರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸಂಗಾತಿಯು ಮಾಡುವ ಧರ್ಮ ಆಚರಣೆ ನಿಮಗೆ ಕಸಿವಿಸಿ ಉಂಟು ಮಾಡುತ್ತದೆ.

ಪದಬಂಧ 2832



ಮೇಲಿನಿಂದ ಕೆಳಕ್ಕೆ

1. ಇರುಳಿನ ಒಡೆಯ ಮಹಾದೇವನ ಸಂಸ್ಥಾನ 6
2.ಪುರಿಯಲ್ಲಿ ರಾಜಕೀಯ ಧುರೀಣ 3
3.ಇರಳನ್ನು ಮಧ್ಯದಲ್ಲಿ ಬಗೆದಾಗ ಸಿಗುವ ಹೊತ್ತು 4
4.ಧ್ಯಾನ ಜಪಗಳಿಗೆ ಬರುವ ಅಡೆತಡೆ 4
6. ಮರಳಿನ ದಂಡೆ 3
7. ಮಹಾಪ್ರಾಣದ ಪದ 2
8. ರಾಗ ವೈವಿಧ್ಯದಿಂದ ಮನೋಲ್ಲಾಸಗೊಳಿಸುವವಳು 3
9. ಕೆಳಗಿನಿಂದ ಮೇಲಕ್ಕೆ ಕವನ ಕರ್ತೃ 2
10. ಸೌಖ್ಯಕ್ಕೆ ಒದಗಿಸಲಾದ ಸೌಲಭ್ಯ 3
12. ಮದ್ದು ಗುಂಡುಗಳನ್ನು ಸ್ಫೋಟಿಸು 3
13. ಆಯ್ತು ಒಪ್ಪಿಕೊಂಡೆ ಪಕ್ಕಕ್ಕೆ ಜರುಗು 2
14.ವಿಷ್ಣು ಮಹೇಶ್ವರರಿಬ್ಬರಿಗೂ ಇಷ್ಟವಾಗಿ ಬೇಕಾದವ 6
15. ಉತ್ತರಕನ್ನಡ ಜಿಲ್ಲೆಯಲ್ಲಿ ನದಿಯಾಗಿ ಹರಿವ ದುರ್ಗಿ 2
16. ವಿದೇಹ ಕುಲದಲ್ಲಿ ಬೆಳೆದ ಸೀತೆ 3
17. ಎಲ್ಲೋ ದಾರಿಯಲ್ಲಿ ನಡೆದು ಹೋಗುವವ 4
18. ಮನೆಯೊಳಗೆ ಬರಲು ಶುಭ ಪಾದ 4
20. ಜಪದಿಂದ ಉಂಟಾದ ಉರಿ 3

ಎಡದಿಂದ ಬಲಕ್ಕೆ

1. ಬೇಟೆಗೊಂದು ಊರಿದೆ ನಮ್ಮ ಶಿವಮೊಗ್ಗದಲ್ಲಿ 5
3. ಆ ಪಕ್ಷದಲ್ಲಿದ್ದು ಈ ಪಕ್ಷಕ್ಕೆ ಹಾಕುವ ಧರ್ಮದ ಓಟು 4
5. ಪುರಿಯಲ್ಲಿ ಅಡಗಿರುವ ವೈರಿ 2
7. ಸುದ್ದಿ ಮಾಧ್ಯಮಗಳು ನಾಟಕವಾಡಲು ಸಜ್ಜಾದ ವೇದಿಕೆ 5
9. ರಾಜ್ಯದ ಆಡಳಿತ ವ್ಯವಸ್ಥೆಗೆ ಭವ್ಯ ಕಟ್ಟಡ 5
11. ರಸವನ್ನು ಆಸ್ವಾದಿಸುವ ಶೃಂಗಾರ ಪ್ರಿಯ 3
13. ಸಾಮೀಪ್ಯಕ್ಕೊಂದು ಪರ್ಯಾಯ 3
15. ವೈರಿಯ ಜೊತೆ ಕೆಲಸ ಮಾಡುವ ರೀತಿಯಲ್ಲಿರುವ ವೈಶಿಷ್ಟ್ಯ 5
17. ಚಳಿಗೆ ಬೆಚ್ಚಗಿರುವ ಹೊದಿಗೆಯ ಮೇಲೆ ನಡೆಯಲೂ ಚೆನ್ನ 5
19. ಮೈಗೆ ಮನಸ್ಸಿಗೆ ಮೃದುವಾದದ್ದು 2
21. ಬೆಣ್ಣೆ ತೆಗೆಯಲು ಬೇಕಾದ ಸಾಧನ 4
22. ಮಹಾಭಾರತವನ್ನು ಮೊದಲು ಕೇಳಿದ ಪರೀಕ್ಷಿತನ ಮಗ ಜನರನ್ನು ಗೆದ್ದ ಭೂಪಾಲ 5

ಪದಬಂಧ ಉತ್ತರ -2831

ಮೇಲಿಂದ ಕೆಳಕ್ಕೆ

1.ನಾಟಕ 2.ಣಮರ 3.ನೆನಪು 5.ದಿಬ್ಬಣ 7.ಸುಗಮ 9.ಕವಿಕಲ್ಪನೆ 10.ತಡವರಿಸು 11.ರೋಚಕ 12.ನತಾಂಗ 16.ರಮಿಸು 17.ಸುರೂಪಿ 19.ಮನಿಲ 20.ವಾಹನ 21.ವಸಂತ

ಎಡದಿಂದ ಬಲಕ್ಕೆ

1.ನಾಗಭೂಷಣ 3.ನೆರಳಾಟ 4.ಮಹಾನದಿ 6.ಕನಸುಗಾರ 8.ಪುಳಕ 10.ತಲ್ಲಣ 11.ರೋಮನ 13.ಕವಚ 14.ತಾಂಡವ 15.ಕರಗ 17.ಸುಮ್ಮನೆ 18. ಸುಧಾಮ 20.ವಾಲೀಸುಗ್ರೀವ 22.ಪಿತಾಮಹ 23.ಸಂಧ್ಯಾಕಾಲ 24.ನವಭಾರತ

ಯಾವಾಗಲೂ ಕಾಡುವ, ಎಚ್ಚರಿಸುವ ಲಂಕೇಶ್

ಬಿ.ಚಂದ್ರೇಗೌಡ

ಪಿ.ಲಂಕೇಶ್ ಅವರ ನೆನಪಿಗಾಗಿ ಭಾಗವತರು ಸಾಂಸ್ಕೃತಿಕ ಸಂಘಟನೆಯು ಮಾರ್ಚ್ 10 ರ ಭಾನುವಾರ ಬೆಂಗಳೂರಿನ ನಯನ ಸಭಾಂಗಣದಲ್ಲಿ ಇಡೀ ದಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.


ಲಂಕೇಶ್ ಕನ್ನಡ ಸಾಹಿತ್ಯ ಲೋಕ ಕಂಡ ಅಸಾಮಾನ್ಯ ಸೃಷ್ಟಿಕರ್ತ ಎಂಬುದು ಹಳೆಯ ಸಂಗತಿ. ಇದೇ ಮಾರ್ಚ್ 8, 2023ಕ್ಕೆ ಅವರಿಗೆ 90 ವರ್ಷ. ತಮ್ಮ 65ನೇ ವಯಸ್ಸಿನಲ್ಲಿ ನಿರ್ಗಮಿಸಿದ ಅವರು, ಜ.25, 2000 ರಂದು ಬರವಣಿಗೆ ನಿಲ್ಲಿಸಿದರು. ಅಂದು ಪತ್ರಿಕೆ ಕೆಲಸ ಮುಗಿಸಿ, ಅದು ಪ್ರಿಂಟಿಗೆ ಹೋದ ನಂತರ ಮನೆಗೆ ಹೋಗಿ ಮಲಗಿದವರು ಯಾವಾಗಲೊ ಹೊರಟುಹೋಗಿದ್ದರು. ಅದಕ್ಕೂ ಮೊದಲು ತಮ್ಮ ಸಂಪಾದಕೀಯ ಬರವಣಿಗೆಯನ್ನು ತಾವೇ ಟೀಕಿಸಿದ್ದರು. ತಮ್ಮ ತೀವ್ರ ಅನಾರೋಗ್ಯವನ್ನು ಗ್ರಹಿಸಿದ ಅವರು ಶಿವಮೊಗ್ಗದಲ್ಲಿ ನಡೆಸಿದ ಕಡೆಯ ಸಭೆಗೆ ಬಂದಾಗ, ಇನ್ನೊಂದೆರಡು ವರ್ಷ ಇರ್ತೀನಿ ಎಂದು ತಮಗೆ ತಾವೇ ಆಯಸ್ಸು ಕೊಟ್ಟುಕೊಂಡಿದ್ದರು. ಆದರೆ ನಮಗೆ ನಾವೇ ಆಯಸ್ಸು ಕೊಟ್ಟುಕೊಳ್ಳುವುದು ಭ್ರಮೆ ಎಂದೂ ಹೇಳಿದ್ದರು. ಅವರು ತೀರಿಕೊಂಡು 25 ವರ್ಷವಾದರೂ ಕನ್ನಡ ಸಾಹಿತ್ಯ ಮತ್ತು ರಾಜಕಾರಣ ಅವರನ್ನು ನೆನೆಸಿಕೊಂಡು 'ಈಗ ಲಂಕೇಶ್ ಇದ್ದಿದ್ದರೆ' ಎಂದು ಉದ್ಗಾರಕ್ಕೆ ಕಾರಣವಾಗಿರುವುದು ವಿಶೇಷ.

ಲಂಕೇಶ್ ಶಿವಮೊಗ್ಗ ಸಮೀಪದ ಕೊನಗವಳ್ಳಿಯಲ್ಲಿ ಜನಿಸಿದರು. ಬೆಂಗಳೂರಿನಲ್ಲಿ 20 ವರ್ಷ ಇಂಗ್ಲಿಷ್ ಉಪನ್ಯಾಸಕರಾಗಿದ್ದರೂ ಹಳ್ಳಿಗರಾಗಿಯೇ ಉಳಿದಿದ್ದರು. ಅವರು ತಮ್ಮ ಬಾಲ್ಯದ ದಿಗ್ಭ್ರಮೆಗಳನ್ನು 'ಮುಸ್ಸಂಜೆ ಕಥಾಪ್ರಸಂಗ'ವೆಂಬ ಕಾದಂಬರಿ ಮತ್ತು 'ಹುಳಿಮಾವು' ಎಂಬ ಜೀವನ ವೃತ್ತಾಂತದಲ್ಲಿ ದಾಖಲಿಸಿದ್ದಾರೆ. ಆ ಕೃತಿಗಳನ್ನು ಈಗ ಓದಿದರೂ ತನ್ನ ತಾಜಾತನ ಉಳಿಸಿಕೊಂಡಿವೆ. ಹಳ್ಳಿಗಳ ಬದುಕನ್ನು ಅಲ್ಲಿಯ ಜನರ ನಾಡಿಮಿಡಿತವನ್ನು ಲಂಕೇಶರಷ್ಟು ಕರಾರುವಾಕ್ಕಾಗಿ ದಾಖಲಿಸಿದವರು ವಿರಳ.

ಲಂಕೇಶ್ ಹಳ್ಳಿಗಳ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ ಕಂಡು ಯಾವಾಗಲೂ ಪ್ರಕ್ಷುಬ್ದವಾಗಿರುತ್ತಿದ್ದರು. ಹಣದ ಮದ, ಅಹಂಕಾರದ ಮದ, ಅಂತಸ್ತಿನ ಮದವೇರಿದ ಜನಗಳ ಭೂತ ಬಿಡಿಸಬೇಕು ಎನ್ನುತ್ತಿದ್ದರು. ಹೀಗಾಗಿ ಅಂಥವರು ಲಂಕೇಶ್ ಕಂಡರೆ ಹಾಯುವ ದನ ಕಂಡಂತೆ ಅರುಗಾಸಿ ಹೋಗುತ್ತಿದ್ದರು. ಮತೀಯವಾದಿಗಳಂತೂ ಅವರನ್ನು ಕಂಡಕೂಡಲೇ ಹಾವು ನೋಡಿದಂತಾಗುತ್ತಿದ್ದರು. ಲಂಕೇಶರು ಭ್ರಷ್ಟರು, ನೀಚರು, ವ್ಯಭಿಚಾರಿಗಳನ್ನು ಕ್ಷಮಿಸಿದರೂ ಮತಾಂಧರನ್ನು ಕ್ಷಮಿಸುತ್ತಿರಲಿಲ್ಲ. ಮತಾಂಧರ ಮನಸ್ಸನ್ನು ಪೂರ್ಣ ಗ್ರಹಿಸಿದ್ದ ಅವರು, ವಾಸಿಯಾಗದ ಯಾವುದೋ ಕಾಯಿಲೆಗೆ ತುತ್ತಾದವರನ್ನು ಕಂಡಂತೆ ಸಿಡುಕುತ್ತಿದ್ದರು.

ಲಂಕೇಶ್ ಪತ್ರಿಕೆ ತೆರೆಯುವಷ್ಟರಲ್ಲಿ ಕನ್ನಡಕ್ಕೆ ಮಹತ್ವದ ಕೃತಿಗಳನ್ನು ಕೊಟ್ಟಿದ್ದರು. ಅವರ ಬರವಣಿಗೆ ಕುರಿತು ದೇವನೂರ ಹೇಳುವಂತೆ ತೆಂಗಿನಮಟ್ಟೆ ತಾನು ಮೂಡಿದ ಜಾಗದ ಗುರುತನ್ನು ಮರದಲ್ಲಿ ದಾಖಲಿಸಿ ಹೋಗುವಂತೆ, ಲಂಕೇಶ್ ಕೈಹಾಕಿದ ಪ್ರಕಾರದಲ್ಲಿ ತಮ್ಮ ಪ್ರತಿಭೆಯ ಗುರುತನ್ನು ಮೂಡಿಸಿದ್ದಾರೆ. ಕತೆ, ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ–ಹೀಗೆ ಎಲ್ಲ ಪ್ರಕಾರದಲ್ಲೂ ಅವರು ತಮ್ಮ ಪ್ರತಿಭೆ ದಾಖಲಿಸಿದ್ದಾರೆ. ಅವರು ಪತ್ರಿಕೆ ತೆರೆದು ನಿರಂತರವಾಗಿ ಬರೆಯುತ್ತ ಹೊರಟ ಮೇಲೆ, ಇನ್ನು ಲಂಕೇಶರಿಂದ ಮಹತ್ವದ ಕೃತಿಗಳು ಸಾಧ್ಯವಿಲ್ಲ ಎಂದು ಹಗುರವಾಗಿ ಮಾತನಾಡಿದವರಿಗೆ ಉತ್ತರವೆಂಬಂತೆ 'ಅಕ್ಕ' ಕಾದಂಬರಿ ಬರೆದರು. 'ಗುಣಮುಖ' ನಾಟಕ ಬರೆದರು. ಹಲವಾರು ಕತೆಗಳನ್ನು ಬರೆದರು. ಅದೂ ಪ್ರಗತಿರಂಗವೆಂಬ ಪಾರ್ಟಿ ಸ್ಥಾಪಿಸಿ ಕರ್ನಾಟಕದಲ್ಲೆಲ್ಲಾ 20 ಸಾವಿರ ಕಿ.ಮೀ ತಿರುಗುತ್ತಲೇ ಬರೆದ ಕಥೆಗಳು. 'ಕಲ್ಲು ಕರಗುವ ಸಮಯ' ಎಂಬ ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ಇದಕ್ಕೆ ಕಾರಣಕರ್ತರಾದ ಅನಂತಮೂರ್ತಿ ಅವರನ್ನು ಬಿಡದೆ ಟೀಕಿಸಿದರು. ಅವರಿಬ್ಬರ ಜಗಳ ನೋಡಿದರೆ ಸಂಸ್ಕಾರದ ನಾರಣಪ್ಪ ಮತ್ತು ಪ್ರಾಣೇಶಾಚಾರಿಯ ಜಗಳದಂತೆಯೂ, ಶೂದ್ರ–ಬ್ರಾಹ್ಮಣ ಜಗಳದಂತೆಯೂ ಕಾಣುತ್ತಿತ್ತು. ಲಂಕೇಶ್ ಮೂಲತಃ ಜಗಳಗಂಟರು. ಜಗಳಗಳೇ ಸೃಜನಶೀಲತೆಯ ಜೀವಾಳವೆಂದು ನಂಬಿದ ಅವರ ಜೊತೆ ಜಗಳಕಾಯದವರೇ ಇಲ್ಲ. ಅವರದ್ದು ಸಿಟ್ಟಿನ ಜಗಳ. ದ್ವೇಷದ ಜಗಳವಲ್ಲ. ಇದನ್ನು ಗ್ರಹಿಸದವರು ಮತ್ತೆಂದೂ ಅವರ ಸನಿಹಕ್ಕೆ ಹೋಗಲಿಲ್ಲ. ಒಂದಲ್ಲಾ ಒಂದು ದಿನ ತೇಜಸ್ವಿಯವರಿಂದ ಫೋನು ಬರುತ್ತದೆ ಅಥವಾ ನಾನೇ ಮಾಡುತ್ತೇನೆ ಎನ್ನುತ್ತಿದ್ದರು. ಅದಾಗಲಿಲ್ಲ.

ಲಂಕೇಶ್ ಇಂಗ್ಲಿಷ್ ಉಪನ್ಯಾಸಕ ವೃತ್ತಿಯಲ್ಲಿ ಆಸಕ್ತಿ ಕಳೆದುಕೊಂಡು ಸಿನಿಮಾ ತೆಗೆಯಲು ಹೊರಟಾಗ ಮೊದಲ ಸಿನಿಮಾ 'ಪಲ್ಲವಿ'ಗೆ ಉತ್ತಮ ನಿರ್ದೇಶಕ ಪ್ರಶಸ್ತಿ ಬಂತು. ಇಂತಹ ಉತ್ಸಾಹದ ಸಮಯದಲ್ಲೇ 'ಅನುರೂಪ', 'ಖಂಡವಿದೆಕೊ ಮಾಂಸವಿದೆಕೊ', 'ಎಲ್ಲಿಂದಲೋ ಬಂದವರು' ತೆಗೆದರು. ಅಷ್ಟರಲ್ಲಿ ಕೆಲಸವೂ ಹೋಯ್ತು. ನಿರ್ದೇಶಕನ ಸಂಭಾವನೆಯೂ ಖರ್ಚಾಯಿತು. ಅಂತೂ ಬೀದಿಗೆ ಬಿದ್ದ ಆ ಸಮಯದಲ್ಲಿ ಮನೆ ಎದುರಿಗಿನ ಅಂಗಡಿಯವನು ಸಿಗರೇಟ್ ಸಾಲ ಕೊಡಲಿಲ್ಲ. ಹಾಗಂದ ಕೆಲವೇ ತಿಂಗಳಲ್ಲಿ



ಲಂಕೇಶ್ ಕಾರಿನಲ್ಲಿ ಮನೆಗೆ ಬಂದರು. ಕಿಡಿ ಶೇಷಪ್ಪನ ಸ್ಫೂರ್ತಿಯಿಂದ ಪತ್ರಿಕೆ ತೆರೆದ ನಂತರ ಹಿಂತಿರುಗಿ ನೋಡಲಿಲ್ಲ. ಅದಕ್ಕೂ ಮೊದಲು 'ಪ್ರಜಾವಾಣಿ'ಯಲ್ಲಿ ಕಾಲಂ ಬರೆಯಲು ಅವಕಾಶ ದೊರೆಕಿಸಿಕೊಂಡು ಜನಪ್ರಿಯತೆ ಗಳಿಸಿದ್ದರು.

ಪತ್ರಿಕೆ ತೆರೆದ ನಂತರ ಪ್ರತಿವಾರವೂ ಅದರ ಪ್ರಸಾರ ಸಂಖ್ಯೆ ಸಾವಿರಗಟ್ಟಲೆ ಏರುತ್ತಾ ಹೋಯ್ತು. ಅದಕ್ಕೆ ಕಾರಣ ಕೇಂದ್ರದಿಂದ ಹೇರಲ್ಪಟ್ಟ ಗುಂಡೂರಾಯರ ಸರಕಾರವಾಗಿತ್ತು. ಲಂಕೇಶರಿಗೆ ಸಿಕ್ಕ ಈ ಆಯುಧದ ಬಗ್ಗೆ ಅಂದು ರಾಜಕಾರಣಿಗಳಲ್ಲದೇ ಸಾಹಿತಿಗಳೂ ಹೆದರತೊಡಗಿದರು. ಪತ್ರಿಕೆಯನ್ನು ಜಾಣಜಾಣೆಯರ ಪತ್ರಿಕೆ ಎಂದು ಕರೆದ ಲಂಕೇಶ್ ಅಂದಿನವರೆಗಿದ್ದ ಪತ್ರಿಕಾ ಮಾಧ್ಯಮದ ಭಾಷೆಯನ್ನೇ ಬದಲಿಸಿದರು ಮತ್ತು ಪತ್ರಿಕೆಯಲ್ಲಿ ಮೊದಲ ಬಾರಿಗೆ ಮುಸ್ಲಿಮರು, ಲಂಬಾಣಿಗರು, ಮಾದಿಗರು, ಹಕ್ಕಿಪಿಕ್ಕಿ ಜನಾಂಗದ ಲೇಖಕರಿಗೆಲ್ಲ ಅವಕಾಶ ಕೊಟ್ಟು ಪ್ರೋತ್ಸಾಹಿಸಿದರು. ಅವರು ಪತ್ರಿಕೆ ತೆರೆದ ಕೂಡಲೇ ದಾಖಲಿಸಿದ ಒಂದು ಟಿಪ್ಪಣಿ ಬಹುಮುಖ್ಯವಾಗಿತ್ತು. "ನಮ್ಮ ಪತ್ರಿಕೆ ಕೇವಲ ಎರಡು ತಿಂಗಳ ಮಗು. ನಮ್ಮ ಓದುಗರ ವಿಶ್ವಾಸವೇ ಇದಕ್ಕೆ ಆಹಾರ. ನಾವು ಯಾವುದೇ ಒಬ್ಬ ರಾಜಕಾರಣಿ ಅಥವಾ ಶೋಷಕನಿಂದ ಒಂದು ಚಿಕ್ಕಾಸು ಲಂಚ ಪಡೆದಿದ್ದನ್ನು, ಸವಲತ್ತು ಪಡೆದಿದ್ದನ್ನು ತೋರಿಸಿದರೆ ಅವತ್ತು ಪತ್ರಿಕೆಯನ್ನು ನಿಲ್ಲಿಸುತ್ತೇನೆ. ನಾವು ಸರಕಾರದ ಜಾಹೀರಾತನ್ನು ಸ್ವೀಕರಿಸುವುದಿಲ್ಲ. ಪ್ರತಿಯೊಬ್ಬ ಕನ್ನಡಿಗ ಪತ್ರಿಕೆ ಕೊಳ್ಳುವ ಕಾಸಿನಿಂದ ಇದನ್ನು ನಡೆಸುತ್ತೇನೆ" ಎಂದು ಬರೆದರು. ನಿಜಕ್ಕೂ ಓದುಗ ಮತ್ತು ಸಂಪಾದಕ ಒಂದಾದ ಸಮಯ ಅದು.

ಸಮಯಕ್ಕೆ ಬೆಲೆ ಕೊಡುತ್ತಿದ್ದ ಅವರು ಪತ್ರಿಕೆ ನಡೆಸಿದ 20 ವರ್ಷದಲ್ಲಿ 20 ಸಾವಿರ ಪುಟ ಬರೆದು ಹೋಗಿದ್ದಾರೆ. ನಮ್ಮ ನಡುವಿನ ತಾರತಮ್ಯ ನಿವಾರಣೆ, ಹಿಂದೂ–ಮುಸ್ಲಿಂ ಸಾಮರಸ್ಯ, ಸ್ತ್ರೀಯರ ಸಬಲೀಕರಣ ಈ ಆಶಯಗಳು ಪತ್ರಿಕೆಯ ಪ್ರಧಾನ ದನಿಯಾಗಿತ್ತು. ಲಂಕೇಶರು ಪ್ರಗತಿ ರಂಗವೆಂಬ ಭಾಷಣದ ಪಾರ್ಟಿ ಕಟ್ಟಿದರು.

ಲಂಕೇಶರ ಒಡನಾಡಿಯಾಗಿದ್ದು ಅವರ ಮೆಚ್ಚಿನ ಲೇಖಕರಾಗಿದ್ದ ನಟರಾಜ್ ಹುಳಿಯಾರ್ ಲಂಕೇಶ್ ಬಗ್ಗೆ ದಾಖಲಿಸಿರುವ ಟಿಪ್ಪಣಿಯನ್ನು ಇಲ್ಲಿ ಕೊಡುತ್ತಿದ್ದೇನೆ: ಲಂಕೇಶ್ ಎಂದರೆ ನಿಷ್ಠುರತೆ, ಸೆಡವು, ತನ್ನ ಔದಾರ್ಯಕ್ಕೂ ಸಣ್ಣತನಕ್ಕೂ ತಾಳೆಯಾಗದ ವ್ಯಕ್ತಿತ್ವ. ಯಾವ ಶಕ್ತಿಯೇ ಇರಲಿ, ಎದುರಾಗುವ ಛಲ. ವಂಚನೆಯನ್ನು ತಕ್ಷಣ ಪತ್ತೆಮಾಡಿಬಿಡಬಲ್ಲ ಹದ್ದುಗಣ್ಣು. ಆದರೆ ಪ್ರಾಮಾಣಿಕತೆ ಪತ್ತೆಯಲ್ಲಿ ಕೊಂಚಮಬ್ಬುಗಣ್ಣು. ಅನ್ಯರ ನೋವನ್ನು ತನ್ನದಾಗಿಸಿಕೊಂಡು ನವೆಯುವ ಒಳಗು. ಹೊಗಳಿಕೆಯ ಬಗ್ಗೆ ಕಾತುರ, ಹೊಗಳುವವರ ಬಗ್ಗೆ ಸಂದೇಹ... ಮೇಲಿನ ಟಿಪ್ಪಣಿ ಲಂಕೇಶರ ದಶಮುಖ ವ್ಯಕ್ತಿತ್ವವನ್ನು ಕರಾರುವಕ್ಕಾಗಿ ದಾಖಲಿಸಿದೆ ಅನ್ನಿಸುತ್ತಿದೆ. ಆ ಕಾರಣಕ್ಕೆ ಲಂಕೇಶ್ ನಮ್ಮನ್ನು ಯಾವಾಗಲೂ ಕಾಡುವ ಮತ್ತು ಎಚ್ಚರಿಸುವ ಲೇಖಕರಾಗಿ ಉಳಿದಿದ್ದಾರೆ.

ಬರಹಗಾರರ ತಡೆಗೋಡೆ ಪರಸಂಗ...

ಡಾ. ಕೆ.ಎಸ್. ಪವಿತ್ರ

'ರೈಟರ್ಸ್ ಬ್ಲಾಕ್' ಬಗ್ಗೆ ಕೇಳಿದ್ದೀರಿ ತಾನೆ? 'ಬರಹಗಾರರ ತಡೆಗೋಡೆ'ಯನ್ನು ನಾವ್ಯಾರೂ ಪ್ರಸಿದ್ಧ ಲೇಖಕರಲ್ಲದೆಯೂ ಅನುಭವಿಸಿರಲು ಸಾಧ್ಯವಿದೆ. ಖಾಲಿ ಕಾಗದವನ್ನಿಟ್ಟುಕೊಂಡು ಏನು ಬರೆಯಬೇಕು, ಎಲ್ಲಿಂದ ಆರಂಭಿಸಬೇಕು ಎನ್ನುವುದು ಗೊತ್ತಾಗದೆ ನಾವೆಷ್ಟು ಬಾರಿ ಕುಳಿತಿಲ್ಲ? 'ಈಗೇನು ಚಾಟ್ ಜಿಪಿಟಿ ಇದೆ ಬಿಡಿ' ಅನ್ನಬಹುದು. ಆದರೆ ಚಾಟ್ ಜಿಪಿಟಿಗೆ ಏನಾದರೂ 'ಆದೇಶ' ಕೊಡಲಾದರೂ ನಮ್ಮ ತಲೆ ಕೆಲಸ ಮಾಡಬೇಕಲ್ಲ?

ಮನುಷ್ಯನ ಮನಸ್ಸು ರೂಪುಗೊಂಡಾಗಿನಿಂದಲೂ, ಅಂದರೆ ಆದಿಮಾನವನ ಕಾಲದಿಂದಲೂ ಕಲೆಗಳು ಇದ್ದವಷ್ಟೆ. ಆಗಲೂ 'ರೈಟರ್ಸ್ ಬ್ಲಾಕ್' ಇದ್ದಿರಬೇಕು. ಆದರೆ 21ನೇ ಶತಮಾನದ ಕೊನೆಯ ಭಾಗದವರೆಗೆ ಇದಕ್ಕೆ ಒಂದು 'ಸಮಸ್ಯೆ' ಎಂಬ 'ಗೌರವ' ದೊರೆತಿರಲಿಲ್ಲ. 1970ರ ಹೊತ್ತಿಗೆ ಈ ಸಮಸ್ಯೆ ಬರಹಗಾರರ ಗಮನಕ್ಕೆ ಬಂದು ಅದೆಷ್ಟು 'ಕುಖ್ಯಾತಿ' ಗಳಿಸಿತೆಂದರೆ 'ಬಿ ವರ್ಡ್' ಎಂದಷ್ಟೇ ಅದನ್ನು ಕರೆಯುತ್ತಿದ್ದರು. ಅದನ್ನು ಪೂರ್ತಿ ಉಚ್ಚರಿಸಲೂ ಹೆದರುವಷ್ಟು! ಅದನ್ನು 'ಡ್ರೈ ಸ್ಪೆಲ್' (ಒಣ ಅವಧಿ) ಎಂದು ಕರೆಯುವುದೂ ರೂಢಿಯಾಗಿತ್ತು. ಇದು ಕೇವಲ ಬರಹಗಾರರಲ್ಲಷ್ಟೇ ಅಲ್ಲ. ಯಾವುದನ್ನೂ 'ಸೃಷ್ಟಿಸುವ ಕಲೆ'ಯಲ್ಲಿಯೂ ಕಾಣಬಹುದಾದದ್ದೇ. 'ಸ್ಫೂರ್ತಿ' ಹುಟ್ಟದಿರುವುದು, ಹಾಡಿದ್ದು, ನೃತ್ಯ ಸಂಯೋಜಿಸಿದ್ದು, ಚಿತ್ರ ಬರೆದದ್ದು ತನಗೇ ಯಾಂತ್ರಿಕ, ಅದರಲ್ಲಿ ಯಾವ ಹೊಸತೂ ಇಲ್ಲ ಅನಿಸುವುದು ಅಥವಾ ಏನೂ ಹೊಳೆಯದಿರುವುದು–ಇವೆಲ್ಲ ಕಲಾ ವಲಯದಲ್ಲಿ ಸಾಮಾನ್ಯ. ಆದರೂ ಬರಹಗಾರರು ಇದನ್ನು ವ್ಯಾಪಕವಾಗಿ ತೆರೆದಿಟ್ಟಿದ್ದರಿಂದ ಅವರಲ್ಲಿಯೇ ಇದು ಹೆಚ್ಚು ಪ್ರಸಿದ್ಧ.



ವಿಫಲತೆಯ ಭಯ, ಯಶಸ್ಸು ಸಿಗುವುದೋ ಇಲ್ಲವೋ ಎಂಬ ಅನುಮಾನ, ಅತಿಯಾದ ಪರಿಪೂರ್ಣತೆಯತ್ತ ದೃಷ್ಟಿ–ಇವು ಸಾಮಾನ್ಯವಾಗಿ ಬರಹಗಾರನ ಗೋಡೆಯ ಬಲವಾದ ಇಟ್ಟಿಗೆಗಳು. ಕೆಲವೊಮ್ಮೆ ತಾನು ಆರಿಸಿಕೊಂಡ ವಸ್ತು ಎತ್ತ ಸಾಗಬೇಕು ಎಂಬ ಬಗ್ಗೆ ಅನಿಶ್ಚಿತತೆ, ಅಧ್ಯಯನದ ಕೊರತೆಗಳೂ ಜೊತೆಗೂಡಬಹುದು. 'ನೂನ್ ಡೇ ಡೆವಿಲ್' (ಮಧ್ಯಾಹ್ನದ ಭೂತ)ವನ್ನು ಬರದಂತೆ ತಡೆಯಲು ಪ್ರಸಿದ್ಧ ಸಾಹಿತಿಗಳು ಮಾಡುತ್ತಿದ್ದ ಪ್ರಯೋಗಗಳು ಸ್ವಾರಸ್ಯಕರ. ಹೆಮ್ಮಿಂಗ್‌ವೇ 'ತಡೆಗೋಡೆ' ಮಧ್ಯಾಹ್ನದ ವೇಳೆಗೆ ಬರುವುದನ್ನು ತಡೆಯಲು 20 ಪೆನ್ಸಿಲ್‌ಗಳನ್ನು ಮೊದಲು ಹರಿತ ಮಾಡಿಡುವುದನ್ನು ರೂಢಿಸಿಕೊಂಡಿದ್ದರಂತೆ. ಪ್ರತಿದಿನ ಬರೆಯುತ್ತಿದ್ದ ಪುಟದಲ್ಲಿ ಕೊನೆಯ ವಾಕ್ಯವನ್ನು ಅರ್ಧಕ್ಕೇ ನಿಲ್ಲಿಸುತ್ತಿದ್ದರಂತೆ. ಮರುದಿನ ಬರೆಯುವುದು ಸುಗಮವಾಗಲು! ವಿಲ್ಲಾ ಕ್ಯಾಥರ್ ಎಂಬ ಲೇಖಕಿ ಬೈಬಲ್‌ನಿಂದ ಒಂದು ಪ್ಯಾರಾ ಓದಿನ ನಂತರವೇ ಬರವಣಿಗೆ ಆರಂಭಿಸುತ್ತಿದ್ದರು.

ಬರಹಗಾರರ ತಡೆಗೋಡೆಯ ಮುಖ್ಯ ಲಕ್ಷಣವೆಂದರೆ ಅದರ ಹಠಾತ್ ದಾಳಿ. ಹಾಗಾಗಿಯೇ ಅದು 'ಮಧ್ಯಾಹ್ನದ ಭೂತ'. ಅಂದರೆ ಲೇಖಕ ಬರೆಯಲು ಎಂದಿನಂತೆ ಕುಳಿತು ಆರಂಭಿಸಿದ ಒಂದೆರಡು ಗಂಟೆಗಳಲ್ಲಿ ಅದು ಎದ್ದು ನಿಲ್ಲುವುದು. ಕೆಲವು ಸಮಯದ ನಂತರ ತಾನು ಬೇರೆಯವರೊಂದಿಗೆ ಹಂಚಿಕೊಳ್ಳುವಂತಹದ್ದು ಏನನ್ನೂ ಬರೆದಿಲ್ಲ ಅಥವಾ ಒಂದು ಪದವನ್ನೂ ಬರೆಯಲು ಆಗುತ್ತಿಲ್ಲ ಎಂಬ ಸತ್ಯ ಅರಿವಿಗೆ ಬರುತ್ತದೆ. ಸಾಹಿತಿಗಳು ಇದರಿಂದ ಹೊರಬರಲು ಹಲವು ಉಪಾಯಗಳನ್ನು ಪ್ರಯೋಗಿಸಿ ನೋಡಿದ್ದಾರೆ. ಕೆಲವು ಕಪ್ ಕಾಫಿ, ಬೇರೆ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳುವುದು, ಟೈಪ್ ಬದಲು ಬರೆಯುವುದು, ಮಧ್ಯೆ ವಿರಾಮ ತೆಗೆದುಕೊಂಡು ದಿನಪತ್ರಿಕೆ ಓದುವುದು, ತಿಂಡಿ ತಿನ್ನುವುದು, ವ್ಯಾಯಾಮ ಮಾಡುವುದು–ಹೀಗೆ ಇತ್ಯಾದಿ, ಇತ್ಯಾದಿ. ಇವುಗಳಲ್ಲಿ ಯಾವುದಾದರೂ ಸರಿಯಾಗಿ, ಬರೆಯಲು ಸಾಧ್ಯವಾದರೆ ಸರಿ; ಇಲ್ಲವೆಂದಾದರೆ ತನ್ನ ಸೃಷ್ಟಿಸುವ ಪ್ರತಿಭಾ ಪಾತ್ರೆ ಖಾಲಿ ಆಯಿತು ಎಂಬ ಆತಂಕ ಕಾಡಲು ಆರಂಭವಾಗುತ್ತದೆ. ಇನ್ನು ಕೆಲವರಂತೂ ಹತಾಶೆಯಲ್ಲಿ ನಿಸರ್ಗ ತಾಣಗಳಿಗೆ ಹೋಗಿ ಜೋರಾಗಿ ಅರಚಿಕೊಂಡದ್ದು ಅಧ್ಯಯನಗಳಲ್ಲಿ ದಾಖಲಾಗಿದೆ!

ಲೇಖಕರರ ತಡೆಗೋಡೆಯ ಬಗ್ಗೆ ಬರೆಯುವಾಗ ಫ್ರಾನ್ ಲಿಬೋವಿಟ್ಜ್ ಎಂಬ ಲೇಖಕಿಯ ಬಗ್ಗೆ ನೆನಪಿಸಿಕೊಳ್ಳಲೇಬೇಕು. 1980 ರ ಸುಮಾರಿಗೆ 'ಮೆಟ್ರೊಪಾಲಿಟನ್ ಲೈಫ್' ಮತ್ತು 'ಸೋಷಿಯಲ್ ಸ್ಟಡೀಸ್' ಎಂಬ ಎರಡು ಪುಸ್ತಕಗಳನ್ನು ಬರೆದರು. ಅವು ಜನಪ್ರಿಯವೂ ಆದವು. 1981ರ ನಂತರ ಹತ್ತು ವರ್ಷಗಳ ಕಾಲ ತಮಗೆ ಅನುಭವವಾದ 'ತಲೆ ಖಾಲಿ' ಭಾವನೆಯಿಂದ ಅವರು ಬರೆಯಲೇ ಇಲ್ಲ. 'ಬರೆಯಲಿಲ್ಲ' ಎಂಬುದಕ್ಕೇ 'ಬರೆದರು' ಎಂಬಕ್ಕಿಂತ ಹೆಚ್ಚು ಪ್ರಸಿದ್ಧಿ ಗಳಿಸಿದರು!


ಕುತೂಹಲಕಾರಿ ವಿಷಯವೆಂದರೆ ಲೇಖಕರಲ್ಲಿ 'ಬರೆಯದಿರುವುದು' ಬಹುವಾಗಿ ಗಮನಕ್ಕೆ ಬರುತ್ತದೆ; ಒತ್ತಡ ಹೆಚ್ಚಿಸುತ್ತದೆ; ಸವಾಲುಗಳನ್ನು ಎದುರಿಸುವಂತೆ ಮಾಡುತ್ತದೆ. ಏಕೆಂದರೆ 'ಬರೆಯುವುದು' ಅವರ ಸಹಜ ಸ್ಥಿತಿ ಎಂಬ ನಿರೀಕ್ಷೆ ಸಮಾಜದ್ದು. ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರು 25 ವರ್ಷಗಳ ದೀರ್ಘಕಾಲದ ಮೌನದ ನಂತರ ಮತ್ತೆ ಕವಿತೆಗಳನ್ನು ಬರೆದಾಗ ಅವರು ಆ ಕಾಲವನ್ನು ಕರೆದದ್ದು 'ಚಿಂತನೆಯ ಕಾಲವೆಂದೇ'. ಅಂದರೆ 'ತಡೆಗೋಡೆ'ಯನ್ನೂ ಸಕಾರಾತ್ಮಕವಾಗಿ ಬಿರುಗಾಳಿ ಮುನ್ನದ ಸ್ತಬ್ಧತೆಯಾಗಿ ಗ್ರಹಿಸಲು ಸಾಧ್ಯವಿದೆ. ಅಂದರೆ ಸೃಜನಶೀಲತೆಯ ಮುನ್ನದ ಸ್ಫೂರ್ತಿಯ ಪ್ರಚಂಡ ಅಲೆಯೇಳುವ ಮೊದಲಿನ ಸ್ತಬ್ಧತೆ! ಹಾಗಾಗಿಯೇ ಕೆಲವು ಲೇಖಕರು ಈ ತಡೆಗೋಡೆಯನ್ನು ನಿರೀಕ್ಷಿಸುತ್ತಾರೆ; ಸ್ವಾಗತಿಸುತ್ತಾರೆ.

'ಲೇಖಕರ ತಡೆಗೋಡೆ' ಯನ್ನು ಒಡೆಯಲು ಹಲವು ಉಪಾಯಗಳಿವೆ. ಮಧ್ಯೆ ಮಧ್ಯೆ ವಿರಾಮ ದೇಹ-ಮನಸ್ಸುಗಳೆರಡಕ್ಕೂ ಅವಶ್ಯಕ. ಬರಹವನ್ನು ಬದಿಗಿರಿಸಿ ನಾವು ಸಂತೋಷಿಸುವ ಯಾವುದಾದರೊಂದು ಚಟುವಟಿಕೆಯಲ್ಲಿ ಆಗಾಗ ತೊಡಗಿಕೊಳ್ಳುವುದು, ನಾವೆಷ್ಟೇ ಒಂಟಿತನವನ್ನು ಆನಂದಿಸುವವರಾದರೂ, ಜನರೊಟ್ಟಿಗೆ ಬೆರೆಯುವಿಕೆ ಆರೋಗ್ಯಕರ. ಬದಲಿ ಕಲೆಯ ಆಸ್ವಾದನೆ ಹೊಸ ಒಳನೋಟ ಕೊಡಲು ಸಾಧ್ಯ. ಲೇಖಕನಾದರೆ ಸಂಗೀತ, ನೃತ್ಯ ಕಲಾವಿದೆಯಾದರೆ ಕಾದಂಬರಿ ಓದುವಿಕೆ–ಹೀಗೆ ಇದು ನಡೆಯಬೇಕು. ಪೂರ್ತಿ ಪುಸ್ತಕ ಮುಗಿಸುವ ಬಗ್ಗೆ ಚಿಂತಿಸುವ ಬದಲು, ಒಂದು ಪದ, ಒಂದು ವಾಕ್ಯ ಬರೆಯಲು ಪ್ರಯತ್ನಿಸುವುದು. ಸ್ವವಿಮರ್ಶೆ ಮಾಡಿಕೊಳ್ಳುವುದನ್ನು ಬದಿಗಿಟ್ಟುಬಿಡುವುದೇ ಸರಿ. ಪ್ರತಿ ಬಾರಿಯೂ ಬರಹ ಸರಿಯಾಗಿಯೇ ಇರಬೇಕು, ಪರಿಪೂರ್ಣವಾಗಿಯೇ ಇರಬೇಕು, ಸ್ವಾರಸ್ಯಕರವಾಗಿಯೇ ಇರಬೇಕು ಎಂಬುದು ಕಾನೂನಲ್ಲವಷ್ಟೆ!

ಈಗ ಚಾಟ್ ಜಿಪಿಟಿ ಕಾಲ. ಮೇಲೆ ಹೇಳಿದ ಪರಿಹಾರಗಳೆಲ್ಲ ಬೇಕಾಗಿಲ್ಲ. ಚಾಟ್ ಜಿಪಿಟಿ ಈ ತಡೆಗೋಡೆಯನ್ನು ಒಡೆಯಲು ಬಹು ಸಹಾಯಕವಂತೆ! ಆದರೆ, ತೆರೆಯ ಮೇಲೆ ಮೂಡುವ ಬರಹದ ಲೇಖಕರು ಯಾರು ಗೊತ್ತಲ್ಲ?! ಆದರೂ ವಿವೇಚನೆಯುಳ್ಳವರಿಗೆ 'ಸ್ಟಾರ್ಟಿಂಗ್ ಟ್ರಬಲ್' ನಿವಾರಿಸಲು, ಒಂದು ಪದದಿಂದ ಹಠಾತ್ ಅಂಥ ಸ್ಫೂರ್ತಿ ಪಡೆಯುವ ಪ್ರತಿಭಾವಂತರಿಗೆ ಅದು ಸಹಾಯ ಮಾಡಬಹುದು ಅನ್ನೋಣ. ಉಳಿದವರಿಗೆ ಅದು ತಡೆಗೋಡೆಯನ್ನು ಮತ್ತೂ ದೊಡ್ಡದಾಗಿಸಿ ತಾನೇ ಬರಹಗಾರ ಆಗಿ ಕುಳಿತುಬಿಟ್ಟರೆ?! ಶಾಶ್ವತವಾಗಿ ಬರೆಯದಿರುವ ಹಾಗೆ ಮಾಡಿಬಿಟ್ಟರೆ?!

ಮೊದಲ ಓದು

ಸಂಚಿಯೊಳಗೆ ಒಡಮೂಡಿದ ಮುನ್ನುಡಿ



ಪು: 400
₹495


ಸಂಚಿ
ಲೇ: ಎಂ.ಎಸ್. ಆಶಾದೇವಿ
ಪ್ರ: ಪ್ರಿಸಮ್
ಸಂ: 08026714108

ಯಾವುದೇ ಸಾಹಿತ್ಯದ ಕೃತಿಗೆ ಮುನ್ನುಡಿ ಮತ್ತು ಬೆನ್ನುಡಿ ಆಭರಣಗಳಿದ್ದಂತೆ. ಓದುಗನಿಗೆ ಪುಸ್ತಕದ ಹೂರಣವನ್ನು ಕಟ್ಟಿಕೊಡುವ ಮುನ್ನುಡಿ ಬರೆಯುವುದು ಒಂದು ಕಲೆಯೇ ಸರಿ. ತಾವು ಎರಡು ದಶಕಗಳಲ್ಲಿ ಬರೆದ ಮುನ್ನುಡಿಗಳನ್ನೆಲ್ಲ ಈ 'ಸಂಚಿ'ಯೊಳಗಿಟ್ಟಿದ್ದಾರೆ ಲೇಖಕಿ ಎಂ.ಎಸ್.ಆಶಾದೇವಿ.

ಕಾವ್ಯ, ಕಥೆ–ಕಾದಂಬರಿ, ಸಂಕೀರ್ಣ, ಪ್ರಸ್ತಾವನೆ ಎಂದು ನಾಲ್ಕು ವಿಭಾಗಗಳಲ್ಲಿ ಕೃತಿಯನ್ನು ವಿಂಗಡಿಸಲಾಗಿದ್ದು ಒಟ್ಟು 62 ಮುನ್ನುಡಿಗಳಿವೆ. ಲೇಖಕಿಯರ ಕೃತಿಗಳಿಗೆ ಬರೆದ ಪ್ರಾಸ್ತಾವಿಕ ಮಾತುಗಳೇ ಹೆಚ್ಚು. 'ನಮ್ಮ ಕಾಲದ ಒಂದು ಅತ್ಯುತ್ತಮ ಸಾಹಿತ್ಯಕ ಮತ್ತು ಬೌದ್ಧಿಕ ಮನಸ್ಸಿಗೆ ಸಾಕ್ಷಿಯಾಗಿರುವ ಇಲ್ಲಿನ ಮುನ್ನುಡಿಗಳು ಆಶಾದೇವಿಯವರ ವ್ಯಾಪಕ ವಿಚಾರಗಳ ವಿಕಾಸವನ್ನೂ ಅವರ ಸಂವೇದನೆಯ ಹರವನ್ನೂ ಮನವರಿಕೆ ಮಾಡಿಕೊಡುತ್ತವೆ' ಎಂದು ಎಸ್.ದಿವಾಕರ್ ಕೃತಿಯ ಕುರಿತು ಬೆನ್ನುಡಿಯಲ್ಲಿ ಬರೆಯುತ್ತಾರೆ.

'ಎರಡು ದಶಕಗಳಲ್ಲಿ ಕನ್ನಡದ ಪ್ರತಿಭೆ ಮತ್ತು ಬೌದ್ಧಿಕತೆಗಳು ನಡೆಸಿದ ಘನವಾದ ಪ್ರಯಾಣದ ಜೊತೆ ಒಂದೆರಡು ಹೆಜ್ಜೆಗಳನ್ನು ಹಾಕಿದ ದನಿಗೆ ದನಿಗೂಡಿಸಿದ ಅನುಭವವನ್ನು ಈ ಮುನ್ನುಡಿಗಳು ನೀಡಿವೆ. ಈ ಮುನ್ನುಡಿಗಳನ್ನು ಬರೆಯುವಾಗ ಕನ್ನಡ ಜಗತ್ತಿನ ಸಮೃದ್ಧತೆಯ ಬಗ್ಗೆ ಸಕಾರಣವಾದ ಹೆಮ್ಮೆಯನ್ನು, ಪ್ರೀತಿಯನ್ನು ಅನುಭವಿಸಿದ್ದೇನೆ. ಕನ್ನಡದ ಕ್ರಿಯಾಶೀಲತೆ ಯಾವೆಲ್ಲ ರೂಪಗಳಲ್ಲಿ, ಅದೆಷ್ಟು ಸೂಕ್ಷ್ಮವಾಗಿ ಅಭಿವ್ಯಕ್ತಗೊಂಡಿದೆ ಎನ್ನುವುದರ ಅರಿವು ವಿಮರ್ಶೆಯ ವಿನಯ ಮತ್ತು ಎಚ್ಚರವನ್ನು ಜಾಗೃತಗೊಳಿಸುತ್ತದೆ ' ಎಂದು ಎಂ.ಎಸ್. ಆಶಾದೇವಿ ಈ ಕೃತಿಯ ಮುನ್ನುಡಿಯಲ್ಲಿ ಬರೆಯುತ್ತಾರೆ.

ಕಾನೂನು, ಸೈಬರ್ ಶಿಕ್ಷಣದ ಮೂಸೆಯಲ್ಲಿ ಅರಳಿದ ಕೃತಿ



ಪು: 168
₹200

ಸೈಬರ್ ಕ್ರೈಮ್ ತಡೆಗಟ್ಟುವುದು ಹೇಗೆ?
ಲೇ: ಸತೀಶ್ ವೆಂಕಟಸುಬ್ಬು
ಪ್ರ: ಸಾವಣ್ಣ ಎಂಟರ್‌ಪ್ರೈಸಸ್
ಸಂ: 90363 12786

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತಂತ್ರಜ್ಞರಾಗಿ 20 ವರ್ಷಗಳ ಅನುಭವ, ಬೆಂಗಳೂರು ಕಾನೂನು ಶಾಲೆ ವಿಶ್ವವಿದ್ಯಾಲಯದ ವಿಧಿವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ ಮತ್ತು ಕಾನೂನು ಶಿಕ್ಷಣ ಇವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಸತೀಶ್ ವೆಂಕಟಸುಬ್ಬು ಅವರು 'ಸೈಬರ್ ಕ್ರೈಮ್ ತಡೆಗಟ್ಟುವುದು ಹೇಗೆ?' ಎಂಬ ಕೃತಿಯನ್ನು ರಚಿಸಿದ್ದಾರೆ. ಇದು ಪ್ರಸ್ತುತ ಡಿಜಿಟಲ್ ಯುಗ ಎದುರಿಸುತ್ತಿರುವ ಸೈಬರ್ ದಾಳಿಯಿಂದ ರಕ್ಷಿಸಿಕೊಳ್ಳಲು ಇರುವ ಮಾರ್ಗೋಪಾಯದ ಮೇಲೆ ಬೆಳಕು ಚೆಲ್ಲಿದೆ.

ಮೈಸೂರಿನ ಪ್ರಾದೇಶಿಕ ಪತ್ರಿಕೆಯಲ್ಲಿ 'ಸೈಬರ್ ಮಿತ್ರ' ಹೆಸರಿನ ಅಂಕಣ ಬರಹಗಳ ಗುಚ್ಛ ಈ ಕೃತಿ. ಆಧಾರ್, ಪ್ಯಾನ್ ಸೈಬರ್ ಅಪರಾಧಗಳು, ಡೀಪ್‌ಫೇಕ್, ಕೃತಕ ಬುದ್ಧಿಮತ್ತೆ ಬಳಸಿ ನಡೆಸುವ ಸೈಬರ್ ದಾಳಿಗಳು, ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಸುವ ಸೈಬರ್ ಅಪರಾಧಗಳು, ಕ್ಯೂಆರ್ ಕೋಡ್, ವಾಟ್ಸ್‌ಆ್ಯಪ್ ಸೈಬರ್ ಅಪರಾಧಗಳು, ಕೊರಿಯರ್ ಸಹಾಯವಾಣಿಯಿಂದಾಗಿ ಆಗುವ ಸೈಬರ್ ವಂಚನೆಗಳ ಕುರಿತು ಕೃತಿ ಹೇಳಿದೆ.

ಈ ಅಪರಾಧಗಳನ್ನು ತಡೆಗಟ್ಟಲು ಭಾರತದ ಸೈಬರ್ ಕಾನೂನುಗಳು ಏನು ಹೇಳುತ್ತವೆ ಎಂಬಿತ್ಯಾದಿ ಅಂಶಗಳನ್ನು ಈ ಕೃತಿ ಒಳಗೊಂಡಿದೆ. ಇದರೊಂದಿಗೆ ವಿದೇಶಗಳಲ್ಲಿ ಈ ಪಿಡುಗು ಎದುರಿಸಲು ಇರುವ ಕಾನೂನುಗಳ ಕುರಿತೂ ಈ ಕೃತಿಯಲ್ಲಿ ಹೇಳಲಾಗಿದೆ. ಜತೆಗೆ ಸೈಬರ್ ಅಪರಾಧಗಳ ಪರಿಣಾಮಗಳ ಕುರಿತೂ ಲೇಖಕರು ಇಲ್ಲಿ ಚರ್ಚಿಸಿದ್ದಾರೆ. ಸೈಬರ್ ಅಪರಾಧ ಹೆಚ್ಚಳಕ್ಕೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನೂ ಸತೀಶ್ ಈ ಕೃತಿಯಲ್ಲಿ ಮಾಡಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯಿದೆ 2000–2008ರಲ್ಲಿ ಸೈಬರ್ ಕಾನೂನು ಕುರಿತು ಲೇಖಕರು ಈ ಕೃತಿಯಲ್ಲಿ ಸಂಕ್ಷಿಪ್ತ ರೂಪದಲ್ಲಿ ಮಾಹಿತಿ ನೀಡಿದ್ದಾರೆ. ಸೈಬರ್ ಅಪರಾಧಗಳಿಗೆ ಅನ್ವಯವಾಗುವ ಸೆಕ್ಷನ್‌ಗಳು ಮತ್ತು ಸಾಮಾನ್ಯರಿಗೆ ಬೇಕಾಗುವ ಕಾಯಿದೆಯ ಕೆಲ ಪ್ರಮುಖ ನಿಬಂಧನೆಗಳು ಇದರಲ್ಲಿ ನೀಡಲಾಗಿದೆ. ಕಾಯಿದೆಗಳ ಸಂಖ್ಯೆ ಸಹಿತ ವಿವರ ಮತ್ತು ಅದಕ್ಕೆ ಇರುವ ಶಿಕ್ಷೆಯ ಪ್ರಮಾಣವನ್ನು ನೀಡಿರುವುದು ಉಪಯುಕ್ತವಾಗಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಬೆಳ್ಳಚ್ಚರಿ

ಬೆಳ್ಳಚ್ಚರಿ (ನಾ). ದಿಗ್ಭ್ರಮೆಯನ್ನು ತರುವ ಆಶ್ಚರ್ಯ
(ಬೆಳ್ + ಅಚ್ಚರಿ)
ಒಂದು ದಿನ ಚಿತ್ರಕೂಟದ ಪರ್ಣಶಾಲೆಯಲ್ಲಿ ರಾಮ ಸೀತೆ ಲಕ್ಷ್ಮಣರು ಕಗ್ಗತ್ತಲಿನಲ್ಲಿ ಕಿಟಕಿಯಾಚೆ ಕಾಣುವ ಕಾಡುಗಿಚ್ಚನ್ನು ಎಳೆಮಕ್ಕಳಂತೆ ಬಾಯ್ದೆರೆದು ಅಚ್ಚರಿಯಿಂದ ನೋಡಿದರು ಎಂದು ಕವಿ ವರ್ಣಿಸಿದ್ದಾರೆ. ಹಾಗೆ ಚಿತ್ರಿಸುವಾಗ ಅವರು ದಿಗ್ಭ್ರಮೆಯನ್ನು ತರುವ ಆಶ್ಚರ್ಯವನ್ನು ನವೀನ ಪದ 'ಬೆಳ್ಳಚ್ಚರಿ'ಯಿಂದ ಸೂಚಿಸಿದ್ದಾರೆ.

ರಾತ್ರಿ ಆಕಾಶದ ಆ ತಾರಾಸಹಸ್ರಾಕ್ಷ ಇಂದ್ರನ ಓಲಗದಲ್ಲಿ ನರ್ತಿಸುವ ಉರಿಯ ಊರ್ವಶಿ ಎನ್ನುವಂತೆ ಕಾಡುಗಿಚ್ಚು ಹೊಳೆಯುತ್ತಿತ್ತು. ಆ ಚೆಲುವನ್ನು ಎಳೆಯ ಮಕ್ಕಳಂತೆ ಬಾಯಿತೆರೆದು, ದಿಗ್ಭ್ರಮೆಯನ್ನುಂಟು ಮಾಡುವ ಆಶ್ಚರ್ಯಕ್ಕೆ ಮಾರುಹೋದಂತೆ ದಿಟ್ಟಿಸಿದರು!

ರಾತ್ರಿಯಾಕಾಶದಾ
ತಾರಾ ಸಹಸ್ರಾಕ್ಷನೋಲಗದಿ ನರ್ತಿಸುವ
ಉರಿಯ ಉರ್ವಶಿಯೆನಲ್ಕಾ ಕಾಡುಗಿರ್ಚ್ಚೆಸೆಯೆ,
ನಿಟ್ಟಿಸಿದರಾ ಚೆಲ್ವನೆಳಮಕ್ಕಳೋಲಂತೆ
ಬಾಯ್ದೆರೆದ ಬೆಳ್ಳಚ್ಚರಿಗೆ ಮನಂ ಮಾರ್ವೋದವೋಲ್!

ಕೊಡಗಿನಲ್ಲಿ ನಕ್ಷತ್ರಗಳ ಹಬ್ಬ!

10ನೇ ಪುಟದಿಂದ...

ಬೆಂಗಳೂರಿನ ಆಗಸಕ್ಕೂ ಭಾಗಮಂಡಲದ ಆಗಸಕ್ಕೂ ಹೋಲಿಸಿದರೆ ಬೆಂಗಳೂರಿಗಿಂತ ಶೇಕಡ 90ರಷ್ಟು ಹೆಚ್ಚು ಸ್ಪಷ್ಟವಾಗಿ ಆಕಾಶಕಾಯಗಳನ್ನು ಭಾಗಮಂಡಲದಲ್ಲಿ ವೀಕ್ಷಿಸಬಹುದು ಎಂದು ವಿಶ್ವನಾಥ್ ವಿಶ್ವಾಸದಿಂದ ಹೇಳುತ್ತಾರೆ.

ಬೆಂಗಳೂರು ಅಸ್ಟ್ರಾನಮಿಕಲ್ ಸೊಸೈಟಿ ಕಳೆದ ವರ್ಷ ಡಿಸೆಂಬರ್‌ನಲ್ಲಿ ಆಯೋಜಿಸಿದ್ದ 'ಸ್ಟಾರ್ ಪಾರ್ಟಿ'ಯಲ್ಲಿ 80, ಜನವರಿಯಲ್ಲಿ 70, ಫೆಬ್ರುವರಿಯಲ್ಲಿ 60 ಮಂದಿ ಭಾಗಹಿಸಿದ್ದರು. ಮಾರ್ಚ್ 8 ರಿಂದ 12 ರವರೆಗೆ ಆರಂಭವಾಗುವ ಖಗೋಳ ವೀಕ್ಷಣೆಗಾಗಿ ಈಗಾಗಲೇ 75 ಜನರು ನೋಂದಣಿ ಮಾಡಿದ್ದಾರೆ.

ಖಗೋಳ ವೀಕ್ಷಕರು ಕೊಡಗಿನಲ್ಲಿ ನಕ್ಷತ್ರ ವೀಕ್ಷಣೆ ಸುಲಭ ಸಾಧ್ಯ ಎಂಬುದನ್ನು ಮನಗಂಡು ಇಲ್ಲಿಗೆ ಬಂದು ತಮ್ಮದೇ ಟೆಲಿಸ್ಕೋಪ್‌ನಲ್ಲಿ ಆಕಾಶಕಾಯ ವೀಕ್ಷಿಸಿ ವಾಪಸ್ ತೆರಳುತ್ತಿದ್ದಾರೆ. ಆದರೆ, ಸರ್ಕಾರ ಮಾತ್ರ ಈ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿದೆ. ಇತ್ತೀಚೆಗಷ್ಟೇ ಇಲ್ಲೊಂದು ತಾರಾಲಯ ಮತ್ತು ಪ್ರಾದೇಶಿಕ ವಿಜ್ಞಾನ ಕೇಂದ್ರ ತೆರೆಯಲು ಸರ್ಕಾರ ಜಾಗ ಗುರುತಿಸಿ ಸಿದ್ಧತೆಗಳನ್ನು ಆರಂಭಿಸಿದೆ.

ಈಗಾಗಲೇ ಹಲವು ರೆಸಾರ್ಟ್‌ಗಳು ಸಹ ಇಂತಹ ಅವಕಾಶವನ್ನು ಪ್ರವಾಸಿಗರಿಗೆ ನೀಡುವ ಮೂಲಕ ಕೊಡಗಿನ ಪ್ರವಾಸೋದ್ಯಮಕ್ಕೆ ಗಗನದ ರಂಗನ್ನೂ ಚೆಲ್ಲಿದ್ದಾರೆ. ಕೆಲವೊಂದು ತೀರಾ ದುಬಾರಿಯೂ ಇದೆ. ಆದರೆ, ಕೊಡಗಿನ ಕೆಲವೇ ಕೆಲವು ಪ್ರದೇಶಗಳನ್ನಷ್ಟೇ ವೀಕ್ಷಿಸಿ ಕಾಲಕಳೆದು ಹೋಗುತ್ತಿದ್ದ ಪ್ರವಾಸಿಗರಿಗೆ ಖಗೋಳ ಪ್ರವಾಸೋದ್ಯಮ ಹೊಸದೊಂದು ಲೋಕವನ್ನೇ ತೋರಿಸುತ್ತಿದೆ. ಅಲ್ಲದೇ ವೈಚಾರಿಕತೆಯನ್ನೂ ಮೂಡಿಸುತ್ತಿದೆ.

ಮಾಹಿತಿಗೆ: https://bas.org.in/ ಸಂಪರ್ಕಿಸಬಹುದು.



ಬೆಂಗಳೂರು ಅಸ್ಟ್ರಾನಮಿಕಲ್ ಸೊಸೈಟಿ ಸದಸ್ಯರು ಟೆಲಿಸ್ಕೋಪ್‌ನಲ್ಲಿ ನಕ್ಷತ್ರಗಳನ್ನು ವೀಕ್ಷಿಸಲು ಸಜ್ಜಾಗಿರುವುದು.


ಕೇವ್ಸ್‌ನಲ್ಲಿ ನೀರಿನ ಝರಿ

ಜೆನೊಲೆನ್ ಗುಹೆಗಳ ಕೌತುಕ...

ಪ್ರವಾಸ


ಜೆನೊಲೆನ್ ಕೇವ್ಸ್ ಒಳಗಿನ ದೃಶ್ಯ

ಪ್ರಕೃತಿ ಮಡಿಲಿನಲ್ಲಿ ಅದೆಷ್ಟೋ ಕುತೂಹಲಕಾರಿ ಸಂಗತಿಗಳು ಜರುಗಿಹೋಗಿರುತ್ತವೆ. ಅವು ಆಕಸ್ಮಿಕವಾಗಿ ಪತ್ತೆಯಾಗಿ ಜನರ ಗಮನಕ್ಕೆ ಬರುತ್ತವೆ. ಅಂತಹದೊಂದು ಅಪರೂಪದ ಕೌತುಕ ಆಸ್ಟ್ರೇಲಿಯಾದ ಸಿಡ್ನಿಯ ಪ್ರಸಿದ್ಧ ಗುಹಾಸರಣಿ ಜೆನೊಲೆನ್ ಕೇವ್ಸ್.

ಡಾ. ಕೆ.ಎಸ್.ಚೈತ್ರಾ

ಆಸ್ಟ್ರೇಲಿಯಾದ ಸಿಡ್ನಿಯ ಪಶ್ಚಿಮಕ್ಕೆ ಸುಮಾರು 110 ಮೈಲಿ ದೂರದಲ್ಲಿ ಪ್ರಸಿದ್ಧ ಗುಹಾಸರಣಿ ಜೆನೊಲೆನ್ ಕೇವ್ಸ್ ಇದೆ. ಬ್ಲೂ ಮೌಂಟೇನ್‌ಗಳ ಅಂಚಿನಲ್ಲಿ ಸುಮಾರು 430 ಮಿಲಿಯನ್ ವರ್ಷಗಳ ಹಿಂದೆ ಸಿಲೂರಿಯನ್ ಎಂದು ಕರೆಯುವ ಭೂವೈಜ್ಞಾನಿಕ ಅವಧಿಯಲ್ಲಿ ಸುಣ್ಣದಕಲ್ಲಿನ ನಡುವೆ ಹರಿಯುವ ಹೊಳೆಗಳಿಂದ ರೂಪುಗೊಂಡ ಗುಹೆಗಳಿವು. ಹರಿಯುವ ಸಿಹಿನೀರಿನಲ್ಲಿ ಸುಣ್ಣದಕಲ್ಲು ಕರಗುವುದಲ್ಲದೆ, ಮಳೆ-ಗಾಳಿಯಿಂದ ಮತ್ತು ಸಹಜ ಸವೆತದಿಂದ ಬಂಡೆಗಳಲ್ಲಿ ಅಲ್ಲಲ್ಲಿ ರಂಧ್ರಗಳು ಉಂಟಾಗಿ, ಅವು ದೊಡ್ಡದಾದಂತೆ ಗುಹೆಗಳಾಗುತ್ತವೆ.


ಕೇವ್ಸ್‌ನಲ್ಲಿ ಶಿಲೆಗಳಿಂದ ತೊಟ್ಟಿಕ್ಕುವ ನೀರು

ಇವುಗಳಿಗೆ ಕಾರ್ಸ್ಟ್ ಗುಹೆಗಳು ಎಂದು ಹೆಸರು. ಭೂಗತವಾದ ನದಿಗಳು ಮತ್ತು ನೈಸರ್ಗಿಕ ಕಮಾನುಗಳಿಂದ ಕೂಡಿದ ಈ ಗುಹೆಗಳು ವಿಶ್ವದ ಅತ್ಯಂತ ಪ್ರಾಚೀನ ತೆರೆದ ಗುಹೆಗಳಾಗಿದ್ದು ಜೆನೊಲೆನ್ ನದಿಯ ಭೂಗತ ಹಾದಿಯಲ್ಲಿವೆ. ಸುಮಾರು 25 ಮೈಲಿ ಹಾದಿಯ ಈ ಗುಹಾಸರಣಿಯಲ್ಲಿ 400ಕ್ಕೂ ಹೆಚ್ಚು ಗುಹೆಗಳಿದ್ದು, 300 ಪ್ರವೇಶ ದ್ವಾರಗಳಿವೆ. ಇವುಗಳಲ್ಲಿ ಹದಿನೈದು ಗುಹೆಗಳಿಗೆ ಬೆಳಕಿನ ವ್ಯವಸ್ಥೆ ಕಲ್ಪಿಸಿ ಮಾರ್ಗದರ್ಶಿಗಳ ಸಹಾಯದಿಂದ ಸಂದರ್ಶಿಸಲು ಪ್ರವಾಸಿಗರಿಗೆ ತೆರೆಯಲಾಗಿದೆ. ಉಳಿದ ಗುಹೆಗಳ ಸಂಶೋಧನೆ ಇನ್ನೂ ನಡೆಯುತ್ತಿದೆ. ಈ ಗುಹೆಗಳು ಆಸ್ಟ್ರೇಲಿಯಾದ ರಾಷ್ಟ್ರೀಯ ಪರಂಪರೆಯ ಪಟ್ಟಿಯಲ್ಲಿ ಸೇರಿವೆ.

1838 ರಲ್ಲಿ ಜೇಮ್ಸ್ ವ್ಹಾಲನ್ ಈ ಗುಹೆಗಳಿಗೆ ಪ್ರಪ್ರಥಮವಾಗಿ ಭೇಟಿ ನೀಡಿದ ಎಂದು ಹೇಳಲಾಗುತ್ತದೆ. ಅದೂ ಆಕಸ್ಮಿಕವಾಗಿ! ದನ-ಕರು, ಆಹಾರ ಪದಾರ್ಥ, ಬಟ್ಟೆ ಕದಿಯುತ್ತಿದ್ದ ಮೆಕೇನ್ ಎಂಬ ಕಳ್ಳ ತಪ್ಪಿಸಿಕೊಳ್ಳಲು ಅಡಗುತ್ತಿದ್ದ ತಾಣ ಇದಾಗಿತ್ತು. ಅವನನ್ನು ಪತ್ತೆ ಹಚ್ಚಲು ಹುಡುಕಾಟ ನಡೆಸಿದಾಗ ಈ ಗುಹೆಗಳು ಇರುವುದು ಗೊತ್ತಾಯಿತು. ಈ ವಿಷಯವನ್ನು ತನ್ನ ಸಹೋದರ ಚಾರ್ಲ್ಸ್ ವ್ಹಲನ್‌ಗೆ ತಿಳಿಸಿದಾಗ ಅವರು ಒಟ್ಟಿಗೆ ಕೂಡಿ ಇವುಗಳನ್ನು ಕಂಡುಹಿಡಿದರು . 1866 ರಲ್ಲಿ ಈ ಗುಹೆಗಳ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಂಡು ಜೆರೆಮಿಯಾ ವಿಲ್ಸನ್ ಅವರನ್ನು ಮೊದಲ ಗುಹೆಗಳ ರಕ್ಷಕರನ್ನಾಗಿ ನೇಮಿಸಿತು. 1884 ರಲ್ಲಿ ಜೆನೊಲೆನ್ (ಸ್ಥಳೀಯ ಭಾಷೆಯಲ್ಲಿ ಎತ್ತರದ ಸ್ಥಳ) ಎಂಬ ಹೆಸರನ್ನು ಈ ಗುಹೆಗಳಿಗೆ ನೀಡಲಾಯಿತು.

ಮೂಲನಿವಾಸಿಗಳ ಮಹತ್ವದ ನೆಲೆ ಹೊರಜಗತ್ತಿಗೆ ಬೆಳಕಿಗೆ ಬಂದಿದ್ದು 19ನೇ ಶತಮಾನದಲ್ಲಾದರೂ ಸಾವಿರಾರು ವರ್ಷಗಳಿಂದ ಜೆನೊಲೆನ್ ಪ್ರದೇಶವು ಮೂಲನಿವಾಸಿಗಳಾದ ಗುಂಡುಂಗುರ್ರಾ ಮತ್ತು ವಿರಾಡ್ಜುರಿ ಜನಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು ಬಿನಾಮಿಲ್ ಎನ್ನುವ ಹೆಸರಿನಿಂದ ಪರಿಚಿತವಾಗಿತ್ತು. ಈ ವಿಶ್ವ ಮತ್ತು ಜೀವಿಗಳ ಹುಟ್ಟಿನ ಬಗ್ಗೆ ವಿವರಿಸುವ ಅವರ ಕನಸಿನ ಸೃಷ್ಟಿ ಕಥೆ ಇದನ್ನು ವಿವರಿಸುತ್ತದೆ. ಪೂರ್ವಜರ ಆತ್ಮ ಹೊಂದಿದ ಗುರಂಗಾಚ್ ಎನ್ನುವ ಜಲಚರ ಮತ್ತು ಮಿರಾಗನ್ ಎನ್ನುವ ಸ್ಥಳೀಯ ಬೆಕ್ಕಿಗೂ ಭೀಕರ ಹೋರಾಟ ನಡೆಯುತ್ತದೆ. ಅದರಲ್ಲಿ ಬಳಲಿ ಗುರಂಗಾಚ್ ವಿಶ್ರಮಿಸಿ, ತನ್ನ ಗಾಯಗಳನ್ನು ನೆಕ್ಕಿ ಗುಣಪಡಿಸಿಕೊಂಡ ಸ್ಥಳ ಈ ಜೆನೊಲೆನ್ ಗುಹೆಗಳು. ಇದಕ್ಕೆ ಸಾಕ್ಷಿಯಾಗಿ ಗುಹೆಗಳ ಪ್ರವೇಶ ದ್ವಾರದಲ್ಲಿರುವ ದೊಡ್ಡ ಕಮಾನಿನ ಹತ್ತಿರ ರಕ್ತದ ಕಲೆಯನ್ನು ತೋರಿಸಲಾಗುತ್ತದೆ.

ಗಾಯಗೊಂಡ ಗುರಂಗಾಚ್ ವಿಶ್ರಾಂತಿಯನ್ನು ಪಡೆದ ಸ್ಥಳವಾದ್ದರಿಂದ ಇದು ಜನರ ಪಾಲಿಗೆ ನೆಮ್ಮದಿಯನ್ನು ನೀಡುವ ತಾಣ ಎನ್ನಲಾಗುತ್ತದೆ. ಮಾತ್ರವಲ್ಲ ಗುಹೆಯ ಒಳಗಿರುವ ಸ್ಪಟಿಕದ ರಚನೆಗಳು ಕೂಡ ಪವಿತ್ರವಾಗಿದ್ದು ಅವುಗಳಿಗೆ ಮಾಂತ್ರಿಕ ಶಕ್ತಿ ಇದೆ ಎಂದು ಜನರು ನಂಬುತ್ತಾರೆ. ಮೂಲನಿವಾಸಿಗಳು 20ನೇ ಶತಮಾನದ ಆರಂಭದವರೆಗೆ ಇಲ್ಲಿಗೆ ಭೇಟಿ ನೀಡಿ ಹರಿಯುತ್ತಿದ್ದಂತಹ ನದಿಯಲ್ಲಿ ರೋಗಿಗಳನ್ನು ಸ್ನಾನ ಮಾಡಿಸುತ್ತಿದ್ದರು ಎಂಬುದಕ್ಕೆ ದಾಖಲೆಗಳಿವೆ. ಹಾಗಾಗಿ ಗುಹೆ ತೋರಿಸುವಾಗಲೆಲ್ಲಾ ಮೂಲನಿವಾಸಿಗಳ ಪವಿತ್ರ ಜಾಗ; ಅದನ್ನು ಗೌರವಿಸಬೇಕು ಎನ್ನುವುದನ್ನು ನೆನಪಿಸುತ್ತಾರೆ.


ಕೇವ್ಸ್ ಹೊರಗಿನ ನೋಟ

ನೆಲಗವಿಯಲ್ಲಿ ನಡೆದಾಡುತ್ತಾ...

ಆಸ್ಟ್ರೇಲಿಯಾದ ಎಲ್ಲಾ ಕಡೆ ಈ ಗುಹೆಗಳ ಕುರಿತು 'ಇತಿಹಾಸ ಹೇಳುವ, ಕಲಾತ್ಮಕವಾಗಿ ರೂಪುಗೊಂಡಿರುವ, ಸಂಶೋಧನೆಗೆ ಅವಕಾಶವಿರುವ, ಅಪರೂಪದ ಗುಹೆಗಳಿವು ಎಂಬ ಬಣ್ಣನೆ ಜತೆ ಸಂಪೂರ್ಣ ಮಾಹಿತಿಯ ಕರಪತ್ರಗಳಿದ್ದವು. ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಎಷ್ಟಿದೆ ಎಂದರೆ ಕನಿಷ್ಠ ಎರಡು ವಾರಗಳ ಮುಂಚೆಯೇ ಟಿಕೆಟ್ ಅನ್ನು (ಸುಮಾರು ₹4 ಸಾವಿರ) ಕಾಯ್ದಿರಿಸಬೇಕು. ಹಾಗಿದ್ದೂ ಈ ಗುಹೆಗಳಿಗೆ ತೆರಳಲು ಸರ್ಕಾರಿ ಸಾರಿಗೆ ವ್ಯವಸ್ಥೆ ಇಲ್ಲ! ಕಟೂಂಬಾ ಎನ್ನುವ ಸ್ಟೇಷನ್‌ಗೆ ರೈಲಿನಲ್ಲಿ ಪ್ರಯಾಣ ಮಾಡಿ ಅಲ್ಲಿಂದ ಮುಂದೆ ಟ್ಯಾಕ್ಸಿ ತೆಗೆದುಕೊಳ್ಳುವುದು ಅನಿವಾರ್ಯ. ಈ ವ್ಯವಸ್ಥೆ ಸಾಕಷ್ಟು ದುಬಾರಿ. (₹ 30 ಸಾವಿರ). ನಮಗೆ ಚಾಲಕ ಬೇರೆ ಹೆದರಿಸಿದ್ದ. ಕಡೆಗೆ ನೋಡಿದರೆ ಜನಜಂಗುಳಿ ಇಲ್ಲದ ನೇರವಾದ ಚಿಕ್ಕ-ಸ್ವಚ್ಛ ದಾರಿಯಲ್ಲಿ ನಾಲ್ಕೈದು ಕಡೆ ತಿರುವು, ಗಾಳಿಗೆ ಅಡ್ಡ ಬಿದ್ದ ಒಂದೆರೆಡು ರೆಂಬೆಯಷ್ಟೇ !

ಪ್ರದರ್ಶನ ಗುಹೆಗಳನ್ನು ವೀಕ್ಷಣೆಯನ್ನು ವಿಸ್ತಾರ, ವಿಷಯ ಮತ್ತು ಕ್ರಮಿಸಲು ಬೇಕಾದ ದೈಹಿಕ ಸಾಮರ್ಥ್ಯವನ್ನು ಗಮನದಲ್ಲಿಟ್ಟು ಸಮಯ ಮತ್ತು ಜನರ ಸಂಖ್ಯೆಯನ್ನು ನಿರ್ಧರಿಸಲಾಗುತ್ತದೆ. ಹಾಗಾಗಿ ಮೊದಲೇ ನಿರ್ಧರಿಸಿ ಟಿಕೆಟ್ ಪಡೆಯಬೇಕು. ಲ್ಯುಕಸ್, ಟೆಂಪಲ್ ಆಫ್ ಬಾಲ್, ಚಿಫ್ಲಿ, ಇಂಪೀರಿಯಲ್ , ಡೈಮಂಡ್, ಜ್ಯುಬಿಲಿ, ನೆಟಲ್, ಓರಿಯನ್ , ರಿಬ್ಬನ್, ಪ್ಲಗ್ ಹೋಲ್, ಒರಿಯೆಂಟ್- ಇವೆಲ್ಲ ಗುಹೆಗಳ ಹೆಸರುಗಳು. ಲ್ಯುಕಸ್ ಗುಹೆ ಎಲ್ಲಕ್ಕಿಂತ ದೊಡ್ಡದಾಗಿದ್ದು ಒಮ್ಮೆಗೆ 60 ಜನರು ಪ್ರವೇಶಿಸಲು ಸಾಧ್ಯವಿದೆ.

ಸುಮಾರು ಸಾವಿರ ಮೆಟ್ಟಿಲುಗಳಿದ್ದು ನೋಡಲು ಎರಡು ಗಂಟೆ ಸಮಯ ಬೇಕು. ಒಳ ಹೊಕ್ಕೊಡನೆ ಗವ್ವೆನ್ನುವ ಕತ್ತಲು, ತಣ್ಣಗಿನ ವಾತಾವರಣ, ಅಲ್ಲಲ್ಲಿ ಹೊತ್ತಿಸಿದ ದೀಪಗಳು, ತೊಟ್ಟಿಕ್ಕುವ ನೀರು, ಮೈ ಕಿರಿದಾಗಿಸಿ ತೆವಳಿ, ಜಾಗರೂಕತೆಯಿಂದ ನಡೆಯಬೇಕಾದ ಹಾದಿ..
ಒಟ್ಟಿನಲ್ಲಿ ಈ ನೆಲಗವಿಯಲ್ಲಿ ಪಯಣ ರೋಮಾಂಚನ ಅನುಭವ. ನಡೆದಂತೆಲ್ಲಾ ಸುತ್ತಲೂ ಸ್ಟಾಲಕ್ಟೈಟ್ ಮತ್ತು ಸ್ಟಾಲಗ್ಮೈಟ್ ಎನ್ನುವ ಶಿಲಾ ರಚನೆಗಳು ಮೂಡಿಸಿರುವ ಚಿತ್ತಾರಗಳು ವೈವಿಧ್ಯಮಯ. ಕಲ್ಲಿನ ಸ್ಕರ್ಟ್, ಆನೆ, ಅಜ್ಜ, ಟೇಬಲ್, ಮುರಿದ ಸ್ತಂಭ, ಪರದೆ, ಮಗು, ಕೇಕ್ , ಹೀಗೆ ಕಣ್ಣಿಗೆ ಕಂಡಿದ್ದು , ಕಲ್ಪನೆಗೆ ಹೊಳೆದಂತೆ ವಿನ್ಯಾಸಗಳು. ಕೆಲವು ಅಚ್ಚ ಬಿಳಿಯ ಬಣ್ಣದ್ದಾದರೆ ಇನ್ನು ಕೆಲವು ಕೆನೆ, ಬಂಗಾರ, ತಿಳಿ ಹಸಿರು ಹೀಗೆ ವರ್ಣಮಯ. ಅಲ್ಲಲ್ಲಿ ಭೂಗತ ನದಿಯ ಜಾಡು ಮತ್ತು ಈಗ ಅಸ್ತಿತ್ವದಲ್ಲಿ ಇರದ ಪ್ರಾಣಿಗಳ ಪಳೆಯುಳಿಕೆಗಳನ್ನು ಕಾಣಬಹುದು. ಲ್ಯುಕಸ್ ಗುಹೆಯಲ್ಲಿ ಇರುವ ಪ್ರಮುಖ ಆಕರ್ಷಣೆ ಎಂದರೆ ಕೆಥಾಡ್ರಲ್ ಚೇಂಬರ್ (ಪ್ರಾರ್ಥನಾ ಮಂದಿರದ ಭಾಗ).
ಇಗರ್ಜಿಗಳಲ್ಲಿ ಕಂಡುಬರುವ ಹಾಗೆ ಎತ್ತರದ ಛಾವಣಿ ಇರುವ ಜಾಗವಿದು. ನೈಸರ್ಗಿಕವಾದ ಧ್ವನಿ ವ್ಯವಸ್ಥೆ ಅತ್ಯಂತ ವಿಶಿಷ್ಟವಾಗಿದ್ದು ಆಗಾಗ್ಗೆ ಸಂಗೀತ ಕಾರ್ಯಕ್ರಮಗಳು ನಡೆಯುತ್ತವೆ. ಶಾಲಾ ಮಕ್ಕಳಿಗೆ ರಜೆಯಲ್ಲಿ ಈ ಗುಹೆಗಳ ವಿಶೇಷ ಪ್ರದರ್ಶನ ಏರ್ಪಡಿಸಲಾಗುತ್ತದೆ.




• ಎಂ.ಎಸ್.ಪೂಜಾರ

ಮುಂಗಾರುಮಳೆ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಸಿನಿಮಾ ನೋಡಬೇಕೆಂಬ ಆಸೆಯಿಂದ ಚಿತ್ರಮಂದಿರ ಪ್ರವೇಶಿಸಿದ. ಒಳಗೆ 'ಮಳೆ' ಚಿತ್ರ ಪ್ರದರ್ಶನ ಕಾಣುತ್ತಿತ್ತು. ಗುಂಡ ಖುಷಿಯಿಂದಲೇ ಚಿತ್ರವನ್ನು ನೋಡಲು ಪ್ರಾರಂಭಿಸಿದ. ಮಳೆಯ ಗುಂಗಿನಲ್ಲೇ ಚಿತ್ರ ಮಂದಿರದಿಂದ ಹೊರಗೆ ಬಂದ ಗುಂಡನಿಗೆ ಅಚ್ಚರಿ ಕಾದಿತ್ತು. ಒಳಗೆ ನೋಡಿದ ಮಳೆ ಹೊರಗೂ 'ಧೋ' ಎಂದು ಸುರಿಯುತ್ತಿತ್ತು. ಗುಂಡ ಛತ್ರಿ ಹಿಡಿದು ಓಡತೊಡಗಿದ.



ಗಣಿತದಲ್ಲಿ ಗರ್ದಿಗಮ್ಮತ್ತು

ಗುಣವಿಶೇಷ ಗುಣಾಕಾರಗಳು

ಗುಣ್ಯ ಮತ್ತು ಗುಣಕಗಳ ಅಂಕಗಳನ್ನು ಅದಲು ಬದಲು ಮಾಡಿದರೂ ಗುಣಲಬ್ಧವು ಒಂದೇ ಬರುವ ಗುಣಾಕಾರಗಳಿವು

1. 12x42 = 21x24=**504**
2. 48x63 = 84x36=**3024**
3. 43x68 = 34x86=**2924**
4. 24x84 = 42x48=**2016**

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ರ' ಅಕ್ಷರಕ್ಕೆ ಹಿಂದೆ ಕೆಲವು ಅಕ್ಷರಗಳನ್ನು ಸೇರಿಸಿ ಪರಮೇಶ್ವರನ ಇತರೆ ಹೆಸರುಗಳನ್ನು ಬರೆಯಿರಿ

1.		ರ
2.		ರ
3.		ರ
4.		ರ
5.		ರ

ಚೂರು-ಮರಿ

ಇಲ್ಲಿ ಕೊಟ್ಟಿರುವ ಲೆಕ್ಕವನ್ನು ಗಮನಿಸಿ. '0' ಯಿಂದ '9'ರವರೆಗಿನ ಸಂಖ್ಯೆಗಳನ್ನು ಒಮ್ಮೆ ಮಾತ್ರ ಬಳಸಿಕೊಂಡು '1' ಉತ್ತರ ತರಲಾಗಿದೆ. (ಈ ಭಿನ್ನರಾಶಿಗಳನ್ನು ಕಡಿತ ಹೊಡೆದಾಗ ಉತ್ತರ '1' ಬರುವುದು.

$$\frac{143}{296} + \frac{35}{70} = 1$$

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಮಲ | ವಲ | ಹಳ

ಮನ | ಸುಮ | ಬರಿ

ಅಕ್ಷರ ಪಟ್ಟಿ: ಸೆ, ದಿ, ಕೇ, ಕೋ, ಬ, ಗು, ದು, ಶ, ತಿ, ಕು, ವಿ, ಗ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಮುಕುಂದಣ 2.ಲಹರಿಸು 3.ಅಮರಳು 4.ವಿಕಾರಣ 5.ಹೂರಣಜಿ 6.ದೇವರುಣ

ಜಾಣಪದ ಆಟ: 1.ಧನ,ದನ 2.ಬನ,ಬಣ 3.ಜರಿ,ಝರಿ 4.ಗಾನ,ಗಾಣ 5.ಮನೆ,ಮಣೆ 6.ಹಣಿ,ಹನಿ 7.ಕಣ,ಖಣ 8.ಕರೆ,ಖರೆ 9.ಬಲೆ,ಭಲೆ 10.ಮನ,ಮಣ

ಮೋಜಿನ ಇಂಗ್ಲಿಷ್: 1.Read,Reed 2.Lion,Line 3.Sail,Sale 4.Tale;Tail 5.Hear,Here 6.Fair,Fare 7.Dear;Deer 8.Male,Mail

ಮೋಜಿನ ಇಂಗ್ಲಿಷ್

ಇಲ್ಲಿ ಒಂದು ಇಂಗ್ಲಿಷ್ ಶಬ್ದವನ್ನು ಒಡೆದು ಹೇಗೆ ಮೋಜು ಮಾಡಲಾಗಿದೆ ಗಮನಿಸಿ

The notable doctor was not able to do operations because there was no table in the operation theatre.

ಪಂಚಕ್ವಿಜ್ಞಾಯ

1.ಪುರಂದರದಾಸರ ಮೊದಲ ಹೆಸರೇನು?
2.ಕೂಡಲಸಂಗಮವು ಯಾವ ನದಿಗಳ ಸಂಗಮವಾಗಿದೆ?
3.ಮೈಸೂರು ರಾಜಮನೆತನದ ಕೊನೆಯ ಒಡೆಯರು ಯಾರು?
4.ಕನ್ನಡದ ಮೊದಲ ವಿಜ್ಞಾನ ಪುಸ್ತಕ ಯಾವುದು?
5.ಕನ್ನಡದ ಮೊದಲ ಕವಿ ಯಾರು?






ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಪೂರ್ವಿ ಎಂ
ತಾಳಿಕೋಟೆ


ಬೀರಲಿಂಗೇಶ
ಲಿಂಗಸೂಗೂರು


ಆಶಿಕಾ
ಹುಬ್ಬಳ್ಳಿ


ಶ್ರೇಯನ್ ಜಿ.ಎನ್.
ಶಿವಮೊಗ್ಗ


ಚಿರಂತನ್ ಆರ್.
ದಾವಣಗೆರೆ


ಪಲ್ಲವಿ ಭೋಲಾ
ಮುಂಡರಗಿ

ಪ್ಯಾರಾಲಿಂಪಿಕ್ಸ್‌ಗೆ ಮೋನಾ

ನವದೆಹಲಿ (ಪಿಟಿಐ): ಭಾರತದ ಮೋನಾ ಅಗರವಾಲ್, ಡಬ್ಲ್ಯುಎಸ್‌ಪಿಎಸ್ ಪ್ಯಾರಾ ಶೂಟಿಂಗ್ ವಿಶ್ವಕಪ್ ಟೂರ್ನಿಯಲ್ಲಿ ಮಹಿಳೆಯರ 10 ಮೀ. ಏರ್ ರೈಫಲ್ (ಎಸ್‌ಎಚ್‌1 ಕೆಟಗರಿ) ಸ್ಪರ್ಧೆಯಲ್ಲಿ ಶನಿವಾರ ಚಿನ್ನ ಗೆದ್ದರು; ಜೊತೆಗೆ ಪ್ಯಾರಿಸ್‌ನಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ಸ್‌ಗೆ ಕೋಟಾ ಪಡೆದರು.

ಇದು, 37 ವರ್ಷದ ಮೋನಾ ಅವರಿಗೆ ನಾಲ್ಕನೇ ಅಂತರರಾಷ್ಟ್ರೀಯ ಟೂರ್ನಿ. ರಾಜ್ಯ ಮಟ್ಟದಲ್ಲಿ ಷಾಟ್‌ಪಟ್ ಮತ್ತು ಪವರ್‌ಲಿಫ್ಟಿಂಗ್‌ನಲ್ಲಿ ಉತ್ತಮ ಸಾಧನೆ ತೋರಿದ್ದ ಅವರು 2021ರ ಡಿಸೆಂಬರ್‌ನಲ್ಲಿ ಶೂಟಿಂಗ್ ಕ್ರೀಡೆಯಲ್ಲಿ ಸ್ಪರ್ಧಿಸಲು ಶುರು ಮಾಡಿದ್ದರು. ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತದ 9ನೇ ಶೂಟರ್ ಅವರು. ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಅವನಿ ಲೇಖರಾ ಇಲ್ಲಿ ಕಂಚಿನ ಪದಕ ಪಡೆದರು.

100ನೇ ಟೆಸ್ಟ್: ಕೇನ್ ಅರ್ಧಶತಕ

ಕ್ರೈಸ್ಟ್‌ಚರ್ಚ್ (ನ್ಯೂಜಿಲೆಂಡ್): ಕೇನ್ ವಿಲಿಯಮ್ಸನ್ ತಮ್ಮ ನೂರನೇ ಟೆಸ್ಟ್‌ನಲ್ಲಿ ಹೋರಾಟದ ಅರ್ಧ ಶತಕ ಗಳಿಸಿದರು. ಆಸ್ಟ್ರೇಲಿಯಾ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಶನಿವಾರ ನ್ಯೂಜಿಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 134 ರನ್ ಗಳಿಸಿ ಎರಡನೇ ದಿನದಾಟ ಪೂರೈಸಿದೆ.

ಸ್ಕೋರುಗಳು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 162; ಆಸ್ಟ್ರೇಲಿಯಾ: 68 ಓವರುಗಳಲ್ಲಿ 256 (ಮಾರ್ನಸ್ ಲಾಬುಷೇನ್ 90, ಮಿಚೆಲ್ ಸ್ಟಾರ್ಕ್ 28, ಪ್ಯಾಟ್ ಕಮಿನ್ಸ್ 23; ಮ್ಯಾಟ್ ಹೆನ್ರಿ 67ಕ್ಕೆ7); ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 50 ಓವರುಗಳಲ್ಲಿ 2 ವಿಕೆಟ್‌ಗೆ 134 (ಟಾಮ್ ಲೇಥಮ್ ಔಟಾಗದೇ 65, ಕೇನ್ ವಿಲಿಯಮ್ಸನ್ 51, ರಚಿನ್ ರವೀಂದ್ರ ಔಟಾಗದೇ 11).

ದೇವೇಂದ್ರಗೆ ಪಿಸಿಐ ಚುಕ್ಕಾಣಿ



ದೇವೇಂದ್ರ

ನವದೆಹಲಿ (ಪಿಟಿಐ): ಎರಡು ಬಾರಿ ಪ್ಯಾರಾಲಿಂಪಿಕ್ಸ್ ಚಿನ್ನದ ಪದಕ ವಿಜೇತ ದೇವೇಂದ್ರ ಝುಝಾರಿಯಾ ಅವರು ಪ್ಯಾರಾಲಿಂಪಿಕ್ಸ್ ಕಮಿಟಿ (ಪಿಸಿಐ) ಅಧ್ಯಕ್ಷರಾಗಿ ಶನಿವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

2004ರ ಅಥೆನ್ಸ್ ಮತ್ತು 2016ರ ರಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಎಫ್ 46 ವಿಭಾಗದಲ್ಲಿ ತಲಾ ಒಂದೊಂದು ಚಿನ್ನದ ಪದಕ ಗೆದ್ದಿದ್ದ 42 ವರ್ಷದ ಜಾವೆಲಿನ್ ಎಸೆತಗಾರ ಮಾತ್ರ ಈ ಹುದ್ದೆಗೆ ಸ್ಪರ್ಧೆಯಲ್ಲಿದ್ದರು. ಪ್ಯಾರಾ ಅಥ್ಲೀಟ್ ದೀಪಾ ಮಲಿಕ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಎಲ್ಲಾ ಹೊಸ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ, ಇಬ್ಬರು ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಖಜಾಂಚಿ, ಇಬ್ಬರು ಜಂಟಿ ಕಾರ್ಯದರ್ಶಿಗಳು ಮತ್ತು ಐದು ಕಾರ್ಯಕಾರಿ ಸಮಿತಿ ಸದಸ್ಯರ ಹುದ್ದೆಗೆ ಚುನಾವಣೆ ನಡೆದವು. ಆರಂಭದಲ್ಲಿ ಐದು ಕಾರ್ಯಕಾರಿ ಸಮಿತಿ ಸದಸ್ಯರ ಹುದ್ದೆಗೆ ಎಂಟು ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದರು. ಆದರೆ, ಅವರಲ್ಲಿ ಮೂವರು ನಂತರ ಸ್ಪರ್ಧೆಯಿಂದ ಹಿಂದೆ ಸರಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜಸ್ಥಾನದ ಚುರು ಕ್ಷೇತ್ರದಿಂದ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸುತ್ತಿರುವ ಝುಝಾರಿಯಾ ನೇತೃತ್ವದ ಎಲ್ಲಾ ಹೊಸ ಪದಾಧಿಕಾರಿಗಳಿಗೆ ಚುನಾವಣಾಧಿಕಾರಿ ಉಮೇಶ್ ಸಿನ್ಹಾ ಅವರು ಪ್ರಮಾಣಪತ್ರಗಳನ್ನು ಹಸ್ತಾಂತರಿಸಿದರು. ಗೋವಾದ ಅಂತರರಾಷ್ಟ್ರೀಯ ತರಬೇತುದಾರ ಮತ್ತು ರೆಫರಿ ಜಯವಂತ್ ಹಮ್ಮನವರ್ ಅವರು ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಆರ್.ಚಂದ್ರಶೇಖರ್ ಮತ್ತು ಸತ್ಯ ಪ್ರಕಾಶ್ ಸಾಂಗ್ವಾನ್, ಖಜಾಂಚಿ ಹುದ್ದೆಗೆ ಸುನಿಲ್ ಪ್ರಧಾನ್ ಒಬ್ಬರೇ ಅಭ್ಯರ್ಥಿ, ಲಲಿತ್ ಠಾಕೂರ್ ಮತ್ತು ಟಿ.ದಿವಾಕರ ಜಂಟಿ ಕಾರ್ಯದರ್ಶಿಗಳಾಗಿದ್ದಾರೆ.

ನಿಗದಿಯಂತೆ ಕುಸ್ತಿ ಟ್ರಯಲ್ಸ್: ಡಬ್ಲ್ಯುಎಫ್‌ಐ ಅಡ್‌ಹಾಕ್ ಸಮಿತಿ

ನವದೆಹಲಿ (ಪಿಟಿಐ): ಮುಂಬರುವ ಏಷ್ಯನ್ ಚಾಂಪಿಯನ್‌ಷಿಪ್ಸ್ ಮತ್ತು ಒಲಿಂಪಿಕ್ ಕ್ವಾಲಿಫೈರ್ಸ್‌ಗೆ ನಿಗದಿಯಂತೆ ಆಯ್ಕೆ ಟ್ರಯಲ್ಸ್‌ಅನ್ನು ತಾನೇ ನಡೆಸುವುದಾಗಿ ಭಾರತ ಒಲಿಂಪಿಕ್ ಸಂಸ್ಥೆ ನೇಮಿಸಿರುವ ಅಡ್‌ಹಾಕ್ ಸಮಿತಿ ಶನಿವಾರ ತಿಳಿಸಿದೆ. ಅರ್ಹತೆ ಪಡೆದವರ ಹೆಸರುಗಳನ್ನು ಭಾರತ ಕುಸ್ತಿ ಫೆಡರೇಷನ್ ಮುಖಾಂತರ ವಿಶ್ವ ಕುಸ್ತಿ ಸಂಸ್ಥೆಗೆ (ಯುಡಬ್ಲ್ಯುಡಬ್ಲ್ಯು) ಕಳಿಸುವುದಾಗಿಯೂ ಸಮಿತಿ ತಿಳಿಸಿದೆ.

ಯುಡಬ್ಲ್ಯುಡಬ್ಲ್ಯು ಶುಕ್ರವಾರ ಕುಸ್ತಿ ಫೆಡರೇಷನ್‌ಗೆ ಬೆನ್ನಿಗೆ ನಿಂತಿದ್ದು ಫೆಡರೇಷನ್ ಕಳಿಸಿದ ಪ್ರವೇಶಗಳನ್ನು ಮಾತ್ರ ಮಾನ್ಯ ಮಾಡುವುದಾಗಿ ಹೇಳಿತ್ತು. ಬೇರೆ ಯಾವುದೇ ಸಂಸ್ಥೆ, ಫೆಡರೇಷನ್ ಪಾತ್ರವನ್ನು ನಿರ್ವಹಿಸುವಂತಿಲ್ಲ ಎಂದೂ ಸ್ಪಷ್ಟಪಡಿಸಿತ್ತು.

ಆದರೆ ಅಡ್‌ಹಾಕ್ ಸಮಿತಿ ಶನಿವಾರ ಹೇಳಿಕೆ ನೀಡಿದ್ದು, ಟ್ರಯಲ್ಸ್ ತಾನೇ ನಡೆಸಲಿದ್ದು ಆಯ್ಕೆಯಾದವರ ಹೆಸರುಗಳನ್ನು ಫೆಡರೇಷನ್‌ಗೆ ಕಳುಹಿಸುವುದಾಗಿ ಹೇಳಿದೆ.

ಅಡ್‌ಹಾಕ್ ಸಮಿತಿಯು ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯಲಿರುವ ಎರಡು ಅಂತರರಾಷ್ಟ್ರೀಯ ಟೂರ್ನಿಗಳಿಗೆ ಮಾರ್ಚ್ 10 ಮತ್ತು 11ರಂದು ಸೋನಿಪತ್ ಮತ್ತು ಪಟಿಯಾಲಾದಲ್ಲಿ ಟ್ರಯಲ್ಸ್ ನಿಗದಿಯಾಗಿದೆ. ಸೋನಿಪತ್‌ನ ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ಪುರುಷರ ವಿಭಾಗದ ಫ್ರೀಸ್ಟೈಲ್ ಮತ್ತು ಗ್ರೀಕೊ ರೋಮನ್ ಟ್ರಯಲ್ಸ್ ಇವೆ. ಪಟಿಯಾಲಾದ ಎನ್‌ಐಎಸ್‌ನಲ್ಲಿ ಮಹಿಳಾ ಕುಸ್ತಿಪಟುಗಳಿಗೆ ಟ್ರಯಲ್ಸ್ ನಡೆಸಲಾಗುವುದು.